ಸಂಕಲನ

೭

ಸಂಪಾದಕರು

ಸಿದ್ಧಲಿಂಗ ಪಟ್ಟಣಶೆಟ್ಟಿ

ಹೇಮಾ ಪಟ್ಟಣಶೆಟ್ಟಿ

ಸಂಕಲನ : ಅನಿಸಿಕೆ

- ಸಂಕಲನ ಚೆನ್ನಾಗಿ ಬರುತ್ತಿದೆ. ಕಡೀಪುಟ ಸ್ವಲ್ಪ ದೊಡ್ಡ ಅಕ್ಷರದಲ್ಲಿ ಬರಲಿ.
  — **ಜಿ. ಎನ್. ರಂಗನಾಥ ರಾವ್**, ಬೆಂಗಳೂರು
- ಸಂಕಲನದ ಬೆನ್ನೆಲುಬಿನಂತಿರುವ ಕಡೀಪುಟ ರೋಮಾಂಚನಕಾರಿ. — **ಸುನಂದಾ ಕಡಮೆ**, ಹುಬ್ಬಳ್ಳಿ
- ದಯವಿಟ್ಟು ನನ್ನ ಲೇಖನಗಳಿಗೆ ಗೌರವಧನ ಬೇಡ. Foreign ಮೀಡಿಯಾದವರು ನುಗ್ಗುತ್ತಿರುವ ಇಂದಿನ ದಿನಗಳಲ್ಲಿ ನೀವು ಇಂಥಾ ಪತ್ರಿಕೆ ತರುವುದೇ ದೊಡ್ಡದು. ಕನ್ನಡದ ಒಂದು ಮುಖ್ಯ ಅಗತ್ಯ ಪೂರೈಸಿದ್ದೀರಿ. ಅದಕ್ಕಾಗಿ ಕೆಲಸ ಮಾಡಬೇಕಾದ್ದು ನನ್ನ ಕರ್ತವ್ಯ.
  — **ಡಾ. ರಾಮಚಂದ್ರ ದೇವ**, ಕಲ್ಮಡ್ಕ
- ನಿಮ್ಮ ಸಂಪಾದಕತ್ವದ **ಸಂಕಲನ** ಚೆನ್ನಾಗಿ ಬರುತ್ತಿದೆ. ಕೆಲವು ಲೇಖನಗಳು ತುಂಬಾ ಖುಷಿ ಕೊಟ್ಟಿವೆ. ಇಂಥ ಸುಂದರ ಪತ್ರಿಕೆ ತರುತ್ತಿರುವ ನಿಮಗೆ ಅಭಿನಂದನೆ.
  — **ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮಿಗಳು**, ಸಾಣೇಹಳ್ಳಿ. ಸಿರಿಗೆರೆ
- **ಸಂಕಲನ** ಅದ್ಭುತವಾಗಿ ಬರುತ್ತಿದೆ. ಮೂಲಭೂತವಾದಿಗಳಿಂದ ಜಡ್ಡುಗಟ್ಟಿರುವ ಈವತ್ತಿನ ಸಾಹಿತ್ಯಿಕ ಸಂದರ್ಭದಲ್ಲಿ ಬಿರುಗಾಳಿಯನ್ನು ಅಲ್ಲದೇ ಹೋದರೂ ಒಂದಷ್ಟು ತಂಗಾಳಿಯನ್ನಾದರೂ ಸೂಸುವಲ್ಲಿ ಯಶಸ್ವಿಯಾಗಿದೆ. — **ಕಂನಾಡಿಗಾ ನಾರಾಯಣ**, ಚಿತ್ರದುರ್ಗ
- **ಸಂಕಲನ-೬** ರಲ್ಲಿಯ ಕೆ. ಪಿ. ಮೃತ್ಯುಂಜಯರವರ ಕವನಗಳು ಅದ್ಭುತವಾಗಿವೆ. ಬಯಲುಸೀಮೆಯ ಶಬ್ದನಿಧಿ ಸೂರೆಹೊಡೆದಂಥ ಕವನಗಳು. ಇರುವ ಸಿದ್ಧ ಜಾಡನ್ನು ಬಿಟ್ಟು ಬರೆದ ಅಪರೂಪ ಕವನಗಳು.
  — **ಲಲಿತಾ ಸಿದ್ಧಬಸವಯ್ಯ**, ತುಮಕೂರು

'ಸಂಕಲನ' ಸ್ವೀಕರಿಸಿದ ಪುಸ್ತಕಗಳು

೧ **ಬೆಳಕಿನೆಡೆಗೆ** : ಚಿಂತನ. ಡಾ. ಜಿ. ಬಿ. ವಿಸಾಜಿ. ನೆಲದ ನುಡಿ ಪ್ರಕಾಶನ. ಭಾಲ್ಕಿ - ೫೮೫ ೩೨೮. ಪ್ರ. ಮು.೨೦೦೨. ಕ್ರಾವುನ್ ೧/೮. ಪುಟ ೧೦೪. ರೂ. ೬೦/-

೨ **ವಿಧುರನ ಒಸಗೆ** : ಹರಟೆ. ಹಾಲಾಡಿ ಮಾರುತಿರಾವ್. ಹಾಲಾಡಿ ಪ್ರಕಾಶನ. ೩೫೧. ಮ್ಹಾಳಸಾ ನಿವಾಸ. ಅಬ್ಬಿಗೆರೆ ಬಡಾವಣೆ. ಚಿಕ್ಕ ಬಾಣಾವರ ರಸ್ತೆ. ಬೆಂಗಳೂರು - ೯೦. ಪ್ರ.ಮು.೨೦೦೧. ಕ್ರಾವುನ್ ೧/೮. ಪುಟ ೭೦. ರೂ. ೪೦/-

೩. **ನೆಲದ ಮರೆಯ ನಿಧಾನ** : ವಿಮರ್ಶೆ. ಟಿ. ಜಿ. ಭಟ್ಟ. ಹಾಸಣಗಿ. ಆದಿತ್ಯ ಪ್ರಕಾಶನ. ಹಾಸಣಗಿ - ೫೮೧ ೩೪೭. ತಾ. ಯಲ್ಲಾಪುರ. ಪ್ರ. ಮು.೨೦೦೧. ಕ್ರಾವುನ್ ೧/೮. ಪುಟ ೧೦೨. ರೂ. ೪೦/-

೪ **ರಾಣಿ ಅಮೃತಮತಿ** : ವೃತ್ತಿ ನಾಟಕ. ಎಂ. ವಿ. ಗಣಾಚಾರಿ. ಶಾಂತವೀರ ಪ್ರಕಾಶನ. ಕಲ್ಯಾಣನಗರ. ಸಿಂದಗಿ - ೫೮೬ ೧೨೮. ಪ್ರ. ಮು.೨೦೦೦. ಕ್ರಾವುನ್ ೧/೮. ಪುಟ ೮೩. ರೂ. ೩೦/-

೫ **ನೋವಿನ ಹೆಮ್ಮರ** : ಕೀ ಹೋಲ್ ಕಥೆಗಳು. ಡಾ. ಕೆ. ಪೂರ್ಣಿಮಾ ಭಟ್. ಕಸ್ತೂರಿ ಪ್ರಕಾಶನ. ೧೦. ತುಳಸಿವನ. ಬೆಂಗಳೂರು - ೫೩. ಪ್ರ. ಮು.೨೦೦೨. ಕ್ರಾವುನ್ ೧/೮. ಪುಟ ೧೧೮. ರೂ. ೪೦/-

೬ **ಭೂಮಿತೂಕದ ಕಣ್ಣೀರು** : ವಿಚಾರ ಬರೆಹ. ಶಿವರಾಮು ಕಾಡನಕುಪ್ಪೆ. ಶ್ರೀಮತಿ ಯಶೋದಾ ರಾಗೌ ಟ್ರಸ್ಟ್. ೧೯೪. ಕಾಳಿದಾಸ ರಸ್ತೆ. ಜಯಲಕ್ಷ್ಮಿಪುರಂ. ಮೈಸೂರು ೧೨. ಪ್ರ. ಮು.೨೦೦೧. ಕ್ರಾವುನ್ ೧/೮. ಪುಟ ೫೬. ರೂ. ೨೫/-

೭ **ನೀಲಿ ಚಂದ್ರಮ** : ಕವನ. ಶಿವರಾಮು ಕಾಡನಕುಪ್ಪೆ. ಸಂವಹನ. ೧೨/೧ ಎ. ಈವನಿಂಗ್ ಬಜಾರ್ ಹಿಂಭಾಗ. ಶಿವರಾಂಪೇಟೆ. ಮೈಸೂರು - ೧. ಪ್ರ. ಮು. ೧೯೯೯, ಕ್ರಾವುನ್ ೧/೮. ಪುಟ ೮೮. ರೂ. ೩೫/-

೮. **ಸಂತಾನ** : ಕವನ. ಡಾ. ರಘುವೀರ ಭಟ್ಟ. ರುಕ್ಮಿಣಿ ಪ್ರಕಾಶನ. ೪/೧. ಸೀಮಾ. ಎನ್. ದತ್ತಾ ಮಾರ್ಗ. ಫೋರ್ ಬಂಗಲೊ. ಅಂಧೇರಿ (ಪ.). ಮುಂಬಯಿ - ೫೩. ಪ್ರ. ಮು. ೨೦೦೨. ಕ್ರಾವುನ್ ೧/೮. ಪುಟ ೮೦. ರೂ. ೩೦/-

೯. **ಪ್ರೀತಿ ಪ್ರೇಮ ಕಾಮ** : ಪುಟ ೧೬೦. ರೂ. ೬೦/- ; ೧೦. **ತಾಯಿ** : ಪುಟ ೭೨. ರೂ. ೨೫/- ; ೧೧. **ಜೀವನ ಬದುಕು ಬಾಳು** ಪುಟ ೧೫೬ ರೂ. ೪೦/- ; ೧೨. **ಮಾತು** : ಪುಟ ೧೨೮. ರೂ. ೩೦/- ; ೧೩. **ಹೂವು** : ಪುಟ ೬೪. ರೂ. ೨೦/- ; ೧೪. **ಅಹಂಕಾರ** : ಪುಟ ೩೨. ರೂ. ೧೫/- ; ೧೫. **ಭಯ** : ಪುಟ ೩೨. ರೂ. ೧೫/- ; ೧೬. **ಅಸೂಯೆ** : ಪುಟ ೩೨. ರೂ. ೧೦/- ; ೧೭. **ಆತ್ಮವಿಶ್ವಾಸ** : ಪುಟ ೨೪. ಬೆಲೆ : ಸದುಪಯೋಗ. —ಸೂಕ್ತಿ ಸಂಗ್ರಹಗಳು. ಸಂ. ಟಿ. ವಿ. ವೆಂಕಟರಮಣಯ್ಯ. ಇಡಬ್ಲ್ಯುಎಸ್. ೨೧೮. ಕೆ.ಎಚ್.ಬಿ. ಕಾಲೋನಿ. ೨ ನೇ ಹಂತ. ೫ ನೇ ಕ್ರಾಸ್. ಬಸವೇಶ್ವರನಗರ. ಬೆಂಗಳೂರು ೭೯ —ಕ್ರಾವುನ್ ೧/೮

ಸಂಕಲನ

ದ್ವೈಮಾಸಿಕ ಸಾಹಿತ್ಯ ಸಂಕಲನ - ೭

೧೪ ಜನೆವರಿ ೨೦೦೩

ಸಂಪಾದಕರು

ಸಿದ್ಧಲಿಂಗ ಪಟ್ಟಣಶೆಟ್ಟಿ

ಹೇಮಾ ಪಟ್ಟಣಶೆಟ್ಟಿ

ಸಂಕಲನ ಪ್ರಕಾಶನ

ಹೂಮನೆ, ಶ್ರೀದೇವಿನಗರ, ವಿದ್ಯಾಗಿರಿ

ಧಾರವಾಡ - ೫೮೦ ೦೦೪

RNI No. KARKAN 14160 / 10 / 1 / 2002 - TC

SANKALANA : **A Kannada Literary Magazine**
Volume 2, Issue 1 : 14 January 2003
Edited by **Dr. Siddhaling Pattanshetti**
Hoomane, Shridevinagar, Vidyagiri, Dharwad - 580 004

Yearly subscription : Rs. 150/-

Ptd. by Saraswati Offset Printers, Shivaji Rd. Dharwad-1

•

•

•

ಸಂಕಲನ - ೭ : ಸಂಪುಟ ೨, ಸಂಚಿಕೆ ೧ : ೧೪ ಜನವರಿ ೨೦೦೩

ಸಂಪಾದಕರು : **ಡಾ. ಸಿದ್ಧಲಿಂಗ ಪಟ್ಟಣಶೆಟ್ಟಿ** ಮತ್ತು **ಡಾ. ಹೇಮಾ ಪಟ್ಟಣಶೆಟ್ಟಿ**
ಹೂಮನೆ, ಶ್ರೀದೇವಿನಗರ, ವಿದ್ಯಾಗಿರಿ, ಧಾರವಾಡ -೫೮೦ ೦೦೪
✆ ೦೮೩೬-೪೬ ೨೭೧೮
E-mail : spattanshetti@indiatimes.com

ಸಂಕಲನ ಪ್ರಕಾಶನ, ಹೂಮನೆ, ಶ್ರೀದೇವಿನಗರ, ವಿದ್ಯಾಗಿರಿ, ಧಾರವಾಡ-೪
ಮತ್ತು ಬೆಳಗು, ಆನಂದಾಶ್ರಮ ರಸ್ತೆ, ಗದಗ - ೫೮೨ ೧೦೧

•

ಸಂಕಲನದಲ್ಲಿ ಪ್ರಕಟವಾದ ಲೇಖನಗಳಲ್ಲಿ ವ್ಯಕ್ತವಾದ ಅಭಿಪ್ರಾಯಗಳ ಹೊಣೆ, ಹಕ್ಕು ಆಯಾ ಲೇಖಕರವು.

•

ವರ್ಷ ೨೦೦೩ ರಲ್ಲಿ ಪ್ರಕಟವಾಗುವ ಸಂಕಲನದ ಆರು ಸಂಚಿಕೆಗಳ ಒಟ್ಟು ಬೆಲೆ ರೂ. ೧೫೦/-
ಚಂದಾ ಹಣವನ್ನು ಮನಿಆರ್ಡರ್ ಇಲ್ಲವೆ ಕ್ರಾಸ್ ಮಾಡಿದ ಡಿ. ಡಿ. ಮೂಲಕ **ಸಂಕಲನ** ಹೆಸರಿಗೆ ಕಳಿಸುವುದು.

ಚೆಕ್ ಕಳಿಸುವುದಾದಲ್ಲಿ ಬ್ಯಾಂಕ್ ಕಮೀಶನ್ ರೂ. ೨೦/- ಹೆಚ್ಚಿಗೆ ಸೇರಿಸುವುದು.

•

ಛಾಯಕ್ಷರಣ : ಬಿಜಿಗ್ರಾಫಿಕ್ಸ್, ೧ ನೇ ಮೇನ್, ವಿಜಯನಗರ, ಧಾರವಾಡ - ೩

ಸಂಪಾದಕರ ಮಾತು

ಸಂಕಲನ - ೭ ೨೦೦೩ ನೇ ವರ್ಷದ ಮೊದಲ ಸಂಚಿಕೆ. ಮೊದಲ ವರ್ಷದ ಆರೂ ಸಂಚಿಕೆಗಳನ್ನು ವಿಶಿಷ್ಟ ರೀತಿಯಲ್ಲಿ ಅರ್ಥಪೂರ್ಣವಾಗಿ ಸಕಾಲದಲ್ಲಿ ಪ್ರಕಟಿಸಿ ಕನ್ನಡದ ಎಲ್ಲ ಭಾಗದ ಒಳ್ಳೆಯ ಲೇಖಕರಿಗಾಗಿ ಒಂದು ಸಮರ್ಥ ವೇದಿಕೆಯನ್ನು ನಿರ್ಮಿಸುವ ನಿಟ್ಟಿನಲ್ಲಿ ಶ್ರಮಿಸಿದ ಸಂತೋಷ ನನಗಿದೆ.

ಸಂಕಲನ - ೫ ಮತ್ತು **೬** ರಲ್ಲಿ ತಿಳಿಸಿದಂತೆ ಪ್ರಸಿದ್ಧ ನಾಟಕಕಾರರು, ಲೇಖಕರು, ಹಿರಿಯರೂ ಆದ ಎನ್ಕೆ ಕುಲಕರ್ಣಿ ಅವರು ರಚಿಸಿದ 'ವಾಮನರಾವ್ ಮಾಸ್ತರ್' ಕೃತಿಯನ್ನು ಈ ಸಂಚಿಕೆಯೊಂದಿಗೆ ನಮ್ಮ ಚಂದಾದಾರರಿಗೆ ಕಾಣಿಕೆಯಾಗಿ ನೀಡಲಾಗುತ್ತಿದೆ. ಇತಿಹಾಸ, ಸಂಸ್ಕೃತಿ, ರಂಗಭೂಮಿ, ರಂಗಗಾಯನ, ಕಾಲ ಧರ್ಮಗಳನ್ನು ತಿಳಿಯಪಡಿಸುವ ಈ ವಿಶಿಷ್ಟ ಚರಿತ್ರಕೃತಿಯೊಂದಿಗೆ ಸಂಕಲನ ಪ್ರಕಾಶನ ಪುಸ್ತಕ ಪ್ರಕಾಶನದ ಕ್ಷೇತ್ರದಲ್ಲಿಯೂ ಹೆಜ್ಜೆ ಇಟ್ಟಿದೆ. ಮುಂಬರುವ ದಿನಗಳಲ್ಲಿ ಒಳ್ಳೆಯ ಹೊಸ ಬರಹಗಾರರ, ಪ್ರತಿಷ್ಠಿತ ಲೇಖಕರ ವೈಚಾರಿಕ ಹಾಗೂ ವಿಮರ್ಶಾ ಲೇಖನಗಳ ಸಂಗ್ರಹ, ನಾಟಕ ಮುಂತಾದ ಪುಸ್ತಕಗಳನ್ನು ಪ್ರಕಟಿಸಲು ನಿರ್ಧರಿಸಲಾಗಿದೆ. ಸಂಕಲನದ ಚಂದಾದಾರರಿಗೆ ಈ ಕೃತಿಯ ಪ್ರತಿಗಳನ್ನು ಅರ್ಧ ಬೆಲೆಗೆ ಕೊಡಲಾಗುವುದು.

ಈಗಾಗಲೇ ಬಹಳಷ್ಟು ಉತ್ತಮ ಲೇಖನಗಳು ಸಿಗುತ್ತಿರುವುದರಿಂದ **ಸಂಕಲನ - ೭** ರಿಂದ ಒಟ್ಟು ೧೦೦ ಪುಟಗಳನ್ನು ನೀಡುವ ಇಚ್ಛೆಯನ್ನು ಕಳೆದ ಸಂಚಿಕೆಯಲ್ಲಿ ವ್ಯಕ್ತಪಡಿಸಿದ್ದೆ. ಆದರೆ ಇದು ವ್ಯಾವಹಾರಿಕವಾಗಿ ಸೂಕ್ತವಲ್ಲವೆನಿಸಿದ್ದರಿಂದ ಮೊದಲಿನಂತೆ ೮೦+೪ ಪುಟಗಳಿಗೇ ಮಿತಿಗೊಳಿಸಿಕೊಂಡಿದ್ದೇನೆ. ಮಿತ್ರರು ಸಹಕರಿಸಬೇಕೆಂದು ಕೋರುವೆ.

೨೦೦೨ ರ ಆರೂ ಸಂಚಿಕೆಗಳಲ್ಲಿ ಪ್ರಕಟವಾದ ಸಮಗ್ರ ಸಾಮಗ್ರಿಯ ವಿವರಗಳನ್ನು **ಸಂಕಲನ - ೭** ರಲ್ಲಿ ನೀಡಲಾಗಿದೆ. ಇದು ಸಂಕಲನ ಸಾಗಿಬಂದ ಹೆಜ್ಜೆಗಳನ್ನು ಗುರುತಿಸಲು ಅಧ್ಯಯನ ನಿರತ ವಿದ್ಯಾರ್ಥಿಗಳಿಗೆ, ವಿಮರ್ಶಕರಿಗೆ, ಗ್ರಂಥಾಲಯ ಸಂಗ್ರಾಹಕರಿಗೆ ಸಹಾಯಕವಾಗುತ್ತದೆ.

ಸಂಕಲನ - ೭ ರಿಂದ ಡಾ. ಹೇಮಾ ಪಟ್ಟಣಶೆಟ್ಟಿಯವರು ಸಕ್ರಿಯವಾಗಿ ಸಂಪಾದಕತ್ವದ ಹೊಣೆ ಹೊರುತ್ತಿರುವುದು ನನಗೆ ಸಂತಸ ತಂದಿದೆ.

ಈಗಾಗಲೇ ೭೦ - ೮೦ ಜನ ಮಿತ್ರರು ತಾವಾಗಿ ಎರಡನೆಯ ವರ್ಷದ ಚಂದಾ ಹಣ ಕಳಿಸಿದ್ದಾರೆ. ಈಗ **ಸಂಕಲನ - ೭** ಪ್ರಕಟವಾಗಿದೆ. ಉಳಿದ ಮಿತ್ರರೂ ತಮ್ಮ ಚಂದಾ ಹಣವನ್ನು ಆದಷ್ಟು ಬೇಗ ಕಳಿಸಲೆಂದು ಆಶಿಸುವೆ.

ಸಿದ್ಧಲಿಂಗ ಪಟ್ಟಣಶೆಟ್ಟಿ

೧ ಜನೆವರಿ, ೨೦೦೩
ಹೂಮನೆ, ಧಾರವಾಡ - ೪

ಪರಿವಿಡಿ

ಸಂಕಲನ : ಪ್ರತಿಕ್ರಿಯೆ + ಸ್ವೀಕರಿಸಿದ ಪುಸ್ತಕಗಳು / ಆವರಣ ಪುಟ - ೨

ಸಂಪಾದಕರ ಮಾತು / ೩

೧. **ನನ್ನ ತಂದೆ ನನ್ನ ಅಮ್ಮ** : ನನ್ನ ಅವ್ವ ನನ್ನ ಅಪ್ಪ ಮಾಲಿಕೆ : ಕೃತಜ್ಞತೆ - ೧ : ಶ್ಯಾಮಲಾ ಮಾಧವ / ೫-೧೨

೨. **ಅಯ್ದು ಸುಮತಿ ಕವಿತೆಗಳು** : ಸುಮತೀಂದ್ರ ನಾಡಿಗ / ೧೨-೧೮
   ೧. ಹೊಸ ನೋವು, ೨. ನಡೆದು ಬಂದ ದಾರಿ, ೩. ವೃತ್ತಿ, ಪ್ರವೃತ್ತಿ, ನಿವೃತ್ತಿ
   ೪. ಎರಡನೆ ಮೊಮ್ಮಗಳು
   ೫. ಬೇಂದ್ರೆಯವರ ಒಂದು ಕವಿತೆಯನ್ನು ಓದಿ ಬರೆದದ್ದು

೩. **ಎಂ. ವ್ಯಾಸ ಅವರ ಕಥೆಗಳಲ್ಲಿ 'ಸಾವು'** : ಜಿಜ್ಞಾಸೆ : ಮಣಿಮಾಲಿನಿ ವಿ. ಕೆ. / ೧೮-೨೪

೪. **ಹೊಸ ಚರಿತ್ರೆ** : ಕವಿತೆ - ೬ : ಕೃ. ಅನ್ಬನ್/ತಮಿಳು : ಪದ್ಮಾವತಿ ವಿವೇಕಾನಂದನ್ / ೨೫-೨೭

೫. **ಪ್ರತೀಕ್ಷೆ** : ಕವಿತೆ - ೭ : ವಿನಯಾ / ೨೭

೬. **ಎಂ. ಎಸ್. ವೇದಾ ಅವರ ಕಾದಂಬರಿ 'ಜಮೀನು'** : ಟಿ. ಸಿ. ಪೂರ್ಣಿಮಾ / ೨೮-೩೧

೭. **ಎರಡು ಗಜಲ್‌ಗಳು** : ಕವಿತೆ - ೮, ೯ : ಎಚ್. ಎಸ್. ಮುಕ್ತಾಯಕ್ಕ / ೩೧

೮. **'ಸಖೀಗೀತ' : ಮಾತು-ಮೌನಗಳ ಮಧ್ಯೆ ಜರುಗಿರುವ ಉಪಕ್ರಮ** : ಒಂದು ಅ-ಪರ ದೃಷ್ಟಿ : ಗುಂಡಣ್ಣ ಕಲಬುರ್ಗಿ / ೩೨-೩೫

೯. **ಮಲ್ಲಿಕಾರ್ಜುನ ಹಿರೇಮಠರ ಕಾದಂಬರಿ 'ಹವನ'** : ಮಾಧವ ಕುಲಕರ್ಣಿ / ೩೬-೪೨

೧೦. **ಎಲ್ಲಿ ಹೋದವು ಸಖ** : ಕವಿತೆ - ೧೦ : ಶಾರದಾ ಮುಳ್ಳೂರ / ೪೨

೧೧. **ಹೆಣ್ಣು** : ಬೀದಿ ರಂಗ ನಾಟಕ : ಹೇಮಾ ಪಟ್ಟಣಶೆಟ್ಟಿ / ೪೩-೫೭

೧೨. **ಒಂದಿಷ್ಟು ಹೈಕುಗಳು** : ಕವಿತೆ - ೧೧ : ಸರಜೂ ಕಾಟ್ಕರ್ / ೫೭

೧೩. **ಅವನನ್ನು ಕರೆದು ತಾ...** : ಕವಿತೆ - ೧೨ : ಲಲಿತಾ ಸಿದ್ದಬಸವಯ್ಯ / ೫೮-೬೧

೧೪. **ಒಮ್ಮೆ ಏನಾಯಿತೆಂದರೆ.....** : **ಕಥೆ** : ಚಂದ್ರಕಾಂತ ಪೋಕಳೆ / ಮರಾಠೀ : ಗೌರೀ ದೇಶಪಾಂಡೆ / ೬೧-೬೬

೧೫. **ಸೆಗಣಿ ಸಂಸಾರ** : ಹಾಸ್ಯ ಪ್ರಬಂಧ : ಶೈಲಾ ಛಬ್ಬಿ / ೬೬-೭೦

೧೬. **ಪುಸ್ತಕ ಪರಿಶೀಲನೆ : / ೭೧-೭೬**
   ೧. ಸ್ತ್ರೀವಾದದ ಪ್ರಸ್ತುತತೆ : ಡಾ. ಎಸ್. ವಿ. ಪ್ರಭಾವತಿ **– ಎಂ.ಆರ್. ಮಂದಾರವಲ್ಲಿ**
   ೨. ಗಣೆಯ ನಾದ : ಶಂಕರ ಕಟಗಿ **– ಎ. ಮುರಿಗೆಪ್ಪ**
   ೩. ನಿನ್ನ ಮೇಲೆ ಸಿಟ್ಟಿಲ್ಲ ಮಾಯೀ : ಡಿ. ಎಸ್. ಚೌಗಲೆ **– ಜಿ. ಟಿ. ಶ್ರೀಧರ ಶರ್ಮ**
   ೪. ಪ್ರೀತಿ ಬದುಕಿನ ಹಾಡು : ಅಬ್ಬಾಸ ಮೇಲಿನಮನಿ **–ಅಪ್ಪಾಸಾಹೇಬ ಸನದಿ**
   ೫. ಶರೀಫ : ಮಂಜುನಾಥ ಬೆಳಕೆರೆ **–ದುಷ್ಯಂತ ನಾಡಗೌಡ**
   ೬. ನಿಂತು ನೋಡುವೆ ಅವುಗಳತ್ತಲೆ : ಟಿ. ಆರ್. ರಾಧಾಕೃಷ್ಣ **–ನರಸಿಂಹ ಪರಾಂಜಪೆ**
   ೭. ವರ್ಣಸಂಚಯ : ಎಸ್. ಸಿ. ಪಾಟೀಲ **– ಚಂದ್ರಶೇಖರ ವಸ್ತ್ರದ**
   ೮. ಕುಕ್ಕರಹಳ್ಳಿ : ಶಿವರಾಮು ಕಾಡನಕುಪ್ಪೆ **–ಜಿ. ಕೆ. ರವೀಂದ್ರಕುಮಾರ್**

೧೭. **ಸಂಕಲನ ೧ ರಿಂದ ೬ ರಲ್ಲಿ ಪ್ರಕಟಿತ ಸಮಗ್ರ ಸಾಮಗ್ರಿ ದರ್ಶನ** / ೭೬-೭೯

೧೮. **ಕಡೀ ಪುಟ** : ಸಿದ್ಧಲಿಂಗ ಪಟ್ಟಣಶೆಟ್ಟಿ / ೮೦+ಆವರಣ ಪುಟ-೩

ನನ್ನ ತಂದೆ ನನ್ನ ಅಮ್ಮ

ಶ್ಯಾಮಲಾ ಮಾಧವ

'ಯಾರು ಸತ್ಯವನ್ನು ನುಡಿಯುವುದಕ್ಕಾಗಿ ಮಿತಭಾಷಿಗಳಾಗಿದ್ದರೋ....' ಎಂದು ರಘುವಂಶಜರ ಬಗ್ಗೆ ಬರೆದಿರುವುದನ್ನು ನೆನೆದಾಗಲೆಲ್ಲ ನನ್ನ ಮನದಲ್ಲಿ ಮೂಡುವುದು ನನ್ನ ತಂದೆಯವರ ಚಿತ್ರ. ಸತ್ಯವ್ರತರಾಗಿ, ಮಿತಭಾಷಿಗಳಾಗಿ, ಸರಳ ಜೀವನವನ್ನು ಬಾಳಿದ ಆದರ್ಶಪ್ರಾಯರವರು. ಅಸತ್ಯ, ಅವಿಚಾರ, ಅನಾಚಾರಗಳನ್ನು ಮೆಚ್ಚದವರು. 'ಅಂತರಂಗಶುದ್ಧಿ, ಬಹಿರಂಗಶುದ್ಧಿ' ಯನ್ನೇ ಆದರ್ಶವಾಗಿಟ್ಟುಕೊಂಡವರು. ಜ್ಞಾನಾರ್ಜನೆಯನ್ನು ಗೌರವಿಸಿ, ವಿದ್ಯಾಮಂದಿರಗಳನ್ನು, ವಿದ್ಯಾರ್ಥಿಗಳನ್ನು ಪ್ರೀತಿಸಿದ ಪೂಜ್ಯರು.

ಧೈರ್ಯ ಸ್ಥೈರ್ಯಗಳ, ಜ್ಞಾನ ವಿವೇಕಗಳ ಉತ್ತುಂಗ ವ್ಯಕ್ತಿತ್ವದ ನಮ್ಮ ತಂದೆ ಶ್ರೀ ನಾರಾಯಣ ಉಚ್ಚಿಲ್, ಹಾಗೂ ಅವರ ಧರ್ಮಪತ್ನಿ, ನಮ್ಮಮ್ಮ ಶ್ರೀಮತಿ ವಸಂತಿ. ಮಂಗಳೂರು -ಉಚ್ಚಿಲದ ಶೈಕ್ಷಣಿಕ, ಸಾಮಾಜಿಕ ಕ್ಷೇತ್ರದಲ್ಲಿ ಪರಿಚಿತ ಹೆಜ್ಜೆ ಗುರುತುಗಳನ್ನು ಮೂಡಿಸಿದ ಅವರ ನೆನಪಿನೊಂದಿಗೆ ಹಾಸುಹೊಕ್ಕಾಗಿ ಬಂದಿದೆ, ಇನ್ನೆಷ್ಟೋ ಜೀವಭಾವಗಳ, ನೋವು, ನಲಿವುಗಳ, ಮಧುರಾನುಭವಗಳ ಸ್ಮೃತಿಚಿತ್ರ !

ನೆನಪಿನ ದಾರಿಯಲ್ಲಿ ಎದ್ದು ಬರುತ್ತಿದೆ, ಬಾಲ್ಯದಲ್ಲಿ ಆಗಾಗ ನನ್ನನ್ನು ಕಾಡುತ್ತಿದ್ದ ಮೊದಲ ಕನಸು; ಕೆಂಪು, ಹಳದಿ, ಗುಲಾಬಿ ಹೂಗಳಿಂದ ತುಂಬಿದ ಹಚ್ಚಹಸುರಿನ ತೋಟದ ಮಧ್ಯೆ ಓಡುತ್ತಿರುವ ಗಾಂಧೀಜಿಯವರ ಬೆನ್ನ ಹಿಂದೆ ಧಾವಿಸುತ್ತಿರುವ ನನ್ನ ತಂದೆಯವರೂ ತೋಟಮಧ್ಯದ ಹುಲಿಯಿರುವ ಬಾವಿಯೊಳಗೆ ಬೀಳುವರಲ್ಲಾ ಎಂಬ ಆತಂಕದಿಂದ ಕೂಗಿ ಕರೆವ ಯತ್ನದಲ್ಲಿ ಥಕ್ಕನೆ ಎಚ್ಚರಾಗುವಾಗ ಕೊಕ್ಕೆ ಹಿಡಿವ ಕಾಲನ್ನು ತಡವಿ ನೇರವಾಗಿಸುವ ತಂದೆಯವರ ವಾತ್ಸಲ್ಯಹಸ್ತ ! ಅವರ ಕೊನೆಯ ದಿನಗಳಲ್ಲಿ, ರಕ್ತದ ಕೊರತೆಯಿಂದ ಸದಾ ಕೊಕ್ಕೆ ಹಿಡಿಯುತ್ತಿದ್ದ ಕೈಕಾಲ್ಗಳಿಗೆ ಅಯೊಡೆಕ್ಸ್ ಹಚ್ಚಿ ಬಿಡಿಸಲು ಯತ್ನಿಸುವಾಗ, ಬಾಲ್ಯದ ಆ ನೆನಪು ಎದ್ದು ಬರುತ್ತಿತ್ತು.

ಮಂಗಳೂರ ಬೆಸೆಂಟ್ ಶಾಲಾ ಆವರಣದ ಮನೆಯಲ್ಲೂ, ಸೋಮೇಶ್ವರ ಉಚ್ಚಿಲದ ಅಜ್ಜಿಮನೆಯಲ್ಲೂ ಕಳೆದ ಬಾಲ್ಯಕಾಲ, ಮಧುರ ನೆನಪುಗಳ ಆಗರ ! ಈಗ ಕಟ್ಟಡಗಳ ಕಾಡಾಗಿರುವ ಬೆಸೆಂಟ್ ವಿದ್ಯಾಸಂಸ್ಥೆ, ಅಂದು ಸಣ್ಣ ಶಾಲೆ, ದೊಡ್ಡ ಶಾಲೆ ಎಂಬ ಎರಡು ಕಟ್ಟಡಗಳ, ವಿಶಾಲ ಆಟದಂಗಣಗಳ ಸಮುಚ್ಚಯ. ಎತ್ತರದಲ್ಲಿ ಆಕರ್ಷಕ ಬುರುಜಿನ ಸಣ್ಣ ಶಾಲೆ; ನಡುವಣ ಅಡ್ಡರಸ್ತೆಯ ಇತ್ತ ದೊಡ್ಡ ಶಾಲೆಯ ಹಿತ್ತಲ ಮೂಲೆಯಲ್ಲಿ ನಮ್ಮ ಪುಟ್ಟ ಮನೆ. ಶಾಲೆಯ ದೊಡ್ಡ ಗೇಟ್ ಬಳಿ ಅಗಣಿತ ಹೂಗಳ ಪುಷ್ಪವೃಷ್ಟಿ ಸುರಿಸುವ ರೆಂಜೆಮರ. ಸಣ್ಣ ಗೇಟ್ ಬಳಿ ಹುಳಿ-ಸಿಹಿ ರುಚಿಯ ತುಪ್ಪಹುಣಸೆಮರ; ಮಧ್ಯದಲ್ಲೊಂದು ಸಿಹಿ ಹುಣಸೆಮರ; ಮಾವಿನ ಮರವೊಂದು, ಬಯಲಿನಂಚಿನ ತೋಡಿನಗುಂಟ ಬೆಳೆದು ಹಬ್ಬಿದ ಮಧುಮಾಲತಿ ಬಳ್ಳಿಯ ಪುಷ್ಪ ಚಿತ್ತಾರ. ಈ ಬಳ್ಳಿಗುಂಟ ನುಸುಳಿ ಸಾಗುವ ಮಾರುದ್ದದ ಕೇರೆ ಹಾವುಗಳು; ಅಪರೂಪಕ್ಕೆ ಕನ್ನಡಿ ಹಾವು, ಹಸಿರು ಹಾವುಗಳು. ಶಾಲೆಯೆದುರಿಗಿನ ಎತ್ತರದ ಮೈದಾನದಿಂದ ಧುಮ್ಮಿಕ್ಕಿ ಬರುವ ಮಳೆನೀರು ಈ ತೋಡಿನಲ್ಲಿ ಭೋರೆಂಬ ಅವ್ಯಾಹತ ಪ್ರವಾಹವಾಗಿ ಸಾಗಿ ಹೋಗುತ್ತಿದ್ದುದು; ಮೇಲಿನಿಂದೆಸೆವ ನಮ್ಮ ಕಾಗದದ ದೋಣಿಗಳು ರುಂಯ್ ಎಂದು ಸುಳಿದು ಮಾಯವಾಗುವ ಆ ಕೌತುಕ ! ಬಾವಿಯ ಬಳಿ ಪುಷ್ಪವೃಷ್ಟಿ ಸುರಿಸಿ ಕಂಪು ಬೀರುವ ಪಾರಿಜಾತ ! ಶಾಲೆಯಲ್ಲಿ ಪಿ. ಟಿ. ಗೈಡಿಂಗ್ ಶಿಕ್ಷಕಿಯಾಗಿದ್ದ ನಮ್ಮಮ್ಮ ಶಾಲಾ ಕಟ್ಟಡದುದ್ದಕ್ಕೂ ನೆಟ್ಟು ಬೆಳೆಸಿದ ವಿಶಾಲ ಹೂದೋಟ; ವೆಲ್ವೆಟ್, ಗೌರಿ, ಗೊಂಡೆ, ಕಾಸ್ಮಸ್, ಲಂಟಾನಾ, ಜೀನಿಯಾ,

ಲಿಲಿಪುಟ್ ಜೀನಿಯಾ, ಡೇಲಿಯಾ, ಗುಲಾಬಿಗಳು, ಹೈಡ್ರಾಂಜಿಯಾ, ಡ್ರೇಸಿ, ಪಿಟ್ಯೂನಿಯಾ, ಫ್ಲೋಜಸ್, ಮ್ಯಾಗ್ನೋಲಿಯಾಗಳು – ಬರೆದರೆ ಅದೇ ಒಂದು ಪುಟವಾಗುವ ಹೂತೋಟ ಸಮೃದ್ಧಿ, ಸಣ್ಣ ಶಾಲೆಯ ಕಂಪೌಂಡ್ ಗೋಡೆಯುದ್ದಕ್ಕೂ ಹಬ್ಬಿದ ಮಿಠಾಯಿಹೂ-ಬಳ್ಳಿಗಳು: ಒಳಾವರಣದಲ್ಲಿ ಸೈಕಸ್, ಕ್ರೋಟನ್‌ಗಳು. ಪಾತಾಳದಂತಹ ರಾಟೆಬಾವಿ. ಶಾಲಾ ಹಾಸ್ಟೆಲ್ 'ಪದ್ಮವಿಹಾರ'ದ ನೊಂದ ಎಳೆತರಳೆಯೊಬ್ಬಳನ್ನು ಬಲಿ ತೆಗೆದುಕೊಂಡ ಆ ಬಾವಿಯ ಕರಿನೆನಪು ಮಾಸುವಂತಹುದಲ್ಲ!

ಸಣ್ಣ ಶಾಲೆಯ ಬುರುಜು ನಮ್ಮೆಲ್ಲ ಕೌತುಕದಾಗರ! ತೀರಿಕೊಂಡ ಟೀಚರ್ ಅಲ್ಲಿ ಭೂತವಾಗಿ ಇದ್ದಾರೆಂಬ ಮಕ್ಕಳ ಕಲ್ಪಿತ ಕಥೆಯಿಂದಾಗಿ ಬುರುಜಿನ ಕಿಂಡಿ ತೆರೆದಾಗೆಲ್ಲ ಮೇಲೆ ಹೋಗಿ ನೋಡುವ ಕುತೂಹಲ. ಕೆಳಗೆ ಸ್ಟೇಜ್‌ನಲ್ಲಿ ರಾಷ್ಟ್ರೀಯ ದಿನಾಚರಣೆಗಳ ಸಂಭ್ರಮ. ನಾನು ಬೇಬಿ ಕ್ಲಾಸ್‌ನಲ್ಲಿದ್ದಾಗ, ಬಳಿಯ ಥಿಯೊಸಾಫಿಕಲ್ ಸೊಸೈಟಿ ಹಾಲ್‌ನಲ್ಲಿ ನೋಡಿದ ಶ್ರೀ ಕಾರಂತರ 'ಕಿಸಾಗೌತಮಿ' ನೃತ್ಯನಾಟಕದ 'ಬುದ್ಧಂ ಶರಣಂ ಗಚ್ಛಾಮಿ!' ಉದ್ಘೋಷ ಈಗಲೂ ಸ್ಥಿರ ನೆನಪು! ನೃತ್ಯಗುರು ಶ್ರೀ ರಾಜನ್ ಅಯ್ಯರ್, ಸಂಗೀತದ ಶ್ರೀ ಉಡುಪರು, ಕನ್ನಡ ಪಂಡಿತ ಶ್ರೀ ಪಿ. ಕೆ. ನಾರಾಯಣರು, ಇತರ ಶಿಕ್ಷಕ ವರ್ಗ, ವಿದ್ಯಾರ್ಥಿನಿಯರು ಸೇರಿ ನಡೆಸುತ್ತಿದ್ದ 'ವಸಂತೋತ್ಸವ'ದ ಹುರುಪು, ಸಂಭ್ರಮ: ದೊಡ್ಡ ಶಾಲೆಯಿಂದ ಸಣ್ಣ ಶಾಲೆಗೆ ಸಾಗುವ 'ವಸಂತರಾಣಿ'ಯ ಮೆರವಣಿಗೆ: ಸ್ವಾತಂತ್ರ್ಯದಿನಕ್ಕಾಗಿ ಕ್ಲಾಸ್ ಡೆಕೊರೇಶನ್‌ನ ಪೈಪೋಟಿ!

ರಾಷ್ಟ್ರೀಯ ಹಬ್ಬಗಳು ವೈಭವದಿಂದಾಚರಿಸಲ್ಪಡುತ್ತಿದ್ದ ಶಾಲಾ ವಾತಾವರಣದಲ್ಲಿ, ಅಚ್ಚಳಿಯದ ಆದರ್ಶವಾಗಿ ಬೆಳೆದು ನಿಂತ ಸ್ವಾತಂತ್ರ್ಯಯೋಧರ ಹೆಸರಿಗೇ ಮೈ ನವಿರೇಳುತ್ತಿದ್ದ ನನಗೆ ತಂದೆಯವರು ಗಾಂಧಿ, ನೆಹರೂಗೆ ಸಮಾನರಾದ ಆದರ್ಶ ವ್ಯಕ್ತಿ! ಶುಭ್ರಶ್ವೇತವಸನರಾದ ಶಿಸ್ತಿನ ಮೂರ್ತಿ! ನಿಯಮಿತ ಸರಳ ಆಹಾರ: ಮಿತವಾದ ಮಾತು. ರಾತ್ರೆ ಊಟದ ಬಳಿಕ ಅಂಗಳದಲ್ಲಿ ನಡೆದಾಡುವ ಅವರೊಡನೆ ನಾವೂ ನಡೆವಾಗ ಆಗಸದ ತಾರಾಪುಂಜಗಳ ಪರಿಚಯ. ನಿರಂಜನರ 'ಚಿರಸ್ಮರಣೆ' ಯನ್ನೋದಿದ ಆ ಎಳೆಹರೆಯದಲ್ಲಿ, ನನ್ನ ತಂದೆಯೂ ತೀರಿಕೊಂಡಾಗ ಹೀಗೇ ನಕ್ಷತ್ರವಾಗುವರೆಂದು ನಾನು ಕಲ್ಪಿಸಿದ್ದೆ. ಮನೆಗೆ ಬರುವ ಬಂಧುಮಿತ್ರರೊಡನೆ ಅವರು ನಡೆಸುವ ರಾಜಕೀಯ ಸ್ಥಿತಿಗತಿಯ ಚರ್ಚೆ. ಉಚ್ಚಿಲ ಶಾಲೆಗಾಗಿ ಅವರ ಅವಿರತ ದುಡಿಮೆ! ನಸುಕಿನ ಚಳಿಗೆ ಏಳಲೊಲ್ಲದ ನಮ್ಮನ್ನು, 'ನೋಡು ಕಂದ ಏನು ಅಂದ, ಸೂರ್ಯ ಮೂಡಲಲ್ಲಿ ಬಂದ, ಹೆಚ್ಚು ಮಲಗಲೇನು ಚಂದ, ಬಾ ಕಂದ ಬಾ' ಎಂದು ಹಾಡಿ ಅವರು ಎಬ್ಬಿಸುತ್ತಿದ್ದ ಪರಿ: ಮನೆಯೊಳಗೆ ನಡೆದಾಡುವಾಗೆಲ್ಲ ಅವರು ಹಾಡಿಕೊಳ್ಳುತ್ತಿದ್ದ 'ವೈಷ್ಣವ ಜನತೋ...', 'ದೇಹವಿದು ನೀನಿರುವ ಗುಡಿಯೆಂದು ತಿಳಿದು...', 'ಯಾರನು ಕೇಳಲಿ ನಾ, ಎಲ್ಲಿಹೆ ನೀನೆಂದೂ...' ಹಾಡುಗಳು, ಶಿಶುಗೀತೆಗಳು, ಕುಮಾರವ್ಯಾಸ, ರಾಘವಾಂಕ ಕೃತಿಗಳು, ಸರ್ವಜ್ಞ ವಚನಗಳು, 'Breathes there the man with soul so dead...', 'Where the mind is without fear...' ಕವನಗಳು, ಅವರಿಗೆ ಬಹುಪ್ರಿಯವಾದ 'ಸಾರೇ ಜಹಾ ಸೇ ಅಚ್ಛಾ...' ಹಾಡುಗಳು ಇವನ್ನೆಲ್ಲ ಕೇಳಿಸಿಕೊಳ್ಳುತ್ತಲೇ ಬೆಳೆದ ಭಾಗ್ಯ ನನ್ನದು. ರುಗ್ಣಶಯ್ಯೆಯಲ್ಲೊರಗಿದ ಕೊನೆಯ ದಿನಗಳಲ್ಲೂ, ಕಾಡುವ ನಿಶ್ಶಕ್ತಿಯ ನಡುವೆಯೂ ಅವರು ಈ ಗೀತೆಗಳನ್ನು ಹಾಡಿಕೊಳ್ಳಲೆತ್ನಿಸುತ್ತಿದ್ದಾಗ ಕೇಳುವ ನಮ್ಮ ಹೃದಯ ಹಿಡಿದಂತಾಗಿತ್ತು.

ನಮಗೆ ಬುದ್ಧಿ ತಿಳಿದಾಗಿನಿಂದಲೂ ಅವರನ್ನು ಕಾಡುತ್ತಿದ್ದ ಉಬ್ಬಸ ಬಾಧೆ: ನಿದ್ರಿಸಲಾಗದ ರಾತ್ರಿಗಳು: ಔಷಧೋಪಚಾರಕ್ಕೆ ಬಗ್ಗದ, ಅವರ ಆಸ್ತಿಯೆಂದೇ ವೈದ್ಯರು ಬಣ್ಣಿಸಿದ್ದ ಅಸ್ತಮಾ ವ್ಯಾಧಿ. ಆದರೂ ಕೊನೆವರೆಗೂ ಯಾರು ವಿಚಾರಿಸಿದರೂ ಸೌಖ್ಯವೆಂದಲ್ಲದೆ ಅವರು ತನ್ನ ಅಸೌಖ್ಯದ ಬಗ್ಗೆ ದೂರಿದ್ದನ್ನು ನಾವರಿಯೆವು. ಹಗಲಲ್ಲಿ ಮಲಗಿ ನಿದ್ರಿಸಿದ್ದನ್ನೂ ಕಂಡರಿಯೆವು. ಮಂಗಳೂರ ಬಂದರು ಬಳಿಯ ಕಛೇರಿ 'ವರ್ತಕ್ ವಿಲಾಸ್'ನ ತನ್ನ ದಿನದ ಕೆಲಸದ ಬಳಿಕ ನಮ್ಮೂರು ಸೋಮೇಶ್ವರ ಉಚ್ಚಿಲದ ಶಾಲಾಡಳಿತದ ಜವಾಬ್ದಾರಿ ಹೊತ್ತು ಅಲ್ಲಿಗೆ ಪಯಣ,

ಸರಿರಾತ್ರಿಯಲ್ಲಿ ಅವರು ಹಿಂದಿರುಗುವ ವರೆಗೂ ಅಮ್ಮನಿಗೆ ಆತಂಕದ ಕ್ಷಣಗಳು. ರಾತ್ರಿಯೆಲ್ಲ ಅವರೊಡನೆ ನಿದ್ದೆಗೆಟ್ಟಿರುತ್ತಾ, ಉಪಚರಿಸುತ್ತಿದ್ದ ಅಮ್ಮನೂ ನಸುಕಿಗೆದ್ದರೆ ರಾತ್ರಿ ವರೆಗೆ ದುಡಿವ ಯಂತ್ರ. ದಿನವಿಡೀ ಶಾಲೆಯಲ್ಲಿ ಪಿ. ಟಿ. ಹಾಗೂ ಶಾಲಾನಂತರ ಗೇಮ್ಸ್, ಗೈಡಿಂಗ್ ಎಂದು ಸದಾ ವ್ಯಸ್ತರಾಗಿರುತ್ತಿದ್ದ ಅಮ್ಮ, ಆಗಲೂ ಈಗಲೂ ಶಿಸ್ತಿನ ಮೂರ್ತಿ! ರಜಾದಿನಗಳಲ್ಲಿ ನಸುಕಿಂದ ಸಂಜೆಯ ವರೆಗೆ ಒಗೆವ ಬಟ್ಟೆಯ ರಾಶಿಯಿರಲಿ, ನೆಲವಿರಲಿ, ಪಾತ್ರೆಗಳಿರಲಿ, ಮಕ್ಕಳಿರಲಿ, ಮನೆಯ ನಾಯಿಯೇ ಇರಲಿ –ಅಮ್ಮ ತಿಕ್ಕಿ ತೊಳೆದರೆ ಫಳ ಫಳ ಎನ್ನಬೇಕು –ಕೆಲಸದ ನಡುವೆ ಅವರು ಓದಿ ಹೇಳುತ್ತಿದ್ದ ಕತೆಯ ಸಿಂಡ್ರೆಲ್ಲಾ ತೊಳೆದಿಟ್ಟ ಪರಿಕರಗಳಂತೆ– ಎಂದು ನನಗನಿಸುತ್ತಿತ್ತು. ವರ್ಷಗಳ ಬಳಿಕ, ಆಡಿಬಂದ ನನ್ನ ಮಗ ತುಷಾರ್‌ನ ಕೈ ಕಾಲ್ಗಳನ್ನು ತೆಂಗಿನ ಸಿಪ್ಪೆಗೆ ಸಾಬೂನು ಹಚ್ಚಿ ಅವರು ತಿಕ್ಕಿ ತಿಕ್ಕಿ ತೊಳೆಯುತ್ತಿದ್ದರೆ, ಮಗು, 'ಅಮ್ಮಮ್ಮಾ, ನಾನೇನು ವೆಸ್ಸೆಲ್ಲಾ ?' ಎಂದು ಕೇಳಿದ್ದ ! ಅಮ್ಮನಂತೆಯೇ ಪರ್ಫೆಕ್ಶನಿಸ್ಟ್ ಆಗಿದ್ದ. ಅಮ್ಮನ ಗೆಳತಿ ಹಾಗೂ ನನ್ನ ಕನ್ನಡ, ಗಣಿತ ಟೀಚರ್ ಆಗಿದ್ದ ಭಾಮಾಂಟಿಯನ್ನು ಅಮ್ಮನ ತಂಗಿಯೆಂದೇ ತಿಳಿದವರು ಹಲವರು ! ಕನ್ನಡ, ಇಂಗ್ಲಿಷ್ ಕೈಬರಹ, ಈ ಇಬ್ಬರ ಕೈಯಲ್ಲೂ ಈ ವೃದ್ಧಾಪ್ಯದಲ್ಲೂ ಮುತ್ತಿನಂತೆ ! ನೋಟ್ಸ್ ಬರೆಸುವಾಗ ಎಲ್ಲಾದರೂ ತಪ್ಪಾದರೆ, ಮಕ್ಕಳ ಪುಸ್ತಕ ಚಿತ್ರಾಯ್ತಲ್ಲಾ ಎಂದು ಆಂಟಿ ಕ್ಷಮೆ ಕೇಳುತ್ತಿದ್ದುದು: ಸ್ಪೋರ್ಟ್ಸ್, ಗೈಡಿಂಗ್‌ನಲ್ಲಿ ಅಮ್ಮನ ತರಬೇತಿಯಿಂದಾಗಿ ಶಾಲೆಗೆ ಪ್ರಾಪ್ತವಾಗುತ್ತಿದ್ದ ಚಾಂಪಿಯನ್‌ಶಿಪ್ಸ್, ಪ್ರೆಸಿಡೆಂಟ್ ಗೈಡ್ ಪ್ರಶಸ್ತಿಗಳು ! ಶಿಸ್ತು, ಚತುರಮತಿಗೆ ಹೆಸರಾದ ಹೆಡ್‌ಟೀಚರ್, ಪ್ರೀತಿಯ ರಾಧಾಂಟಿ– ಕ್ರಿಕೆಟ್ ಆಡಿ ಶಾಲಾಕಿಟಕಿಯ ಗಾಜು ಒಡೆದವರ್ಯಾರ್ಯಾರು ಎನ್ನುವಾಗ 'ನಾನು' ಮೊದಲಲ್ಲಿ ಇರಬೇಕೆಂದೂ, ಸ್ಕ್ವಾಡ್‌ಲೀಡರ್ಸ್ ಆಗಿ ಆರಿಸಲ್ಪಟ್ಟವರ್ಯಾರ್ಯಾರು ಎನ್ನುವಾಗ 'ನಾನು' ಕೊನೆಯಲ್ಲಿ ಇರಬೇಕೆಂದೂ ನನ್ನನ್ನು ತಿದ್ದಿದ ಮೆಚ್ಚಿನ ರಾಧಾಂಟಿ !

ನೃತ್ಯ, ಆಟೋಟಗಳಲ್ಲಿ ಅದಮ್ಯ ಉತ್ಸಾಹದಿಂದ ಭಾಗವಹಿಸುತ್ತಿದ್ದ ನನ್ನ ಓಡಾಟಕ್ಕೆ ತಡೆಯಾಗಿ ಪೋಲಿಯೋ ವ್ಯಾಧಿ, ನನ್ನ ಹತ್ತರ ಹರೆಯದಲ್ಲಿ ಬಾಧಿಸಿದಾಗ ಆರಂಭದ ಆಸ್ಪತ್ರೆವಾಸ, ಚಿಕಿತ್ಸೆಯ ಬಳಿಕ ಶಾಶ್ವತ ಗುಣ ಕಾಣಿಸಿದವರು, ಶಾಲೆಯಲ್ಲಿ ಅಮ್ಮನ ವಿದ್ಯಾರ್ಥಿನಿಯಾಗಿದ್ದ, ಡಾ. ಸಾವಿತ್ರಿ ದೈತೋಟ ಅವರ ತಂದೆ ಪಾಣಾಜೆ ಭಟ್ಟರು. ಆ ಹೊತ್ತಿಗಾಗಲೇ ಮನೆಯಲ್ಲಿದ್ದ ತಂದೆಯವರ ಪುಸ್ತಕ ಭಂಡಾರದಿಂದ ಕಾರಂತ, ನಿರಂಜನ, ಅ. ನ. ಕೃ., ತ. ರಾ. ಸು., ಕಟ್ಟೀಮನಿ, ಕೊರಟಿ –ಎಲ್ಲ ಸಾಹಿತ್ಯ ಕರಗತವಾಗಿತ್ತು. ಮನೆಯೆದುರಿನ ಕಾರ್ನಾಡ್ ಸದಾಶಿವರಾವ್ ಲೈಬ್ರರಿ, ಲೈಟ್‌ಹೌಸ್‌ನ ಲೈಬ್ರರಿ, ಅಲ್ಯೋಶಿಯಸ್ ಕಾಲೇಜ್ ಆವರಣಗಳು ನಮ್ಮ ಪ್ರಿಯತಾಣಗಳು. ನನ್ನ ದುರ್ಬಲ ಕಾಲಿನ ಬಗ್ಗೆ ತಂದೆಯವರಿಗಿದ್ದ ಚಿಂತೆಯ ಕಾರಣ ನನ್ನ ನೃತ್ಯ, ಆಟೋಟಕ್ಕೆ ಕಡಿವಾಣ ಬಿದ್ದರೂ ಪುಸ್ತಕಗಳ ನಂಟು ಹೆಚ್ಚುತ್ತಾ ಹೋಯ್ತು.

ಒಂದು ರಾತ್ರಿ ಊಟದ ಸಮಯ ಅಂಕೆಮೀರಿ ಹರಟಿದಾಗ, ಪಕ್ಕದಲ್ಲಿ ಉಣ್ಣುತ್ತಿದ್ದ ತಂದೆಯವರು ಎಡಗೈಯಲ್ಲಿತ್ತ ಒಂದು ಏಟು, ಜೀವಮಾನದಲ್ಲಿ ಅವರ ಕೈಯಿಂದ ತಿಂದ ಒಂದೇ ಪೆಟ್ಟು ! ಚಿಕ್ಕಂದಿನ ನಮ್ಮ ತುಂಟಾಟಗಳಿಗೆ, ಬಾಲಸಹಜ ದುಸ್ಸಾಹಸಗಳಿಗೆ ತಂದೆಯವರು ಎಂದೂ ನಮ್ಮನ್ನು ಗದರಿಸಿದ್ದಿಲ್ಲ; ದಂಡಿಸಿದ್ದಿಲ್ಲ. ಅಮ್ಮನ ಗದರಿಕೆ, ಮನೆಗೆ ಬರುತ್ತಿದ್ದ ಶಿಕ್ಷಕವರ್ಗದ ಎಚ್ಚರಿಕೆ ಇವೇ ನಮಗೆ ಕಡಿವಾಣವಾಗಿದ್ದವು. ಆದರೂ ತಂದೆಯವರ ಮೌನ, ಗಂಭೀರ ಇರವೇ ಇದಕ್ಕೂ ಮೀರಿದ ಅಂಕೆಯಾಗಿತ್ತು. ತಮ್ಮ ಸತತ ಅಸೌಖ್ಯದ ನಡುವೆ ಮಕ್ಕಳೆಂದಾದರೂ ಅಸೌಖ್ಯ, ಆಪತ್ತಿಗೊಳಗಾದರೆ, ಪ್ರಿಯಬಂಧುಗಳ ಅಸೌಖ್ಯದಲ್ಲಿ, ತಂದೆಯವರ ಅಸೌಖ್ಯ ಎಲ್ಲೋ ಮರೆಯಾಗಿ ಬಿಡುತ್ತಿತ್ತು.

ರಜೆಯಲ್ಲಿ ಊರಾದ ಉಚ್ಚಿಲಕ್ಕೆ ಪಯಣ. ನಾವೆಲ್ಲ ಕಾತರದಿಂದ ಕಾಯ್ವ ಅವಕಾಶ. ಜಟಕಾದಲ್ಲಿ ಸವಾರಿಯ ಮೋಜು ಅನುಭವಿಸಿ ರೈಲು ನಿಲ್ದಾಣ ತಲುಪುವಾಗಲೇ ಮೇರೆ ಮೀರಿ

ಹರಿವ ಉತ್ಸಾಹ ! ನೇತ್ರಾವತೀ ನದೀ ಸೇತುವೆಯ ಮೇಲೆ ಘಡಘಡಿಸುವ ರೈಲು ಉಲ್ಲಾಳ ನಿಲ್ದಾಣ ತಲುಪಿದರೆ, ಇಳಿದು ನಡೆವ ಎರಡು ಮೈಲುದ್ದದ ಹಳಿಯ ಇಕ್ಕೆಲಗಳಲ್ಲೂ ತಲೆದೂಗುವ ಬೋಗನ್‌ವಿಲ್ಲಾ ಪೊದರುಗಳು: ನೇರಳೆಗಂಟೆ ಹೂವಿನ ಕುರುಚಲು ಬಳ್ಳಿಗಳು. ಮಾರ್ಗಮಧ್ಯದಲ್ಲಿ ಸಿಗುವ ಉಚ್ಚಿಲ ಶಾಲೆ; ಹಿಂದೆ ಭೋರ್ಗರೆವ ಸಮುದ್ರ. ಅಜ್ಜಿಮನೆ ಸಮೀಪಿಸುವಾಗ ಹಳಿಯಿಂದ ಕೆಳಗೆ ದಿಬ್ಬವಿಳಿದರೆ ಮುಂದೆ ಹರಡಿದ ವಿಶಾಲ ಭತ್ತದ ಗದ್ದೆಗಳು, ಬಲಕ್ಕೆ, ಅಂದರೆ, ಪಶ್ಚಿಮದಲ್ಲಿ ಎತ್ತರದ ಬೆಟ್ಟದ ಮೇಲೆ ಕೋಟೆ ವಿಷ್ಣುಮೂರ್ತಿ ದೇವಾಲಯ. ಗದ್ದೆಗಳ ನಡುವಿನ ಕಟ್ಟೆಹುಣಿಯಲ್ಲಿ ಸಾಗಿ ಕೈತೋಡಿಗಿಳಿದು ಮೀನಮರಿಗಳನ್ನೂ, ಬೆಳ್ದಾವರೆಗಳನ್ನೂ ಎಟುಕಿಸಿಕೊಂಡು, ಸಾಧ್ಯವಾದರೆ ಕಿತ್ತುಕೊಂಡು, ಹುಣಿಅಂಚಿನ ಹಿತ್ತಿಲು, ಗುಡ್ಡೆಮನೆ ಸೇರಿದರೆ ಸ್ವರ್ಗಸುಖದಂತೆ ! ಸುತ್ತ ತೆಂಗುಗಳು ತಲೆದೂಗುವ, ಮಾವು, ಗೇರು ಬೆಳೆವ, ಶುಭ್ರ, ಸ್ವಚ್ಛ ತಂಪಿನಾಸರೆಯ ಅಜ್ಜಿಮನೆಯದು ! ಮದುವೆ, ಕಾಲೇಜ್ ವಿದ್ಯಾಭ್ಯಾಸ ಮುಗಿಸಿ, ಮೊದಲ ಬಾರಿ ನಾನು ಮುಂಬೈಗೆ ಹೊರಟು ಬರುವಾಗ ಅಜ್ಜಿ ನನ್ನ ಪ್ರಿಯ ಬೆಳ್ದಾವರೆಗಳನ್ನು ಕೈತುಂಬ ತಂದಿತ್ತಿದ್ದರು. ಅದೇ ಅವರ ಕೊನೆಯ ದರ್ಶನವಾಯ್ತು ! ತರವಾಡು ಮನೆಯ ಒಡತಿಯಾಗಿ, ವಿಶುಹಬ್ಬದಂದು ಕಣಿಯಿಟ್ಟು ಹರಸುವ, ಉಣಿಸಿ, ತಿನಿಸಿ ದಣಿಯದ ಪ್ರಿಯಜೀವ ! ಅಜ್ಜಿಯ ಉಪ್ಪಿನಕ್ಯಾಭರಣಗಳು: ಬೇಯಿಸಿ, ಉಪ್ಪು ನೀರಲ್ಲಿ ಹಾಕಿಟ್ಟ ಮಾವು, ಸೌತೆ, ಅತ್ತಿಕಾಯಿಗಳು ! ದಕ್ಷಿಣ ಮಗ್ಗುಲಿಗೆ ಹೊಳೆ ಹರಿವ ಕಾರಣ ಬಾವಿನೀರು ಕಡುಉಪ್ಪು ! ಹೀಗಾಗಿ ಕುಡಿಯಲೂ, ಅಡಿಗೆಗೂ ಪಕ್ಕದ ಐಸ (ಆಯಿಶಾ) ಕುಂಞಯ ಬಾವಿಯ ಸಿಹಿನೀರು ! ಕಣ್ಣು ಹಾಯಿಸಿದಷ್ಟೂ ದೂರ ಹರಡಿದ ಗದ್ದೆಗಳ ನಡುವಿನ ನಮ್ಮಜ್ಜಿ ಮನೆಯ ಏಕೈಕ ನೆರೆಯೇ ಪ್ರಿಯ ಐಸ ಕುಂಞಯದು !

ಅಜ್ಜಿ ನಮ್ಮನ್ನಗಲಿದ ಮರುವರ್ಷ ಉಕ್ಕಿಬಂದ ನೆರೆಗೆ ಮನೆ ಬಿದ್ದುಹೋದ ಬಳಿಕ, ಹೊಳೆಯಿಂದ ಮಣ್ಣೆತ್ತಿ ತುಂಬಿಸಿ ಹಿತ್ತಿಲನ್ನು ಎತ್ತರಿಸಿ, ಮನೆಯ ವಿನ್ಯಾಸ ಬದಲಿಸಿದುದರಿಂದ ಬಾಲ್ಯಕಾಲದ ಆ ಸೊಗಸು ಈಗ ಮಾರ್ಪಟ್ಟಿದೆ. ಸದಾಕಾಲ ತಂಪುಗಾಳಿ ಬೀಸಿ ಬರುವ, ನಾವು ಚಿಣ್ಣರೆಲ್ಲ ಕುಳಿತು ಉಣ್ಣುತ್ತಿದ್ದ ಆ ಬಡಗಣ ಜಗಲಿ ಈಗಿಲ್ಲ. ಮನೆಯೆದುರಿನ ಕೊಟ್ಯೊ ಇಲ್ಲ. ಹುಣ್ಣಿಮೆಯ ರಾತ್ರಿಗಳಲ್ಲಿ ಅಂಗಳದಲ್ಲಿ ಬೆಳದಿಂಗಳೂಟ ಮಾಡುತ್ತಿದ್ದ ಅವಿಭಕ್ತ ಕುಟುಂಬದ ಎಳೆಯರೂ ಈಗಲ್ಲಿಲ್ಲ. ಮನೆಯೆದುರಿನ ಕಂಬಳದ ಗದ್ದೆ, ಮನೆ, ಮಿಲ್‌ಗಳಾಗಿ ಮಾರ್ಪಟ್ಟಿದೆ. ಎತ್ತುಗಳ ಕೊರಳಗಂಟೆಯ, ಬಂಡಿಗಾಲಿಗಳ ಆಪ್ಯಾಯಮಾನವಾದ ನಾದ ಮಾತ್ರ ಕೇಳಿ ಬರುತ್ತಿದ್ದ ಹೆದ್ದಾರಿಯೀಗ, ನಿಮಿಷಕ್ಕೊಂದು ಬಸ್, ಟ್ರಕ್‌ಗಳು ಸ್ಪರ್ಧಾತ್ಮಕವಾಗಿ ಹಾರೋಡುವ ಯಮಪಾಶವೇ ಆಗಿದೆ.

ಏಳನೆಯ ದರ್ಜೆಯ ವರೆಗಿನ ಶಿಕ್ಷಣ ಪಡೆದ ಬಳಿಕ ಎರಡು ವರ್ಷ ಶಿಕ್ಷಕನಾಗಿ ದುಡಿದು ಮತ್ತೆ ವಿದ್ಯಾಭ್ಯಾಸ ಮುಂದುವರಿಸಿದ ತಂದೆಯವರು, ಅಂದಿನ ಆರ್ಥಿಕ ಸ್ಥಿತಿಯಲ್ಲಿ ಎಷ್ಟೋ ಸಲ ಉಚ್ಚಿಲದಿಂದ ಮಂಗಳೂರ ಗಣಪತಿ ಶಾಲೆಗೆ ನಡೆದೇ ಪಯಣಿಸಿದವರು. ಮಧ್ಯಾಹ್ನದೂಟ, ಮಂಗಳೂರ ತಮ್ಮ ದೊಡ್ಡಮ್ಮನ ಮನೆ 'ಚಂಪಕ ವಿಲಾಸ' ದಲ್ಲಿ. ವಿದ್ಯಾಭ್ಯಾಸ ಪೂರೈಸಿ, ಉದ್ಯೋಗ ಅರಸಿ, ಮುಂಬೈ ಸೇರಿದ ತಂದೆಯವರು, ರೇಮಂಡ್ಸ್‌ನಲ್ಲಿನ ತಮ್ಮ ವೃತ್ತಿ, ಅಂದಿನ ಮುಂಬೈ ಜನರ ಚಟುವಟಿಕೆಯ ಜೀವನ ಎಲ್ಲವನ್ನೂ ಮೆಚ್ಚಿಕೊಂಡಿದ್ದರು.

ವಿವಾಹಾರ್ಥ ಊರಿಗೆ ಮರಳಿದ ತಂದೆಯವರು, ಮಂಗಳೂರಲ್ಲಿ ತನಗಾಗಿ ಕಾದಿದ್ದ ತನ್ನ ವಸಂತಾ–ನಮ್ಮಮ್ಮ–ನನ್ನು ವರಿಸಿದ್ದು, ೧೯೪೬ ರ ಆಗಸ್ಟ್ ೩೦ ರಂದು. ಅಂದು ಗಣೇಶ ಚತುರ್ಥಿಯ ಹಬ್ಬವಿದ್ದರೂ, ಏನೋ ನಿಮಿತ್ತ ರೈಲು ಸಂಚಾರ ರದ್ದಾಗಿದ್ದರೂ, ಬೆಸೆಂಟ್ ಶಾಲೆಯ ಬಹಳಷ್ಟು ಶಿಕ್ಷಕವೃಂದ, ವಿದ್ಯಾರ್ಥಿನಿಯರು ಅಷ್ಟು ದೂರ ನಡೆದುಬಂದು ಮದುವೆಯ ಸಂಭ್ರಮದಲ್ಲಿ ಪಾಲುಗೊಂಡ ವಿವರದ ಬಗ್ಗೆ ಹಲವರಿಂದ ಕೇಳಿದ್ದಿದೆ.

ತಂದೆಯವರ ಕೈ ಹಿಡಿದು, ಬಾಳಿನುದ್ದಕ್ಕೂ ಜೊತೆಯಾಗಿ, ನಿಜವಾದ ಅರ್ಥದಲ್ಲಿ ಅವರ ಸಹಚರಿಯಾಗಿದ್ದ ನಮ್ಮಮ್ಮ ವಸಂತಾ, ಮೂರು ತಿಂಗಳ ಶೈಶವದಲ್ಲೇ ತಂದೆಯನ್ನು ಕಳಕೊಂಡು ತಬ್ಬಲಿಯಾದವರು. ಇಪ್ಪತ್ತಾರರ ಯುವಹರೆಯದಲ್ಲೇ ಅಸಿಸ್ಟೆಂಟ್ ಕಮೀಶನರ್ ಹುದ್ದೆಗೆ ಭಡ್ತಿ ಪಡೆಯಲಿದ್ದ ನಮ್ಮಜ್ಜ ಶ್ರೀ ಯು. ಕೃಷ್ಣಪ್ಪ ಹೃದಯಾಘಾತವಾಗಿ ತೀರಿಕೊಂಡಿದ್ದರು. ತಂದೆಯಿಲ್ಲದ ಮಗುವೆಂದು ಅಮ್ಮನನ್ನು ಪ್ರೀತಿಯಿಂದ ಕಂಡು ವಾತ್ಸಲ್ಯದಿಂದ ಪೋಷಿಸಿದ ಬಂಧುಗಳು ಹಲವರು : ಮದರಾಸ್ ಜಿಲ್ಲಾ ಸೆಶನ್ಸ್ ಕೋರ್ಟ್‌ನ ನ್ಯಾಯಾಧೀಶರಾಗಿದ್ದ ದೊಡ್ಡಪ್ಪ ರಾವ್ ಬಹದ್ದೂರ್ ಯು. ರಾಮಪ್ಪ, ಮಂಗಳೂರ ಅಲ್ಲೋಶಿಯಸ್ ಕಾಲೇಜ್ ಫೌಂಡರ್ ಮೆಂಬರ್ ಆಗಿದ್ದು, ದಕ್ಷಿಣ ಕನ್ನಡ ಜಿಲ್ಲಾ ವಿದ್ಯಾಧಿಕಾರಿಯಾಗಿದ್ದ ದೊಡ್ಡಪ್ಪ ಶ್ರೀ ಕಣ್ಣಪ್ಪ ಅಲ್ಲೋಶಿಯಸ್, ಎಕ್ಸೈಸ್ ಇನ್‌ಸ್ಪೆಕ್ಟರಾಗಿದ್ದ 'ತುಳಸೀವಿಲಾಸ'ದ ದೊಡ್ಡಪ್ಪ ಯು. ಪರಮೇಶ್ವರ ಹಾಗೂ ಸೋದರತ್ತೆಯಂದಿರು. ಶೈಶವ ಹಾಗೂ ಬಾಲ್ಯದ ಆರು ವರ್ಷಗಳನ್ನು 'ತುಳಸೀವಿಲಾಸ'ದಲ್ಲಿ ತುಂಬುಕುಟುಂಬದ ಪ್ರಿಯ ಬಂಧುಗಳ ವಾತ್ಸಲ್ಯದ ಬೆಚ್ಚನೆ ನೆರಳಲ್ಲಿ ನಮ್ಮಮ್ಮ ಕಳೆದಾಗ, ಅದು, ಆ ಮನೆ ಸಿರಿ, ಸಂಪತ್ತು, ಅಧಿಕಾರಗಳಿಂದ ಉಚ್ಛ್ರಾಯದಲ್ಲಿದ್ದ ಸರಕಾರೀ ಅಧಿಕಾರಿಯ ಮನೆ. ಉಚ್ಚಿಲದ ವಿದ್ಯಾಕಾಂಕ್ಷಿ ಬಂಧುಗಳನೇಕರಿಗೆ ಈ 'ತುಳಸೀವಿಲಾಸ', ನೆರೆಯ 'ಚಂಪಕವಿಲಾಸ' (ತಂದೆಯವರ ದೊಡ್ಡಮ್ಮನ ಮನೆ), 'ಮಾಧವವಿಲಾಸ'ಗಳು ಆಶ್ರಯ ತಾಣವಾಗಿದ್ದವು. 'ತುಳಸೀವಿಲಾಸ'ದೊಡತಿ– ನಮ್ಮಮ್ಮನ ದೊಡ್ಡಮ್ಮ– ನಮ್ಮ ತಂದೆಯವರ ಸೋದರತ್ತೆಯಾಗಿದ್ದರು. ಈ ಮನೆಗಳ ಕಥೆ ಬರೆಯಹೋದರೆ ಅದೇ ಒಂದು ರೋಚಕ ಕಾದಂಬರಿಯಾದೀತು! ಸರಕಾರೀ ದೌಲತ್ತೇ ಶಾಪವಾದಂತೆ 'ತುಳಸೀವಿಲಾಸ'ದ ಮಕ್ಕಳಲ್ಲಿ ಹಲವು ದುರಂತಗಳೇ ಘಟಿಸಿ ಇಂದು ಮನೆಯೂ ಕೆಡವಲ್ಪಟ್ಟು ಅದರ ಬದಲಿಗೊಂದು ಬಹುಮಹಡಿ ವಿನ್ಯಾಸ ರೂಪುಗೊಂಡಿರುವುದು ವಸ್ತುಸ್ಥಿತಿ! ಆರು ವರ್ಷದ ಬಳಿಕ ಮುಂದಿನ ಬಾಲ್ಯ, ಕೌಮಾರ್ಯವನ್ನು ನಮ್ಮಮ್ಮ, ಸೋದರತ್ತೆಯಂದಿರ ಮನೆಗಳಾದ 'ಶೀಗಬೆಲ್ಲೆ ಹೌಸ್', 'ಮಾಧವವಿಲಾಸ'ಗಳಲ್ಲಿ ಕಳೆದರು. ಬೆಸೆಂಟ್ ಶಾಲೆಯಲ್ಲಿ ಶಿಕ್ಷಕಿಯಾಗಿ ಸೇರಿಕೊಂಡರೆ, ಅಮ್ಮನ ದೇಹದಾರ್ಢ್ಯ ಗಮನಿಸಿದ ಆಡಳಿತ ಮಂಡಳಿ, ದೈಹಿಕ ಶಿಕ್ಷಣ ತರಬೇತಿಗಾಗಿ ಮದರಾಸ್‌ನ ವೈ. ಎಮ್. ಸಿ. ಎ. ಗೆ ಕಳುಹಿಸಿಕೊಟ್ಟರು. 'ಗರ್ಲ್ ಗೈಡಿಂಗ್' ತರಬೇತಿಯೊಡನೆಯೂ ಮರಳಿದ ನಮ್ಮಮ್ಮ ಬೆಸೆಂಟ್‌ನಲ್ಲಿ ಪಿ. ಟಿ. ಐ. ಆಗಿ ಸೇರಿಕೊಂಡರು. ಸೋದರತ್ತೆಯ ಮಕ್ಕಳೇ ಕೈಹಿಡಿಯಲು ಕಾದಿದ್ದರೂ, ಒಲವು ಹರಿದ ದಾರಿ ಬೇರಿತ್ತು. ಉದ್ಯೋಗಾರ್ಥಿಯಾಗಿ ಮುಂಬಯಿ ಸೇರಿದ್ದ ತಂದೆಯವರು, ಬಾಳಸಂಗಾತಿಯಾಗಲು ಮಂಗಳೂರಲ್ಲಿ ಕಾದಿದ್ದ ಅವರ ವಸಂತಾ–ನಮ್ಮಮ್ಮ–ನ ಕೈಹಿಡಿದಾಗ, ಅದುವರೆಗೆ ಸಲಹಿದ ಸೋದರತ್ತೆಯ ಮನೆ ದೂರವಾಯ್ತು.

ನಮ್ಮಮ್ಮ, ಶಾಲೆಯಲ್ಲಿ ಆದರ್ಶ, ದಕ್ಷ ಶಿಕ್ಷಕಿಯಾಗಿದ್ದಂತೇ ಮನೆಯಲ್ಲಿ ಅತ್ಯುತ್ತಮ ಗೃಹಿಣಿ ಎನ್ನುವುದರಲ್ಲಿ ಎರಡು ಮಾತಿಲ್ಲ. ವೈವಾಹಿಕ ಜೀವನದೊಡನೇ ಆರಂಭವಾದ ಅಸ್ತಮಾ ರೋಗದ ಕಡುಪೀಡೆಯಿಂದ, ಅಹರ್ನಿಶಿ ಆರೈಕೆ ನಡೆಸಿ ತಂದೆಯವರನ್ನು ಸಾವಿತ್ರಿಯಂತೆ ಎಷ್ಟೋ ಬಾರಿ ಉಳಿಸಿಕೊಂಡವರು, ನಮ್ಮಮ್ಮ. ರಾತ್ರಿಯಿಡೀ ಸಂಕಟಪಡುವ ಪತಿಯನ್ನು ಉಪಚರಿಸಿ, ಜೊತೆಗೆ ತಾನೂ ನಿದ್ದೆಗೆಟ್ಟು, ನಸುಕಿಗೆದ್ದು ದುಡಿವ ಯಂತ್ರವಾಗುವ ಅಮ್ಮ, ಶಾಲೆಗೆ ತನ್ನ ತರಬೇತಿಯಿಂದಾಗಿ ತಂದಿತ್ತ ಚಾಂಪಿಯನ್‌ಶಿಪ್‌ಗಳು, ಶೀಲ್ಡ್‌ಗಳು, ಪ್ರೆಸಿಡೆಂಟ್ ಗೈಡ್ ಪ್ರಶಸ್ತಿಗಳು, ದಸರಾ ಸ್ಪೋರ್ಟ್ಸ್ ಕೂಟದ ಪ್ರಶಸ್ತಿಗಳು ಅಗಣಿತ. ಶ್ರೀ ಶಿವರಾಮ ಕಾರಂತರು ನಮ್ಮಿಂದಗಲಿದ ಹಿಂದಿನ ವರ್ಷ, ಇಲ್ಲಿ ಮುಂಬಯಿಯಲ್ಲಿ ಶ್ರೀ ನಿಂಜೂರರ ಮನೆಯಲ್ಲಿ ಅವರನ್ನು ಭೇಟಿಯಾಗಿ ಪರಿಚಯಿಸಿಕೊಂಡಾಗ, 'ಓ! ಆಟ ಟೀಚರ್! ವಸಂತಿ! ಸಚ್ ಎ ಡಿಸಿಪ್ಲಿನ್ಡ್ ಲೇಡಿ! ಅವರಂತಹ ಟೀಚರ್ಸ್ ಈಗ ಇರಲಿಕ್ಕಿಲ್ಲ!' ಎಂದು ಉದ್ಗರಿಸಿದ್ದರು. ಸುಮಾರು ಅರವತ್ತು ವರ್ಷ

ತೀವ್ರ ಅಸ್ತಮಾ ಬಾಧೆಯಿಂದ ಉಪಚರಿಸಿ, ಹಗಲಿರುಳೂ ಶ್ರಮಿಸಿ ತಂದೆಯವರನ್ನು ಉಳಿಸಿಕೊಂಡರೂ, ಮರೆಯಲ್ಲಿ ಕಾದ ಬ್ಲಡ್ ಕ್ಯಾನ್ಸರ್ ಕೊನೆಗೂ ಅಮ್ಮನ ಮಾಂಗಲ್ಯವನ್ನು, ನಮ್ಮ ತಂದೆಯನ್ನು ಸೆಳೆದೊಯ್ದಿತು. ಮುಂದೇನೆಂಬ ದಿಕ್ಕುಗಾಣದ ಪ್ರಶ್ನೆ ಆಗ ನನ್ನನ್ನು ಕಾಡಿತ್ತು! ಆದರೆ, ಅವರು ಕಟ್ಟಿ, ಬೆಳೆಸಿ, ಪೋಷಿಸಿದ ಪ್ರೀತಿಯ ಮನೆ, ಮಕ್ಕಳು, ಮೊಮ್ಮಕ್ಕಳಿಗಾಗಿ ಅಮ್ಮನ ಜೀವನರಥ ಇನ್ನೂ ಸಾಗಿದೆ. ಉಚ್ಚಿಲದ ನಮ್ಮ ಮನೆ 'ಚೇತನಾ', ಮನೆಯೆದುರು ನಳನಳಿಸುವ ವಿಶಾಲ ಹೂತೋಟ, ಹಿತ್ತಿಲು, ಮನೆಯ ಒಪ್ಪ, ಓರಣ! ಒಳಕೋಣೆಯಲ್ಲಿ ತಮ್ಮ ಮೇಜಿನ ಮೇಲೆ ಸ್ನಿಗ್ಧ ಮುದಹಾಸ ಬೀರುತ್ತಿರುವ ತಂದೆಯವರ ದಿವ್ಯಚೇತನ ನಮ್ಮೆಲ್ಲರಿಗೆ ಶ್ರೀರಕ್ಷೆಯಾಗಿದೆ!

ಶಿಸ್ತಿನ ಮೂರ್ತಿಯಾದ ನಮ್ಮಮ್ಮ ತಮ್ಮ ಪ್ರಥಮ ಬಸುರಿನಲ್ಲಿ ನಡೆಸಿದ ಸಾಹಸದ ಬಗ್ಗೆ ಬರೆಯಬೇಕು. ಎಂಟು ತಿಂಗಳ ಬಸುರು ಹೊತ್ತು, 'ಚಂಪಕವಿಲಾಸ' ದಿಂದ ಗೆಳತಿ ರೋಹಿಣಿ ಅತ್ತೆಯೊಂದಿಗೆ ಸಂಜೆಯ ರೈಲು ಹಿಡಿಯಲು ಹೊರಟಿದ್ದರು, ಅಮ್ಮ. 'ಏ ವಸಂತಾ, ಐಸ್‌ಕ್ರೀಮ್ ತಿನ್ನುವ, ಆಗದೇ?' ಎಂದು ಗೆಳತಿ ಅಂದಾಗ, ಅಂತೆಯೇ 'ರಾಯನ್ಸ್' ಹೊಕ್ಕು, ಐಸ್‌ಕ್ರೀಂ ಸವಿದ ಗೆಳತಿಯರು ಸ್ಟೇಶನ್ ಮುಟ್ಟುವಾಗ ರೈಲು ಅದಾಗಲೇ ಹೊರಟುಹೋಗಿತ್ತು. ಹಿಂದೆ ಹೋಗುವುದೆಂತು? ಆ ಮುಸ್ಸಂಜೆಯ ಮುಸುಕಿದ ಮಬ್ಬುಗತ್ತಲಲ್ಲಿ ಈ ಗೆಳತಿಯರು ನಡೆದೇ ಹತ್ತು ಮೈಲು ದೂರದ ದಾರಿ ಕ್ರಮಿಸಿ (ನೇತ್ರಾವತೀ ನದೀ ಸೇತುವೆಯನ್ನೂ ದಾಟಿ) ಸರಿರಾತ್ರಿಯಲ್ಲಿ ಉಳ್ಳಾಲ ನಿಲ್ದಾಣ ಬಳಿಯ ದೊಡ್ಡತ್ತೆ ಮನೆ ಸೇರಿಕೊಂಡ ಸಾಹಸದ ಬಗ್ಗೆ ಏನನ್ನಬಹುದು?

ಅಮ್ಮನ ಶಿಸ್ತು ಎಷ್ಟೆಂದರೆ, ಆರನೇ ತರಗತಿಯಲ್ಲಿ ಆರಂಭವಾದ ಇಂಗ್ಲಿಷ್‌ನ ಪ್ರಥಮ ಟೆಸ್ಟ್‌ನಲ್ಲಿ ಕಡಿಮೆ ಮಾರ್ಕ್ಸ್ ಸಿಕ್ಕಿದ ಬೇಸರದಿಂದ, ನಾನು ಉತ್ತರ ಪತ್ರಿಕೆಯನ್ನು ಕಸದ ಬುಟ್ಟಿಗೆ ಎಸೆದ ಬಗ್ಗೆ ಟೀಚರ್ ಅಮ್ಮನಿಗೆ ವರದಿ ಒಪ್ಪಿಸಿದಾಗ, ಮುಂದಿನ ಪೀರಿಯಡ್‌ಗೆ ಏಳನೇ ತರಗತಿಯಲ್ಲಿ ಪಾಠ ಮಾಡುತ್ತಿದ್ದ ಟೀಚರ ಕಾಲಿಗೆರಗಿ ಕ್ಷಮೆ ಕೇಳುವಂತೆ ಅಮ್ಮ ನನ್ನನ್ನು ಶಿಕ್ಷಿಸಿದ್ದರು! ಆ ಟೀಚರೋ, ದ್ರವಿಸಿದ ಹೃದಯದಿಂದ ನನ್ನನ್ನೆತ್ತಿ ಎದೆಗಪ್ಪಿಕೊಂಡು ಕ್ಷಮಿಸಿದ್ದರು!

ವಿದ್ಯಾರ್ಥಿನಿಯರ ವ್ಯಕ್ತಿತ್ವ ರೂಪಿಸುವಲ್ಲಿ, ಮಕ್ಕಳ ಅಸೌಖ್ಯ, ಆರೈಕೆಯಲ್ಲಿ, ಮೊಮ್ಮಕ್ಕಳ ಲಾಲನೆ-ಪಾಲನೆಯಲ್ಲಿ ಅಮ್ಮನ ಶಿಸ್ತುಬದ್ಧ ಸೇವೆ ಒಂದು ಮಾದರಿ! 'Gone with the wind' ನ ನಾಯಕಿ ಸ್ಕಾರ್ಲೆಟ್ ಒಹಾರಾ, ಶಿಸ್ತು, ಸೇವೆಯ ಮೂರ್ತಿಯಾದ ತನ್ನ ತಾಯಿ ಎಲೆನ್‌ಳಲ್ಲಿ ಮಾತೆ ಮೇರಿಯನ್ನು ಪರಿಭಾವಿಸಿ, ತಾನೂ ಮುಂದೆಂದಾದರೂ, ಬಯಸಿದ್ದೆಲ್ಲ ಪ್ರಾಪ್ತವಾಗಿ ಪ್ರಾಯಸಂದಾಗ ತಾಯಿಯಂತೆ ಆಗುವೆನೆಂದುಕೊಳ್ಳುವಂತೇ ನಾನೂ, ನಮ್ಮಮ್ಮನಂತಾಗಬೇಕೆಂದು-ಕೊಂಡರೂ, ಇಚ್ಛೆಯನ್ನು ಸಾಧಿಸುವ ದೃಢಚಿತ್ತವಿನ್ನೂ ನನ್ನದಾಗಿಲ್ಲ.

ವಿವಾಹವಾಗಿ ಮುಂಬೈ ಸೇರಿದ ವರ್ಷ, ಇಲ್ಲಿನ ವಡಾಲಾದ ರಾಷ್ಟ್ರೀಯ ಕನ್ನಡ ಶಿಕ್ಷಣ ಸಂಸ್ಥೆಯ ಶಾಲೆಯಲ್ಲೂ ಅಮ್ಮ ಶಿಕ್ಷಕಿಯಾಗಿ ದುಡಿದರು. ಆ ೧೯೪೭ ರ ಆಗಸ್ಟ್ ೧೫ ರಂದು ದೇಶ ಸ್ವತಂತ್ರವಾದ ಸಂಭ್ರಮದಲ್ಲಿ ತಾವಿಬ್ಬರೂ ನಗರದ ಜನಸಾಗರದೊಡನೆ ರಸ್ತೆಗಳಲ್ಲಿ ತೇಲಿದಂತೆ ಸಾಗಿದ ಆ ಹರ್ಷೋತ್ಸಾಹದ ವಿವರವನ್ನು ಅವರಿಬ್ಬರಿಂದ ಕೇಳುವುದೇ ನಮಗೆ ಬಲು ದೊಡ್ಡ ಕೌತುಕ-ವಾಗಿತ್ತು. ಸ್ವತಂತ್ರ ಭಾರತದ ಪ್ರಥಮ ಪ್ರಧಾನಿಯಾಗಿ ನೆಹರೂರ ಆ ಮಧ್ಯರಾತ್ರಿಯ ಸ್ವಾತಂತ್ರ್ಯ ಸಂದೇಶವನ್ನು ಪ್ರತೀ ಸ್ವಾತಂತ್ರ್ಯ ದಿನದಂದೂ ತಂದೆಯವರು ತಮ್ಮ ಅಸ್ಖಲಿತ ವಾಣಿಯಿಂದ ಉಚ್ಚರಿಸುತ್ತಿದ್ದರು.

ಮಿಲ್‌ಗಳ ಪ್ರದೂಷಣದಿಂದಾಗಿ ಹುಟ್ಟಿಕೊಂಡ ಉಬ್ಬಸಬಾಧೆಯ ಕಾರಣ ಊರಿಗೆ ಮರಳಿ, ಬಂದಾರಿನ 'ವರ್ತಕವಿಲಾಸ' ದಲ್ಲಿ ಉದ್ಯೋಗಿಯಾಗಿ, ಉಚ್ಚಿಲಶಾಲೆಯ ಕರಸ್ಪಾಂಡೆಂಟರಾಗಿ, ವಿದ್ಯಾಸಂಘ, ಸಹಕಾರಿ ಸಂಘಗಳ ಅಧ್ಯಕ್ಷರಾಗಿ, ರಾಜ್ಯ ಫಿಶರೀಸ್ ಡೆವಲಪ್‌ಮೆಂಟ್ ಕಾರ್ಪೊರೇಶನ್‌ನ

ಅಭ್ಯುದಯಕ್ಕೆ ಕಾರಣಕರ್ತರಾಗಿ, ಸಹಕಾರಿ ಬ್ಯಾಂಕ್‌ನ ಪದಾಧಿಕಾರಿಗಳಾಗಿ, ಸೌತ್ ಕೆನರಾ ಫಿಶ್‌ಮಾರ್ಕೆಟಿಂಗ್ ಫೆಡರೇಶನ್‌ನ ಅಧ್ಯಕ್ಷರೂ, ನಿರ್ದೇಶಕರೂ ಆಗಿ ಜವಾಬ್ದಾರಿಯುತ ಹುದ್ದೆಗಳನ್ನು ನಿಷ್ಠೆಯಿಂದಲೂ, ದಕ್ಷತೆಯಿಂದಲೂ ನಿರ್ವಹಿಸಿದ ಕರ್ಮಯೋಗಿ, ಅವರು. ಅಷ್ಟೇ ಮುತುವರ್ಜಿಯಿಂದ ತರವಾಡು ಮನೆಯ ಲೆಕ್ಕಪತ್ರಗಳನ್ನೂ ಅಚ್ಚುಕಟ್ಟಾಗಿ ನಮೂದಿಸಿ, ಹುತ್ತಿಲ ಗಳಿಕೆಯನ್ನು ಹುತ್ತಿಲಿಗೇ ವಿನಿಯೋಗಿಸಿ 'ಕೆರೆಯ ನೀರನು ಕೆರೆಗೆ ಚೆಲ್ಲಿ' ಎಂಬಂತೆ ಬದುಕಿದವರು.

ಇಳಿವಯದಲ್ಲಿ ಸಂಭವಿಸಿದ ಭೀಕರ ಅಪಘಾತದಲ್ಲಿ ಸಾವು-ಬದುಕಿನ ನಡುವೆ ಸೆಣಸಿ, ಮಂಗಳೂರು ಫಾ. ಮುಲ್ಲರ್ಸ್ ಸೇವಾಸ್ಪತ್ರೆಯ ಸಿಬ್ಬಂದಿಯ ದಕ್ಷ ಚಿಕಿತ್ಸೆ, ಸೇವೆಯಿಂದಾಗಿ ಬದುಕುಳಿದ ಕೆಲ ತಿಂಗಳುಗಳಲ್ಲೇ ಮಾರಕ ರೋಗ ಬ್ಲಡ್ ಕ್ಯಾನ್ಸರ್ ಪತ್ತೆಯಾಗಿತ್ತು. ಆದರೂ ಹತಚೇತನರಾಗದೆ, ಧೃತಿಗೆಡದೆ, ವೈದ್ಯರು ಸೂಚಿಸಿದ್ದ ಆರು ತಿಂಗಳು ಇಲ್ಲವೇ ಎರಡೂವರೆ ವರ್ಷವಷ್ಟೇ ಎಂದಿದ್ದ ಜೀವಿತಾವಧಿಯ ಗಣನೆಯನ್ನೂ ಮೀರಿ, ನಾಲ್ಕೂವರೆ ವರ್ಷಗಳ ವರೆಗೆ ಅನಾರೋಗ್ಯವನ್ನೆದುರಿಸಿ ಸ್ಥೈರ್ಯದಿಂದ ಬದುಕುಳಿದರವರು. ಕೊನೆದಿನಗಳ ಅಸೌಖ್ಯದ ನಡುವೆಯೂ ಧೋರೆಂದು ಸತತ ಮಳೆ ಸುರಿಸಿದರೆ ತರವಾಡು ಮನೆಯ ಚಿಂತೆ ಅವರನ್ನು ಕಾಡುತ್ತಿತ್ತು. ಅದಿ ಬಿದ್ದಿದೆಯೋ ಇಲ್ಲೋ, ನೆರೆ ಬರುವುದೋ ಏನೆಂದು ಹೋಗಿ ನೋಡಿ ಬರುತ್ತಿದ್ದರು. ತರವಾಡು ಮನೆ, ಕುಟುಂಬವನ್ನು ಪ್ರೀತಿಸಿದ ಅವರು, ಮೂಢನಂಬಿಕೆ, ಕಂದಾಚಾರಗಳ ವಿರುದ್ಧ ಬದ್ಧ ನಿಲುವನ್ನು ತಾಳಿ ವಿಚಾರದೀಪ್ತಿ ಬೆಳಗಿದವರು. ಪಾನಮತ್ತ ನಲಿಕೆಯಾತನ ಹೀನ ಭಾಷೆಗೆ ಹೇಸಿ, ತರವಾಡು ಮನೆಯಲ್ಲಿ ನಡೆಯುತ್ತಿದ್ದ ದೈವಕಾರ್ಯವನ್ನು ಶಾಶ್ವತವಾಗಿ ತಡೆದು ನಿಲ್ಲಿಸಿದವರು. ಅಪಘಾತ, ಅಸೌಖ್ಯ ಎಂತಹ ಸ್ಥಿತಿಯಲ್ಲೂ ದೈನ್ಯಾವಸ್ಥೆಗೆ ಒಳಗಾಗದೆ ಸ್ಥಿರಚಿತ್ತರಾಗಿ ಆಸ್ಪತ್ರೆಯ ಸಿಬ್ಬಂದಿ ವರ್ಗಕ್ಕೆ ಪ್ರಿಯರೂ, ಗೌರವಾನ್ವಿತರೂ ಆಗಿ ಉಳಿದವರು. ನನ್ನ ಎಳವೆಯಲ್ಲಿ ಸಾಹಿತ್ಯವನ್ನೊದಗಿಸಿ ಪ್ರೋತ್ಸಾಹಿಸಿದಂತೇ, ಕೊನೆಗಾಲದಲ್ಲಿ ನನ್ನ ಬರಹಗಳನ್ನೋದಿ ಪ್ರೋತ್ಸಾಹಿಸಿದ ಹಿರಿಜೀವ ! ಅಂತಹ ಅಸೌಖ್ಯದಲ್ಲೂ 'Gone with the wind' ನ ನನ್ನ ಅನುವಾದದ ೧,೧೧೨ ಪುಟಗಳ ಹಸ್ತಪ್ರತಿಯನ್ನು ಕ್ರಮಶಃ ಸಂಪೂರ್ಣ ಓದಿ ನೋಡಿ ಸಂತೋಷಿಸಿದವರು !

ಸ್ವಾತಂತ್ರ್ಯ ಸ್ವರ್ಣಜಯಂತಿಯಂದು, ಅವರು ತನು, ಮನಗಳಿಂದ ದುಡಿದಿದ್ದ ಶಾಲೆಯ ಆಡಳಿತ ಸಮಿತಿ, ಸಮಾರಂಭದ ಧ್ವಜಾರೋಹಣಕ್ಕಾಗಿ ಅವರನ್ನು ಕರೆಸಿಕೊಂಡುದು, ಹಾಗೂ ಅದನ್ನು ನಡೆಸಿಕೊಡುವುದು ತಂದೆಯವರಿಂದ ಸಾಧ್ಯವಾದುದು ನಮಗೆಲ್ಲ ಭಾವೋತ್ಕರ್ಷವನ್ನು ಉಂಟುಮಾಡಿತ್ತು.

ನಿಯಮಿತ ರಕ್ತಪರೀಕ್ಷೆ, ಔಷಧೋಪಚಾರದಲ್ಲೂ, ರೋಗ ಹಿಮ್ಮೆಟ್ಟದೆ ಉಲ್ಬಣಿಸಿದಾಗ, ಕೊನೆಗೆ ಮೂರು ಬಾರಿ ರಕ್ತ ನೀಡಬೇಕಾಯ್ತು. ಅವರ ಮುತ್ತಿನಂತಹ ಮೈಬಣ್ಣ ಕಪ್ಪಿತಿರುಗಿ ಚರ್ಮವೆಲ್ಲ ಶುಷ್ಕವಾಯ್ತು. ಆದರೂ ಕೊನೆವರೆಗೂ, ವಿಚಾರಿಸಿದವರಿಗೆ ತಾನು ಚೆನ್ನಿರುವೆನೆಂದೇ ಉತ್ತರಿಸುತ್ತಿದ್ದರು. ಅವಸಾನಕ್ಕೆ ಎರಡು ದಿನಗಳ ಹಿಂದೆ, ತನ್ನಿಚ್ಛೆಯನ್ನರಿತಂತೆ, ಊರು, ಮನೆ ಸೇರುವ ಆಶೆಯ ವ್ಯಕ್ತಪಡಿಸಿದ ತಂದೆಯವರು ೧೯೯೯ ರ ಫೆಬ್ರುವರಿ ೨೧ ರ ಮುಂಜಾವ ನಿಶ್ಚೇತನರಾದಾಗ, ಆಸ್ಪತ್ರೆಯ ಸಿಬ್ಬಂದಿವರ್ಗ, ನಮ್ಮ ಅಪೇಕ್ಷೆಯಂತೆ ಮನೆ ಮುಟ್ಟಿಸುವ ವ್ಯವಸ್ಥೆ ಮಾಡಿದರು. ಮತ್ತೆ ಹತ್ತು, ಹದಿನೈದು ನಿಮಿಷಗಳಲ್ಲಿ, ಬಲು ಶಾಂತವಾಗಿ ಅವರ ಜೀವಾತ್ಮ ಪರಮಾತ್ಮನಲ್ಲಿ ಲೀನವಾಯ್ತು. ನನ್ನ ಪ್ರೀತಿಯ ತಂದೆಯವರನ್ನು ಕಳಕೊಂಡು ನಾನು ಹತಭಾಗ್ಯಳಾಗುಳಿದೆ.

ಧೀರ, ಗಂಭೀರ ವ್ಯಕ್ತಿತ್ವದಾಂತರ್ಯದಲ್ಲಿ ವಾತ್ಸಲ್ಯಮಯ ಹೃದಯರಾಗಿದ್ದ ನಮ್ಮ ತಂದೆಯವರು ಮಿತಮಾತಿನವರೆಂದು ಮೊದಲೇ ಹೇಳಿದ್ದೇನೆ. ನಾವು ಮಕ್ಕಳ್ಯಾರೂ ಅವರೊಡನೆ ಹೆಚ್ಚು ಮಾತಾಡಿದ್ದೇ ಇಲ್ಲ. ಅವರ ಗತಜೀವನದ ಅಮೂಲ್ಯ ವೃತ್ತಾಂತಗಳನ್ನು ಅವರ ಬಾಯಿಂದಲೇ ಕೇಳುವ ಅವಕಾಶದಿಂದ ವಂಚಿತರಾದೆವೆಂದು ಈಗ ತುಂಬ ಖೇದವಾಗುತ್ತಿದೆ.

ಬಾಲ್ಯದಲ್ಲಿ ಅವರು ನಟಿಸಿದ ಶ್ರೀ ಕಾರಂತರ 'ಮಿಸ್ಟರ್ ಡುಮಿಂಗೋ' ಪಾತ್ರದಿಂದ ತೊಡಗಿ, ಜೀವನ ನಾಟಕರಂಗದಿಂದ ನಿರ್ಗಮಿಸುವ ವರೆಗೂ, ತಂದೆಯವರು, ಸುವಿಚಾರ, ಸದಾಚಾರಗಳೇ ಉಸಿರಾದ ದಿವ್ಯ ಚೇತನ! ಆ ಚೈತನ್ಯಜ್ಯೋತಿಯಿಂದ ಬೆಳಗಿದೆ, ನಮ್ಮ ಮನೆ 'ಚೇತನಾ'.

●

▼

ಶ್ಯಾಮಲಾ ಮಾಧವ, ೩೫, ಜಲರಾಮನಗರ - ೩, ವಿ. ಬಿ. ರಸ್ತೆ, ಘಾಟ್‌ಕೋಪರ್ (ಪೂರ್ವ),
ಮುಂಬಯಿ - ೪೦೦ ೦೭೭ ✆ : ೦೨೨ - ೫೧೮ ೦೪೨೩

ಅಯ್ದು ಸುಮತಿ ಕವಿತೆಗಳು

ಸುಮತೀಂದ್ರ ನಾಡಿಗ

೧. ಹೊಸ ನೋವು

ಮುಖ ತಿರುವಿ ಕೂತಿರುವ ಹೊಸ ನೋವೆ ಹೋಗಿ ಬಾ
ಸುಖದ ತೋಟಗಳನ್ನು ಸುತ್ತಿ ಬಾರೆ.
ಹೂವುಗಳ ಹಿಸುಕಿ ಬಾ, ಬೇರುಗಳ ಹೊಸಕಿ ಬಾ
ಉದುರಿದ್ದ ಎಲೆಗಳಲಿ ಮಲಗಿ ಬಾರೆ.

ನೋವೆಂದರೇನೆಂದು ದಣಿವೆಂದರೇನೆಂದು ತಿಳಿಸಿ ಬಾರೆ
ಮಿದುಳು ಹೃದಯಗಳನ್ನ ಹಿಂಡಿ ಬಾರೆ
ಕರುಳುಗಳ ಕಿವುಚಿ ಬಾ, ಪ್ರಿಯರ ನಗು ಅವುಚಿ ಬಾ
ಸಾವೆಂದರೇನೆಂದು ತಿಳಿಸು ಬಾರೆ.

ನೋವಿಂದ ಕಿವುಚಿದ್ದ ಮುಖಗಳನು ದಾಟಿ ಬಾ
ಯೌವನದ ಕನಸುಗಳ ಅದುಮಿ ಬಾರೆ
ತಾರೆಗಳ ಕೆಡಿಸಿ ಬಾ ಶಶಿಗೆ ಭಂಗವ ಮಾಡಿ
ಜಗದ ದುಃಖವನೆಲ್ಲ ಹೊತ್ತು ಬಾರೆ.

ಬಡವರುಣ್ಣಲು ಕಂಡ, ಪೈರುಗಳನುಂಡು ಬಾ
ಸುಖದ ಗದ್ದೆಗಳಲ್ಲಿ ಸುತ್ತಿ ಬಾರೆ
ಸ್ನೇಹಗಳ ನೆಲದಲ್ಲಿ ದ್ರೋಹ ಬೀಜವ ಬಿತ್ತಿ
ಪ್ರೀತಿಯನು ಹುಡುಕುತ್ತ ಮತ್ತೆ ಬಾರೆ.

ಹಳೆನೋವು ಬಂದಿಹುದು ಮತ್ತೆ ನನ್ನನು ಹುಡುಕಿ
ಜಳ್ಳುಗಳ ಉಡುಗೊರೆಯ ಕಟ್ಟಿಕೊಂಡು
ಅವಳ ಜೊತೆಗೊಂದಿಷ್ಟು ಸಲ್ಲಾಪ ನಡೆಸುವೆನು
ಅಲ್ಲಿವರೆಗೂ ಜಗವ ಸುತ್ತಿ ಬಾರೆ.

ಬಾ ಒಳಗೆ ಹಳೆನೋವೆ, ಹೋಗಿ ಬಾ ಹೊಸ ನೋವೆ
ಹೊಸ ನೋವೆ ತಿರುಗಿ ಬಾ ಹಳೆಯದಾಗಿ
ಅಷ್ಟು ಹೊತ್ತಿಗೆ ನೀನು ನನಗೆ ಕಾಣಿಸಬಹುದು
ನನ್ನ ಕೈಬಿಡದಂಥ ಗೆಳೆಯನಾಗಿ.

೨. ನಡೆದು ಬಂದ ದಾರಿ

ಧಾರಾಕಾರ ಮಳೆಯಲ್ಲಿ ಹಚ್ಚಹಸುರಾಗಿದ್ದ
ವೃಕ್ಷಗಳ ಎಲೆಯ ಗೊಂಗಡಿ ಗೊರಬು ತೊಯ್ದು ತೊಪ್ಪೆಯಾಗಿದ್ದ
ಗುಡ್ಡಬೆಟ್ಟಗಳಿಂದ ಜಲಪಾತ ನೂರಾರು ಹಾಲಾಗಿ ಇಳಿದಿದ್ದ
ಆಗಾಗ ಮಂಜುಕವಿಯುತ್ತಿದ್ದ ಮಲೆನಾಡ ದಾರಿಗಳನ್ನು ಮರೆಯಲಾರೆ.
        ಅಡಿಕೆಮರ ಹಾಸಿ ಜೀಕುತ್ತಿರುವ ಸಂಕಗಳನ್ನು ಭಯದಿಂದ ಮೆಟ್ಟುತ್ತ
        ಮಲೆನಾಡ ಬೇಸಿಗೆಯಲ್ಲಿ ಕಲ್ಲಿಂದ ಕಲ್ಲಿಗೆ ಜಿಗಿದು ಹಳ್ಳ ದಾಟುತ್ತ
        ಭೂತ ಪಂಜುರ್ಲಿ ಚೌಡಿ ಕತೆ ಕೇಳುತ್ತ
        ದೊಂದಿ ಬೆಳಕಲ್ಲಿ ದಿಗಿಲಿಂದ ಬೆನ್ನನವಿರೇಳುತ್ತ
        ಚತುರ್ಥಿ ನವಮಿ ಪ್ರತಿಪದೆ ಅಮವಾಸ್ಯೆ ಹಬ್ಬಗಳಲ್ಲಿ
        ಕಳಸದಲ್ಲಿದ್ದ ಬಾಲ್ಯಗಳೆಲ್ಲ ಸಂಭ್ರಮದಿಂದ ಚಲಿಸುತ್ತ
        ನಡೆದ ದಾರಿಗಳಲ್ಲಿ ಎಲ್ಲ ನೆನಪಿಲ್ಲ.
ಹಾಡಿದ್ದೇನೆ ಬದುಕಿನ ದಾರಿಯುದ್ದಕ್ಕೂ ಕಂಡದ್ದನ್ನ
ಯೌವನದ ದೋರೆಗಾಯಿಯ ಬಣ್ಣ ತಿರುಗುವುದನ್ನ
ಸಿಕ್ಕುಸಿಕ್ಕಾಗಿದ್ದ ವಯಸ್ಸಂಧಿ ಕಾಲದ ಗೋಜಲನ್ನ
ರೂಢಿಗೆದುರಾಗಿ ವ್ಯಕ್ತಿತ್ವ ಸ್ಥಾಪಿಸುವುದನ್ನ.
        ಪ್ರೀತಿಸಿದ್ದೇನೆ ಛೇಡಿಸಿದ್ದೇನೆ ಬಾಗಿಲು ಬಡಿವ ಜನರನ್ನ
        ಎಚ್ಚರಿಸಿದ್ದೇನೆ ಚರಿತ್ರೆ ಮರೆತವರನ್ನ.
        ತೆರೆದು ಇಟ್ಟಿದ್ದೇನೆ ನಾ ಕಂಡ ಸಸ್ಯಗಳ, ಪದಾರ್ಥಗಳ ಲೋಕವನ್ನ,
        ಕಂಡಿದ್ದೇನೆ ಕವಿಶಾಲಿವಾಹನನ ನಿರ್ಜೀವ ಪ್ರತಿಮೆಗಳೆದ್ದು ಜೀವಂತವಾಗಿ ನಡೆಯುವುದನ್ನ,
        ಮೌನದಲಿ ತೊಳಕೊಂಡಿದ್ದೇನೆ ಶಬ್ದಸೂತಕವನ್ನ.
ಪಡೆದಿದ್ದೇನೆ ಬೆರಳೆಣಿಕೆಯಷ್ಟು ಸಹೋದ್ಯೋಗಿ ಮಿತ್ರರನ್ನ
ಪಡೆದಿದ್ದೇನೆ ಕೆಲವರನ್ನಾದರೂ ಸಮಯಕ್ಕೆ ಸಿಗುವಂಥ ಗೆಳೆಯರನ್ನ
ಪಡೆದಿದ್ದೇನೆ ಕೆಲವರೇ ಆದರೂ ತಮಗಾಗಿ ನನ್ನನ್ನು ಪ್ರೀತಿಸುವವರನ್ನ,
ನನಗಾಗಿ ಅವರನ್ನು ನಾನು ಒಲಿದವರನ್ನ.
        ದಾಂಪತ್ಯಕ್ಕೆ ಅಂಟಿರುವ ನರಕ ಅಳಿಸುವುದಕ್ಕೆ
        ತೋರಿಸಿದ್ದೇನೆ ಸ್ವರ್ಗದ ದ್ವಾರ ಹಾರುಹೊಡೆಯುವುದನ್ನ:
        ಪತಿಪತ್ನಿಯರು ಪಂಚಭೂತಗಳ ಸಾಕ್ಷಾತ್ಕಾರ ಪಡೆಯುವುದಕ್ಕೆ
        ಆದೇಶಿಸಿದ್ದೇನೆ ಪರಸ್ಪರವಾಗಿ ಪೂಜಿಸುವುದನ್ನ:
        ಹಾಡಿದ್ದೇನೆ ಅನ್ನ ಕೊಡುವಾನಂದ ಕೊಟ್ಟು ಪಡೆಯುವುದನ್ನ,
        ಪ್ರಯತ್ನಿಸಿದ್ದೇನೆ ನುಡಿನಡತೆ ಒಂದೆ ಆಗುವುದನ್ನ.
ನಮ್ಮ ಆನಂದಕ್ಕೆ ಸೃಷ್ಟಿಯಾದದ್ದಲ್ಲ ಈ ಭೂಮಿ.
ಆದರೂ ಆನಂದ ಸಿಕ್ಕಿದೆ ನನಗೆ ಸೃಷ್ಟಿಯಲ್ಲಿ.
ಹಂಚಿಕೊಂಡಿದ್ದೇನೆ ನನ್ನ ಈ ಆನಂದ ಹಲವರಲ್ಲಿ.
        ಕೈಕೂಸು ಮೊಲೆಕೂಸು ತೊಡೆಕೂಸು ಸೊಂಟದಕೂಸು
        ಕೇಕೆ ಹಾಕುವುದನ್ನು ಕೇಳಬೇಕು.
        ತ್ರೆತ್ರೆತ್ರೆ ಮ್ಮೆಮ್ಮೆಮ್ಮೆ ಮೊದಲ ಮಾತುಗಳನ್ನು ಕೇಳಬೇಕು.

ಎದ್ದೆದ್ದು ಬಿದ್ದು ನಡೆಕಲಿವ ಮಕ್ಕಳ ಜೊತೆಗೆ
ಆಟಿಗೆಯ ಹಿಡುಕೊಂಡು ನಲಿಯಬೇಕು.
ಆಗೀಗ ಒಮ್ಮೊಮ್ಮೆ ಚೆಲುವೆಯರು ಬೀಳುತ್ತಿರಲಿ ಕಣ್ಣಿಗೆ
ನನಗಷ್ಟು ಸಾಕು. ಮುಗುಳ್ನಕ್ಕರಂತು ಸಂತೋಷ
ಯಾರನ್ನೆ ಕಂಡಾದರು, ಮುಖ ತಿರುವಿ ನಡೆದರೂ ಮುಗ್ಧನಾಗುತ್ತೇನೆ ಅವರ ಕಂಡು:
ನನಗಿಲ್ಲವಾದರೂ ಮೆಚ್ಚುತ್ತೇನೆ ನಾನವರ ತುಟಿಗಳನ್ನು,
ಪುರುಷ ನಾನಾಗಿ ಕಾಣುತ್ತೇನೆ ಪ್ರಕೃತಿಯನ್ನು.
ಸೃಷ್ಟಿಯದ್ಭುತದ ಪವಾಡಗಳು ಹರಡಿವೆ ಸುತ್ತ,
ನಡೆದಿದ್ದೇನೆ ಪವಾಡಗಳ ಕಂಡು ಬೆರಗಾಗುತ್ತ:
ನವಿರೆದ್ದು ಸ್ಫೂರ್ತಿ ಪಡೆಯುತ್ತೇನೆ,
ಮಾನವರು ಕಂಡಿರದ ಕಾಣಬೇಕಾದಂಥ ಕನಸ ಕಾಣುತ್ತೇನೆ:
ಕಲ್ಪನೆಯ ಗರಿಗೆದರಿ
ಬಾನಮೀಟುವ ಹಾಡು ನಿಮಗಾಗಿ ಹಾಡುತ್ತೇನೆ.

೩. ವೃತ್ತಿ, ಪ್ರವೃತ್ತಿ, ನಿವೃತ್ತಿ (ಕ. ಮ. ಶಿ. ಚಂದ್ರಶೇಖರಯ್ಯನವರಿಗೆ)

ಪ್ರತಿಯೊಂದು ಜೀವಕ್ಕೂ ತನ್ನದೇ ಆದ ಪ್ರವೃತ್ತಿ.
ಸತ್ತಾಗ, ಅದಾಗೇ ಬರುತ್ತೆ ನಿವೃತ್ತಿ.
ವೃತ್ತಿಗೂ ವೃತ್ತಕ್ಕೂ ಇರುವಂಥ ಸಂಬಂಧ
ಗಾಣದೆತ್ತಿಗೆ ಗೊತ್ತು. ವೃತ್ತಿಯೇ ವೃತ್ತವಾಗುತ್ತೆ.
ವೃತ್ತಕ್ಕೆ ಕೊನೆಯೆಲ್ಲಿ ? ವೃತ್ತಿಗೂ ಗೊತ್ತಿಲ್ಲ.
ಈ ಬದುಕಿನಲ್ಲೇನೂ ವೃತ್ತಿ ಕೊನೆಗಂಡಂತೆ ನಮಗೆ ಕಂಡರು ಕೂಡ,
ನಿವೃತ್ತಿಯಾದಾಗ ಕೊನೆಗಂಡಂತೆ ನಮಗೆ ಕಂಡರು ಕೂಡ
ವೃತ್ತಕ್ಕೆ ಕೊನೆಯಿಲ್ಲ, ವೃತ್ತಕ್ಕೆ ಮೊದಲಿಲ್ಲ
ಹಾಗೆಯೇ ವೃತ್ತಿಗೂ ಕೂಡ.
ಅವರವರ ವೃತ್ತಿ ಜೀವಕ್ಕೆ ಅಂಟಿದ್ದು.
ಜೀವಕ್ಕೆ ಅಂಟಿರುವ ವೃತ್ತಿಗೂ ಕೊನೆಯಿಲ್ಲ.
ಜೀವ ಮೊದಲಿಂದಲೇ ಯಾವುದೋ ವೃತ್ತಿಯನ್ನಾರಿಸುವ ಕ್ಷಣದಿಂದ
ವೃತ್ತದ ಭಾಗವಾಗುತ್ತೆ, ತಿರುಗುತ್ತ ತಿರುಗುತ್ತ ಎಲ್ಲಿ ಮೊದಲಾದದ್ದು
ಮರೆತುಹೋಗುತ್ತೆ. ಮರೆತರೂ ಕೂಡ ತಾನು ವೃತ್ತದ ಒಂದು ಬಿಂದುವಾಗುತ್ತೆ.
ವೃತ್ತಿ ಎಲ್ಲಿ ಶುರುವಾಗುತ್ತೊ ಗೊತ್ತಿಲ್ಲ. ಹಾಗೆಯೇ
ಪ್ರತಿಯೊಂದು ವ್ಯಕ್ತಿಗೂ ತನ್ನ ಪ್ರವೃತ್ತಿಗೆ ತಕ್ಕಂಥ
ವೃತ್ತಿ ಯಾವಾಗ ಶುರುವಾಗುತ್ತೊ ಗೊತ್ತಿಲ್ಲ.
ವೃತ್ತಿ ಪ್ರವೃತ್ತಿ ಒಂದೇ ಆಗಿ ಮುಂದುವರಿಯುತ್ತೆ.
ನಿವೃತ್ತಿ ಎನ್ನುವ ಭ್ರಮೆ ಮಾತ್ರ ಆಗಾಗ ಬಂದು ಹೋಗುತ್ತೆ.
ಬದುಕು ವೃತ್ತಿಯೇ ಹೊರತು, ಪ್ರವೃತ್ತಿಯೇ ಹೊರತು
ನಿವೃತ್ತಿ ಅನ್ನುವುದಂತು ಇಲ್ಲವೇ ಇಲ್ಲ.

ಕಾಲ ಅನಂತ. ವೃತ್ತಿ ಆಯಾ ಕಾಲಕ್ಕೆ ಶುರುವಾಗುವಂತೆ
ಕಾಣಿಸುವಂತೆ ಕಂಡಂಥ ವೃತ್ತದಲ್ಲಿರುವಂಥ ಬಿಂದುಮಾತ್ರ.
ಈ ಬಿಂದು ಶುರುವಾದದ್ದು ಯಾವಾಗ? ಇನ್ನೊಂದು ಬಿಂದು
ಬಂದಾಗ ಈ ಬಿಂದು ಮರೆಯಾದದ್ದು, ಮತ್ತದೇ ತಿರುತಿರುಗಿ ಬಂದದ್ದು.
ನೋಡುವಷ್ಟು ಕಾಲ ನಾವಿರುವುದಿಲ್ಲ. ನಮ್ಮದೆನ್ನುವ ನಾವೆ
ಮುಳುಗಿ ಹೋಗುತ್ತೆ. ಮತ್ತದೇ ಸೃಷ್ಟಿಯಾಗುತ್ತೆ.
ಹೇಗೆ ಆಗುತ್ತದೋ ನಮಗೆ ಗೊತ್ತಿಲ್ಲ.

ಸೃಷ್ಟಿಸಾಗರದ ಹನಿಯಾದವರು ನಾವು. ಒಂದೊಂದು ಹನಿಕೂಡ
ವ್ಯಕ್ತಿತ್ವವುಳ್ಳದ್ದೆಂದು ಭಾವಿಸುತ್ತೇವೆ, ಭ್ರಮಿಸುತ್ತೇವೆ.
ಒಂದೊಂದು ಹನಿ ಕೂಡಿ, ಸೃಷ್ಟಿಸಾಗರವಾಗಿ,
ಯಾವ ಹನಿಗೂ ಕೂಡ ವ್ಯಕ್ತಿತ್ವವಿಲ್ಲ.
ಸಾಗರದ ಸತ್ಯವೇ ಕೊನೆಯ ಸತ್ಯ. ಸಾಗರದ ಸತ್ಯವೇ ಮೊದಲ ಸತ್ಯ.

ಸಾಗರ ಕಾದು ಆವಿಯಾಗುತ್ತೆ, ಆವಿ ಮೇಲೇರಿ ಮೋಡವಾಗುತ್ತೆ,
ಮೋಡ ಮಳೆಯಾಗಿ ಹನಿಹನೀ ಬೀಳುತ್ತೆ.
ಹನಿಗಳಲ್ಲೊಂದಾದ ನಾನು ನಾನೇ ಎಂದು ಘೋಷಿಸುತ್ತೇನೆ.
ಎಲ್ಲ ಹನಿಗಳು ಕೂಡ ನನ್ನ ಹಾಗೇ ಎಂದು
ಕಾಣದಾಗುತ್ತೇನೆ.
ಕಡೆಯಲ್ಲಿ,
ಎಲ್ಲ ಹನಿಗಳ ಜೊತೆಗೆ
ಕಾಣದಾಗುತ್ತೇನೆ.

೪. ಎರಡನೆ ಮೊಮ್ಮಗಳು

ಬಂದಿದ್ದೀಯ, ಬಾರೆ ಮೊಮ್ಮಗಳೆ,
ಬಂದಿರುವೆ ಆಸ್ಟ್ರೇಲಿಯಾದಲ್ಲಿ.
ಬಾರೆ ಮೊಮ್ಮಗಳೆ, ಈಗಲೆ ಎಂದು ಹೇಳುತ್ತಿಲ್ಲ,
ನಿಧಾನ ಬಾರೆ ಮೊಮ್ಮಗಳೆ.
ನಿನ್ನೆ ತಾನೇ ಬಂದೆ. ಒಗ್ಗಿಕೊಂಡಿಲ್ಲ ಇನ್ನೂನು
ಸುತ್ತಲಿನ ಬೆಳಕಿಗೆ. ತಾಯಿಯನ್ನೂ ಈಗ ಗುರ್ತಿಸುತ್ತಿಲ್ಲ.
ನಿನಗವಳು ಹಸಿದಾಗ ಹಾಲುಕೊಡುವವಳು,
ನಿನಗವಳು ಸ್ಪರ್ಶ ಮಾತ್ರ.
ನಿಧಾನ ಬಾರೆ ಮೊಮ್ಮಗಳೆ.

ಗುರುತಾಗುತ್ತ ಬಂದಾಗ ನಿನ್ನ ಸುತ್ತಲ ಲೋಕ,
ಪರಿಚಿತವಾಗುತ್ತ ಬಂದಾಗ ಸುತ್ತಲಿನ ಜಗತ್ತು,
ಅಮ್ಮನೂ ಅಪ್ಪನೂ ಗುರುತಾಗುತ್ತ ಬಂದಾಗ
ಅಕ್ಕನೂ ಅಜ್ಜಿಯೂ ಗುರುತಾಗುತ್ತ ಬಂದಾಗ
ಗುರುತು ಹಿಡಿಯುವ ಹೊತ್ತು ಇತ್ತ ಬಾರೆ.

ಅಷ್ಟು ಹೊತ್ತಿಗೆ ನಾನು ಅಲ್ಲಿಗೇ ಬರುತ್ತೇನೆ,
ನಿನ್ನನ್ನು ಬೆದರಿಸದಂತೆ ಮೃದುವಾಗಿ ಎತ್ತಿಕೊಳ್ಳುತ್ತೇನೆ.
ನನ್ನೆರಡು ಕೈಯಲ್ಲಿ ದೇವಲೋಕದ ನಿನ್ನ
ಹೂವಿನ ಹಾಗೆ ಜೋಪಾನ ಎತ್ತುತ್ತೇನೆ:
ದೇವಲೋಕದ ನೆನಪು ಇನ್ನೂನು ಉಳಿದಿರುವ
ಮುಗುಳಾದ ನಿನ್ನ ನಗೆ ಚಿಮ್ಮುವುದ ಕಾಯುತ್ತೇನೆ.
ಅಲ್ಲಿವರೆಗೂ ಇಲ್ಲಿ ನಿನ್ನ ಊಹಿಸಿಕೊಂಡು
ಕನಸ ಕಾಣುತ್ತೇನೆ.

• • •

ನಿನ್ನ ಅಕ್ಕನು ಕೂಡ ಸಿಡ್ನಿಯಲ್ಲಿಳಿದವಳು
ನಿನ್ನ ಹಾಗೆ. ನಿಮ್ಮಿಬ್ಬರನ್ನೂ ನಾನು
ಆಸ್ಟ್ರಾಲಿ ಎಂದು ಕರೆಯುತ್ತೇನೆ.
ನಿನ್ನಕ್ಕ ವಿಭಾಗೆ ಸಿಡ್ನಿಯೇ ಪ್ರೀತಿಯ ಊರು
ಶುದ್ಧ ಕನ್ನಡವನ್ನು ಕಲಿತಿದ್ದರೂ,
ಅವಳಂತೆಯೇ ನೀನು ಕನ್ನಡವ ಕಲಿತರೂ
ನೀನು ಹುಟ್ಟಿದ ಊರೆ, ನಿನ್ನ ಊರು.
ನೆಲದ ಋಣಾನುಬಂಧವೆ ಹಾಗೆ.
ಹುಟ್ಟಿದೂರಿನ ಹೆಸರು ಪ್ರಿಯವಾದ ಹೆಸರು.
ಎಲ್ಲೆಲ್ಲಿಯೋ ನಾವು ಬೆಳೆಯುತ್ತ ಹೋದರೂ
ನಮ್ಮನ್ನು ಸೆಳೆಯುತ್ತೆ ಹುಟ್ಟಿದೂರು.
ಆಸ್ಟ್ರೇಲಿಯಾ ನನಗೆ ಬರಿಯ ಹೆಸರಾಗಿತ್ತು
ನಿಮ್ಮಿಬ್ಬರಿಂದ ಅದು ಬರಿಯ ಹೆಸರಲ್ಲ:
ಅದು ನನ್ನ ಕರುಳಿನ ಭಾಗ,
ನಿಮ್ಮಿಬ್ಬರಿಂದ ಅದು ಪರಕೀಯವಲ್ಲ.
ಆಸ್ಟ್ರೇಲಿಯಾ ಕೂಡ ಸ್ವಕೀಯವಾಗಿದೆ ಈಗ
ಈ ಸ್ವಕೀಯತೆ ನನಗೆ ನೀವು ಕೊಟ್ಟದ್ದು,
ಆಸ್ಟ್ರೇಲಿಯಾ ಈಗ ಆತ್ಮೀಯವಾಗಿದೆ ನನಗೆ
ಇಂಥ ಬಾಂಧವ್ಯವೇ ನನ್ನ ಕನಸಿತ್ತು.
ಪರದೇಶ ನಮ್ಮ ದೇಶದ ಹಾಗೆ ಅನಿಸುವುದು
ಬಲು ಕಷ್ಟ, ರಕ್ತಸಂಬಂಧವೇ ಸರಳ ದಾರಿ:
ಸಂಬಂಧವಿದ್ದರೂ ಗುರುತಿಸದೆ ಇರುವಂಥ
ಶಾಪ ನಮ್ಮನೆಂದು ತಟ್ಟದಿರಲಿ.
ಇಟ್ಟುಕೋ ಭಾರತದ ಸಂಬಂಧ. ಅಲ್ಲಿ ಸಂಸ್ಕೃತಿ ಜೊತೆಗೆ
ಸೇರಿಸಿಕೊ ಇಲ್ಲಿಯದನ್ನು, ಎ. ಡಿ. ಹೋಪನ ಹಾಗೆ,
ಬೋಸ್ಟನ್ನಿನಲ್ಲಿದ್ದ ಬ್ರಾಹ್ಮಣರ ಹಾಗೆ.
ವೇದೋಪನಿಷತ್ತುಗಳು, ಸ್ಮೃತಿಗಳು, ಪುರಾಣಗಳನ್ನು
ನಿನ್ನೊಳಗೆ ತೆಗೆದುಕೊ. ವ್ಯಾಸ ವಾಲ್ಮೀಕಿಗಳ ನಿನ್ನವರ ಮಾಡಿಕೊ.

ಈ ಎರಡು ದೇಶಗಳ ಅನಿವಾರ್ಯ ಸಂಬಂಧಕ್ಕೆ
ಅರ್ಥ ಹೆಚ್ಚುತ್ತೆ.
ಜೇಮ್ಸ್ ಮಕಾಲಿಗು ನನಗು ಹಿಂದೊಮ್ಮೆ
ಕಾವ್ಯ ವಿನಿಮಯವಿತ್ತು.
ಈ ಎಲ್ಲ ನೆನಪನ್ನು ನೀನು ತಂದಿದ್ದೀಯ.
ಆಗಾಗ ನೀನಿಲ್ಲಿ ಬಂದು ಹೋಗು.

• • •

ಸಹಜ ಆಕರ್ಷಣೆಯ ಸಕಲಗುಣಸಂಪನ್ನೆ
ನೀನಾಗಿ ಬೆಳೆದಾಗ, ಆರಿಸಿಕೊ ಸಂಗಾತಿಯನ್ನು
ಸಂತೋಷಕ್ಕಾಗಿ, ಏಕತಾನತೆಯನ್ನು ಮುರಿಯಲಿಕ್ಕಾಗಿ,
ಬೇಕಾದಾಗ ಪಕ್ಕಕ್ಕಿಡುವ ಸ್ವಂತಿಕೆಗಾಗಿ,
ಮುನಿಸಿರಲಿ, ಕೊಂಕಿರಲಿ, ಜಗಳ ಕೀಟಲೆ ಇರಲಿ
ತಪ್ಪೇನು ಅಲ್ಲ:
ಬದುಕು ಪತಿಗೃಹದಲ್ಲಿ ಬೇರಿಳಿಸಲಿಕ್ಕೆ.
ನೆಲೆಸಿದ್ದ ಬೇರನ್ನು ಕಿತ್ತುಹೊರಡುವ ಜನರು
ಇನ್ನೊಂದು ಮತ್ತೊಂದು ಮಗುದೊಂದು ನೆಲವನ್ನು
ಕಡೆತನಕ ಹುಡುಕುವ ಬದುಕು ನಿನಗೆ ಬೇಡ.
ನಿಮ್ಮಹಂಕಾರಗಳು ಪರಸ್ಪರವಾಗಿ ಘಾಸಿ ಮಾಡದ ಹಾಗೆ
ನಾನು ನೀನೆನ್ನದೆಯೆ ನಾವಾಗಲಿ:
ನಿಮ್ಮಲ್ಲಿರುವ ಮಗುತನವನ್ನು ಉಳಿಸಿಕೊಳ್ಳುವ ಹಾಗೆ
ನಿಮ್ಮ ಬದುಕಿನ ಪ್ರೀತಿ ಬೆಳೆಯುತಿರಲಿ.
ತತ್ಕ್ಷಣದ ಸಿಟ್ಟು ದ್ವೇಷಕ್ಕೆ ತಿರುಗದ ಹಾಗೆ
ಮನೆ ಕೆಡಿಸದಂತೆ ಮಾತಿರಲಿ.
ಒಡೆದಾಗ ಬೆಸೆಯಲಿಕ್ಕೇ ಬರದ ಕನ್ನಡಿಯ ಹಾಗಾಗದೆಯೆ
ನಿಮ್ಮ ಕೌಟುಂಬಿಕತೆ ಇಡಿಯಾಗಿ ಇರಲಿ.
ಬೇರೆರಡು ಇದ್ದರೂ ಒಂದೆ ಮರವೆಂಬಂತೆ
ಹೆಣಕೊಂಡು ಬಾಳುವುದು ನಿಮ್ಮ ಸಂಸಾರಕ್ಕೆ ವ್ರತವಾಗಲಿ
ನಿಮ್ಮ ಸಂತಾನಕ್ಕೆ ಆದರ್ಶವಾಗುವ ಸಖ್ಯ
ನಿಮ್ಮದಾಗಿರಲಿ.
ಸಖ ಸಖಿಯರಾಗಿ ಸಖ್ಯದ ದೊಡ್ಡ ಆಲವಾಗಿ.
ಬಿಟ್ಟ ಬಿಳಲೊಂದೊಂದೂ ಬೇರಾಗಿ ಇಳಿಯುತ್ತ
ನಿಮ್ಮ ವಂಶದ ವೃಕ್ಷ ಚಿರಂತನವಾಗಿ
ವಿಶಾಲವಾದೊಂದು ಆಲವಾಗಿರಲಿ.

೫. ಬೇಂದ್ರೆಯವರ ಒಂದು ಕವಿತೆಯನ್ನು ಓದಿ ಬರೆದದ್ದು

ಕವಿ ಹೇಳಿದನು ಹೆಂಗಸಿಗೆ "ನೀನು ತಾಯಿಯ ಹಾಗೆ, ತಂಪಾದ ಮನೆ ಹಾಗೆ
ಅಕ್ಕರತೆ ಮೈತಳೆದ ಅಕ್ಕನ ಹಾಗೆ, ಬಂಗಾರದಂಥ ತಂಗಿಯ ಹಾಗೆ,

ಸತ್ಯವೇ ಮೈತಳೆದ ಹೆಂಡತಿ ಹಾಗೆ, ಎದೆಯಲ್ಲಿ ಮೊಗ್ಗಾದ ಮಗಳ ಹಾಗೆ."
ಅವನು ಹೇಳಿದ್ದೇನೂ ಅರ್ಥವಾಗಲೆ ಇಲ್ಲ ಅವಳಿಗೆ.
"ಜೀವ ಜೀವವನು ನೋಡಿಕೊಳ್ಳುವ ಹಾಗೆ
ನೂರಾರು ತೆರದಲ್ಲಿ ನೀನು ಸಲಹುವೆ" ಎಂದು ವರ್ಣಿಸಿದನು.
ಅವನು ಹೇಳಿದ್ದೇನೂ ಅರ್ಥವಾಗಲೆ ಇಲ್ಲ ಅವಳಿಗೆ.
"ಹೆಂಗರುಳ ಸಹಜ ವರ್ತನೆಯಿಂದ ಸ್ಫೂರ್ತಿಯಾಗುತ್ತ,
ಗಲ್ಲವ ಹಿಡಿದು ಮುದ್ದಾಡುತ್ತ, ಕರುಳನ್ನು ತಿದ್ದುತ್ತ
ಉರಿವ ಬಿಸಿಲನು ಮಣ್ಣಿ ಬೆಳದಿಂಗಳಾಗುವೆ" ಯೆಂದು
"ಕುದ್ದ ಮನಸ್ಸನ್ನು ತಂಪಿಸುವ ನೀರೆ ಆಗುವೆ" ಯೆಂದು
"ಎಲ್ಲ ಕ್ಲಾಂತಿಯ ಕಳೆದು ಅಪೂರ್ವ ಶಾಂತಿಯ ತರುವ
ನಿದ್ದೆಯಾಗುವೆ" ಯೆಂದು ಕವಿ ಹೇಳಿದನು ಹೆಂಗಸಿಗೆ.
ಅವನು ಹೇಳಿದ್ದೇನೂ ಅರ್ಥವಾಗಲೆ ಇಲ್ಲ ಅವಳಿಗೆ.
ಅವಳ ಸ್ಥೈರಣೆಯನ್ನು ನಚ್ಚನ್ನು ಮೆಚ್ಚನ್ನು ಮಮತೆ ಕರುಣೆಗಳನ್ನು
ಅಲೆಯ ತೊಟ್ಟಿಲಿನಲ್ಲಿ ಜೀವನವಾಗಿ ಅವಳವನ ತೂಗುವುದನ್ನು,
ಹರೆಯಳಿದರೂ ಬಿಡದೆ ಜಗಜ್ಜನನಿಯ ಹಾಗೆ, ಧರಣಿಯ ಹಾಗೆ
ಅವಳು ಸಾಕುವಳೆಂದು ತನ್ನೆದೆಯ ಬಿಚ್ಚಿ ಹಾಡಿದನು.
ಒಬ್ಬೊಬ್ಬರ ಚಿತ್ರ ಅವರ ಕಣ್ಣುಗಳಲ್ಲಿ ಅನಂತಚಿತ್ರಗಳಾಗಿ ಮೂಡುವುದನ್ನು
ಅನಂತತೆಯು ಇಬ್ಬರಲಿ ನಂಟಾಗಿ ಕೂಡುವುದನ್ನು, ಎರಡು ಹೃದಯ ಮಮತೆ
ಹಾಸಾಗಿ ಹೊಕ್ಕಾಗಿ ಕೊನೆಗಾಣದಿರುವಂಥ ಸತ್ಯ ಹೆಣೆಯುವುದನ್ನು ಬಣ್ಣಿಸಿದನು.
ಅವನು ಹೇಳಿದ್ದೇನೂ ಅರ್ಥವಾಗಲೆ ಇಲ್ಲ ಅವಳಿಗೆ.

ಡಾ. ಸುಮತೀಂದ್ರ ನಾಡಿಗ, ೩೮, ಅಪೂರ್ವ, ೧ ನೇ ಮೇನ್, ೩ ನೇ ಹಂತ, ೬ ನೇ ಬ್ಲಾಕ್, ಬನಶಂಕರಿ, ೩ ನೇ ಸ್ಟೇಜ್, ಬೆಂಗಳೂರು - ೫೬೦ ೦೮೫ ✆ : ೦೮೦ - ೬೭೯ ೧೫೮೫

ಎಂ. ವ್ಯಾಸ ಅವರ ಕಥೆಗಳಲಿ 'ಸಾವು'

ಜಿಜ್ಞಾಸೆ

ಮಣಿಮಾಲಿನಿ ಎ. ಕೆ.

ಭೂಮಿಯ ಮೇಲಿನ ಮನುಷ್ಯನ ಜೀವಿತಾವಧಿಗೆ ಅನೇಕ ಸಂಕೀರ್ಣ ಸುತ್ತುಗಳಿವೆ. ಅವನ ಅಂತರಂಗದ ನಿಗೂಢ ಜಗತ್ತಿನ ಖಂಡಾಂತರಗಳ ಪರ್ಯಟನವಾಗಲಿ, ಭಾವೋತ್ಕರ್ಷದ ಸ್ವಪ್ನ-ಸ್ವಂದನಗಳಾಗಲಿ, ಅನ್ಯಾನ್ಯ ಜೀವಮೈತ್ರಿಗಳ ಸಂಗಮೋತ್ಸಾಹ - ತಾತ್ಸಾರಗಳ ವಿರಚನೆಗಳಾಗಲಿ, ನಿನ್ನೆ-ನಾಳೆಗಳ ಮಧ್ಯದ ವರ್ತಮಾನದ ಪರಿಧಿಯಾಗಲಿ ಈ ಅಮೂರ್ತಶಿಲ್ಪದ ಕೆಲವು ಅಂಚುಗಳನ್ನು ಮಾತ್ರವೇ ತೋರಿಸುತ್ತವೆ. ಮನುಷ್ಯನ ಚಿಂತನಕ್ರಮಗಳನ್ನೇ ಅಧ್ಯಯನಗಳಿಗೆ ಆಯ್ದುಕೊಂಡ ಜ್ಞಾನಶಾಖೆಗಳೆಲ್ಲವೂ ಈ ಚಕ್ರಬಂಧಗಳನ್ನು ಬಿಡಿಸಿ, ಅಲ್ಲಿ ಸರಳರೇಖೆಯ ಸಾತತ್ಯವನ್ನು ಗುರುತಿಸುವ ಪ್ರಯತ್ನಗಳನ್ನು ಮಾಡಿವೆ. ಈ ಪ್ರಕ್ರಿಯೆಯಲ್ಲಿ ಬದುಕಿನ ರಹಸ್ಯಗಳು ಮತ್ತಷ್ಟು ಜಟಿಲವಾಗುವ, ಬಗೆಗೆ ದಿಗಿಲು ಹುಟ್ಟಿಸುವ, ನಂಬಿಕೆಯ ಪಾಯವನ್ನೇ ಅಲುಗಿಸುವ ಅಂತರ್ವಿರೋಧಗಳಿಗೂ ಸಮಕಾಲೀನ ಪರಿಸರವು ಸಾಕ್ಷಿಯಾಗುತ್ತಿದೆ.

ಸಾಮಾನ್ಯ ಪರಿಭಾಷೆಯಲ್ಲಿ ನಾವು ಹೊಸ ಸೃಷ್ಟಿಯ ಅನುಭವಗಳನ್ನು ವೇದನೆ, ಯಾತನೆ ಎಂದೇ ಕರೆಯುತ್ತೇವೆ. ವಾಸ್ತವವಾಗಿ ಹೊಸ ಜೀವವನ್ನೋ, ಭಾವವನ್ನೋ, ಸಿದ್ಧಾಂತವನ್ನೋ, ವಿಚಾರವನ್ನೋ ಚಿಗುರೊಡೆಸುವುದು ತುಂಬ ಸೊಗಸಾದ, ಆನಂದಮಯವಾದ ಕ್ಷಣವೇ ಆಗಿರುತ್ತದೆ. ಇದು ಸಂಯೋಗದ ಸಂತಸ. ಆದರೆ, ಸ್ವಂತದ ವ್ಯಕ್ತಿತ್ವದ ಭಾಗಗಳಾಗಿರುವ ಈ ಅಂಶಗಳನ್ನು ಅವುಗಳ ವಿಶಿಷ್ಟ, ಸುರಕ್ಷಿತ ಆವರಣಗಳಿಂದ ಪ್ರತ್ಯೇಕಿಸಿ, ಲೋಕಮುಖಕ್ಕೆ ತೋರಿಸುವ ಕ್ರಿಯೆಯು ಮಾತ್ರ ತ್ರಾಸದಾಯಕವಾಗಿರುತ್ತದೆ. ಆ ಕಾರಣಕ್ಕಾಗಿಯೇ ಈ ವಿಚ್ಛೇದನದ ನೋವು ಅವಿಸ್ಮರಣೀಯವಾಗುತ್ತದೆ. ಈ ಪ್ರಮೇಯವೇ –ಸ್ವಲ್ಪ ಅಳ್ಳಕವಾಗಿಯೇ ಆದರೂ– ನಮ್ಮ ಇಡಿಯ ಬದುಕಿಗೂ ಅನ್ವಯವಾಗುತ್ತದೆ.

ಇದೇ ರೀತಿಯಲ್ಲಿ, ಮಾನುಷ ಜೀವನದ ಸ್ವರೂಪ, ಜೈವಿಕ ಚಕ್ರಾವರ್ತನ, ಮೊಳೆತ–ಮುಗಿತಾಯಗಳ ಬಗೆಗೆ ನಮ್ಮ ವೈಚಾರಿಕ ಪ್ರಪಂಚವು ಆಲೋಚಿಸುತ್ತಲೇ ಇದೆ. ಅವುಗಳಲ್ಲಿ ಒಂದಾದ ಸಾವಿನ ಪರಿಕಲ್ಪನೆಯ ಬಗೆಗಂತೂ ಬೇರೆ ಬೇರೆ ನೆಲೆಗಳ ವಿಶ್ಲೇಷಣೆಗಳು ಸತತವಾಗಿ ನಡೆಯುತ್ತಿವೆ. ಈ ಹೇಳಿಕೆಗೆ ನಮ್ಮ ಸೃಷ್ಟಿಶೀಲ ಸಾಹಿತಿಗಳೂ ಹೊರಗಾಗುವುದಿಲ್ಲ. ಸಾವು, ಅಪರಿಹಾರ್ಯವಾದ, ಅನಿವಾರ್ಯವಾದ, ದಾರುಣವಾದ ಬದುಕಿನ ಕೊನೆಯೋ, ಅಲ್ಲ, ಹೊಸ ಬದುಕಿನ ಶುರುವಾತೋ ತಿಳಿಯಲಾರದ ಸಂದಿಗ್ಧಗಳಿಗೆ ಅವರೂ ಅಭಿವ್ಯಕ್ತಿಗಳನ್ನು ನೀಡಿದ್ದಾರೆ: ಈ ಮಂಜಿನ ಮೂರ್ತಿಯನ್ನು ಕಾಣುವ, ಮುಟ್ಟುವ, ಗ್ರಹಿಸುವ ಸವಾಲುಗಳನ್ನು ಸ್ವೀಕರಿಸಿದ್ದಾರೆ. ಆದರೆ, ಈ ಸಾವಿನ ಸ್ವರೂಪವನ್ನು ಅದರೊಂದಿಗೆ ಬದುಕಿನ ಅರ್ಥವನ್ನು ತಿಳಿಯಬೇಕೆನ್ನುವ ‘ನಚಿಕೇತ ಕುತೂಹಲ’ವು ಮಾತ್ರ ತಣಿದಿಲ್ಲ.

ಈ ಮಾದರಿಯ ಹುಡುಕಾಟಗಳಲ್ಲಿ ತೀವ್ರವಾಗಿ ತೊಡಗಿಸಿಕೊಂಡವರಲ್ಲಿ ನಮ್ಮ ಸಂದರ್ಭದ, ವಿಭಿನ್ನ ಮಾರ್ಗದ ಕಥೆಗಾರರಾದ ಎಂ. ವ್ಯಾಸ ಅವರೂ ಒಬ್ಬರಾಗಿದ್ದಾರೆ. ಅವರ ಆಯ್ದ ಕಥೆಗಳ ಸಂಕಲನವಾಗಿರುವ ‘ಕೃತ’ ೧೯೯೮ರಲ್ಲಿ (ಕಾಸರಗೋಡು ಪ್ರಕಾಶನ, ಕಾಸರಗೋಡು) ಪ್ರಕಟವಾಯಿತು. ಅದರಲ್ಲಿರುವ ಕೆಲವು ಸಣ್ಣ ಕಥೆಗಳು ಈ ನಿಟ್ಟಿನಿಂದ ಹೇಗೆ ಕಾಣಿಸುತ್ತವೆ ಎನ್ನುವುದನ್ನು ಪರಿಚಯಿಸುವ ಪ್ರಯತ್ನ ಈ ಲೇಖನದಲ್ಲಿದೆ.

ಸಾವನ್ನು ಸಂಧಿಸುವ ಎಲ್ಲರೂ ಶೂನ್ಯವಾಗುತ್ತಾರೆ. ಎಷ್ಟೋ ಬಾರಿ, ಒಂದು ಕಾಲದಲ್ಲಿ ಜೀವಿಸಿದ್ದ ವ್ಯಕ್ತಿಯು, ಬದುಕಿನ ಆಯ ವ್ಯಯಗಳ ಲೆಕ್ಕಾಚಾರಗಳನ್ನು ಕರಾರುವಾಕ್ಕಾಗಿ ಮುಗಿಸಿ, ತನ್ನ ಹಿಂದೆಯೂ ಶೂನ್ಯವನ್ನೇ ಉಳಿಸಿ ಹೋಗುತ್ತಾನೆ. ಅದು ಪೂರ್ಣ ವೃತ್ತವಾಗಿ ಸಾರ್ಥಕವಾಗುತ್ತದೋ, ಹೆಜ್ಜೆಗುರುತುಗಳನ್ನೆಲ್ಲ ಅಳಿಸಿ, ನಿಶ್ಶೇಷವಾಗಿ ನಿರ್ನಾಮವಾಗುತ್ತದೋ ಎನ್ನುವುದು ವ್ಯಕ್ತಿಸಂವಾದಿಯಾಗಿ ನಿರ್ಧಾರವಾಗುತ್ತದೆ. ಇನ್ನು ಕೆಲವೊಮ್ಮೆ ಜೀವ-ದೇಹಗಳನ್ನು ಕಡಿಯುವ ಸಾವು, ಅನೇಕ ಕಗ್ಗಂಟುಗಳ ಸರತಿಯ ಸಾಲನ್ನೇ ನಿಲ್ಲಿಸಿಬಿಡುತ್ತದೆ. ಮೋಹೀ ಅನಿಸಿಕೆಗಳು, ಮುಸುಕು ಹರಿದು ಹೊರಬರಲಾರದೆ ನರಳುವ ನೋವುಗಳು, ಬಿಡುಗಡೆಗಾಗಿ ಕಾದಿರುವ ಎದೆಯೊಳಗಿನ ತಿವಿತಗಳೆಲ್ಲ ಈ ಕವಾಯಿತಿಗೆ ಸೇರ್ಪಡೆಯಾಗುತ್ತವೆ. ಹಲವು ಬಾರಿ ಅರ್ಧಾಂತವಾಗಿ, ಅವ್ಯವಸ್ಥಿತವಾಗಿ ಎಲ್ಲವನ್ನೂ ಬಿಟ್ಟು ಅವಸರದಿಂದೆಂಬಂತೆ ಜೀವಗಳು ಕಾಲವನ್ನು ಹಿಂಬಾಲಿಸುತ್ತವೆ. ಎಲ್ಲೋ ಅಪೂರ್ವವಾಗಿ, ಸಾವಿನ ಮೃದುವಾದ ಸವರುವಿಕೆಯಿಂದ, ಬದುಕಿನ ಶಾಂತಿ, ಹನಿಯಷ್ಟೂ ಕರಗದೆ, ಮಾಗಿದ ಜೀವ ತೊಟ್ಟು ಕಳಚಿಕೊಳ್ಳುವ ಸಂಭ್ರಮಕ್ಕೆ ಕಣ್ಣಾಗುತ್ತದೆ. ಈ ಮಾದರಿಗಳಿಗೆಲ್ಲ ನಿರ್ದಿಷ್ಟ ಆಕಾರ, ಸ್ಥಾನ, ಸೌಷ್ಠವಗಳನ್ನು ಕಲ್ಪಿಸುವ ಪ್ರಯತ್ನಗಳಾಗಿ ವ್ಯಾಸರ ಕಥೆಗಳು ನಮಗೆ ಪ್ರಸ್ತುತವೆನಿಸುತ್ತವೆ.

ಸಾವಿನಾಚೆಯದು ಅಗೋಚರ ಜಗತ್ತಾದರೆ, ಈಚೆಗೆ ಉಳಿಯುವ ಜೀವನವು ಕಣ್ಣು-ಮನಸ್ಸುಗಳನ್ನು ತೂಗುವಂಥದ್ದು. ನಮ್ಮ ಸಂವೇದನೆಗಳಿಗೆ ದಾರಿ ನಿರ್ಮಿಸುವ ಜಾಯಮಾನದ್ದು.

ಅವುಗಳ ಬರಹ-ಇಳಿತಗಳನ್ನು, ನೆರೆ-ಬರಗಳನ್ನು, ವಕ್ರ-ನೇರ ವಿನ್ಯಾಸಗಳನ್ನು ತಿಳಿಗೊಳಿಸುವುದು, ತಿಳಿಸುವುದು ವ್ಯಾಸರ ಕಥೆಗಳ ಶ್ರದ್ಧಾ ಕೇಂದ್ರಗಳಾಗಿವೆ. ಒಟ್ಟಾರೆಯಾಗಿ, ಸಾಹಿತ್ಯಿಕ ಸಂಘರ್ಷವೊಂದು ಸ್ನೇಹಾಕಾಂಕ್ಷಿಯಾಗುವ ವಿರೋಧಾಭಾಸವಾಗಲಿ, ಮಮತೆಯ ಕೊಂಡಿಯೊಂದು ಹರಿದಲ್ಲೇ ಹೊಸ ಸಂಬಂಧವೊಂದು ಸೆಲೆಯೊಡೆಯುವ ಚೋದ್ಯವಾಗಲಿ, ದುರಂತದ ಹೊಕ್ಕುಳ ಹುರಿಯನ್ನು ಕಡಿದುಕೊಂಡು, ಸ್ವತಂತ್ರವಾಗಿ ಉಸಿರಾಡುವ ಜೀವಸಂಚಾರದ ಚೆಲುವಾಗಲಿ, ವ್ಯಾಸರ ಲೇಖನಿಯ ಮೂಲಕ ನಿರಾಯಾಸವಾಗಿ ಅಕ್ಷರಲೋಕವನ್ನು ಪ್ರವೇಶಿಸುತ್ತವೆ.

ಸಾವನ್ನು ಬೇರೆ ಬೇರೆ ದೃಷ್ಟಿಗಳಿಂದ ನೋಡುವ ವ್ಯಾಸರು ಅದಕ್ಕೆ ಪ್ರತ್ಯೇಕವಾದ ಒಂದು ವ್ಯಕ್ತಿತ್ವವನ್ನು ಗುರುತಿಸುತ್ತಾರೆ. ವಾಸ್ತವವಾಗಿ, 'ಸಾವು' ಬಹಳ ವಿಚಿತ್ರವಾದ ಅತಿಥಿಯಾಗಿದೆ. ಕರೆದಲ್ಲಿಗೆ ಬಾರದ, ಬೇಡವಾದಲ್ಲಿ ಜರೂರಾಗಿ ಹಾಜರಾಗುವ ವಿಕ್ಷಿಪ್ತ ಚರ್ಯೆಯು ಅದರದಾಗಿದೆ. ಈ ವಿಲಕ್ಷಣ ಪರಿಯನ್ನು ಅರ್ಥಮಾಡಿಕೊಳ್ಳುವ, ಸತಾರ್ಕಿಕ ಬಂಧಗಳಿಗೆ ಒಗ್ಗಿಸಿಕೊಳ್ಳುವ ಸಮ್ಯ ಯತ್ನಗಳಾಗಿ ವ್ಯಾಸರ ಕಥೆಗಳಿವೆ. ಹಾಗಾಗಿಯೆ, ಈ ಬಹುಮುಖಿಯನ್ನು ಬೇರೆ ಬೇರೆ ಕೋನಗಳಿಂದ ಗಮನಿಸುವ ಸೌಲಭ್ಯಗಳನ್ನು ಅವು ಕಲ್ಪಿಸುತ್ತವೆ.

ಈ ಹೇಳಿಕೆಯನ್ನು ಕೆಲವು ನಿದರ್ಶನಗಳ ಆಸರೆಯೊಳಗೆ ಸಮರ್ಥಿಸಬಹುದು. ವ್ಯಾಸರ 'ಹಲ್ಲೆ' ಕಥೆಯು ಒಂದು ಹತ್ಯೆಯೊಂದಿಗೆ, "ಉತ್ತು ಹಾಕಿದ್ದ, ರಾಡಿರಾಡಿಯಾಗಿದ್ದ, ಗದ್ದೆಯ ಬದುವಿನಲ್ಲಿ ಅಂಗಾತವಾಗಿ ಭೀಕರವಾಗಿ ಬಿದ್ದಿದ್ದ ಶವ" (ಕೃತ, ಪು. ೧) ದ ವಿವರಗಳೊಂದಿಗೆ ಮೊದಲಾಗುತ್ತದೆ. ಈ ಕಥೆಯಲ್ಲಿ 'ಸಾವು' ಜೀವಂತವಿದ್ದೂ ಜೀವಂತಿಕೆಯಿರದ, ಭಾವಗಳೆಲ್ಲ ಸತ್ತು ಮತ್ತಗಾದ ಪರಿತ್ಯಕ್ತ ಬದುಕಿಗೊಡ್ಡಿದ ಪ್ರತಿಮೆಯಾಗುತ್ತದೆ: ಸೃಷ್ಟಿಯನ್ನು ನಾಶಪಡಿಸಬೇಕೆನ್ನುವ ಅಸಹಜ ಇಚ್ಛೆಯಾಗಿ ಪ್ರಕಟಗೊಳ್ಳುತ್ತದೆ. ಹಾಗಾಗಿ, ಅಲ್ಲಿ ನಡೆಯುವುದು ಕೇವಲ ಒಂದು ಕೊಲೆಯಾಗಿರುವುದಿಲ್ಲ. ಬದಲಿಗೆ ಪುನಃಸೃಷ್ಟಿಗೊಳ್ಳಬೇಕೆನ್ನುವ, ಭವಿಷ್ಯವನ್ನು ಬಯಸುವ ಹಂಬಲದ ಕೊನೆಯಾಗಿರುತ್ತದೆ. ಇಲ್ಲಿ, ಕೊಲೆಯಾಗಿ, ವಿಕಾರವಾಗಿ ತೆರೆದುಕೊಂಡು ಬಿದ್ದಿದ್ದ ಹೆಣ್ಣು ದೇಹವನ್ನು ಕಥೆಯು ಹೀಗೆ ನೋಡುತ್ತದೆ : "ಮರುಸೃಷ್ಟಿಯ ವಿಫಲ ಯತ್ನದಲ್ಲಿ ತೊಡಗಿದ್ದ ಜೀವವೊಂದು ಕೊರಡಿನ ಹಾಗೆ ಆಕಾಶವನ್ನು ಹೊದ್ದು ಮಲಗಿತ್ತು. ದಾಹದಿಂದ ಕ್ಷಣಗಳ ಹಿಂದೆ ವಿಜೃಂಭಿಸಿರಬಹುದಾಗಿದ್ದ ದೇಹ.... ಶವದ ಕೈಗಳ ಕೊನೆಯ ಎರಡು ಚಲನೆಗಳು– ಚಲನೆಗಳ ಅಂತ್ಯಗಳು– ಅವಳ ಕತೆಯ ಕೊನೆಯನ್ನು ಸಾರಿ ಸಾರಿ ಹೇಳುವಂತೆ ತೋರಿಬರುತ್ತಿತ್ತು" (ಅದೇ, ಪು. ೩).

ಇಲ್ಲಿ ಬರುವ 'ದಾಹ'ದ ತೀವ್ರತೆ, 'ಕೊರಡಿ'ನ ಮರಕಟ್ಟುವಿಕೆ, 'ಚಲನೆ' ಒತ್ತಡ-ಆಸಕ್ತಿ, ಅಸಹಾಯಕತೆಗಳು, ಕೊನೆಯ ಖಾಲಿತನ, ನಿರಾವರಣಗಳೆಲ್ಲವೂ ಯಾವಯಾವುದೋ ನಿಷ್ಪತ್ತಿಯಲ್ಲಿ ಸಮಾವೇಶಗೊಳ್ಳುತ್ತ ಭೀತಿಯನ್ನೇ ಹುಟ್ಟಿಸುತ್ತವೆ. ಈ 'ಒಳಗು' ಬರಿದಾಗಿ 'ಹೊರಗು' ಬಯಲಾಗುವುದೇ 'ಸಾವು' ಎಂದಾದರೆ ಬದುಕಿರುವುದರ ಅರ್ಥವಾದರೂ ಏನೆಂಬ ಪ್ರಶ್ನೆಗೆ ಎಡೆ ನೀಡುತ್ತದೆ.

ಈ ಕಥೆಯ ಸಂಕೀರ್ಣತೆಯನ್ನು ಅರಿಯುವ ದೃಷ್ಟಿಯಿಂದ, ಅದರ ಸ್ಥೂಲವಾದ ಹಿನ್ನೆಲೆಯು ಇಲ್ಲಿ ಅಗತ್ಯವೆನಿಸುತ್ತದೆ. ಇದು ತೀರಾ ಕುರೂಪವಾಗಿದ್ದ ಮುಖವನ್ನು ಹೊಂದಿದ್ದ ಅಜ್ಜಿಗರು ಹಾಗೂ ಅವರು 'ಅನಿವಾರ್ಯ'ವಾಗಿ ಸೃಷ್ಟಿಸಿದ್ದ, ಅವರಷ್ಟೇ ವಿಕಾರಾಕೃತಿಯ ಮಗಳು ವಾರಿಜಳ ಕಥೆಯಾಗಿದೆ. ತಮ್ಮ ತದ್ರೂಪವಾಗಿದ್ದ ಮಗಳ ಮುಖದಷ್ಟೇ ಅವಳ ಬದುಕೂ ವಿಕೃತಗೊಳ್ಳುತ್ತಿದ್ದುದನ್ನು, ಹಿತವಿಲ್ಲದೆ ಚಲಿಸುತ್ತಿದ್ದುದನ್ನು ಸಹಿಸಬೇಕಾದ ತಂದೆಯ ದೌರ್ಬಲ್ಯದ ವೃತ್ತಾಂತವಾಗಿದೆ. ವಾರಿಜಳ ನೈತಿಕ ಕುಸಿತವನ್ನು ಅಜ್ಜಿಗರು ಸ್ವೀಕರಿಸುವ ಕ್ರಮವಾದರೂ ಎಂಥದ್ದು ! "....ಮೊದಲು ತಡೆಯಬೇಕೆಂದಿದ್ದೆ. ಸಾಧ್ಯವಾಗಲಿಲ್ಲ. ಇಂತಹ ಮನಸ್ಸಿನ ಮೋಹಗಳೂ, ಮೋಹಭಂಗಗಳೂ ನನಗೆ ಅರ್ಥವಾಗುತ್ತಿದ್ದುವು. ಆ ಸುಖದ ಕ್ಷಣಗಳನ್ನು ನನ್ನಿಂದ

ಕಸಿಯಲಾಗಲಿಲ್ಲ, ದುರ್ಬಲನಾದೆ. ಅವಳ ಹಾಗೆ ವಿವರಿಸಲಾರದ ಸುಖವೊಂದು ನನ್ನಲ್ಲೂ ಮೂಡುತ್ತಿತ್ತು. ...ಮರಣದಂತಹಾ ಸುಖ...." (ಅದೇ, ಪುಟ ೮).

ಅಡಿಗರ ದುರ್ಬಲ ಸ್ಥಿತಿಯೊಂದಿಗೆ ಅವರೊಳಗಿನ ಮಾನವೀಯತೆಯೂ ಸೇರಿಕೊಂಡ ಮನೋವೃತ್ತಿಯು ಇಲ್ಲಿ ಕಾಣಸುತ್ತದೆ. ಬದುಕಿನ ಶೀತಲ ಕ್ರೌರ್ಯಗಳೆಲ್ಲ ಮುದುಕಟ್ಟಿಕೊಳ್ಳುವುದು ಇಂಥ ಅನಿಸಿಕೆಗಳಾಳಗಳಲ್ಲೇನೋ. ಇದು, 'ಹಲ್ಲೆ' ಕಥೆಯ, ಅಥವಾ ಸಾವಿನ ವ್ಯಕ್ತಿತ್ವದ ಒಂದು ಮಗ್ಗುಲನ್ನು ತೋರಿಸುತ್ತದೆ. ಸಾವಿನ ಇನ್ನೊಂದು ಸ್ವರೂಪವು ಅಡಿಗರು ಮತ್ತು ಅವರ ಪತ್ನಿಯ ನಡುವಿನ ಸಂಬಂಧದಲ್ಲಿ ಪ್ರಕಟವಾಗುತ್ತದೆ. ಆ ಸಂಬಂಧ, ವಿಚಿತ್ರವಾದ, ವಾಸ್ತವವಾದ, ಶರೀರಜನ್ಯವಾದ 'ಬೇಕು'ಗಳ ಆಧಾರದ ಮೇಲೆ ನಿಂತಿರುತ್ತದೆ. ಅಡಿಗರ ಹೆಂಡತಿಯಾಗಿ ಬಂದವಳು ಒಬ್ಬ ವಿಧವೆ: ಕರ್ಮಠ ಬ್ರಾಹ್ಮಣನೊಬ್ಬನ ಮಗಳು. ಆ ಸಂಬಂಧದ ಅವಲಕ್ಷಣ-ಗಳನ್ನೂ, ಅಸಂಬದ್ಧತೆಗಳನ್ನೂ ಅಡಿಗರು ಬಿಡಿಸಿಡುವುದು ಈ ರೀತಿ : "ನನ್ನ ಕುರೂಪಿತನವನ್ನು ನೋಡಿದ ಮೇಲೆ, 'ಇವನಿಂದ ತೊಂದರೆ ಇಲ್ಲ' ಎಂದು ನನ್ನನ್ನು ಮನೆಗೆ ಸೇರಿಸಿಕೊಂಡರು ತೊಂದರೆ ನನ್ನಿಂದಲೇ ಆರಂಭವಾಯಿತು. ಹೊರಗಿನ ಪ್ರಪಂಚವನ್ನು ನೋಡಲು ಬಿಡದಂತೆ ಅವಳು ಬಂಧಿತಳಾಗಿದ್ದಳು. ಆ ಬಂಧನದೊಳಗೆ ನಾನು ನನ್ನ ಪ್ರಪಂಚವನ್ನು ತೆಗೆದುಕೊಂಡು ಹೋದೆ... ದಿನಗಳು ಕ್ಷಣಗಳಾದುವು.... ಈ ಕುರೂಪಿ ಮಗಳನ್ನು ಹೆತ್ತ ಬಳಿಕ ಕಲ್ಲಿನ ಬೊಂಬೆಯ ಹಾಗೆ ಅವಳು ನನ್ನ ಪಾಲಿಗೆ ಮುಚ್ಚಿಕೊಂಡಳು... ನನ್ನನ್ನು ಕಾಲೊರಸುವ ಮಲಿನ ಬಟ್ಟೆಯ ಹಾಗೆ ಉಪಯೋಗಿಸಿಕೊಂಡಳು..." (ಅದೇ, ಪು. ೫...೬...೭).

ಈ ಪಾತ್ರಗಳನ್ನು ಮಾಧ್ಯಮವಾಗಿಟ್ಟುಕೊಂಡು, ವ್ಯಾಸರು ಮನುಷ್ಯ ಸಂಬಂಧಗಳ ಸಾವಿನ ಕ್ರಮಗಳನ್ನು ಅರಿತುಕೊಳ್ಳಲು ಪ್ರಯತ್ನಿಸುತ್ತಾರೆ. ಇದನ್ನು ಸ್ಪಷ್ಟಪಡಿಸುವ ಕಥೆಯು ಈ ವಾದವನ್ನು ಮಂಡಿಸುತ್ತದೆ : "ಮೈ ಹೇಗೆ ವಂಶಪಾರಂಪರ್ಯವೋ ಮನಸ್ಸೂ ಹಾಗೆಯೇ.... ಅಡಿಗರ ಹೆಂಡತಿ ಅವರನ್ನು ಒಳಗೊಳಗೇ ಪರಕೀಯನೆಂದೇ ಪರಿಗಣಿಸಿರಬೇಕು... 'ನಿನಗೆ ಇನ್ನೊಬ್ಬ ಗಂಡ ಇಲ್ಲ' ಎಂಬ ಸಂಸ್ಕೃತಿಯಲ್ಲಿ ಬೆಳೆದು ಬಂದ ಯಾವ ಸ್ತ್ರೀಯಾದರೂ ಹೀಗೆಯೇ ಇರುತ್ತಾಳೆ ದೈಹಿಕವಾಗಿ. ಅಡಿಗರನ್ನು ಇಲ್ಲವಾಗಿಸುವ ಸಾಮರ್ಥ್ಯ ಇಲ್ಲದುದರಿಂದ ಅವಳು ಅಡಿಗರ ಮನಸ್ಸನ್ನು ನಾಶ ಮಾಡಿದಳು. ಹಾಗೆ ಸಂಬಂಧದಿಂದ ಕಳಚಿಕೊಂಡಳು" (ಅದೇ, ಪು. ೧೦).

ಈ ಹೇಳಿಕೆಯು, ವಾದಕ್ಕೂ ಸಾರ್ವಕಾಲಿಕವಾದ ಸತ್ಯಕ್ಕೂ ಇರುವ ಅಂತರವನ್ನು ಹುಡುಕಲು ಪ್ರೇರೇಪಣೆಯನ್ನು ನೀಡುತ್ತದೆ. ಕೃತಜ್ಞತೆಯು ಇರಬೇಕಾದ ಜಾಗದಲ್ಲಿ ತಿರಸ್ಕಾರವಿರುವುದು ಬದುಕಿನ ನಿಯಮವೇ ಅಲ್ಲ. ಅದಕ್ಕೊಂದು ಅಪವಾದವೇ ? ವಾರಿಜಳನ್ನು ಕೊಲೆ ಮಾಡುವ ನಾರಾಯಣ ಗೋಸಾಯಿಯ ಮುಖಭಾವವನ್ನು ಇಲ್ಲಿ ಲಕ್ಷಿಸಬೇಕು. ಬಂಧಿತನಾಗಿ ಕುಳಿತಿದ್ದಾಗ ಅವನ ಮುಖದಲ್ಲಿ ಪಶ್ಚಾತ್ತಾಪ - ದುಃಖಗಳಿರಲಿಲ್ಲ. ಆದರೆ ಭಯವಿತ್ತು – "ಮರಣದ ಭಯದ ಹಾಗಿದ್ದ ಭಯ". ಇಲ್ಲಿ ವಾರಿಜಳೊಂದಿಗೆ ತನಗೆ ಇದೆ ಎಂದುಕೊಂಡಿದ್ದ ಸಂಬಂಧವು ಅವನಿಗೆಂದೂ ಇರಲೇ ಇಲ್ಲ. ಆದರೆ, ಸಾವಿಗೆ ಕಾರಣನಾಗುವಾಗ ಅವನಿಗಿದ್ದ ನಿಶ್ಚಿಂತೆ, ಕಾನೂನಿನ ಕೈಗಳಿಗೆ ಸಿಕ್ಕ ಕ್ಷಣವೇ 'ತನಗೂ ಅದೇ ಸಾವೇ ಕಾದಿದೆ' ಎನ್ನುವ ಅರಿವಿನಿಂದಲೇ ಕರಗಿರಬಹುದೇ ? ಈ ಪ್ರಶ್ನೆಗೂ ಕಥೆಯೇ ಉತ್ತರವಾಗುತ್ತದೆ.

'ಭವಿಷ್ಯದಲ್ಲಿ ಸಾವು ಕಾಯುತ್ತಿದೆ ಎಂದು ಮನುಷ್ಯ ಮಾತ್ರ ತಿಳಿಯಬಲ್ಲ. ಆದರೂ ಆತ ಸಾವನ್ನು ಮರೆಯಲೆತ್ನಿಸುತ್ತಾನೆ. ಎಲ್ಲರ ಗುರಿಯೂ ಸಾವೇ ಆಗಿರುತ್ತದೆ. ಆದರೆ... ಎಲ್ಲರ ಗುರಿಯೂ ಅದ್ಭುತ ಸುಖದ ನಿರೀಕ್ಷೆ ಮಾತ್ರವಾಗಿರುತ್ತದೆ. ನಾವೆಲ್ಲರೂ ನಟಿಸುತ್ತೇವೆ ಆದರೆ ಹಾಗೆಂದು ಒಪ್ಪಿಕೊಳ್ಳುವುದೇ ಇಲ್ಲ" (ಅದೇ, ಪು. ೧೧). ಎಂದರೆ, ಮರಣವು ಕಾದಿದೆಯೆನ್ನುವುದನ್ನು ಮರೆಯುವುದು ನಮ್ಮಿಂದಾಗುವುದಿಲ್ಲ. ಆದರೆ ಪ್ರಜ್ಞಾಪೂರ್ವಕವಾಗಿ,

'ಅದನ್ನು ಮರೆತಿದ್ದೇವೆ. ಆದುದರಿಂದಲೇ ಕ್ರಿಯಾಶೀಲರಾಗಿದ್ದೇವೆ' ಎಂದು ನಮ್ಮನ್ನೇ ನಂಬಿಸಿಕೊಳ್ಳುತ್ತೇವೆ. ಪ್ರತಿಕ್ಷಣವನ್ನೂ ಕಾಲದ ಕಣ್ಣಿಯಿಂದ ಕಸಿದುಕೊಂಡು ಬದುಕುತ್ತಾ. ಈ ತಾತ್ಕಾಲಿಕ ಗಳಿಕೆಯೇ ಶಾಶ್ವತವಾಗಿರಲೆಂದು ಆಶಿಸುತ್ತಾ, ದಿನದಿಂದ ದಿನಕ್ಕೆ ದಾಟುತ್ತೇವೆ. ಇಲ್ಲಿ ಇನ್ನೂ ಒಂದಂಶವನ್ನು ಗಮನಿಸಬೇಕು. ಸಾವಿನ ಶಾಸನಕ್ಕೆ ಪ್ರತಿಯಿಲ್ಲ. ಯಾರಿಗೂ ಅದರಿಂದ ವಿನಾಯಿತಿಯೂ ಇಲ್ಲ. ಒಂದಲ್ಲ ಒಂದುದಿನ, ಈ ಪ್ರಪಂಚದಿಂದ, ಅಲ್ಲಿ ಸಿಕ್ಕಿದ ಅನುಭವದ್ರವ್ಯ-ಗಳಿಂದ ವಿಚ್ಛೇದನವು ಎಲ್ಲರಿಗೂ ನಿಶ್ಚಿತವಾದ ಗತಿಯೇ ಆಗಿದೆ. ಈ ಕೊನೆಯು ಇರುವುದೇ ಬದುಕಿನ ಸೆಳೆತದ ರಹಸ್ಯವಾಗಿದೆಯೇನೋ. ಅಮರರಾಗಿರುತ್ತ 'ಸಾವಿರದ ಹಣ' ಗಳಾಗುವುದು ಯಾರಿಗೂ ಅಪೇಕ್ಷಣೀಯವಲ್ಲ. ಸುಖಕ್ಕೆ ಕೊನೆಯಿರುವುದರಿಂದಲೇ ಅದರ ಅನ್ಯಾನ್ಯ ಪ್ರಕಾರಗಳ ಅನ್ವೇಷಣೆಗಳಲ್ಲಿ ಮನುಷ್ಯನು ಆಸಕ್ತನಾಗುತ್ತಾನೆ. ಹಾಗಾಗಿಯೇ ಮನಸ್ಸಿನ ಹತ್ಯೆ, ಭರವಸೆಯ ನಾಶ, ಸಂಬಂಧಗಳ ಪೊಳ್ಳುತನಗಳೆಲ್ಲೆಲ್ಲ ಸಾವಿನ ದಟ್ಟ ಛಾಯೆಯೇ ಕಾಣಿಸುತ್ತದೆ ಈ ಸೂಕ್ಷ್ಮವನ್ನು, ವ್ಯಾಸರು ಗ್ರಹಿಸಿದ ರೀತಿಯೂ ಉಲ್ಲೇಖಾರ್ಹವಾಗಿದೆ. ಈ ಬಗೆಗೆ ಅವರ ಸೃಜನಶೀಲ ಪ್ರತಿಕ್ರಿಯೆಯು ಹೀಗಿದೆ : "ಸಾವುಗಳು ಮನುಷ್ಯರನ್ನು ಮತ್ತಷ್ಟು ದಿನ ಬದುಕಿರಲು ಪ್ರಚೋದಿಸುತ್ತವೆ. ಮನುಷ್ಯನ ಬದುಕಿನ ಚಾಲನಶಕ್ತಿಯಾಗಿ, ಕ್ರಿಯಾಶಕ್ತಿಯಾಗಿ ಸಾವು ಇರೋದು ಬದುಕಿನ ಅತ್ಯಂತ ಚೋದ್ಯಗಳಲ್ಲಿ ಒಂದು" (ಅದೇ, ಪು. ೨೦). ಈ ಮಾತು ಎಲ್ಲ ಬಗೆಯ ಸಾವುಗಳಿಗೂ ಅನ್ವಯವಾಗುತ್ತದೆ. ಬದುಕಿದ್ದಾಗಲೇ ಪರಿಸರದ ಬಾಂಧವ್ಯವನ್ನು ಕಡಿದುಕೊಳ್ಳುವ ಏಕಾಂಗಿತನ, ಜೀವನದ ಸಂದರ್ಭಗಳಲ್ಲೆಲ್ಲ ಅಪ್ರಸ್ತುತನೆನಿಸುವ ವೇದನೆ, ಶಾರೀರಿಕ-ಮಾನಸಿಕ ಅಸ್ವಾಸ್ಥ್ಯಗಳಿಂದಾಗಿ ಉಸಿರಾಡುತ್ತಿದ್ದರೂ, ಸಮಾಧಿಗೊಳ್ಳುವ ಜೀವನಾಸಕ್ತಿ, ಈ ಲೋಕದಲ್ಲಿ ಇರಬೇಕೆನ್ನುವ ಆಸೆಯೇ ಸುಟ್ಟು ಸುರುಟುವ ವಿವಶತೆಗಳೆಲ್ಲವೂ ಒಂದಲ್ಲ ಒಂದರ್ಥದಲ್ಲಿ ಸಾವುಗಳೇ ಆಗುತ್ತವೆ.

ವ್ಯಾಸರ ಕಥೆಗಳಲ್ಲಿ ಬರುವ ಆತ್ಮಹತ್ಯೆಗಳ ಪ್ರಸಂಗಗಳನ್ನು ಈ ದೃಷ್ಟಿಯಿಂದ ಪರಿಗಣಿಸಬಹುದು. 'ಬದುಕಿನಿಂದ ಎಲ್ಲವನ್ನೂ ಪಡೆದಿದ್ದೇನೆ' ಎಂಬ ಸಂತೃಪ್ತ ಸ್ಥಿತಿಯಲ್ಲೂ ಮನಸ್ಸು ಸಾವಿಗೆ ಶರಣಾಗಬಹುದು. ಅದು, ಸ್ವಾದಿಷ್ಟ ಭೋಜನಾನಂತರದ ಸಂತುಷ್ಟಿ. ಯಾವುದೇ ಗೊಂದಲದ ಗೋಜಿಲ್ಲದೆ ಬದುಕಿನಷ್ಟೇ ಸ್ನೇಹಭಾವದಿಂದ ಮರಣವನ್ನೂ ಸ್ವಾಗತಿಸುವ 'ಸಲ್ಲೇಖನ'. ಇಲ್ಲಿ ಸಾವಿನ ಅರ್ಥಪ್ರತ್ಯಯವು ಸರಳ: ಸುಲಭ. ಆದರೆ ಜೀವನದ ಯಾವುದೋ ಕ್ಲಿಷ್ಟಸಂಧಿಯನ್ನು ದಾಟಲಾರದೆ, ಬೆನ್ನು ತೋರಿಸುವ ಗದ್ದಲ ಹತ್ತಿದ ಚಿತ್ತದ ನಡೆಗಳು ಜಟಿಲ ನೇಯ್ಗೆಯವು, ನೇರವಾಗಲು ನಿರಾಕರಿಸುವಂಥವುಗಳು.

ವ್ಯಾಸರ 'ಲಯ' ಕಥೆಯು ಈ ದಾರಿಯಲ್ಲಿ ನಡೆಸುವ ಚಿಂತನೆಯು ಸತ್ತದ ಅರ್ಥವಿಸ್ತಾರವನ್ನಷ್ಟೇ ತೋರಿಸುತ್ತದೆ : '...ಆತ್ಮಹತ್ಯೆಯು ಅನೈಸರ್ಗಿಕ ಮರಣವಲ್ಲ. ರೋಗಪೀಡಿತನ ಮರಣದಂತೆ ಒಂದು ಸ್ವಾಭಾವಿಕ ಮರಣ. ಜೀವಕಣಗಳು, ಜೀವಂತ ಅಂಗಗಳು ಕ್ರಿಯೆ ನಿಲ್ಲಿಸಿದಂತೆ ಜೀವಿತೋತ್ಸಾಹ, ಜೀವಿತ ಚೇತನಕ್ರಿಯೆ ನಿಲ್ಲಿಸುವುದು ಆತ್ಮಹತ್ಯೆಯಲ್ಲಿ ಪರ್ಯವಸಾನಗೊಳ್ಳುತ್ತವೆ. ಹಾಗಾಗಿಯೇ ಸತ್ತವನ ಮನಸ್ಸು (ದೈಹಿಕ ಮರಣಕ್ಕಿಂತ) ಬಹಳ ಹಿಂದೆಯೇ ಸತ್ತು ಹೋಗಿರುತ್ತದೆ' (ಅದೇ). ಇಂಥ ನಂಬಿಕೆಯನ್ನು ಇಟ್ಟುಕೊಂಡೇ 'ಲಯ' ಕಥೆಯು ದಿನೇಶನ ಆತ್ಮಹತ್ಯೆಯನ್ನೂ, ರೋಗಗ್ರಸ್ತಳಾಗಿದ್ದ ಅವನ ತಾಯಿಯ ಮರಣವನ್ನೂ ಅಕ್ಕಪಕ್ಕಗಳಲ್ಲಿಡುತ್ತದೆ. ಇಲ್ಲಿ, ಸತ್ತ ಮನಸ್ಸು ಪುನಶ್ಚೇತನಗೊಳ್ಳಬಹುದಾದ ಸಾಧ್ಯತೆಗಳೆಲ್ಲ ಅಲಕ್ಷ್ಯಕ್ಕೊಳಗಾದವೇನೋ ಎನ್ನುವ ಅನುಮಾನವು ಬರುತ್ತದೆ. ಮನಸ್ಸು ಎಂದಾದರೂ ಮರಳಿ ಕಟ್ಟಲಾರದಷ್ಟು ಕೆಟ್ಟುಹೋಗಬಹುದೇ ? 'ಬದುಕಿನ ಆಸಕ್ತಿಯ ಕೇಂದ್ರವಿರುವುದೇ ಸುಖದ ಅಪೂರ್ಣತ್ವದಲ್ಲಿ' ಎನ್ನುವ ಸಿದ್ಧಾಂತವೂ ಇಲ್ಲಿ ಚರ್ಚಿತವಾಗುತ್ತದೆ: "ಪೂರ್ತಿ ತೃಪ್ತಿಯಾಗುವಂತಹ ಸುಖವೊಂದು ಯಾರಿಗಾದರೂ ಲಭ್ಯವಾಗುವುದಿದ್ದರೆ, ಅದಕ್ಕಿಂತ ಮುಂದಿನ ಜೀವಿತಕ್ಕೆ ಅರ್ಥವಿರಲಾರದು" (ಅದೇ). ಈ ಮಾತು

ಎಷ್ಟು ಸರಿಯೋ ಸುಖದ ಬಗೆಗಿನ ನಮ್ಮ ನಿರೀಕ್ಷೆಗಳು ವಾಸ್ತವಕ್ಕಿಂತ ತುಂಬ ಎತ್ತರದಲ್ಲಿ ಇರುವುದರಿಂದ, ಆ 'ಪೂರ್ಣತೃಪ್ತಿ' ಯೆನ್ನುವುದೇ ಮಿಥ್ಯೆಯೆನ್ನುವುದೂ ಅಷ್ಟೇ ಸರಿಯಾಗುತ್ತದೆ!

'ಚಿತೆ' ಕತೆಯಲ್ಲಿ ಬರುವ "ಸಾವು ಗುರುತು ಮಾಡಿ ಹೋಗಿದ್ದ" ಹೆಣ್ಣು ಜೀವವೊಂದು ಸಾವಿನ ಒಗಟನ್ನು ಬಿಡಿಸುವ ಕ್ರಮವೇ ಪ್ರತ್ಯೇಕವಾಗಿದೆ: "ಸಾವು ಎಂದರೆ ನನಗೆ ಭಯ.... ಈ ಅರ್ಥಹೀನ ಬದುಕಿಗಿಂತಲೂ ಭಯ...." (ಅದೇ, ಪು. ೨೬) ಎನ್ನುವ ಆ ಮಹಿಳೆ, ಇತರರ ಸಾವಿನ ಸುದ್ದಿಯನ್ನು ಕೇಳಿಯೇ ಸಂಭ್ರಮಪಡುತ್ತಾಳೆ. ಅದೇ ತಾನು ಕೇಳಬಹುದಾದ ಕೊನೆಯ ಸುದ್ದಿಯೇನೋ ಎನ್ನುವಂತೆ ಅದನ್ನು ಗ್ರಹಿಸುತ್ತಾಳೆ. "ಇನ್ನೊಬ್ಬರ ಸಾವಿನ ಸುದ್ದಿ, ನನಗೆ ನಾನು ಬದುಕಿರುವ ಕೆಲವೇ ದಿನಗಳ ಮಹತ್ವವನ್ನು ತಿಳಿಯಹೇಳುತ್ತದೆ" (ಅದೇ, ಪು. ೨೮) ಎಂದು, ಬದುಕಿಗೆ ತನ್ನನ್ನು ಜೋಡಿಸುವ ಕ್ರಮವಾಗಿ ಅದನ್ನು ಆಪ್ತವಾಗಿ, ಗೌರವದಿಂದ ಕಾಣುತ್ತಾಳೆ. ತಾನಿನ್ನೂ ಬದುಕಿದ್ದೇನೆಂಬ ಆಶ್ವಾಸನೆಯನ್ನು ಅವಳಿಗ ನೀಡುವುದು, ಯಾರೋ ಸತ್ತರೆಂಬ ಸುದ್ದಿ!

ಬದುಕಿನ ಸ್ಥಗಿತತೆಯಲ್ಲೂ ವ್ಯಾಸರು ಸಾವಿನ ನೆರಳನ್ನೇ ಗುರುತಿಸುತ್ತಾರೆ. ಅದು ಚಲಾಯಿಸಲಾರದ ಶರೀರದ ಜಾಡ್ಯವಿರಬಹುದು, ಎಲ್ಲ ಬಗೆಯ ಚಲನೆಗಳನ್ನೂ ನಿರೋಧಿಸುವ ಮನಸ್ಸಿನ ಜೊಜ್ಜಾಗಿರಬಹುದು, ಬೆಳಕು ಒಗ್ಗದೆ ಮುಚ್ಚಿಕೊಳ್ಳುವ ಕಣ್ಣುಗಳ ನಿಷ್ಕ್ರಿಯಿರಬಹುದು. 'ತನ್ನ ಬಿಂದುವೇ ಪರಿಧಿಯಾಗುವ, ಜ್ಞಾನದ ಅರ್ಥಹೀನತೆ'ಯೇ ಪ್ರಧಾನವಾಗುವ ಸ್ಥಿತ್ಯಂತರವಿರಬಹುದು... ಈ ಎಲ್ಲ ರೀತಿಯ ನಿಲ್ಲುವಿಕೆಗಳಿಗೂ ಸಾವಿಗೂ ಸಮೀಪದ ಸಾಮ್ಯವಿದೆಯೆನ್ನುವ ಪ್ರಮೇಯವನ್ನು ಅವರ ಕಥೆಗಳು ಪ್ರಸ್ತುತಪಡಿಸುತ್ತವೆ.

ಈ ಅನಿಸಿಕೆಗಳನ್ನು ನೇಪಥ್ಯದಲ್ಲಿಟ್ಟುಕೊಂಡು, "ಒಂದು ತಲೆಮಾರಿನ ಸತ್ಯ ಇನ್ನೊಂದು ತಲೆಮಾರಿನ ಸುಳ್ಳು" ಎನ್ನುವ ವೈಚಿತ್ರ್ಯದ ಅರ್ಥಾನ್ವೇಷಣೆಗೆ ಅವರು ತೊಡಗುತ್ತಾರೆ. ಚಡಪಡಿಸುವ, ಅಶಾಂತ ಮನಸ್ಸುಗಳ ಸೃಷ್ಟಿಶೀಲತೆಯನ್ನೂ ಸ್ವಸ್ಥ ಚಿತ್ತಗಳ ತಾಟಸ್ಥ್ಯವನ್ನೂ ಈ ನೆಲೆಯಲ್ಲಿಯೇ ಅವರು ಲಕ್ಷಿಸುತ್ತಾರೆ.

ರೂಪಕಾನ್ವಯಗಳ ಜಾಡಿನಲ್ಲಿಯೇ ಸಾವನ್ನು ಗ್ರಹಿಸುತ್ತ ಹೋಗುವ ಕ್ರಮದಲ್ಲಿ ಈ ಕಥೆಗಳ ವೈಶಿಷ್ಟ್ಯವಿದೆ. ಬದುಕಿನಲ್ಲಿ ತೃಪ್ತಿಯೆನ್ನುವುದು ಸಿಗದೇ ಹೋದಾಗ, ಸಾವಿನಲ್ಲಿ ಅದನ್ನು ಹುಡುಕುವ ಪ್ರಯತ್ನಗಳನ್ನು ಇಲ್ಲಿ ಕಾಣುತ್ತೇವೆ. ವಿಸ್ತಾರವಾದ ನಕ್ಷೆಯಲ್ಲಿ, ಬಾಲ್ಯದಂಥ ಮುಗ್ಧಭಾವಲೋಕದ ಕಂತುವಿಕೆಯೋ, "ಅಲೌಕಿಕ ವಿಚಾರಗಳು ಪ್ರಿಯವಾಗಿರುತ್ತಲೇ ಲೌಕಿಕ ವಿಚಾರಗಳು ಅನಿವಾರ್ಯವಾಗುವ" ಒತ್ತಡಗಳಾಗಿಯೋ, "ಬಿದ್ದವನಿಗೆ ಅರ್ಥವಾಗುವ, ಬಿದ್ದ ನೋವನ್ನು" ಎಂದೂ ತಿಳಿಯಲಾರದ, ಬೀಳದವನ ಅಹಂಕಾರವಾಗಿಯೋ ಇವು ಅರ್ಥಗಳನ್ನು ಪಡೆಯುತ್ತವೆ.

ಮಗುವಿನ ನಿಷ್ಕಳಂಕ ಮನಸ್ಸಿನ, ಜೀವ ತುಂಬಿರುವ ಚಟುವಟಿಕೆಗಳೆಲ್ಲವೂ ಸತ್ತಾಗ, ಪ್ರೌಢ ಮನಸ್ಸು ಮತ್ತು ಅದರ ಸಂಕೀರ್ಣತೆಗಳು ಅಸ್ತಿತ್ವಕ್ಕೆ ಬರುತ್ತವೆ. ಇದರ ಅರ್ಥ ಪ್ರಬುದ್ಧತೆ ಬೇಡವೆಂದಲ್ಲ. ಬದಲಿಗೆ ಮಗುತನದ ಸರಳತೆಗೆ ವಿದಾಯ ಹೇಳದೆಯೇ ಬೆಳೆಯುವುದು ಸಾಧ್ಯವೆಂದಾಗುತ್ತದೆ. ಈ ಸಂಕೇತವು ವ್ಯಾಸರ 'ಗೋತ್ರ' ಕಥೆಯಲ್ಲಿ ವ್ಯಕ್ತವಾಗುತ್ತದೆ. ಅಲ್ಲಿ, ಒಬ್ಬ ತಂದೆ, ತನ್ನ ಪುಟ್ಟ ಮಗನಿಗೆ ಹೇಳುವ ಮಾತುಗಳನ್ನು ಈ ದೃಷ್ಟಿಯಿಂದ ಗಮನಿಸಬಹುದು: "...ಅಗಮ್ಯವಾದುದು ಎಂದೆಂದೂ ಸ್ವರ್ಗವಾಗಿರುತ್ತದೆ. ನಿನಗಿದು ಪೂರ್ಣ ಅರ್ಥವಾದಾಗ, ನೀನೂ ನನ್ನ ಹಾಗೆ ಅರ್ಥವಾಗದವನ ಹಾಗೆ ನಟಿಸುತ್ತೀ... ನಿನ್ನ ಹಿಂದಿನ ತಲೆಮಾರು ಸೃಷ್ಟಿಸಿದ, ನೀನು ಸೃಷ್ಟಿಸಲಿರುವ ಪ್ರಪಂಚಗಳಿಗೆ ಪರಸ್ಪರ ವಿರೋಧಾಭಾಸಗಳಿರುವುದಿಲ್ಲ. ಪ್ರಪಂಚ ಅಂದೂ ಇಂದೂ ಅದೇ ಆಗಿರುತ್ತದೆ. ಪೊಳ್ಳು ಮಾತುಗಳ ಪ್ರಪಂಚ... ನಿಧಾನ ನಿಧಾನವಾಗಿ ನೀನೂ ಅವರಲ್ಲೊಬ್ಬನಾಗಿ ಬೆಳೆದು ಬಿಡುತ್ತೀ... ಪತಂಗಗಳನ್ನೂ ಅಳಿಲುಗಳನ್ನೂ... ಗಿಳಿಗಳನ್ನೂ ನೋಡಿದಾಗ ನಿನ್ನ ಮನಸ್ಸೆಂದೂ ಇಂದಿನಂತೆ ಅರಳಲಾರದು... ನೀನು ಸಹಜ ಸೌಂದರ್ಯವನ್ನು.... ಕಂಡರೂ ಕಾಣದಂತೆ ಮುಂದೆ ಹೋಗಿಬಿಡುತ್ತೀ... ಮಗನೇ, ಈ ದಾರಿಯ

ಗೌಪ್ಯವನ್ನು ನೀನಾಗ ನೋಡುತ್ತೀ... ದಂಗಾಗಿ ಬಿಡುತ್ತೀ" (ಅದೇ, ಪು. ೪೧). ಒಂದು ವಿಧೆಯ ಮನಸ್ಸನ್ನು ಮಾಧ್ಯಮವಾಗಿಟ್ಟುಕೊಳ್ಳುವ ಕಥೆಯ ಈ ಭಾಗ, ಮನುಷ್ಯನೊಳಗಿನ ಮೂರ್ತಿ ಮುಖಗಳ ಮೇಲೆಲ್ಲ ಬೆಳಕು ಹಾಯಿಸುತ್ತ ಮನುಷ್ಯತ್ವದ ಅರಸುವಿಕೆಯಲ್ಲಿ ತಲ್ಲೀನವಾಗುತ್ತದೆ.

ಪ್ರತಿ ವ್ಯಕ್ತಿಯೂ ಕಾಳಜಿಪೂರ್ವಕವಾಗಿ, ತೀವ್ರವಾಗಿ ಪ್ರೀತಿಸಿಕೊಳ್ಳುವುದು ಸ್ವಂತವನ್ನೇ. ಈ ಭಾವಕ್ಕೆ ಬದ್ಧವಾಗುವ ಮನಸ್ಸು ಇತರರ ಬಗೆಗಿನ 'ಗಾಢವಾದ ಪ್ರೀತಿ ಮತ್ತು ತುಚ್ಛವಾದ ತಿರಸ್ಕಾರ' ಗಳೆರಡರಿಂದಲೂ ಬಿಡುಗಡೆಯನ್ನು ಪಡೆಯಲು ಆಶಿಸುತ್ತದೆ. ಈ ನಿಟ್ಟಿನಿಂದ ನೋಡಿದಾಗ, ಎಷ್ಟೋ ಸಲ, ಸಾವು ಆ ಸ್ವಾತಂತ್ರ್ಯದ ಸಂದೇಶವನ್ನು ತರುತ್ತದೆ ಎನಿಸುತ್ತದೆ. ಈ ವೈರುದ್ಧ್ಯಕ್ಕೆ, ವ್ಯಾಸರ 'ಶವ' ಕಥೆಯು ನಿದರ್ಶನವಾಗುತ್ತದೆ.

ಈ ಕಥೆಯಲ್ಲಿ ಬರುವ ಶರ್ಮ, "ಶವದ ಹಾಗಿರುವ ಶರೀರದ ಮೇಲೆ ಬಿಳಿ ಮುಚ್ಚಿಗೆಗಳನ್ನು ಮೂಡಿಸಿಕೊಂಡ" ತನ್ನ ಹೆಂಡತಿಯಿಂದ ಎಂದೋ ದೂರ ಸರಿದವನು. ಆದರೆ, ಎಲ್ಲೋ ಬದುಕಿದ್ದ ಅವಳ ನಿರ್ಬಂಧಗಳಿಗೆ ಅಧೀನನಾಗಿದ್ದವನು, ಜೊಕ್ಕಟವಾಗಿದ್ದವನು. ಆಕೆ ಜೀವಂತವಾಗಿದ್ದಾಗ, ನೈತಿಕ ಸೀಮೆಗಳೊಳಗೆ ತಟಸ್ಥವಾಗಿದ್ದ ಅವನ ಬಯಕೆಗಳು, ಆಕೆ ಆತ್ಮಹತ್ಯೆ ಮಾಡಿಕೊಂಡ ಕ್ಷಣದಲ್ಲಿಯೇ ಜೀವ ತುಂಬಿಕೊಳ್ಳುತ್ತವೆ. ತೀರಾ ಅನುಚಿತವಾದ, ತನ್ನ ವಿದ್ಯಾರ್ಥಿನಿಯನ್ನೇ ಬಲಾತ್ಕರಿಸುವಂಥ ಕೃತ್ಯಕ್ಕೂ ಹುರಿದುಂಬಿಸುತ್ತವೆ. ಇದು, ಸಾವು, ಬದುಕಿನ ಸಂಕಲೆಗಳನ್ನು ಸಡಿಲಿಸಿ ಮುಕ್ತಗೊಳಿಸುವ, ಎದೆಯಾಳದಲ್ಲಿ ಹುದುಗಿಟ್ಟ ರಹಸ್ಯಗಳನ್ನು ಬೆಳಕಿಗೊಡ್ಡುವ ಧೈರ್ಯವನ್ನು ನೀಡುವ ವಿಧಾನವನ್ನು ಸೂಚಿಸುತ್ತದೆ.

ಈ ಹಿನ್ನೆಲೆಯಲ್ಲಿ, 'ಭೂತ' ಕಥೆಯ ಪಾತ್ರವೊಂದು ಕೇಳುವ, "ಎಲ್ಲವನ್ನೂ ಅನುಭವಿಸುವುದು ಮನಸ್ಸಾಗಿದ್ದರೆ, ದೈಹಿಕ ಶಿಥಿಲತೆಗೆ ಏನರ್ಥ ? ಎಲ್ಲವನ್ನೂ ಅನುಭವಿಸುವುದು ದೇಹವಾಗಿದ್ದರೆ ಮನಸ್ಸಿನ ಶಿಥಿಲತೆಗೆ ಏನರ್ಥ ?" (ಅದೇ, ಪು. ೮೮) ಎನ್ನುವ ಪ್ರಶ್ನೆಯು ಮಹತ್ವವನ್ನು ಪಡೆಯುತ್ತದೆ.

ಈ ಕಥೆಗಳಲ್ಲಿ ಬರುವ ಸಾವಿನ ಸಂದರ್ಭಗಳಲ್ಲಿ ಹೆಚ್ಚಿನವು ಅಸಹಜವಾದವುಗಳು; ಬದುಕಿನ ದಾಹವನ್ನು ಉಳಿಸಿಕೊಂಡಂಥವುಗಳು. ಹಾಗಾಗಿ ಇಲ್ಲಿ ಬರುವ ಮೃತ ಶರೀರಗಳ ಬಾಹ್ಯ, ವಿಕಾರಗಳ ವಿವರಗಳಾಗಲಿ, ಒಂದು ಕಾಲಕ್ಕೆ ಅವುಗಳೊಳಗೆ ಎಡೆ ಪಡೆದಿದ್ದ ವಾಸನೆಗಳ ಸ್ವರೂಪಗಳಾಗಲಿ, ಅಲ್ಲಿ ಅವಿತಿದ್ದ ಗುಟ್ಟು-ಗೋಪ್ಯಗಳ ಕೋಶಗಳಾಗಲಿ, ಆ ಸಾವುಗಳ ಪರಿಣಾಮ - ಪ್ರತಿಕ್ರಿಯೆಗಳಾಗಲಿ ಪ್ರಧಾನವೆನಿಸುತ್ತವೆ.

ಎಲ್ಲ ಪ್ರಜ್ಞಾವಂತರ ಸ್ಮಿಮಿತದ ಮೇಲೆ ಆಗಾಗ ದಾಳಿಯಿಡುವ ಈ ಸಾವಿನ ಪರಿಕಲ್ಪನೆಯನ್ನು ಪ್ರತ್ಯಪ್ರತ್ಯೇಕ ದಿಕ್ಕುಗಳಿಂದ ನೋಡುವ ಪ್ರಯತ್ನಗಳು ಈ ಕಥೆಗಳಲ್ಲಿವೆ. ಜಿಗುಟಾದ ತಾತ್ತ್ವಿಕಜಿಜ್ಞಾಸೆಯನ್ನು ಅಪೇಕ್ಷಿಸುವ ವಸ್ತುವೊಂದಕ್ಕೆ ಕಲಾತ್ಮಕವಾದ, ಸೃಷ್ಟಿಶೀಲವಾದ ಸ್ಪಂದನಗಳಾಗಿ ಇವು ಮುಖ್ಯವೆನಿಸುತ್ತವೆ. ಬದುಕಿನ ಪರಿಚಿತಗಳ ದುರ್ಗಮಮಾರ್ಗದ ಮೂಲಕ ಸಾವನ್ನು ಸ್ಪರ್ಶಿಸುವ, ಸಾವಿನ ಮುಖಾಂತರವೇ ಬದುಕಿನ ಅರ್ಥವ್ಯಾಪಾರಗಳನ್ನು ತಿಳಿಯುವ ದ್ವಿಮುಖನೀತಿಯನ್ನು ಇಲ್ಲಿ ಗುರುತಿಸಬಹುದು. 'ಸಾವು, ಬದುಕಿನಲ್ಲಿ ಬದಲಾವಣೆಗಳನ್ನು ತರುವಂತೆಯೇ, ಬದುಕಿನ ಧೋರಣೆಗಳೂ ಸಾವನ್ನು ತರುತ್ತವೆ' ಎನ್ನುವ ಸತ್ಯದ ಅನುಷ್ಠಾನಕ್ಕಾಗಿ ಈ ಕಥೆಗಳು ದುಡಿಯುತ್ತವೆ. ಈ ಶೋಧಕ್ರಮದಲ್ಲಿ ಶ್ರದ್ಧಾಪೂರ್ವಕ ತೊಡಗಿಕೊಳ್ಳುವ ಲೇಖಕರು, ಸಹೃದಯರನ್ನೂ ಅದಕ್ಕೆ ಸಜ್ಜುಗೊಳಿಸುವ ವಿಧಾನವೇ ಅವರ ಗುರುತ್ವ, ಸಾಧ್ಯತೆಗಳ ಗಡಿಗಲ್ಲುಗಳನ್ನು ಕೊರೆದಿಡುತ್ತದೆ.

▼

ಡಾ. ಮಣಿಮಾಲಿನಿ ವಿ. ಕೆ., ೧೨/ಸಿ-೩, ಯುನಿವರ್ಸಿಟಿ ಕ್ವಾರ್ಟರ್ಸ್, ವಿದ್ಯಾನಗರಿ, ಮುಂಬಯಿ - ೪೦೦ ೦೯೮ ✆ : ೦೨೨ - ೬೫೨ ೮೪೩೫

ಹೊಸ ಚರಿತ್ರೆ

ಅನು. : ಕೃ. ಅನ್ಬನ್ ತಮಿಳು : ಪದ್ಮಾವತಿ ವಿವೇಕಾನಂದನ್

ಹೆಣ್ಣೇ! ನೀನು
ವಿಶ್ವದ ಜನಸಂಖ್ಯೆಯಲಿ ಅರ್ಧಕ್ಕಿಂತ ಮೇಲು: ದುಡಿಮೆಯಲಿ
ಶೇಕಡ ಎಪ್ಪತ್ತೈದು: ಆಸ್ತಿಯ ಹಕ್ಕಿನಲಿ ಮಾತ್ರ
ಶೇಕಡ ಒಂದಕ್ಕಿಂತ ಕಡಿಮೆ ಪಡೆಯುವ ಬಡತಿ.
ಒಂದು ದಿನದಲ್ಲಿ
ಹದಿನೆಂಟು ತಾಸಿಗೂ ಹೆಚ್ಚು ದುಡಿಯುವ ನೀನೇ
ವಿಶ್ವದ ಮೊದಲ ಗುಲಾಮಗಿತ್ತಿ.
ಹೆಣ್ಣಾಗಿ ಹುಟ್ಟಲು ಘೋರ ತಪಸ್ಸು ಮಾಡಿದ್ದೆಲ್ಲ ಆ ಕಾಲ:
ಸ್ಕ್ಯಾನಿಂಗ್ ಮುನ್‌ಸೂಚನೆಯಿಂದ ಗರ್ಭದಲ್ಲೇ ಧ್ವಂಸ ಮಾಡುವುದು
ಹಾಳುಮಾಡುವುದು ನಾಗರಿಕ ಕಾಲ.
ಹೆಣ್ಣೇ ಎಚ್ಚರಿಕೆ,
ಕಲ್ಲು ಮೂಡಿ ಮಣ್ಣು ಮೂಡದ
ಕಾಲದಲೇ ಮುನ್‌ಮೂಡಿ ಪ್ರಾಚೀನರಾದ ಜನಾಂಗದವರು
ಗರ್ಭದಲ್ಲೇ ಕೊಲೆ ಮಾಡುತ್ತಾರೆ
ಅದು ಕೂಡ ರೂಪಾಯಿಗೆರಡು ಕೊಲೆ.
ಮುಳ್ಳನ್ನು ಮುಳ್ಳಿಂದ ತೆಗೆವಂತೆ
ಹೆಣ್ಣು ಕುಲವೇ ಹೆಣ್ಣು ಕುಲ ನಾಶ ಮಾಡುತ್ತಿದೆ.
ಗಂಡು ಕಂದಮ್ಮಗಳ ಬಾಯಲ್ಲಿ ಸಿಹಿನೀರು ಸುರಿಯುವ ಇವರು
—ನಿನ್ನ ಗಂಟಲಲ್ಲಿ ಮಾತ್ರ
ಭತ್ತ* ದ ಕಾಳುಗಳನ್ನು ಇಕ್ಕಿ ಬಿಡುತ್ತಾರೆ, (*ಕೂಸನ್ನು ಸಾಯಿಸುವ ೧ ವಿಧಾನ.)
ಹೊಕ್ಕಳು ಹುರಿ ಕೊಯ್ದ ಕೈಗಳಿಂದಲೇ
—ನಿನ್ನ ನೆತ್ತಿಯ ನರವನ್ನೂ ಹತ್ತಿಕ್ಕಿ
ಸಂಸ್ಕೃತಿಯ ತಲೆಮೇಲೆ ಹಾಕುತ್ತಿದ್ದಾರೆ ಮಣ್ಣು.
ಗರ್ಭದಲ್ಲಿದ್ದಾಗ ಮಾತ್ರವಲ್ಲ,
ನೆಲದ ಮೇಲೆ ಬಿದ್ದ ನಂತರವೂ ಹೆಣ್ಣಿಗೆ ಗತಿ ಕತ್ತಲೆ ಮಾತ್ರ,
ಬೆಳಕಿಂಡಿ ತೆರೆಯಲ್ಪಡುವುದು ಯಾರೋ ಕೆಲವರಿಗೆ ಮಾತ್ರ.
ನೀನು ಹೆಣ್ಣಾಗಿ ಹುಟ್ಟಿದ್ದರಿಂದ
ಪೌಷ್ಟಿಕಾಹಾರ ಪಡೆಯುತ್ತೀ ಎರಡನೆಯ ದರ್ಜೆಯಲ್ಲೇ.
ಗಂಡು ಮಗುವಿಗೆ ಮೂರು ವರ್ಷ ಕಾಲ
ಮೊಲೆಯುಣಿಸುವ ತಾಯಿಯೂ
ನಿನಗೆ ಮೂರು ತಿಂಗಳೇ ಸಾಕೆನ್ನುತ್ತಾಳೆ.
ಮೂರು ವಯಸ್ಸಿನಲ್ಲಿ ಭಾಂಡೆ ಪಾತ್ರೆಗಳ ಹೊಂದಿಸಿಡುವ ನೀನು
ಆಡುವ ಪ್ರಾಯದಲಿ ಆಟವಾಗಿಯೇ ದುಡಿಸಿಕೊಳ್ಳಲ್ಪಡುತ್ತೀ.

ನಿನ್ನ ಒಡಹುಟ್ಟಿದವರಿಗೆ, ದಾದಿಯಾಗುವುದರೊಂದಿಗೆ
ಜೋಗುಳ ಹಾಡುವುದೂ ಆರೊರೂಟ್ ಗಂಜಿ ಕೊಡುವುದೂ
ದೈನಂದಿನ ಕೆಲಸವಾಗುತ್ತದೆ.

ಮನೆ ಗುಡಿಸಿದ ಮೇಲೆ ಬಿಡುವಿನ ವೇಳೆ ಅಕ್ಷರಗೂಡಿಸುತ್ತಿ.
ವಯಸ್ಸಿಗೆ ಬಂದುಬಿಟ್ಟರೆ ಅಭ್ಯಾಸ ಅರ್ಧದಲ್ಲೇ:
ಸ್ವಂತ ಮನೆಯಲ್ಲೇ ಪಗಾರವಿಲ್ಲದ ಕೆಲಸದಾಳು ನೀನು,
ಸಿಗುವ ಬಿಡುವಿನ ವೇಳೆ ಕಮಲ ಹೂವು ಕುಂಕುಮ ಓದಿ
ಕನಸಿನಲ್ಲಿ ಕಳೆದು ಹೋಗುವ ಪ್ರದರ್ಶನದ ವಸ್ತು ಆಗುವ ನಿನಗೆ
ಪರ್ಸಿನ ಭಾರಕ್ಕೆ ತಕ್ಕ ಮದುಮಗ ಸಿಗುತ್ತಾನೆ.
ಹೆತ್ತವರ ಮನೆಯಿಂದ ಮಾಡಿ-
ಕೊಂಡವರ ಮನೆಗೆ
ತಾಳಿ ಮೂಲಕ ವರ್ಗ ಪಡೆಯುವ ನೀನು
ಹಡೆಯುವ ಯಂತ್ರವಾಗಿ ಬಡತಿ ಹೊಂದುತ್ತೀ!

ಅತ್ತೆಯಂದಿರ ಮನೆ ಸ್ಟವ್‌ಗಳು ಸೊಸೆ ಹಚ್ಚಿದರೆ ಮಾತ್ರ ಸಿಡಿಯುತ್ತವೆ,
ಪುರುಷಪ್ರಾಧಾನ್ಯ ಪಿಶಾಚಿಗಳ ಸಿಗರೇಟುಗಳಿಗೆ
ನಿನ್ನ ಅಂಗಾಂಗ ಆ್ಯಷ್ ಟ್ರೇ ಆಗುವದುಂಟು.
ಚಂದ್ರಕುಲಶೇಖರರಲ್ಲಿ ಕೆಲವರು
ವೇಶ್ಯಾವಾಟಿಕೆಗಳಿಗೆ ಮಾರಿಬಿಡುವುದೂ ಉಂಟು
ಸ್ವಂತ ಹೆಂಡತಿಯನ್ನು.

ಕಲಿತು ಕಾರ್ಯಾಲಯಕ್ಕೆ ಕಾಲಿಟ್ಟ ಮಾತ್ರಕ್ಕೆ
ಎಲ್ಲವೂ ಬದಲಾಗಿ ಬಿಡುತ್ತದೆಯೇ?
ಗಂಡನ ಕೈ ಹಣದ ಘನತೆ ಹೆಚ್ಚಿಸಲು ನೀನು ಹೆಚ್ಚು ದುಡಿಯುತ್ತೀ!
ಮನೆಯಲ್ಲಿ ಒಬ್ಬ ಯಜಮಾನ ಹೊರಗೊಬ್ಬ ಯಜಮಾನ
ಮದ್ದಳೆಯಾಗಿ ಬಿಟ್ಟಿದೆ ನಿನ್ನ ಬದುಕು.

ಸಾಯಂಕಾಲ ಕಾಯಿಪಲ್ಯೆ ಚೀಲದೊಂದಿಗೆ ಮರಳುವ ನಿನಗೆ
ಅಡುಗೆ ಮನೇನೇ ಸಮಾಧಿಯಾಗುತ್ತದೆ.
ಮೊದಲ ತೇದಿಗಳಲ್ಲಿ ಮಾತ್ರ ಪಗಾರ ಪೂರ್ತಿ ನೋಡುವ ನೀನು
ಬೆನ್ನು ನೋವಿನ ಗುಳಿಗೆಗೆ ಮೂವತ್ತು ಪೈಸೆಗೂ
ಯಜಮಾನನ ಕೈಯನ್ನಲ್ಲವೇ ಎದುರು ನೋಡಬೇಕು.

ಸಂದರ್ಭವಶದಿಂದ ಸಾಮಾಜಿಕ ಸಂತೆಯಲಿ
ನೀ ಮಾರಾಟದ ವಸ್ತು ಆಗುವುದುಂಟು.
ಮಾರುವವರು ಮಾತ್ರ ಬೇರೆ ಬೇರೆಯಾಗುತ್ತಾರೆ
ಕೆಲವು ನಿರ್ಬಂಧಗಳಿಂದ
ನಿನ್ನನ್ನು ನೀನೇ ಮಾರಿಕೊಳ್ಳುವುದೂ ಉಂಟು.
ಹಿಡಿದುಕೊಂಡಾಗ ಸಾಮಾಜಿಕ ನ್ಯಾಯಾಲಯ
ದಂಡಿಸುತ್ತವೆ ಮಹಿಳೆಯರನ್ನು ಮಾತ್ರ.

ಹೀಗೇ.... ಹೀಗೇ....
ಇನ್ನೂ ಹೇಗ್ಹೇಗೋ ವಂಚನೆಗೊಳಗಾಗಿದ್ದೀ!
ಕಾಲ್ಕಟ್ಟು ಬೇಡಿಗಳ ಬಿಡಿಸಬೇಡವೇ ?
ಬೇರೂರಿಬಿಟ್ಟಿರುವ ಪುರುಷಾಧಿಕ್ಯದ
ಬೇರು ತುಂಡರಿಸಬೇಡವೇ ?
ಸಿಡಿದೇಳಬೇಡವೇ ?
ತಾಳಿಕೊಂಡಿದ್ದು ಸಾಕು,
ಸಿಡಿದೇಳು ಮಗಳೇ, ನಿರ್ಮಿಸು ಹೊಸ ಚರಿತ್ರೆ.

●

ಡಾ. ಕೃ. ಅನ್ಬನ್, ಕನ್ನಡ ಅಧ್ಯಯನ ಪೀಠ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ - ೩
ಡಾ. ಪದ್ಮಾವತಿ ವಿವೇಕಾನಂದನ್, ೧, ಭಾಸ್ಕರ್ ಸ್ಟ್ರೀಟ್, ರಂಗರಾಜಪುರಂ, ಚೆನ್ನೈ - ೨೪

ಪ್ರತೀಕ್ಷೆ

ಕವಿತೆ - ೭

ವಿನಯಾ

ಅಮ್ಮಾ ಏನ ತಂದೆ ?
ಮುಂಜಾನೆಯಿಂದ ಸಂಜೆ
ಮೊಲೆಕುಡಿಸದೆ, ಮುತ್ತಿಕ್ಕದೆ
ಎತ್ತಿ ಬಿಗಿ ಬಿಗಿ ಅಪ್ಪಿ ತುತ್ತಿಕ್ಕದೆ
ಅಲ್ಲೇ ಇದ್ದೆಯಲ್ಲೇ.
ನನಗಾಗಿ ಏನ ತಂದೆ ?

ಯಾರೋ ಹೆತ್ತ ಮಕ್ಕಳ ಕಣ್ಣೊಳಗೆ ಬೆಳದಿಂಗಳ ಮೂಡಿಸಲು
ಅವರಂಗಳದ ಕಲ್ಲುಗಳ ಹೆಕ್ಕಿ ಆಯಲು ಹೊರಟ ಅಮ್ಮಾ,
ನಾನಿಲ್ಲಿ ನಿಂತಿದ್ದೆ.
ಬಚ್ಚಲ ಮನೆ ಹಂಡೆಯ ಪಕ್ಕ
ಎಣ್ಣೆ ಬಟ್ಟಲು ಹಿಡಿದು ನನಗಾಗಿ ಕಾಯುತ್ತೀಯೆಂದು ಕನಸಿದ್ದೆ.
ಮನೆಯ ಮಾಳಿಗೆ ಮೇಲೆ ಅಂಗಾತ ಮಲಗಿ,
ಚುಕ್ಕಿಗಳ ಕಥೆ ಹೇಳುತ್ತೀ ಎಂದೆಣಿಸಿದ್ದೆ.
ನನಗಾಗಿ ಏನ ತಂದೆ ?

ದೇವಲೋಕದ ಪಾರಿಜಾತ
ಮನೆಯಂಗಳದಿ ನೆಟ್ಟು
ಹಸಿಹುಲ್ಲ ಹಾಸಿನ ಮೇಲೆ
ಹಾಲನ್ನ ಉಣ್ಣಿಸುವ ಕನಸು ಹೊತ್ತ ಅಮ್ಮಾ,
ಸಿಗಲಿಲ್ಲವೆ ನಿನಗೆ ಗೇಣುದ್ದ ನೆಲ ?
ಬಿರುಕಿಲ್ಲದ ಕಸುವುಕ್ಕಿದ ಹಸಿಮಣ್ಣ ಅಂಗಳ ?

●

ಡಾ. ವಿನಯಾ, ಕನ್ನಡ ಉಪನ್ಯಾಸಕಿ, ಸ. ಪ್ರ. ದ. ಕಾಲೇಜು, ಸವಣೂರ - ೫೮೧ ೧೧೮

ಎಂ. ಎಸ್. ವೇದಾ ಅವರ ಕಾದಂಬರಿ ‘ಜಮೀನು’

ಟಿ. ಸಿ. ಪೂರ್ಣಿಮಾ

ವಿಶ್ಲೇಷಣೆ

ಮೈಸೂರು ನಗರದ ನಗರೀಕೃತ ಕನ್ನಡ ಭಾಷೆಯ ವಿಶೇಷತೆಯನ್ನೇ ಹಿಡಿದು ಶ್ರೀರಂಗಪಟ್ಟಣದ ದಿಕ್ಕಿಗೆ ಹೋದರೆ ಸಿಗುವ ಕನ್ನಡ, ಅದೇ ರೀತಿ ಟಿ. ನರಸೀಪುರ - ನಂಜನಗೂಡು ಜಿಲ್ಲೆಗೆ ಹೋದರೆ ಸಿಗುವ ಕನ್ನಡಕ್ಕಿಂತ ಭಿನ್ನವಾಗಿದೆ. ಮೈಸೂರು ಜಿಲ್ಲೆಗೆ ಭೌಗೋಳಿಕವಾಗಿ ಸಮೀಪವಾದರೂ, ಮಂಡ್ಯ ಜಿಲ್ಲೆಗೆ ಸೇರಿರುವ ಶ್ರೀರಂಗಪಟ್ಟಣದ ಆಸುಪಾಸಿನಲ್ಲಿ ಬಳಸುವ ಕನ್ನಡ ಗ್ರಾಮ್ಯಭಾಷೆಯ ಮೇಲೆ ಮಂಡ್ಯದ ಭಾಷಾಪ್ರಭಾವ ಎದ್ದು ಕಾಣುತ್ತದೆ. ಇದೇ ಭಾಷೆ ಶ್ರೀರಂಗಪಟ್ಟಣದಿಂದ ಮಂಡ್ಯ - ಮದ್ದೂರು - ಚನ್ನಪಟ್ಟಣ - ರಾಮನಗರದ ಹದ್ದಿನ ವರೆಗೂ ಚಾಚಿಕೊಂಡಿರುವ ವಿಶಾಲ ವಲಯಕ್ಕೆ ಹರಡಿಕೊಂಡಿರುವುದರಿಂದ, ಈ ‘ಹಳ್ಳಿಗನ್ನಡ’ ಹೆಚ್ಚು ಬಳಕೆಯಲ್ಲಿರುವುದರ ಜೊತೆಗೆ ಕನ್ನಡ ಸಾಹಿತ್ಯ ಕೃತಿಗಳಲ್ಲೂ ಹೆಚ್ಚು ಬಳಕೆಯಾಗುತ್ತಿದ್ದು, ‘ಹಳೇ ಮೈಸೂರಿನ ಗ್ರಾಮೀಣ ಭಾಷೆ’ ಅಂದರೆ ಇದೇ ಎನ್ನುವಂತಾಗಿದೆ.

ನಾನು ಸೊಸೆಯಾಗಿ ಸೇರಿದ ಮನೆಯ (ಕ್ಯಾತನಹಳ್ಳಿ, ಪಾಂಡವಪುರ ತಾ||) ಮಾತು, ಆ ಬಗೆಯದಾಗಿದ್ದರೆ, ನನ್ನ ತವರಿನಲ್ಲಿ ಬಳಕೆಯಾಗುವ ಕನ್ನಡವೇ ಬೇರೆ ರೀತಿಯದಾಗಿದೆ. ನಮ್ಮೂರಿನ (ತಿರುಮಕೂಡ್ಲು ನರಸೀಪುರ) ಕನ್ನಡ, ಮಹದೇಶ್ವರನ ಮಲೆಯಿಂದ ಹಿಡಿದು ತಲಕಾಡು - ಯಳಂದೂರು - ಚಾಮರಾಜನಗರ ಈ ವಿಸ್ತಾರಕ್ಕೆ ಹಬ್ಬಿಕೊಂಡಿದೆ. ಸಾಕಷ್ಟು ಜನಬಳಕೆಯಲ್ಲೂ ಇದೆ. ಆದರೆ ಈ ಭಾಷಾ ಬಗೆಯಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಸಾಹಿತ್ಯ ಕೃತಿಗಳು ಕಾಣಸಿಗುತ್ತಿಲ್ಲ.

‘ಜಮೀನು’ ಕಾದಂಬರಿಗೆ ಎಂ. ಎಸ್. ವೇದಾ ಅವರು ಇದೇ ಗ್ರಾಮ್ಯಗನ್ನಡವನ್ನು ಬಳಕೆ ಮಾಡಿಕೊಂಡಿರುವುದು ನನಗೆ ಖುಷಿ ಎನಿಸಿತು. ಈ ಕನ್ನಡದ ಸೊಗಡು ವಿಪರೀತ ನಗರೀಕರಣದ ಕಾರಣದಿಂದ ಎಲ್ಲಿ ಸತ್ತುಹೋಗುತ್ತದೋ ಎಂಬ ಆತಂಕ, ಇದರೊಂದಿಗೆ ನಾಭಿ-ಸಂಬಂಧವನ್ನು ಹೊಂದಿರುವ ನನ್ನನ್ನು ಕಾಡುತ್ತಿರುತ್ತದೆ. ಈ ಭೌಗೋಳಿಕ ಪ್ರದೇಶದ ಬಗ್ಗೆ, ಅಲ್ಲಿ ನಡೆಯುವ ದೈನಂದಿನ ವ್ಯವಹಾರಗಳ ಬಗ್ಗೆ ಅನೇಕರು ಅನೇಕ ಬಗೆಯ ಸಾಹಿತ್ಯ ರಚಿಸಿರಬಹುದಾದರೂ, ಅಲ್ಲಿಯ ಭಾಷೆ ಬಳಸಿಯೇ ಅಲ್ಲಿಯ ಗ್ರಾಮೀಣ ಚಿತ್ರವೊಂದನ್ನು ಅನಾವರಣಗೊಳಿಸುವ ವೇದಾ ಅವರ ಪ್ರಯತ್ನ ಬಹುಶಃ ಮೊದಲ ಲೇಖಕಿಯೊಬ್ಬರ ಪ್ರಯತ್ನವಾಗಿರಬೇಕು. ಜೊತೆ ಅದೂ ಅವರ ಮೊದಮೊದಲ ಪ್ರಯತ್ನವಾಗಿರಬೇಕು.

ಈ ಭಾಷಾಶೈಲಿಯನ್ನು, ಅದರ ಸವಿಯನ್ನು ಬಹಳ ಹತ್ತಿರದಿಂದ ಉಂಡ ನನಗೆ ತಿಳಿದಿರುವಂತೆ, ಲೇಖಕಿ ಈ ಭಾಷೆಯನ್ನು ಕೇಳ್ಮೆಯಿಂದ ತಿಳಿದು ಪ್ರಯೋಗಿಸಿದ್ದಾರೆಯೇ ವಿನಃ ದೇವನೂರರಂತೆ, ಮೊರೆಯಾಲರಂತೆ ಅದನ್ನೇ ದಿನಬಳಕೆಯ ಆಡುನುಡಿಯಾಗಿ ರೂಢಿಸಿ-ಕೊಂಡಂತಿಲ್ಲ. ಹಾಗಾಗಿ ಎಲ್ಲೊಂದರಲ್ಲಿ ನಗರೀಕರಣದ ಛಾಪು, ಒಮ್ಮೊಮ್ಮೆ ಮಂಡ್ಯ ಶೈಲಿಯ ನೆರಳು ಇಲ್ಲೂ ಸುಳಿದು ಬಿಡುತ್ತದೆ. ಈ ಶೈಲಿಯನ್ನು ಆಡುಮಾತಾಗಿ ರೂಢಿಸಿಕೊಂಡು ಬರೆದಿದ್ದರೆ ವೇದಾ ಯಶಸ್ವಿಯಾಗುತ್ತಿದ್ದರು. ಈ ಶೈಲಿಗೆ ಈ ಶೈಲಿಯದೇ ಆದ ಸ್ವರೂಪವನ್ನು ಕೊಡುವ ಅನೇಕ ಭಾಷಿಕ ಅಂಶಗಳನ್ನು ಲೇಖಕಿ ಗಮನಿಸದೇ ಹೋಗಿರುವುದೂ: ಅಂಥವುಗಳ ನಿರ್ಬಳಕೆ ಅಥವಾ ಗೌಣ ಎನಿಸುವಷ್ಟರ ಮಟ್ಟಿನ ಬಳಕೆ: ನಿರೂಪಣೆಯ ಭಾಷೆಗೆ ಮಾಮೂಲು ಗ್ರಾಂಥಿಕ ಕನ್ನಡದ, ಸಂಭಾಷಣೆಗೆ ಗ್ರಾಮ್ಯಗನ್ನಡದ ಬಳಕೆ ಮಾಡಿರುವುದೂ ಕಾದಂಬರಿಯ ಯಶಸ್ಸಿನ ಹಾದಿಯಲ್ಲಿ ಅಡ್ಡಿಯಾದಂತಿವೆ.

ಮಹಿಳೆಯರಿಂದ ಸಾಧಾರಣವಾಗಿ ಮಹಿಳಾಪರ ವಿಚಾರಗಳು, ಮಹಿಳಾ ಕೇಂದ್ರಿತ ವಿಚಾರಗಳು, ಕುಟುಂಬಸಂಬಂಧೀ ಚಟುವಟಿಕೆಗಳಲ್ಲಿ ಸ್ತ್ರೀವಾದಿ ನೆಲೆಯ ಚಿಂತನ

ಚರ್ಚೆಗಳು ಹೆಚ್ಚಾಗಿ ನಡೆಯುತ್ತಿರುವ ಇಂದಿನ ಸಂದರ್ಭಗಳಲ್ಲಿ ವೇದಾ ಅವರು ತುಂಬಾ ಜನರಲ್ ಎನಿಸುವ, ಒಂದು ಹಳ್ಳಿಗಾಡಿನ ಚಿತ್ರ ಬಿಡಿಸಹೊರಟಿರುವುದು ಒಳ್ಳೆಯ ಸೂಚನೆ. ಸ್ತ್ರೀ-ಪುರುಷರಿಬ್ಬರ ನೋವು-ನಲಿವು, ಕಷ್ಟ-ಸುಖಗಳನ್ನು ಕಾದಂಬರಿಗಾರ್ತಿ ಸಮಾನ ಕಂಗಳಿಂದ ನೋಡಿರುವುದೇ ಕಾದಂಬರಿಗೆ ಹೊಸ ರೂಪ ಕೊಟ್ಟಿದೆ. ಕಾದಂಬರಿ ಗೆಲ್ಲುವುದೇ ಈ ಹಿನ್ನೆಲೆಯಲ್ಲಿ. ಸಾಮಾಜಿಕವಾಗಿ ನಡೆಯುವ ಈ ಶೋಷಣೆಯೊಂದನ್ನು ಇಲ್ಲಿ ಕಥಾವಸ್ತುವಾಗಿ ಇರಿಸಿಕೊಂಡಿದ್ದರೂ ಅದು ಒಬ್ಬ ವ್ಯಕ್ತಿ ಮತ್ತೊಬ್ಬ ವ್ಯಕ್ತಿಯನ್ನು ಶೋಷಿಸುವ ಹಂತದಲ್ಲಿ ನಿಲ್ಲದೆ, ಇಡೀ ಒಂದು ಸಮುದಾಯವೇ ಮತ್ತೊಂದು ಸಮುದಾಯವನ್ನು ಒಳಗೊಳ್ಳದಿರುವುದನ್ನು ನಿವೇದಿಸುವ ಭಿನ್ನ ವಿನ್ಯಾಸ ಇದಕ್ಕಿದೆ. ವಿದ್ಯಾವಂತ ಅಥವಾ ನಗರಪ್ರದೇಶದ ನಿವಾಸಿಗಳನ್ನು ಹಳ್ಳಿಯ, ಅವಿದ್ಯಾವಂತ ಸಮುದಾಯ ಹೊರತಳ್ಳುವ ನಂಬಲಾರದಂಥ ಅಚ್ಚರಿಯ ವಿಷಯ ಇಲ್ಲಿ ಕಾದಂಬರಿಯಾಗಿದೆ. ನಿಜ, ನಂಬಿಕೆಗೆ, ಊಹೆಗೆ ಸಿಗಲಾರದಾದರೂ, ವಾಸ್ತವವಾಗಿ ಇಂತಹ ಪ್ರಸಂಗಗಳು ಗ್ರಾಮೀಣ ಪ್ರದೇಶಗಳಲ್ಲಿ ಸ್ವಾಭಾವಿಕ, ಅಮಾಯಕವೆಂದುಕೊಳ್ಳುವ ಹಳ್ಳಿಗರ ಮಧ್ಯೆ ವಿದ್ಯಾವಂತರು ಅಮಾಯಕರಂತಾಗಿಬಿಡುವ ಅನೇಕ ಸಾಕ್ಷಿಗಳಿರುತ್ತವೆ.

ಅಂತಹ ಒಂದು ನಿದರ್ಶನದ ಕಥನವೇ 'ಜಮೀನು'. ವೇದಾ ಅವರು ಸೃಜನಶಕ್ತಿ ಇರುವ ಬರಹಗಾರ್ತಿ, ಗ್ರಾಹ್ಯ ಸಾಮರ್ಥ್ಯವಿರುವ ಅಧ್ಯಯನಕಾರ್ತಿ, ವಾಗ್ವೈಖರಿಯ ಬಲವಿರುವ ಅಧ್ಯಾಪಕಿ. ಹೀಗಾಗಿ ಸಾಹಿತ್ಯ/ಭಾಷೆಯನ್ನೇ ಹೊದ್ದು, ಉಂಡು, ಉಟ್ಟೂ ಇದ್ದಾರೆ. ಇದರ ಫಲವಾಗಿಯೇ ಸುಲಲಿತವಾಗಿ ಓದಿಸಿಕೊಂಡು ಹೋಗುವ ಗುಣ ಹೊಂದಿರುವ 'ಜಮೀನು', ಯಥೇಚ್ಛ ಗಾದೆ, ನಾಣ್ಣುಡಿ, ಹಳ್ಳಿಬೈಗುಳ, ಮಧ್ಯೆ ಮಧ್ಯೆ ಇಣುಕುವ ಹಾಸ್ಯ ಪ್ರಕರಣಗಳು ಅಥವಾ ನವಿರು ಹಾಸ್ಯದ ವಿಡಂಬನಾತ್ಮಕ ಹೇಳಿಕೆಗಳೂ ಸೇರಿ ಕಳೆಗೂಡಿದೆ.

ಇಷ್ಟಾದರೂ, ಇದನ್ನು, ಓದುವಾಗ ನನಗೆ ಒಂದು ಕಾದಂಬರಿಯನ್ನು ಓದಿದ ಅನುಭವವಾಗಲಿಲ್ಲ. ಕಾರಣ, ಒಂದು ಕಾದಂಬರಿ, ಒಂದು ಹೆಮ್ಮರದಂತೆ ಹಲವು ಲತೆಗಳನ್ನು ತನ್ನೊಡಲ ಮೇಲೆ ಬೆಳೆಸಿಕೊಂಡು ಬೆಳೆಯಬೇಕು. ನಾಲ್ಕು ಮೂಲೆಗೆ ಹಂಬುಗಳನ್ನು ನೆಟ್ಟ ಮಲ್ಲಿಗೆಯ ಹಂದರದಂತಲ್ಲ. ಈ ದೃಷ್ಟಿಯಿಂದ ನೋಡಿದಾಗ 'ಜಮೀನು' ಒಂದೇ ಒಡಲಿಗೆ ಸಂಬಂಧಿಸಿದ ಹಲವು ಲಲಿತಪ್ರಬಂಧಗಳ ಸಂಗ್ರಹದಂತಿದೆ. ಶ್ವಾನಪುರಾಣವಾಗಲೀ, ಆಳುಗಳ ಕಥೆಯಾಗಲೀ, ಇತರ, ಇತ್ಯಾದಿಗಳಾಗಲೀ ಕಥೆ ಬೆಳೆಯುವಾಗಲೇ ಅದರ ಮಧ್ಯೆಮಧ್ಯೆಯೇ ನುಸುಳಿ ಬೆಳೆಯಬೇಕಿತ್ತು. ಈಗ ಓದುಗ ಒಂದೇ ಕಥಾಒಡಲನ್ನು ಹತ್ತಾರು ಕವಲಲ್ಲಿ ಮತ್ತೆಮತ್ತೆ ಮೆಲುಕುಹಾಕಬೇಕು. ಉದಾಹರಣೆಗೆ ಶ್ವಾನಪುರಾಣ: "ಸ್ವತಃ ಶಿವಪ್ಪ, ದೇವಮ್ಮನವರೇ ಜಮೀನಿನಲ್ಲಿ ಇರಲು ಆರಂಭಿಸಿದಾಗ.... ನಾಯಿಯ ಆವಶ್ಯಕತೆ ಅವರಿಗೆ ಕಂಡುಬಂದಿತ್ತು" ಎನ್ನುವ ಫ್ಲ್ಯಾಶ್‌ಬ್ಯಾಕ್. ಬದಲಿಗೆ ಹಾಗೆ ಇರಲು ಆರಂಭಿಸಿದಾಗಲೇ ಮೊದಲ ನಾಯಿಯನ್ನು ತಂದು ನಿಲ್ಲಿಸಬಹುದಿತ್ತು. ಅದೇ ರೀತಿ ಆಳುಗಳು, ಬಸರೀಮರದ ಪ್ರಕರಣ, ರಾಧೀ ಸೂರ್ಯೋದಯಾಸ್ತ ಕಂಡದ್ದು ಎಲ್ಲವೂ ಕಥೆಯ ಮುಖ್ಯವಾಹಿನಿಗೇ ಸೇರಬಹುದಿತ್ತು. ಇಷ್ಟಾದರೂ, ಕಾದಂಬರಿ ಎನ್ನುವುದು ಹೀಗೇ ಇರಬೇಕು ಎನ್ನುವ ನಿರ್ದಿಷ್ಟ ನಿಯಮಗಳೇನಾದರೂ ಇದೆಯೇ ಎಂಬ ಪ್ರಶ್ನೆ ಉದ್ಭವಿಸಬಹುದು. ಸೃಜನಶೀಲ ನೆಲೆಯಲ್ಲಿ ಮೂಡುವ ಕಾದಂಬರಿಗೆ ನಿಯಮಗಳ ಚೌಕಟ್ಟು ಬೇಡ ಎನ್ನುವುದಾದರೆ 'ಜಮೀನು' ಕಾದಂಬರಿ ಎನಿಸಿಕೊಳ್ಳುತ್ತದೆ. ಅಥವಾ ಲಲಿತಪ್ರಬಂಧಗಳು ಹೀಗೆಯೇ ಬಿಡಿಬಿಡಿಯಾಗಿರುತ್ತವೆ ಎನ್ನುವುದಾದರೆ ಇದು ಪ್ರಬಂಧಗಳ ಸಂಕಲನವೇ–ಒಂದು ವ್ಯತ್ಯಾಸ–ಒಂದೇ ಕಥೆಯ ಒಡಲಿಗೆ ಸೇರಿಕೊಳ್ಳುವ ಪೂರಕ ಕವಲುಗಳು.

ಕಾದಂಬರಿಯ ಬಂಧ ಹೀಗಿದ್ದರೆ, ಕಥೆ ಹೇಗೆ ಮೂರ್ತಗೊಂಡಿದೆ ಎಂದು ನೋಡೋಣ. ಕಥೆ ಶಿವಪ್ಪ, ದೇವಮ್ಮನ ಸುತ್ತಲೇ ಸುತ್ತುತ್ತ ಮಧ್ಯೆ ಮಧ್ಯೆ, ಪೊಲೀಸ್ ಅಂದಾನಯ್ಯ, ಚಂದಪ್ಪ,

ಜಾಲಣ್ಣರನ್ನು ಬೆಸದುಕೊಳ್ಳುತ್ತವೆ. ಶಿವಪ್ಪ, ದೇವಮ್ಮನ ಬದುಕಿನ ಆಚೀಚಿನ ಸಂಗತಿಗಳನ್ನು, ಸುತ್ತಲಿನ ಪರಿಸರವನ್ನು ವಿವರಿಸುವಾಗ ಅನೇಕ ಪಾತ್ರಗಳು ತೂರಿಬರುತ್ತವಾದರೂ, ಯಾವುವೂ ಗಟ್ಟಿ ನೆಲೆಯಲ್ಲಿ ಬೆಳೆದು ನಿಲ್ಲುವ ಪಾತ್ರಗಳಾಗಿ ತೋರಿಬರುವುದಿಲ್ಲ. ಇದಕ್ಕೆ ಲೇಖಕಿ ಜವಾಬ್ದಾರಿಯಲ್ಲ. ಕಥೆಯ ವ್ಯಾಪ್ತಿ, ಇತಿಮಿತಿಗಳೇ ಹಾಗಿವೆ. ಒಬ್ಬ ವಿದ್ಯಾವಂತ ಯುವಕನ 'ಜಮೀನು ಮಾಡಬೇಕೆ'ಂಬ ಮಹದಾಸೆಯೊಂದೇ ಕಥೆಯ ಕೇಂದ್ರವಾಗುವುದರಿಂದ ಇಲ್ಲಿ ಅವನೊಬ್ಬನೇ ಮುಖ್ಯ ಪಾತ್ರವಾಗುತ್ತಾನೆ, ಹೆಚ್ಚೆಂದರೆ ಅವನ ಹೆಂಡತಿ ಸ್ಪಷ್ಟ ಪಾತ್ರವಾಗುತ್ತಾಳೆ. ವಿಲನ್ ಕೂಡ ಸಪ್ಪೆ.

'ಜಮೀನಿ'ನ ನಾಯಕ ಶಿವಪ್ಪ ವಿದ್ಯಾವಂತ, ಉದ್ಯೋಗಿ, ಮೈಸೂರಿನಂತಹ ಮುಂದುವರಿದ ನಗರದಲ್ಲೇ ಬೆಳೆದ, ಸಾಕಷ್ಟು ಪ್ರಭಾವಶಾಲಿಯೂ ಆದ ವ್ಯಕ್ತಿ. ಅವನ ಹೆಂಡತಿ ದೇವಮ್ಮನೂ ಧೈರ್ಯಗಾತಿ, ಜೊತೆಗೆ ಹಳ್ಳಿಯ ಬದುಕನ್ನು ಕಂಡ ಹೆಣ್ಣುಮಗಳು. ಇವರಿಬ್ಬರ ಕಾಂಬಿನೇಷನ್‌ನಲ್ಲಿ ಜಮೀನು ಮಾಡುವ ಅವರ ಕಾರ್ಯಾಚರಣೆ ಯಶಸ್ವಿಯೂ ಆಗಬೇಕಿತ್ತು. ಸ್ವಲ್ಪ ಮಟ್ಟಿಗೆ ಆಗುತ್ತಲೂ ಇರುತ್ತದೆ. ಈ ಹಂತದಲ್ಲಿ ಛಲಬಿಡದ ನಾಯಕ ನಾಯಕಿಯರ ಕಥೆ ನಿರೀಕ್ಷೆಯಂತೆಯೇ ಸಾಗುತ್ತದೆ. ಆದರೆ ಕ್ಲೈಮ್ಯಾಕ್ಸ್‌ನಲ್ಲಿ ಇನ್ನೇನು ಜಯದ ಗರಿಷ್ಠ ಮೆಟ್ಟಿಲಲ್ಲಿ ಬಂದು ನಿಂತರು ಎಂದು ಓದುಗ ಉಸಿರ್ಗರೆಯುವ ಹೊತ್ತಿಗೆ ಜಾರುಬಂಡೆಯಿಂದ ಜರ್ರನೆ ಜಾರಿದಂತೆ ಪತಿ-ಪತ್ನಿಯರಿಬ್ಬರೂ ತಣ್ಣನೆ ಜಮೀನು ಮಾರಿ ಮೈಸೂರು ಸೇರುತ್ತಾರೆ. 'ಡೋಂಟ್ ಕ್ವಿಟ್' (Don't quit) ಎಂಬ ಒಂದು ಅನಾನಿಮಸ್ (ಅನಾಮಿಕ) ಕವನದ ಸಾಲು ನೆನಪಾಗುತ್ತಿದೆ : *ಹಲವು ಬಾರಿ ದೊರೆವ ವೇಳೆ / ಅವಗೆ ಜಯದ ಬಟ್ಟಲು // ಹೋರಾಟವ ಬಿಟ್ಟು ಬರುವ / ಬಯಸದೆ ಗುರಿ ಮುಟ್ಟಲು //* (ಅನು : ಸೋಲಬೇಡ / ಟಿ. ಸಿ. ಪೂರ್ಣಿಮಾ) ಇಂತಹ ಸೋಲು ಯಾವ ಸಾರ್ಥಕತೆಯ ಸಂಕೇತ ? ಇಷ್ಟಕ್ಕೆ ಅಷ್ಟೆಲ್ಲಾ ರಂಪಾಟ ಬೇಕಿತ್ತ ?– ಎನಿಸದಿರಲಾರದು. ಹಾಗಾಗಿ ಕಾದಂಬರಿ ವಿಶೇಷ ತಿರುವುಗಳಿಲ್ಲದೆ, ವಿಶೇಷವಾದದ್ದನ್ನೇನೂ ಹೇಳದೇಹೋಗುತ್ತದೆ.

ಇನ್ನು ಪಾತ್ರಗಳ ಪೈಕಿ ಶಿವಪ್ಪ, ದೇವಮ್ಮರೇ ಮುಖ್ಯ. ನಾಯಕ ಶಿವಪ್ಪ ವಿದ್ಯಾವಂತನಾಗಿದ್ದು, ಪೊಲೀಸು, ಲಾಯರು, ಸರಕಾರದ ಮಾಮಲೆಗಳನ್ನು ತಿಳಿದವನಾಗಿದ್ದು, ಉದ್ಯೋಗದಲ್ಲಿ ನಾಲ್ಕು ಕಾಸನ್ನೂ ಗಳಿಸುತ್ತಿದ್ದೂ, ಇದ್ಯಾವುದೂ ಇರದ ಹಳ್ಳಿಗರನ್ನು, ತನ್ನಣ್ಣ-ಅತ್ತಿಗೆಯರನ್ನು, ಚಿಕ್ಕಮ್ಮ ಮತ್ತವಳ ಕುಟುಂಬವನ್ನು, ಕಡೆಗೆ ನೆರೆಯ ಅಂದಾನಯ್ಯನನ್ನು ಎದುರಿಸುವ, ಸಮಜಾಯಿಷಿಸುವ, ಬುದ್ಧಿಮತ್ತೆಯಿಂದ ನಿಯಂತ್ರಿಸುವ ಅಥವಾ ತೋಳ್ಬಲದಿಂದ ಹೆದರಿಸುವ ಯಾವ ಪ್ರಯತ್ನವನ್ನಾದರೂ ಮಾಡಿ ಜಮೀನು ಉಳಿಸಿಕೊಳ್ಳದೇ ಹೋಗುವುದು ಅಚ್ಚರಿ ಮೂಡಿಸದಿರದು.

ದುರ್ಬಲವೆನಿಸುವ ನಾಯಕನ ಪಾತ್ರಕ್ಕಿಂತ ನಾಯಕಿ ಹೆಚ್ಚು ಶಕ್ತಳಂತೆ ಕಾಣುತ್ತಾಳೆ. ಅವಳ ತಾಳ್ಮೆ, ಜಾಣ್ಮೆ, ಗಂಡನಿಗೆ ಹೆಗಲೆಣೆಯಾಗಿ ನಿಲ್ಲುವ ಸ್ಥಿರತೆ, ಸ್ಥೈರ್ಯ ಮೆಚ್ಚತಕ್ಕ ಅಂಶಗಳು. ಅತ್ಯಂತ ಸಮರ್ಥವಾಗಿ ಮೂಡಿ ಬಂದಿರುವ ಪಾತ್ರವೇ ದೇವಮ್ಮನದು. ಅದರಲ್ಲೂ ಅವಳು, ಆಳು ಕೈಕೊಟ್ಟಾಗಲೂ ಹುಳು ಮೇಯಿಸಿ ಯಶಸ್ವಿಯಾದಾಗಲಂತೂ ಪಾತ್ರದ ಗಾತ್ರ ದಿಢೀರನೆ ಬೆಳೆದುಬಿಡುತ್ತದೆ. ಅದೇ ಮುಂದುವರಿದು ದಂಪತಿಗಳು ಇನ್ನೇನನ್ನೋ ಸಾಧಿಸಿಬಿಡುತ್ತಾರೆ, ಈ ಸಾಧನೆಗಾಗಿ ಏನೇನನ್ನೋ ತ್ಯಾಗ ಮಾಡಿಬಿಡುತ್ತಾರೆ ಎಂಬ ನಂಬಿಕೆ ಹುಟ್ಟಿಸಿ, 'ಸಾವಿನ ಬರೀ ನರಳಿಗಂಜಿ' ಭೂಮಿಯನ್ನೇ ಅಥವಾ ಅಂತಹ ತಮ್ಮ ಛಲವನ್ನೇ ತ್ಯಜಿಸಿಬಿಡುವುದು ಅಷ್ಟು ಒಳ್ಳೆಯ ತಿರುವೆ ? ಇವರಿಗೆ ಈವರೆಗೆ ಇಷ್ಟೊಂದು ಛಲವಿತ್ತೇ ?– ಎಂದು ಅಚ್ಚರಿಪಡುವಂತೆ ಮಾಡುತ್ತದೆ.

ಈ ಹೊತ್ತಿಗೆ ಬರೀ ಗಂಡಹೆಂಡಿರಿಬ್ಬರೇ ಅಲ್ಲದೆ ಮೀಸೆ ಮೂಡುತ್ತಿದ್ದ ಮಗನ ಬೆಂಬಲವನ್ನೂ ಅವರಿಗೆ ದೊರಕಿಸಬಹುದಿತ್ತು. ಎಂಬಂಶವನ್ನು ಲೇಖಕಿ ಮರೆತಂತಿವೆ. ಹೆಣ್ಣುಮಕ್ಕಳಾದ ರಾಧ, ಜುಮ್ಮಿ, ಸಹನಕ್ಕನ ಪಾತ್ರಗಳನ್ನು. ಆಳುಗಳ ಪಾತ್ರಗಳನ್ನು ಬಿಡಿಸಿ ಹೇಳುವಂತೆ,

ವೈಧವೀಕರಿಸಿ ಅಥವಾ ದೊಡ್ಡದು ಮಾಡಿ ಹೇಳುವಂತೆ ಮಗನ ಪಾತ್ರವನ್ನು ಗಮನಿಸದೇ ಹೋಗಿರುವುದು, ಬದಲಿಗೆ ವಿರೋಧಿಗಳ ಗಂಡುಮಕ್ಕಳ ಚಿತ್ರಗಳನ್ನು ಎದ್ದು ಕಾಣುವಂತೆ ಚಿತ್ರಿಸಿರುವುದು ಸರಿಯೆ ? 'ತಲೆಮಾರಿನ ಕಥೆ'ಯನ್ನು ಹೇಳುತ್ತಾ ಮಾದಪ್ಪನ ನಾಲ್ವರು ಹೆಣ್ಣುಮಕ್ಕಳ ವಿಷಯದಲ್ಲಿ ಅಕ್ಕ ಯಾರು, ತಂಗಿ ಯಾರು ಎನ್ನುವ ಬಗ್ಗೆಯೇ ಲೇಖಿಕೆಗೆ ಅಲ್ಲಲ್ಲಿ ಕಥೆ ಹಿಡಿತಕ್ಕೆ ಸಿಕ್ಕದೇ ಹೋಗಿದೆ (ಪು. ೧೪, ೨೨, ೨೩).

ಈ ಕೊರತೆಗಳ ನಡುವೆಯೂ, 'ಜಮೀನು' ಉತ್ತಮ ಪ್ರಯತ್ನ ಎನ್ನುವುದಕ್ಕೆ ಅದು ಓದಿಸಿಕೊಂಡು ಹೋಗುವ ರೀತಿ, ಮಹಿಳೆಯರು ಅಷ್ಟಾಗಿ ಮುಟ್ಟಲಿಚ್ಛಿಸದ ಕಥಾಹಂದರ ಕಾರಣ.

● ▼

ಡಾ. ಟಿ. ಸಿ. ಪೂರ್ಣಿಮಾ, ನಂ. ೨೪೪, ೨೩ ನೇ ಬ್ಲಾಕ್, ಸಿಪಿಡಬ್ಲ್ಯೂಡಿ ಕಾಲನಿ, ಕೋರಮಂಗಲ ೨ ನೇ ಬ್ಲಾಕ್, ಬೆಂಗಳೂರು - ೫೬೦ ೦೩೪ ✆ : ೦೮೦ - ೫೫೩ ೫೮೭೯

ಎರಡು ಗಜಲ್‌ಗಳು

ಕವಿತೆ - ೮, ೯

ಎಚ್. ಎಸ್. ಮುಕ್ತಾಯಕ್ಕ

ಗಜಲ್ - ೧

ಬಂದೂಕು ಸೃಷ್ಟಿಸುತ್ತದೆ ಎಲ್ಲೆಲ್ಲು ಭೀಕರ ರಾಗವನ್ನು
ಜಗದ ಹೂಬನದಲ್ಲಿ ಹಬ್ಬಿಸುತ್ತದೆ ಬೆಂಕಿಯ ಜ್ವಾಲೆಯನ್ನು
ಸೈನಿಕನ ಪ್ರಿಯೆಯ ಹೃದಯದ ತುಂಬ ಏನೋ ಅವ್ಯಕ್ತ ದುಗುಡ
ವೈಧವ್ಯದ ವಿರೂಪ ಅಲ್ಲಿ ಮಾಡುತ್ತದೆ ಅಟ್ಟಹಾಸವನ್ನು
ದಿಗಿಲುಗೊಂಡಿವೆ ದಿಕ್ಕುಗಳು ಕಳವಳಗೊಂಡಿವೆ ಚುಕ್ಕೆ ಚಂದ್ರಮ
ಕಾಣುವೆವು ಸಾವಿನ ಒಡಲಲ್ಲಿ ನರ್ತಿಸುತ್ತಿರುವ ಬದುಕನ್ನು
ದೇವರೇ ನಾಚಿರುವನು ತಾನೆ ಸೃಷ್ಟಿಸಿದಂಥ ಲೋಕ ಕಂಡು
ಎಳೆಯ ಜೀವಗಳ ಹೊಂಗನಸು ಕೇಳುತ್ತಿವೆ ಹೊಸ ಬಾಳನ್ನು.

ಗಜಲ್ - ೨

ಒಲವೇ ನಮ್ಮ ಬದುಕೆಂಬ ಕವಿ ಮಾತು ಇಲ್ಲಿ ನಿಜವಾಗಲಿಲ್ಲ
ಮನುಕುಲವೆಲ್ಲ ಒಂದೆಂಬ ಸವಿಮಾತು ಕೂಡಾ ಉಳಿಯಲಿಲ್ಲ
ಜಗದ ಹೂಬನಕೆ ಏನಾಗಿದೆಯೋ ಇಂದು ಹೊತ್ತಿ ಉರಿಯುತ್ತಿದೆ
ಖುಷಿಯ ಸಿಳ್ಳಿನಲ್ಲು ನಗುವ ಮುಖಗಳಲ್ಲು ಸಂತೋಷವಿಲ್ಲ
ನಾಯಕರ ಕೈಯಲ್ಲಿ ದೇವರು ಧರ್ಮದ ವ್ಯಾಪಾರ ನಡೆದಿದೆ
ಸತ್ಯವೆಲ್ಲೋ ಅಡಗಿದೆ ಬೀಸುವ ಗಾಳಿಯಲಿ ಚೈತನ್ಯವಿಲ್ಲ
ತಂಪಿರುಳಿನಲ್ಲು ಬೆಳೆವ ಹಸಿರಿನಲ್ಲು ಚಿಮ್ಮುವ ಹಾಲಾಹಲ
ಮುಂಗುರುಳಲಿ ಮೋಹಕತೆ ಕೆನ್ನೆಯಲಿ ಅರುಣರಾಗದ ಬೆಡಗಿಲ್ಲ
ಯಾರಿಗೂ ಪ್ರೇಮ ಪ್ರೀತಿ ಬೇಡ ವಿಶ್ವಾಸದ ಗೂಡವೆಯೂ ಬೇಡ
ಹಣವೆ ಎಲ್ಲವಾಗಿ ಪ್ರತಿ ಉಸಿರಿನಲ್ಲು ತಾಜಾತನವಿಲ್ಲ.

● ▼

ಎಚ್. ಎಸ್. ಮುಕ್ತಾಯಕ್ಕ, ಸಿದ್ಧಾರ್ಥ, ಆರಫಾದನಗರ, ರಾಯಚೂರು - ೫೮೪ ೧೦೧

'ಸಖೀಗೀತ' : ಮಾತು-ಮೌನಗಳ ಮಧ್ಯೆ ಜರುಗಿರುವ ಉಪಕ್ರಮ

ಗುಂಡಣ್ಣ ಕಲಬುರ್ಗಿ

ಒಂದು ಅ-ಪರ ದೃಷ್ಟಿ

ಮಾತು-ಮೌನಗಳ ಮಧ್ಯದೊಳಗಿನ ಹುಡುಕಾಟ ನಡೆದಿರುವುದು ಕವಿ ಬೇಂದ್ರೆಯವರ ರಹಸ್ಯವಾದ ದಾಂಪತ್ಯ ಕ್ಷಣಗಳನ್ನು ಕಾಣಿಸುವ 'ಸಖೀಗೀತ' ಎಂಬ ನೀಳ್ಗವಿತೆಯಲ್ಲಿ. ಬೇಂದ್ರೆಯವರ ಈ 'ಸಖ್ಯಯೋಗ' ಭಾರತೀಯ ಸೌಂದರ್ಯಪ್ರಜ್ಞೆಯನ್ನು ಸಾಬೀತುಪಡಿಸುವ ಒಂದು ಶ್ರೇಷ್ಠ ರಸಗ್ರಹಣಸಂಗತಿ. 'ಸಖ್ಯ' ವನ್ನು ಸಕಲ ಸತ್ಯ - ಮಿಥ್ಯೆಗಳ ಮುಂದೆ ಅದ್ಭುತವಾಗಿ ಅಭಿವ್ಯಕ್ತಿಸಿ ಪ್ರಚುರಪಡಿಸುವ ನೀತಿಯನ್ನು ಬೇಂದ್ರೆಯವರು ಕಲಿತಿದ್ದು, ಪ್ರೇರಣೆಗೆ ಒಳಗಾದದ್ದು ಕಾಳಿದಾಸನಿಂದ ಎನ್ನುವುದನ್ನು ಕೆ.ಡಿ.ಕುರ್ತಕೋಟಿಯವರು ಗುರುತಿಸಿದ್ದಾರೆ. ಕಾಳಿದಾಸನ 'ರಘುವಂಶ'. 'ಅಭಿಜ್ಞಾನಶಾಕುಂತಲ' ಗಳ ನೆನಪು ಸರ್ವಕಾಲಕ್ಕೂ ಕಾಡುವುದು ಅದರ ನಿರಂತರ ಪರಿಣಾಮ ಮತ್ತು ಕಲಾಕೃತಿಯ ಚಿತ್ರಕಶಕ್ತಿಯಿಂದ. ಇಂಥ ಭಾರತೀಯ ಮನಸ್ಸಿನ, 'ಸಖ್ಯ' ಕಲ್ಪನೆಯನ್ನು ನಾವು ಸಾವಿರ ವರ್ಷಗಳ ನಂತರ ಎದುರುಗೊಳ್ಳುವುದು ಆಕಸ್ಮಿಕವಷ್ಟೇ ಅಲ್ಲ, ವಿಸ್ಮಯಕಾರಿಯಾದದ್ದು. ಬೇಂದ್ರೆಯವರು 'ವರಕವಿ' ಎಂದು ಕರೆಯಿಸಿಕೊಳ್ಳುವುದು ಇಂಥ ಕಾವ್ಯಸತ್ಯಗಳಿಂದಲೇ.

ಬೇಂದ್ರೆಯವರ 'ಸಖೀಗೀತ' ದ ಅನೇಕ ವೈವಿಧ್ಯಪೂರ್ಣವಾದ ಪ್ರಸಂಗಗಳಲ್ಲಿ ಈ 'ಮಾತು ಮತ್ತು ಮೌನ' ದ ಉಪಕ್ರಮ ಅತ್ಯಂತ ಕುತೂಹಲಕಾರಿ ಬೆಳವಣಿಗೆಗಳಲ್ಲೊಂದು. ಈ ಸಂಗತಿಯ ದೃಶ್ಯಕಲ್ಪನೆ ಎಷ್ಟು ಕುತೂಹಲಕಾರಿಯೆಂದರೆ ನಮ್ಮನ್ನು ಮತ್ತೆ ಮತ್ತೆ ಓದಿಸಿಕೊಳ್ಳಲು, ಹಾಡಿಕೊಳ್ಳಲು, ಧೇನಿಸಿಕೊಳ್ಳಲು ಒಂದು 'ದೂರ' ವನ್ನು ಬಯಸಿ ಆ ಕುರಿತು ಸೂಕ್ಷ್ಮ ಸಂವೇದನೆಗಳನ್ನು ಶೋಧಿಸಲು ಪ್ರೇರೇಪಿಸುತ್ತದೆ. ಈ ಪ್ರೇರಣೆ ಮತ್ತು ಓದಿನ ಕಾರಣ ಒಂದು ಅನುಭವವನ್ನು 'ಹಳಸದ ವಿಷಯ' ವನ್ನಾಗಿ ಕಟ್ಟಿಕೊಡುವುದು ಇಲ್ಲಿನ ಆಶಯ. ಕೀರ್ತಿನಾಥ ಕುರ್ತಕೋಟಿಯವರು 'ಸಖೀಗೀತ' ದ ಕುರಿತು ಚರ್ಚಿಸಿದ್ದಲ್ಲದೆ, 'ಮಾತು ಮತ್ತು ಮೌನ' ವೆಂಬ ಕಿರುಲೇಖನದಲ್ಲಿಯೂ ಮೇಲೆ ಎತ್ತಿಕೊಂಡ ಅನುಭವಧಾರೆಯನ್ನು ಅವಲೋಕಿಸಿದ್ದಾರೆ. ಅವರ ಲೇಖನವನ್ನು ಓದಿಯೂ ಮತ್ತೆ ಚರ್ಚಿಸಬೇಕಾದ ಈ ತುರ್ತು ಒದಗಿದ್ದರಲ್ಲಿ ಅನಿವಾರ್ಯತೆಯ ಅರ್ಥಗ್ರಹಿಕೆಯ ವ್ಯತ್ಯಾಸ ಇದ್ದೇ ಇದೆ. ಅಲ್ಲದೇ, ಬೇಂದ್ರೆಯವರ 'ಮೌನ ಮತ್ತು ಮಾತು' ದ ದೃಶ್ಯವನ್ನು ಕಾಣಿಸುವ ಎಲ್ಲ ಪದ್ಯಗಳನ್ನು ದಾಖಲಿಸಿದ ಚರ್ಚೆಯಿಲ್ಲ, ಒಂದು. ನೇರವಾದ ವಸ್ತುವಿನ ವಿಶ್ಲೇಷಣೆಯ ಕೇಂದ್ರಸೂತ್ರ ಸಂಕೀರ್ಣವಾಗಿ ಕೈ ಜಾರಿರುವ ಸತ್ಯ ಇನ್ನೊಂದು: ಹೀಗೆ ಇನ್ನೂ ಅನೇಕ ಕಾರಣಗಳನ್ನು ನೀಡಬಹುದು. ಇದಷ್ಟೇ ಕಾರಣವಲ್ಲ –ಕಾವ್ಯದ ಓದು ಅನ್ನುವುದು: ಅರ್ಥೈಸುವ ರೀತಿ ಅನ್ನುವುದು ಅದು ವಿಭಿನ್ನ ನೆಲೆಗಳಿಂದ ಕೂಡಿರಬೇಕೆನ್ನುವುದು.

'ವಾಗೀಂದ್ರ-ಜಾಲದ ಮಾಲೆಮಾಲೆಯ ಬೀಸಿ / ಸಪ್ತ-ಸ್ವರ್ಗದ ಶಿಖರವನು ಮುಟ್ಟಿದ್ದೆ
ನನ್ನ ಪಾಲಿಗೆ ಮಾತ್ರ ಹೇ ಪ್ರೇಮದೇವತೆ ! / ಮೌನಮುದ್ರೆಯನಲ್ಲಿ ನೀ ತೊಟ್ಟಿದ್ದೆ'
'ಅಪರಂಪಾರದ ಪಾರವಾರವು ಕೂಡ / ಎದೆಯ ತೆರೆತೆರೆ ತೆರೆದು ಹಾರುವುದು
ಎಷ್ಟಾಳವಿದ್ದರು ಗಂಭೀರ ಕಾಸಾರ / ಸೂರ್ಯಕಿರಣಕೆ ತಳ ತೋರುವುದು.'

'ಒಟ್ಟು ಕಾವ್ಯವೇ ಸಖ್ಯದ ಮಾತು-ಮೌನಗಳ ಗೀತ' ಈ ಸಂದರ್ಭವನ್ನು ಚರ್ಚೆಗೆತ್ತಿಕೊಂಡಾಗ ಪ್ರಥಮವಾಗಿ ಅನಿಸುವ ತಿಳಿವಳಿಕೆ. ಇಷ್ಟಿದ್ದರೂ ಯಾಕೆ ಈ ಸಂದರ್ಭವನ್ನು ಸೀಳುವ ಪ್ರಶ್ನೆ –ಎಂದು ಕೇಳುವ ತಾರ್ಕಿಕತೆಗೆ ಅಖಂಡ ಸಂವೇದನೆಗಳ ದಾಳಿಗಳನ್ನು ಕಟ್ಟಿಹಾಕುವ ಮಹಾ ಕೋಟೆಯಾದರೆ 'ಮಾತು-ಮೌನ' ಗಳ ತಳಿರತಂತು ಕೋಟೆಯ ಹೃದಯಭಾಗವಾದ 'ಚಿತ್ರಕರ ಚಾವಡಿ'. 'ಚಾವಡಿ' ಎಂಬ ಮಾತನ್ನು ಸಾಮಾನ್ಯೀಕರಿಸುವ ನೋಟವಲ್ಲ. ಗೌಪ್ಯವಾಗಿ, ರಹಸ್ಯವಾಗಿ

ತುಳಿಯುವ ಎರಡು ಹೃದಯಗಳ ತೀರ ಸಂವಾದವೆಂಬ ಚಿತ್ರಕ ದೃಷ್ಟಿ. ಕುರ್ತಕೋಟಿಯವರ ಗ್ರಹಿಕೆಯಲ್ಲಿ ಮಾತು-ಮೌನಗಳ ಈ ಸಂಬಂಧ 'ಸಖೀಗೀತ'ದ ಕೇಂದ್ರ ಪ್ರತಿಮೆಯಾಗುತ್ತದೆ.

ಮೇಲೆ ಲಕ್ಷ್ಯವಾಗಿಸಿದ ಪದ್ಯಗಳು 'ಮಾತು-ಮೌನಗಳ ಮಧ್ಯೆ' ಪ್ರಸ್ತಾಪಿಸುವ ಸನ್ನಿವೇಶಕ್ಕೆ ಬೆಳಕಿನ ಕಿರಣಗಳಾಗಿ ಉರಿಯುತ್ತವೆ. ಹೀಗೆ ಹೊಳೆಯುವ ಕಿರಣಗಳಿಗೆ ಪೂರಕವಾಗಿ ನಿಲ್ಲುವ ಕಾವ್ಯ ಕೋಟೆಯ ಮೆಲುದನಿಯ ಪಿಸುಮಾತುಗಳು, ಸತ್ಯದ ಮೇಲೆ ಸವಾರಿ ಮಾಡುವ ಲೋಕಸತ್ಯಗಳೂ ಹೌದು. ಎಂದರೆ ಕಾವ್ಯಸತ್ಯಗಳನ್ನು ಲೋಕಸತ್ಯವಾಗಿಸುವ ಉದ್ದೇಶ ಹೊತ್ತ ಹಂಬಲವಲ್ಲ. ಈ ಸದವಕಾಶ ಜರುಗುವುದು ಅನಿವಾರ್ಯವಾದ ಜೀವನಾನುಭವ ಕಾವ್ಯಾನುಭವವಾಗಿ ಮಥಿಸುವ ಒತ್ತಡದಲ್ಲಿ !

'ಪಟ್ಟ ಪಾಡೆಲ್ಲವು ಹುಟ್ಟು ಹಾಡಾಗುತ'

'ಸಪ್ಪೆ ಬಾಳುವೆಗಿಂತ ಉಪ್ಪು ನೀರೂ ಲೇಸು'

'ನೆಲೆ ತಪ್ಪಿದ ಹಕ್ಕಿ ಅಲೆವಂತೆ ಮುಗಿಲಲಿ / ಹತ್ತು ದಿಕ್ಕಿಗೆ ನಾನು ಹಾರಾಡಿದೆ'

'ಸಿಟ್ಟೆಷ್ಟೊ ಸೆಡವೆಷ್ಟೊ ತಿಳಿದೆಷ್ಟೊ ತಿಳಿಯದೆ / ತಪ್ಪು ಆಗುವವೆಷ್ಟೊ ದಿನಬಳಕೆಗೆ'

'ಬಾಳಿನ ಬೆಂಕಿಗೆ ಮೈಬೆಂದು ಮನ ನೊಂದು'

'ಜನಮಕು ಮರಣಕು ಏಕಸೂತ್ರ ಇರುವದ / ಕಂಡಾಗ ಇತಿಮಿತಿಯಾಯ್ತೆನಗೆ'

'ಹೆಣ್ಣು ಗಂಡಿಗೆ ಚೆಲುವು, ಗಂಡು ಹೆಣ್ಣಿಗೆ ಒಲವು'

'ಸೌಂದರ್ಯವೆಂಬುದು ಕಣ್ಣಿನ ತುತ್ತಲ್ಲ / ಕಣ್ಣಿಗು ಕಣ್ಣಾಗಿ ಒಳಗಿಹುದು'

–ಹೀಗೆ ಕವಿ ಮರ್ಮದ ಕುರಿತು ಮಾತಾಡುತ್ತ, ಮರ್ಮಕೋಟೆಯ ಬಾಗಿಲನ್ನು ತೆರೆಯುತ್ತಾನೆ. ಆ ಕೋಟೆ ಹೀಗೆ ತೆರೆಯುತ್ತದೆ:

'ನನ್ನ ಪಾಲಿಗೆ ಮಾತ್ರ ಹೇ ಪ್ರೇಮದೇವತೆ! / ಮೌನಮುದ್ರೆಯನಲ್ಲ ನೀ ತೊಟ್ಟಿದ್ದೆ'

ಯಾವುದು ಸತ್ಯ - ಯಾವುದು ಮಿಥ್ಯೆ ಎಂಬುದರ ಅರಿವು ಮೂಡಿಸಿಕೊಂಡ 'ಸಖೀಗೀತ'ದ ನಾಯಕನಿಗೆ ಸರ್ವಸ್ವವೇ ಪ್ರಾಣಕಾಂತೆಯಾದ ಸಖಿ. ಅವಳಿಲ್ಲದೇ ಬದುಕಿಲ್ಲ, ಬೆಳಕಿಗೆ ಸೌಂದರ್ಯವಿಲ್ಲ. ಈ ಸೌಂದರ್ಯವೆಂಬುದು ಕಣ್ಣಿನ ತುತ್ತೂ ಅಲ್ಲ. ಎಲ್ಲವನ್ನೂ ನೋಡುತ್ತಲೇ ಸಹಿಸುವುದು, ಸಹಿಸುತ್ತಲೇ ಎಲ್ಲವನ್ನು ಕಾಣುವುದು: ಮಾತಿಗೆ ಮಾತು ಸೇರಿಸಿ ಹೊಗೆಯೆಂಬ ಧಗೆಯ ಹರಿಸುವ ನಿಲುವಿಗೆ ಪಲ್ಲವಿ ಚೆಲ್ಲದೆ, 'ಮೌನಮುದ್ರೆ'ಗೆ ಒಲಿದ ಮನದನ್ನೆಯ ರೀತಿಯನ್ನು ಚಿತ್ರೀಕರಿಸುವ ನೀತಿ ಕಾವ್ಯನಾಯಕ ಕಂಡುಕೊಂಡ ನೈಜ ತಿಳಿವು –ಧರ್ಮಸತ್ಯ.

' ಸೂರ್ಯಕಿರಣಕೆ ತಳ ತೋರುವುದು '

ಒಡಲ ತುಂಬಿದ ಹೆಪ್ಪೊತ್ತಿಗೆ ಎಷ್ಟು ರಹಸ್ಯವನ್ನು ಕಾಪಾಡಿಕೊಂಡರೂ, ಎಷ್ಟು ನೋವಿನ ಮೂಲಗಳನ್ನು ಬಚ್ಚಿಟ್ಟುಕೊಂಡರೂ ಬೆಳಕಿನ ಕಿರಣಗಳ ಶಕ್ತಿಗೆ ಮುಕ್ತವಾಗಿ ಬಯಲುಗೊಳಿಸುವ ಎದೆಯಾಂತರಂಗದ ದರ್ಶನ ಕುತೂಹಲಕಾರಿಯಾದುದೆಂದು, ಇದು ಪರಸ್ಪರರಲ್ಲಿಯ ಅದಮ್ಯ ಅಂತರ್ಗತ ಸ್ಥಿತಿ ಎಂದು ಕವಿಯ ವ್ಯಾಖ್ಯಾನ.

'ಕೋಟಿ ಕ್ರೋಶಗಳಾಚೆಯಿಂದ ಗಗನೋದರದಿ / ಚಿಕ್ಕೆ ಹಾಸ್ಯದ ಕಿರಣ ಬೀರುವುದು
ದುರ್ಭೇದ್ಯವೆನಿಸುವ ಮೌನ-ದುರ್ಗಕೆ ಮಾರ್ಗ / ತೋರದು. ಎಂತಾರೆ ಸೇರುವುದು ?'

ಮೌನದ ಶಕ್ತಿ ಮಾತಿಗಿಲ್ಲ ನಿಜ– ಮಾತಿಲ್ಲದೆಯೂ ಮೌನಕ್ಕೆ ದಾರಿಯಿಲ್ಲ: ಇವುಗಳೆರಡರಲ್ಲಿ ಸಾಮೀಪ್ಯ, ಸಂಬಂಧ ಸಂಯೋಗವಿಲ್ಲದೆ ಬೆಳಕು ಮೂಡುವುದಿಲ್ಲವೆನ್ನುವ ಪ್ರಶ್ನೆ ಉದ್ಭವವಾದಾಗ– 'ಮೌನ-ದುರ್ಗಕೆ ಮಾರ್ಗ ತೋರದು. ಎಂತಾರೆ ಸೇರುವುದು ?' ಕವಿ ತಾನು ಏಕಾಂತಗೊಳ್ಳುವ ಸ್ಥಿತಿಗೆ, ಕಷ್ಟ ಕೋಟಲೆಗಳೇ ಎದುರುಗೊಂಡಾಗ ಒಂದಿಷ್ಟು ಬಿಡುಗಡೆಗೊಂಡು ಮೌನ ಸ್ವೀಕರಿಸುವ ದಾರಿಗುಂಟ ನಡೆಯುತ್ತಿರುವಾಗ, ಕ್ರಮಿಸುವ ದಾರಿ

ಏಕತಾನಗೊಂಡಾಗ, ಹಾಗೂ ಮಾತಿನ ಮಹತ್ವವನ್ನು, ಅನಿವಾರ್ಯವನ್ನು ಅರಿವಿನ ಮೂಲಕ ಮತ್ತೆ ದರ್ಶಿಸಿಕೊಂಡಾಗ ಅದೇ ಕವಿ ಹೀಗೆ ಆಶ್ಚರ್ಯಪಡಿಸುವ ಪಿಸುಮಾತುಗಳು ಎಷ್ಟೊಂದು ಸೋಜಿಗ?

'ಮಾತಿಗು ಮೌನಕ್ಕು ಯಾತರ ಒಗೆತನ? / ನೀರಿಗು ಕಲ್ಲಿಗು ಏನು ಜತೆ?

ಬಯಲಲ್ಲಿ ಘೋರಾಡಿ ಬಣಗೊಳ್ಳುವ ಗಾಳಿ / ಘಣಗುಟ್ಟಿ ಬರುವದು ತಿರುತಿರುಗಿ.'

ಹೀಗೆ ಕೇಳಿಕೊಂಡ ಕವಿಯೇ ತನ್ನ ಅಂತರ್ಮುಖತೆಯ ಬಗ್ಗೆ ಇನ್ನೂ ಉಳಿದುಕೊಂಡಿರುವ ಗೊಂದಲಗಳು, ಅನುಮಾನಗಳು ಬಯಲುಮಾಡಿಕೊಳ್ಳುವ ನಿಮಿತ್ತವಾಗಿ ಪ್ರಕಟಗೊಂಡ ನಿಲುವು ರಹಸ್ಯಕ್ಕೆ ಹಿಡಿದ ಆಳಗನ್ನಡಿ!

'ಒಳಗಿದ್ದ ಪ್ರಕೃತಿಗೆ ಒಳದನಿಯೊಂದಾಗ / ಅಂತರ್ಮುಖವಾಗಿ ಕರೆಯುವವೇ'

'ಮೌನ-ಮಾತುಗಳ ಮಧ್ಯೆ...' ಜರುಗುವ ಪ್ರಕ್ರಿಯೆಗೆ ಸಂಬಂಧಿಸಿದ ಅನುಭವಗಳನ್ನು ಬಚ್ಚಿಕೊಳ್ಳುವ ಅತ್ಯಂತ ಸೂಕ್ಷ್ಮವಾದ ಮತ್ತು ಜಾಗ್ರತಿಯ ನೀತಿಯನ್ನು ಕವಿ ಎದುರುಗೊಳ್ಳಲು ಮಾಡಿಕೊಳ್ಳುವ ಸಿದ್ಧತೆಯ ಪೂರ್ವ ಭೂಮಿ - ಎತ್ತಿಕೊಂಡ ಪದ್ಯಕ್ಕೆ ರಂಗಸಜ್ಜಿಕೆಯ ಸಮಗ್ರೀಕರಣ ಅನುಭವ ನೀಡುವಲ್ಲಿ ಆಳವಾದ ಸೃಜನಶೀಲತೆಯ ಖುಶಿ ಇದೆ. ಈ ಖುಶಿ 'ಸಖೀಗೀತ' ದಲ್ಲಿಯೇ ಅಪ್ರತಿಮವೆನ್ನದೇ ಗತ್ಯಂತರವಿಲ್ಲ. ಇದೇ ಕವಿ ಮೌನ-ಮಾತುಗಳ ಕುರಿತು ವ್ಯಾಖ್ಯಾನ-ವಿಶ್ಲೇಷಣೆ, ಸ್ಪಷ್ಟೀಕರಣ ಒದಗಿಸುವಾಗ, ಬಚ್ಚಿಟ್ಟುಕೊಂಡದ್ದೆಲ್ಲ ಬಯಲುಗೊಳ್ಳುವ ಸೃಜನಶೀಲತೆಯಲ್ಲಿ ಅಂಥ ಖುಶಿ ದಕ್ಕದೇ ಹೋಗುತ್ತದೆ. ಹೀಗೆಂದಾಗ ಇದು ಕವಿಯ ದೌರ್ಬಲ್ಯವಲ್ಲ - ಲೋಕಸತ್ಯದ ದೌರ್ಬಲ್ಯ. ಆದರೂ ಕುತೂಹಲದಿಂದ ಕಾದು ಕುಳಿತಿರುವ ಮನಸ್ಸೊಂದು ಹೇಳಬೇಕಾಗಿರುವುದನ್ನು ಹೇಳಿದಾಗ, ಕೇಳಬೇಕಾಗಿರುವುದನ್ನು ಅನುಭವಿಸಿದಾಗ, ಒಂದು ಅಂತಿಮ ಸ್ವರೂಪದ ತೀರ್ಮಾನದ ತರುವಾಯ ಚರ್ಚೆಗೆ ರಹಸ್ಯವೆಂಬುದುಳಿವುದಿಲ್ಲ. ಅಂಥ ಒಂದು ಮೌನದ ಅಮರ ದ್ರವ್ಯಕ್ಕೆ ಬೇಂದ್ರೆಯವರು ನೀಡಿದ, ಮೌನ ಮೊಗ್ಗೆಯನೊಡೆದು ಅರಳಿ ಬಂದ ಶಬ್ದಧ್ವನಿಗಳು ಇಂತಿವೆ:

i) *ಮೌನದಲ್ಲಿಯು ಕೂಡ ಮಾತಿನ ಧ್ವನಿಯಿರಲಿ / ಮೂಕ ಮೌನವು ಒಂದು ಶಾಪದೊಲು ತಾಪವು ಕೊಡುವುದು. ತಾ ಪರಿಹರಿಸದು / ಜೀವಯಾತನೆಯನ್ನು ಅದು ಎಂದಿಗು.*

ii) *ಮಾತಿನಲ್ಲಿರುವಂಥ ಮೌನದ ಧ್ವನಿಯಿಂದ / ವಿಪ್ಲವತೆ ಬೆಳೆಯುವದಿಬ್ಬರಲಿ ಇಬ್ಬರ ಮನವಾಗ ಇಬ್ಬಗೆಯಾಗುವುದು / ಒಬ್ಬಗೂ ಸುಖವಿಲ್ಲ ಬದುಕಿನಲಿ.*

ಮಾತು - ಮೌನಕ್ಕೆ ನೀಡಿದ ಖಚಿತ ವ್ಯಾಖ್ಯಾನದ ತರುವಾಯ ಮತ್ತೆ ಸೃಜನಶೀಲ ಸುಖದ ಸ್ಪರ್ಶವನ್ನು ಕಂಡುಕೊಳ್ಳುವ, ಅದನ್ನು ಎದೆಗುದಿಯಲ್ಲಿ ಬಚ್ಚಿಟ್ಟುಕೊಳ್ಳುವ ಅಭಿವ್ಯಕ್ತಿಯಾಗಿಸಲು ಹವಣಿಸುವ ಸಂವೇದನೆಗಳನ್ನು, ಸಂವೇದನೆಯಾಗಿಸುವ ತಾತ್ವಿಕ ಸ್ವರೂಪವನ್ನು ಕುರಿತಂತೆ ಕವಿ ಮಾತಾಡಿಕೊಳ್ಳುವ ರೀತಿ – ಈ ಮೊದಲಿನ ಪದ್ಯಗಳನ್ನು ಅನುಭವಿಸುವ ಸುಖದ ಒರತೆಯ ಅಭಿರುಚಿಯನ್ನು ಬೆಳೆಸುವುದಷ್ಟೇ ಅಲ್ಲ, ಅದಕ್ಕೆ ಜೀವಕಳೆಯನ್ನು ತುಂಬಿ ಸೃಜನಶೀಲ ಸನ್ನಿವೇಶಕ್ಕೆ ಹೊಸ ಭಾಷೆಯನ್ನು ಕವಿ ಬರೆಯುತ್ತಾನೆ.

'ಪ್ರಣಯದ ವಾಣಿಯು ವೀಣಾ-ಪ್ರವೀಣನು / ನುಡಿಸುವ ಮಿಡಿಸುವ ತಂತಿಯೊಲು ಮನವೆಲ್ಲ ಮಾತನ್ನು ಮೌನದಿ ನೆನವಂತೆ / ಎಳೆಯೊಳೆಸಿ ಗುಂಗುಣಿಸಿ ಚಿಮ್ಮಿಸುವುದು.'

ಕಾದು, ಕುದ್ದು, ಪಕ್ವವಾದ ಅನುಭವ ವಿಶೇಷಣಗಳನ್ನು, ಮೌನ-ಮಾತಲ್ಲಿ ಅರಳಿ-ಕೆರಳಿ ನಿಂತ ರಸನಿಮಿಷಗಳನ್ನು ಭಾಷಾಶಕ್ತಿಯ ಮೂಲಕ ಬಣ್ಣಿಸುವ ಕ್ರಮವನ್ನು ಇವರ ಮುಂದಿನ ಪದ್ಯದಲ್ಲಿ ಕವಿ ಸೂಚಿಸುತ್ತಾನೆ:

'ಚಿಗುರಿಸಿ ಹೂವಿಸಿ ಕಾಯಿಸಿ ಪಕ್ವಿಸಿ / ಬಣ್ಣಿಸುವ್ರೊಲು ಜೀವವಲ್ಲರಿಯಾ ಬಲ್ಲವ ಬಲ್ಲನು ಏಕತಾನದ ನಾದ / ಜೀವನಮನ್ವಾದ ಅನುಭವಿಯಾ.'

ಈ ಎತ್ತಿಕೊಂಡ ಪತ್ರದ ಮಿತಿ ಮತ್ತು ಸ್ವರೂಪಕ್ಕೆ ಅಂತಿಮವಾದ ತೆರೆಯನ್ನೆಳೆಯುವ ಕವಿಯ ಸೃಜನಶೀಲ ಪ್ರಜ್ಞೆ ಬದುಕಿನಲ್ಲಿ ನಿಜವಾಗಿಯೂ ಎಂಥ ಕಹಿ ಸವಾಲುಗಳನ್ನು ಸ್ವೀಕರಿಸಿಯೂ, ಅನುಭವಿಸಿಯೂ ದಿಕ್ಕುಗೆಡುವುದಿಲ್ಲ: ಛಿದ್ರಾನ್ವೇಷಿಯಾಗುವುದಿಲ್ಲ. ಬದುಕಿನ ಪ್ರೀತಿಯನ್ನು ಕಳೆದುಕೊಳ್ಳದೇ ಅದನ್ನು ಸಂರಕ್ಷಿಸಿಕೊಂಡು ಪ್ರಾಣವಾಗಿಸಿಕೊಳ್ಳುವ ಆಶಾವಾದಿತ್ವದ ನಿಲುವು-ಸೃಜನಶೀಲತೆಗೆ ತಂದಿರಿಸುವ ಆತ್ಯಂತಿಕ ಎತ್ತರದ ನಿಲುವೇ ಎನ್ನಬೇಕು. ಹಾಗೆ ಅತ್ಯಂತ ಸೂಕ್ಷ್ಮವಾಗಿ ಧೇನಿಸಿ ಗಮನಿಸಿದರೆ 'ಸಖೀಗೀತ' ಕ್ಕೆ ಈ ಕೆಳಗಿನ ಸಾಲುಗಳು ಅರ್ಥಪೂರ್ಣವಾದ ಮುಕ್ತಾಯವನ್ನು ಹೇಳುತ್ತವೆ. ಕವಿಯಾಗಿ, ವ್ಯಕ್ತಿಯಾಗಿ ಏನೆಲ್ಲ ನೊಂದು, ಉಂಡು, ಅನುಭವಿಸಿ ಕೊನೆಗೆ ಅಭಿವ್ಯಕ್ತಿಗಾಗಿ ಕಾಯುವ ಸ್ಥಿತಿ ಇದೆಯಲ್ಲ –ಇದು ಸೃಜನಶೀಲ ಸಂದರ್ಭದ ಅನಿವಾರ್ಯ ಮುಖವಾಣಿ. ಈ ಮುಖವಾಣಿಯೇ ಕವಿಯ ಜೀವಸತ್ವ-ಸತ್ಫಲ-ಸದುದ್ದೇಶ.

'ನನ್ನ ಚಿತ್ತದೊಳಿರುವ ಚಿತ್ರಗಾರನು ಬರೆದ / ಚಿತ್ರಕೆ ಬಹವೆಂದೊ ಜೀವಕಳೆ?
ಅದು ಬಂದ ದಿನದಿಂದ ಮಾತು-ಮೌನಗಳಲ್ಲಿ / ಹಾಸಾದ ಹೊಕ್ಕಾದ ಉಸಿರಿನೆಳೆ'

ಮಾತು-ಮೌನಗಳ ಮಧ್ಯೆ ಜರುಗಿರುವ ಅನುಭವ ವಿಶೇಷವಾದ ಈ ಉಪಕ್ರಮ 'ಸಖೀಗೀತ'ದಲ್ಲಿಯೇ ಒಂದು ಹೃದಯಸ್ಪರ್ಶಿ ಸನ್ನಿವೇಶವೆಂದು ಮೇಲೆ ಸೂಚಿಸಿಯಾಗಿದೆ. ' ಮಾತು ಮತ್ತು ಮೌನಗಳೇ ಸಂಯೋಗ ಮತ್ತು ವಿಪ್ರಲಂಭಗಳ ಪ್ರತೀಕ ' ವೆಂದು ಸರಿಯಾದ ಅರ್ಥಕಲ್ಪನೆ-ಯನ್ನು ಕುರ್ತಕೋಟಿಯವರು ನೀಡುತ್ತಾರೆ. ಅಷ್ಟೇ ಅಲ್ಲ –ಪರಸ್ಪರ ವಿರುದ್ಧವಾದ ಈ ಎರಡು ಅವಸ್ಥೆಗಳ ಸಂಘರ್ಷ ಕವಿತೆಯ ಉದ್ದಕ್ಕೂ ಜರುಗಿರುವುದನ್ನು ಸೂಚಿಸಿರುವುದು ಸರಿಯಷ್ಟೇ.

ಭಾರತೀಯ ಸಂದರ್ಭದಲ್ಲಿ 'ಸಖ್ಯಕಲ್ಪನೆ' ಅತ್ಯಂತ ಪರಿಣಾಮಕಾರೀ ನಿಲುವು ಪ್ರಕಟಿಸುವುದು ಸಖೀಗೀತದಲ್ಲಿಯೇ ಎಂದುಕೊಂಡಾಗ ಅದರಲ್ಲಿಯೂ ಮಾತು-ಮೌನಗಳ ಕುರಿತು ಕವಿ ತನ್ನ ಮನೋಗತವನ್ನು, ಇಂಗಿತವನ್ನು ಕಟ್ಟಿಕೊಡುವಾಗ - ನೇಪಥ್ಯಕ್ಕೆ ಸರಿದ ನೈಜ 'ಮಃಖಾಂತ ಸಖ್ಯ' ಮನದನ್ನೆಯ ಅಂತರಂಗದಿಂದ ಸಿಡಿಯುವುದು ಒಟ್ಟು ಸೃಜನಶೀಲತೆಗೇ ಸವಾಲು ಎಸೆಯುವಂಥದ್ದು. ಮಾತು ಮತ್ತು ಮೌನಗಳಿಗೇ ಅತ್ಯಂತ ಔಚಿತ್ಯಪೂರ್ಣವಾದ ಉತ್ತರವನ್ನು ನೀಡುವಲ್ಲಿ ಯಶಸ್ಸನ್ನು ಸಾಧಿಸಿದ್ದು. ಗಂಡನ ಪ್ರೀತಿ, ಒಲವುಗಳಿಗೇ ತನ್ನ ಸಾಮರ್ಥ್ಯವನ್ನು ಸಮರ್ಪಿಸಿಕೊಂಡ ಹೆಂಡತಿಗೆ ಬದುಕಿನ ಸಾರ್ಥಕ್ಯವೆಲ್ಲ ಈ ಮುಖೇನವಾಗಿಯೇ ಕಂಡುಕೊಳ್ಳಬೇಕು. ಕವಿಗಾದರೆ ಬೇರೆ ಬೇರೆ ದಾರಿಗಳುಂಟು, ವರ್ಣನೆಗಳುಂಟು, ಮಾರ್ಗಗಳುಂಟು ಆದರೆ ಗಂಡನನ್ನೇ ನಂಬಿಕೊಂಡ ಬಾಳಸಖಿಗೆ ಏನುಂಟು ? –ಎನ್ನುವಲ್ಲಿಯೇ ದೀಪದ ಕೆಳಗೆ ಅವಿತಿರುವ ಕತ್ತಲು ಮನುಷ್ಯನಿಗೆ ಕಾಣುವುದಿಲ್ಲವೆನ್ನುವುದು. ಹೀಗೆ ಮನುಷ್ಯನ ಬೆನ್ನಿಗೆ ಅಂಟಿಕೊಂಡಿರುವ ಅಜ್ಞಾನ, ಅಂಧಶ್ರದ್ಧೆ ಅನಾದರ ಇತ್ಯಾದಿಗಳ ಕುರಿತೂ ಕಣ್ಣು ತೆರೆದಾಗ ಪರಿಪೂರ್ಣ ಸತ್ಯ ಅರಿವು ಪ್ರಕಾಶನಗೊಳ್ಳುವುದು. ಇಂಥ ಅರಿವಿನ ಲೋಕಸತ್ಯವನ್ನು ಕಾವ್ಯಸತ್ಯ- ವನ್ನಾಗಿಸಿದ ಪ್ರಸಂಗಕ್ಕೆ ಅಂಬಿಕಾತನಯದತ್ತರು ಅಭಿನಂದನಾರ್ಹರು ಎನ್ನಲೇಬೇಕು. ಆ ಸಾಲುಗಳನ್ನು ಈ ರಚನೆಯ ಕೊನೆಯಲ್ಲಿ ಪ್ರಸ್ತಾಪಿಸುತ್ತೇನೆ :

'ನಿಮಗೇನು ರಮ್ಯತೆ ರಸಿಕಗೆ ಕರೆಯುವ / ನೂರು ಹಾದಿಯಲೊಂದು ಅದು ಹಾದಿಯು
ನಮಗೆ ಜೀವನದಾಟ-ಪಾಟದ ನೋಟದ / ಬೇಟದ ಕೂಟದ ಸುಸಮಾಧಿಯು.'

▼

ಡಾ. ಗುಂಡಣ್ಣ ಕಲಬುರ್ಗಿ
ಕಲೆ ಮತ್ತು ವಾಣಿಜ್ಯ ಮಹಾವಿದ್ಯಾಲಯ, ಮೂಡಲಗಿ - ೫೯೧ ೩೧೨, ಜಿ. ಬೆಳಗಾವಿ

ಮಲ್ಲಿಕಾರ್ಜುನ ಹಿರೇಮಠರ ಕಾದಂಬರಿ ' ಹವನ '

ಮಾಧವ ಕುಲಕರ್ಣಿ **ವಿಶ್ಲೇಷಣೆ**

'ಅಮೀನಪುರದ ಸಂತೆ' ಕಥಾಸಂಕಲನದ ಮೂಲಕ ಕನ್ನಡ ಸಾಹಿತ್ಯಲೋಕದ ಗಮನ ಸೆಳೆದ ಮಲ್ಲಿಕಾರ್ಜುನ ಹಿರೇಮಠರು 'ಹವನ' ಕಾದಂಬರಿಯ ಮೂಲಕ ಕನ್ನಡದ ಕಾದಂಬರಿ ಪ್ರಪಂಚವನ್ನು ಪ್ರವೇಶಿಸಿದ್ದಾರೆ. ತಮ್ಮ ಉನ್ನತ ಮಟ್ಟದ ಕಥನಕೌಶಲದ ಮೂಲಕ ತಮ್ಮ ಕಥೆಗಳಲ್ಲಿ ಶ್ರೇಷ್ಠ ಕತೆಗಾರನೊಬ್ಬನ ಮಟ್ಟವನ್ನು ಮುಟ್ಟಿದ ಹಿರೇಮಠರು 'ಹವನ' ಕಾದಂಬರಿಯಲ್ಲಿ ಆ ಎಲ್ಲ ಕಸುವಿನಿಂದ ಮತ್ತೆ ನಮ್ಮ ಗಮನ ಸೆಳೆಯುತ್ತಾರೆ. ಈ ಕಾದಂಬರಿಯ ವಿಮರ್ಶಾತ್ಮಕ ವಿಶ್ಲೇಷಣೆಗೆ ಮೊದಲು ಕನ್ನಡ ಕಥಾಲೋಕ ಮತ್ತು ಕಾದಂಬರಿ ಲೋಕಗಳು ಯಾವ ಅಂಚಿಗೆ ಬಂದು ತಲುಪಿದಾಗ ಈ ಕಾದಂಬರಿಯು ಸಾಹಿತ್ಯರಂಗದಲ್ಲಿ ಕಾಣಿಸಿಕೊಂಡಿದೆ ಎಂಬುದನ್ನು ನನ್ನದೇ ಆದ ಆಲೋಚನಾ ಕ್ರಮದ ಮೂಲಕ ಹೇಳಲು ಪ್ರಯತ್ನಿಸುತ್ತೇನೆ. ಏಕೆಂದರೆ ಮಹತ್ವದ್ದೆನ್ನಬಹುದಾದ ಕೃತಿಯೊಂದು ನನಗೆ ಕಾಣಿಸಿಕೊಂಡಾಗ ನನ್ನ ತಿಳಿವಳಿಕೆಯಲ್ಲಿ ಆ ಕೃತಿಯು ಸಾಹಿತ್ಯ-ಸಂಸ್ಕೃತಿಯ ಯಾವ ಸಂದರ್ಭದಲ್ಲಿ ಮೂಡಿಬಂದಿದೆ ಎಂದು ಅರಿತುಕೊಳ್ಳುವ ಕುತೂಹಲ ಮತ್ತು ಲವಲವಿಕೆಗಳೆರಡೂ ಉಂಟಾಗುತ್ತವೆ. ಅನಂತಮೂರ್ತಿ, ಲಂಕೇಶ, ಚಿತ್ತಾಲ, ತೇಜಸ್ವಿ ಇವರುಗಳು ಬರೆದ ಕತೆಗಳಿಗೂ ಮಾಸ್ತಿಯವರು ಬರೆದ ಕತೆಗಳಿಗೂ ಅಂತರವಿದೆ. ಹಾಗೆಯೇ ಈ ನಾಲ್ವರು ಮಹತ್ವದ ಕತೆಗಾರರು ಬರೆದ ಕತೆಗಳಿಗೂ ಇಂದಿನ ಸಂದರ್ಭದಲ್ಲಿ ಬೆಳೆಯುತ್ತಿರುವ ದೇವನೂರು ಮಹಾದೇವ, ರಾಘವೇಂದ್ರ ಪಾಟೀಲ, ಮಲ್ಲಿಕಾರ್ಜುನ ಹಿರೇಮಠ, ಬಾಳಾಸಾಹೇಬ ಲೋಕಾಪುರ ಮತ್ತು ನುಗಡೋಣಿ ಮುಂತಾದವರು ಬರೆಯುತ್ತಿರುವ ಕತೆಗಳಿಗೂ ವ್ಯತ್ಯಾಸಗಳಿವೆ. ಮಾಸ್ತಿಯವರಲ್ಲಿ ಅಂಶತಃ, ಅನಂತಮೂರ್ತಿ, ಲಂಕೇಶ, ಚಿತ್ತಾಲರಲ್ಲಿ ಹೆಚ್ಚಿನ ಭಾಗ ಮತ್ತು ತೇಜಸ್ವಿಯವರಲ್ಲಿ ತುಲನಾತ್ಮಕವಾಗಿ ಕಡಿಮೆ ಭಾಗ ನಗರ-ಪ್ರಜ್ಞೆಯೊಂದು ಅವರ ಕಥಾಲೋಕಗಳ ಹಿಂದೆ ಬಲವಾಗಿ ಕೆಲಸ ಮಾಡುತ್ತದೆ. ಈ ಪ್ರಜ್ಞೆಯು ಕೆಲವೊಮ್ಮೆ ಮಾನವನ ಅಂತಃಕರಣವನ್ನು ಗೌಣವಾಗಿಸಿ ಬೌದ್ಧಿಕ ಹಿರಿಮೆಯನ್ನು ಎತ್ತಿ ಹಿಡಿಯುವ ಚಾತುರ್ಯವನ್ನೂ ತೋರಿಸುತ್ತದೆ. ಇದನ್ನು ಸರಳೀಕರಿಸುವುದರಿಂದ ಆಯಾ ಹಿರಿಯ ಕತೆಗಾರರ ಒಟ್ಟು ಸಾಧನೆಯ ಅಂಶಕ್ಕೆ ಧಕ್ಕೆ ಬರಬಹುದೆಂಬ ಗುಮಾನಿ ಹುಟ್ಟಬಹುದು. ಆದರೆ ಆ ಗುಮಾನಿಯನ್ನು ದೂರ ಮಾಡುವ ಕೆಲಸವನ್ನು ನಂತರದ ಕತೆಗಾರರು ಒಂದು ಹೊಸ ಗ್ರಾಮೀಣ ಪ್ರಜ್ಞೆಯ ಕಸುವಿನಿಂದ ಬರೆಯತೊಡಗಿದ ಮೇಲೆ ಸಮರ್ಥವಾಗಿಯೇ ಮಾಡಿದ್ದಾರೆ. ಸಮಾನತೆಯ ಹಸಿವಿನಿಂದ ಉದ್ಭವವಾದ ಸಾಹಿತ್ಯಿಕ ಚಳವಳಿಗಳಲ್ಲಿ ನೇರವಾಗಿ ಪಾಲ್ಗೊಳ್ಳದಿದ್ದರೂ ಕೂಡ, ಆ ಚಳವಳಿಗಳ ಒಳಪದರುಗಳನ್ನು ತಮ್ಮ ಕೃತಿಗಳಲ್ಲಿ ಅನನ್ಯವಾಗಿ ಮತ್ತು ಕಲಾತ್ಮಕವಾಗಿ ಅಭಿವ್ಯಕ್ತಪಡಿಸಿದ ನಂತರದ ಕತೆಗಾರರು ಹೀಗೆ ಗ್ರಾಮೀಣ ಪ್ರಜ್ಞೆ ಮತ್ತು ಸಮಾನತೆಯ ಎಚ್ಚರದ ಹದವರಿದ ಮಿಶ್ರಣದ ಮಧ್ಯೆ ನಿಂತು ಬರೆದರು. ಕಾಲದ ಈ ಅಗತ್ಯವನ್ನು ಗಮನಿಸಿದ ಲೇಖಕರು ಅಂಥ ಮಹತ್ವದ ಕೃತಿಗಳನ್ನು ನೀಡಲಿಲ್ಲ. ಈ ದೃಷ್ಟಿಯಿಂದ ಮಲ್ಲಿಕಾರ್ಜುನ ಹಿರೇಮಠ, ರಾಘವೇಂದ್ರ ಪಾಟೀಲ ಮತ್ತು ಬಾಳಾಸಾಹೇಬ ಲೋಕಾಪುರ ಮುಂತಾದವರು ನನಗೆ ಮಹತ್ವದ ಲೇಖಕರಾಗಿ ತೋರುತ್ತಾರೆ. ಮಲ್ಲಿಕಾರ್ಜುನ ಹಿರೇಮಠರ ಕಾದಂಬರಿ ' ಹವನ ' ವನ್ನು ಸಾಹಿತ್ಯದ ಈ ಸಂದರ್ಭದಲ್ಲಿಟ್ಟು ಪರೀಕ್ಷಿಸಬೇಕು.

‘ಹವನ’ ಕಾದಂಬರಿಯು ತೋರಿಕೆಗೆ ಲಂಬಾಣಿ ಜನಾಂಗವನ್ನು ಕುರಿತು ಬರೆದ ಕಾದಂಬರಿಯಂತೆ ತೋರುತ್ತದೆ. ಗಮನಿಸಬೇಕಾದ ಅಂಶವೆಂದರೆ ಇದು ಆ ಜನಾಂಗವನ್ನು ಕುರಿತು ಅಧ್ಯಯನ ಮಾಡಲು ಬರೆದ ಕಾದಂಬರಿಯಂತೆಯೂ ಒಮ್ಮೊಮ್ಮೆ ತೋರುತ್ತದೆ. ಲೇಖಕರು ಆ ಜನರ ಜೀವನವನ್ನು ಅದರ ಎಲ್ಲ ಆಯಾಮಗಳೊಂದಿಗೆ ಎಷ್ಟೊಂದು ಶಕ್ತಿಯುತವಾಗಿ ಸೆರೆ ಹಿಡಿದಿದ್ದಾರೆಂದರೆ, ಅದರ ವಿವರಗಳು ಮೂಲ ಆಶಯವನ್ನೇ ಮರೆಯಿಸಿಬಿಡಬಹುದು. ಆದರೆ ಎಚ್ಚರದ ಪ್ರಜ್ಞಾವಂತ ಓದುಗ ಈ ಕಾದಂಬರಿಯನ್ನು ಕೇವಲ ವಿವರಣೆಗಳಿಗೆ ಮಾತ್ರ ಸೀಮಿತಗೊಳಿಸಲಾರ. ಹಿರೇಮಠರಂಥ ಲೇಖಕರು ಕೇವಲ ವಿವರಗಳನ್ನು ನೀಡಿ ವಿರಮಿಸಲಾರರು. ಅವರಲ್ಲಿಯ ಲೇಖಕನು ಇಲ್ಲಿ ಮಾನವೀಯ ಸಂಬಂಧಗಳನ್ನು ಮನುಷ್ಯ ಮತ್ತು ಸಮಾಜದ ಮಧ್ಯೆ ಬದಲಾಗುತ್ತಿರುವ ಕೊಂಡಿಗಳನ್ನು, ಮನುಷ್ಯನ ಮೂಲ ಸ್ವಭಾವಗಳಲ್ಲಿ ಕೆಲವಾಗಿರುವ ಪ್ರೀತಿ-ಕ್ರೌರ್ಯಗಳನ್ನು ಹೊಸ ಸಾಂಸ್ಕೃತಿಕ ಸಂದರ್ಭವೊಂದರಲ್ಲಿ ಅರ್ಥೈಸತೊಡಗುತ್ತಾನೆ. ಹೀಗಾಗಿ ವಿವರಗಳಿಗೆ ಹೊಸ ಅರ್ಥಗಳು ಹುಟ್ಟಿಕೊಳ್ಳುತ್ತವೆ. ಹಾಗೆಯೇ ವಿವರಗಳು ಕೇವಲ ಲಂಬಾಣಿಗಳ ಜೀವನದ ಬಗ್ಗೆ ಇರುವ ಕುತೂಹಲವನ್ನು ತಣಿಸುವ ವಿವರಗಳಾಗಿ ನಿಲ್ಲುವುದಿಲ್ಲ. ಹಾಗೆ ನೋಡಿದರೆ ಇಲ್ಲಿ ಬರುವ ಲಂಬಾಣಿ ಜೀವನ ಒಂದು ನಿಮಿತ್ತ ಮಾತ್ರ. ಏಕೆಂದರೆ, ಆ ಜೀವನದ ಮೂಲಕ ಸಮಕಾಲೀನ ಜೀವನದ ತುಡಿತವೊಂದಕ್ಕೆ ಶಕ್ತಿಯುತವಾದ ರೂಪಕವೊಂದನ್ನು ಹಿರೇಮಠರು ಈ ಕಾದಂಬರಿಯಲ್ಲಿ ಹುಡುಕಹೊರಟಿದ್ದಾರೆ.

ಪ್ರಾಥಮಿಕ ಶಾಲೆಯೊಂದಕ್ಕೆ ಶಿಕ್ಷಕನಾಗಿ ನೇಮಕಗೊಂಡ ಬಸಪ್ಪನೆಂಬ ತರುಣನು ಲಂಬಾಣಿ ತಾಂಡಾಕ್ಕೆ ಹೊಸ ಕನಸುಗಳನ್ನು ಕಟ್ಟಿಕೊಂಡು ಪ್ರವೇಶಿಸುವುದರೊಂದಿಗೆ ಕಾದಂಬರಿಯು ಪ್ರಾರಂಭವಾಗುತ್ತದೆ. ಈ ಭಾಗದಲ್ಲಿ ಅವನೇ ನಿರೂಪಕ, ಅವನೇ ನಮ್ಮನ್ನು ಕೈಹಿಡಿದು ನಿಧಾನಕ್ಕೆ ಕಾದಂಬರಿಯ ಒಳಕ್ಕೆ ಕರೆದೊಯ್ಯುತ್ತಾನೆ. ಮತ್ತು ಒಂದು ಅದ್ಭುತವಾದ ಸಾಂಸ್ಕೃತಿಕ ಜೀವನದ ಪರಿಚಯ ಮಾಡಿಕೊಡುತ್ತಾನೆ. ಲಂಬಾಣಿಗಳ ಸಂಸ್ಕೃತಿಗೆ ಹೊರಗಿನವನಾದ ಬಸಪ್ಪನು ನಿರೂಪಕನಾಗಿ ಮಾತ್ರ ಉಳಿಯುವುದಿಲ್ಲ. ಹೀಗಾಗಿ ಅವನ ಬದಲು ತಾಂಡಾದಲ್ಲಿಯ ಪಾತ್ರವೊಂದರಲ್ಲಿಂದ ಕತೆ ಹೇಳಿಸಬಹುದಿತ್ತೆಂಬ ಮಾತು ಅಷ್ಟೊಂದು ಸಮರ್ಥನೀಯವಾಗಿ ತೋರುವುದಿಲ್ಲ. ಬಸಪ್ಪನು ಕೇವಲ ತಂತ್ರದ ದೃಷ್ಟಿಯಿಂದ ಮೂಡಿಬಂದ ಪಾತ್ರವಾಗಿರುವುದಿಲ್ಲ. ಅವನು ಆ ಸಂಸ್ಕೃತಿಯಿಂದ ಅನತಿ ದೂರದಲ್ಲೇ ವಾಸವಾಗಿರುವವನು ಮತ್ತು ಹೊಸ ಕನಸುಗಳನ್ನು ಹೊತ್ತು ತರುತ್ತಿರುವವನು. ಅವನ ಹುಡುಕಾಟವು ನಮ್ಮನ್ನು ಲಂಬಾಣಿ ಸಂಸ್ಕೃತಿಯ ಮೂಲೆಮೂಲೆಗೂ ಹೋಗಲು ಸಹಾಯ ಮಾಡುತ್ತದೆ. ಬಸಪ್ಪನ ಕನಸುಗಳಿಗೆ ಸ್ಪಂದಿಸುವ ತಾಂಡಾದ ನಾಯಕ ಮತ್ತು ಇತರರು ಹೊರಜಗತ್ತಿನ ಕನಸುಗಳಿಗೆ ಬಸಪ್ಪನ ಮೂಲಕ ಸಂವಾದಿಯಾಗಿ ನಿಲ್ಲುತ್ತಾರೆಂಬುದನ್ನು ಗಮನಿಸಬೇಕು.

ಇಲ್ಲಿ ಲಂಬಾಣಿಗಳನ್ನು ಕುರಿತು ಒಂದೆರಡು ಮಾತುಗಳನ್ನು ಮೊದಲೇ ಸ್ಪಷ್ಟಪಡಿಸಿಕೊಳ್ಳಬೇಕು. ಅವರು ಒಂದು ರೀತಿಯಲ್ಲಿ ಅಲೆಮಾರಿಗಳು. ಅವರು ತಮ್ಮ ಜನಾಂಗದ ಹೆಸರು ‘ಲವಣ’ ಎಂಬ ಶಬ್ದದಿಂದ ಉತ್ಪತ್ತಿಯಾಗಿರಬಹುದೆಂದು ನಂಬಿದ್ದಾರೆ. ತಾವು ಕನ್ನಡ ನಾಡಿಗೆ ಬೇರೊಂದು ದೂರದ ನಾಡಿನಿಂದ ಬಂದವರೆಂದು ಪ್ರಜ್ಞಾ ಪಾತಳಿಯಲ್ಲಿ ನಂಬಿದ್ದಾರೆ. ಇತರ ಜನಾಂಗಗಳಲ್ಲಿ ಹೇಗೆ ಅವರದೇ ಆದ ದೈವಿಕ ಶಕ್ತಿಯುಳ್ಳ ದಂತಕಥಾ ನಾಯಕರಿದ್ದಾರೋ ಹಾಗೇ ತಮಗೂ ಒಬ್ಬ ದೈವಿಕ ನಾಯಕನಿದ್ದಾನೆಂದು ತಲೆತಲಾಂತರದಿಂದ ಆತನನ್ನು ಆರಾಧಿಸುತ್ತ ಬಂದಿದ್ದಾರೆ. ಅವರ ಇಂಥ ದೈವಿಕ ನಾಯಕ ಸೇವಾಲಾಲ. ಆತನು ಮನುಷ್ಯನೂ ಹೌದು, ದೈವೀಪುರುಷನೂ ಹೌದು. ಅವನು ದೈವಸ್ವರೂಪಿಣಿ ದೇವಿಯೊಡನೆಯೇ

ಯುದ್ಧಕ್ಕಿಳಿದು ಮಾನಸಿಕವಾಗಿ ಗೆದ್ದಿದ್ದಾನೆ. ಲೇಖಕರು ಸೇವಾಲಾಲನ ಕತೆಯನ್ನು ಕಾದಂಬರಿಗೆ ಭಾರವಾಗದ ರೀತಿಯಲ್ಲಿ ಹೇಳಿಸಿದ್ದಾರೆ. ಇದು ನನಗೆ ಏಕೆ ಬಹಳ ಪಸಂದ ಬಂದಿತೆಂದರೆ, ಸೇವಾಲಾಲನ ಕತೆಯನ್ನು ಹೇಳಿಸುವ ರೀತಿಯಲ್ಲಿ ಅವರು 'ಪತ್ತಾ ಆಡುತ್ತ' ಕತೆ ಹೇಳುವ ಶೈಲಿಯನ್ನು ಉಪಯೋಗಿಸಿದ್ದಾರೆ. ಉನ್ನತವರ್ಗದವರು ಹೇಳಿಸುವ ಸತ್ಯನಾರಾಯಣ ಕಥೆ, ಭಾಗವತಪುರಾಣ, ಬಸವಪುರಾಣ ಮುಂತಾದವುಗಳನ್ನು ಹೇಳುವ ರೀತಿಗೂ ಪತ್ತಾ ಆಡುತ್ತ ಕತೆ ಹೇಳುವ ರೀತಿಗೂ ಸಾಕಷ್ಟು ವ್ಯತ್ಯಾಸವಿದೆ. ಪತ್ತಾ ಆಡುತ್ತ ಕತೆ ಹೇಳುವ ರೀತಿಯಲ್ಲಿ ಗದ್ಯ-ಪದ್ಯಗಳೆರಡೂ ಹದವಾಗಿ ಬೆರೆತುಕೊಂಡು ಅತಿರಂಜಿತವಾದುದು ಕೂಡ ಸ್ವೀಕಾರಾರ್ಹವಾಗುವಂತೆ ಮಾಡುವ ಅದ್ಭುತವಾದ ಗುಣವಿದೆ. ಕಾದಂಬರಿಯ ಮಧ್ಯಭಾಗದಲ್ಲಿ ಲಂಬಾಣಿಗಳ ಮೂಲಪುರುಷನ ಕತೆಯನ್ನು ಹೀಗೆ ಅದನ್ನು ಹೇಳುವ ಸಲುವಾಗಿಯೇ ಇರುವ ವ್ಯಕ್ತಿಯ ಮುಖೇನ ಹೇಳಿಸಿ ಫನನ್ನು ಸಾಧಿಸಿದ್ದಾರೆಂಬುದು ಕುತೂಹಲದ ವಿಷಯವಾಗಿದೆ.

ಮೊದಲನೆಯದಾಗಿ ಇಲ್ಲಿ ಬರುವ ಹಲವಾರು ನಮೂನೆಗಳ ಕಥೆ ಹೇಳಿಸುವ ಮತ್ತು ಹೇಳುವ ಕ್ರಮದಲ್ಲಿ ಈ ಪತ್ತಾಕಥಾಕ್ರಮ ಯಾವ ಸಂದರ್ಭಕ್ಕೆ ಹೊಂದಿಕೊಳ್ಳುತ್ತದೆ ಎಂಬುದನ್ನು ಪರೀಕ್ಷೆಗೆ ಒಳಪಡಿಸಿದಂತಾಗಿದೆ, ತಾಂತ್ರಿಕವಾಗಿ. ಇನ್ನು ಎರಡನೆಯದಾಗಿ ಈ ಕಥನ ಕ್ರಮದ ಮೂಲಕ ಮೂಡಿ ಬರುವ ಕತೆಯಲ್ಲಿ ಲಂಬಾಣಿ ಜನಾಂಗದ ಆಳವಾದ ನಂಬಿಕೆಗಳು ಎಂಥವು ಎಂಬ ಒಂದು ಜಾನಪದೀಯ ಹೊಳಹು ಮೂಡಿ ಬರುತ್ತದೆ. ಮೂರನೆಯದಾಗಿ ಸೇವಾಲಾಲನ ಕತೆಯು ಕಾದಂಬರಿಯಲ್ಲಿ ಮೂಡಿ ಬರುವ ಘಟನೆಗಳಿಗೆ ಪುರಾಣಸ್ವರೂಪದ ಸಂವಾದಿ ರೂಪವನ್ನು ಪಡೆಯುತ್ತದೆ. ಲಂಬಾಣಿಗಳ ಅಳಿವು ಉಳಿವಿನ ಹೋರಾಟವು ಸೇವಾಲಾಲನು ದೇವಿಯೊಡನೆ ನಡೆಸುವ ಹೋರಾಟವೇ ಆಗಿದೆ. ಇದನ್ನು ಇನ್ನೂ ಒಂದು ದೃಷ್ಟಿಯಿಂದ ನೋಡಬಹುದು. ಆಧುನಿಕ ಜಗತ್ತಿನಂತೆ ದೇವಿಯೂ ಆಕರ್ಷಕವಾಗಿದ್ದಾಳೆ. ಅವಳ ಆವಶ್ಯಕತೆ ಎಷ್ಟಿದೆಯೊ ಅಷ್ಟೇ ಅವಳ ವಾಮಗುಣಗಳನ್ನೂ ಸಹಿಸಿಕೊಳ್ಳಬೇಕಾಗಿದೆ. ಕಾದಂಬರಿಯ ಕೇಂದ್ರದಲ್ಲಿರುವ ಮೂಲ ವಸ್ತು ಇದೇ ಆಗಿದೆ. ವೈರುದ್ಧ್ಯಗಳಿಂದ ಕೂಡಿದ ಆಧುನಿಕ ನಾಗರಿಕತೆಗೆ ಏಕಮುಖಿವಾಗಿರುವ ಸಂಸ್ಕೃತಿಯೊಂದು ತೆರೆದುಕೊಂಡೊಡನೆ ನಾಶವಾಗಿಬಿಡುತ್ತದೆ. ಸೇವಾಲಾಲನ ಆದರ್ಶವು ಪೌರಾಣಿಕವಾದುದು, ಶುದ್ಧವಾದುದು ಮತ್ತು ಸಾತ್ವಿಕವಾದುದು. ದೇವಿಯ ಆಸೆಯು ತಾಮಸದಿಂದ ಕೂಡಿದೆ. ಆದರೆ ಲಂಬಾಣಿ ತಾಂಡಾದಲ್ಲಿ ಇವರಿಬ್ಬರ ಗುಡಿಗಳೂ ಇವೆ ಮತ್ತು ಇವರಿಬ್ಬರೂ ಪೂಜೆಗೊಳ್ಳುತ್ತಾರೆ! ಹೀಗೆ ವೈರುದ್ಧ್ಯಗಳಿಂದ ಕೂಡಿದ ಜೀವನವನ್ನೇ ಸಂಕೇತಿಸುವ ಸೇವಾಲಾಲನ ಕತೆಯ ವಿವರಗಳು ಕಾದಂಬರಿಯಲ್ಲಿಯ ಘಟನೆಗಳಿಗೆ ಮೂಲ ರೂಪಕವಾಗಿ ಮಾರ್ಪಾಟಾಗುತ್ತಿರುವಾಗ ಸೇವಾಲಾಲನ ಕತೆಯ ವಿವರಗಳು ಕಾದಂಬರಿಗೆ ಭಾರವಾಗಿವೆ ಎನ್ನುವ ಮಾತು ಕಾದಂಬರಿಯನ್ನು ಗ್ರಹಿಸಿದ ಕ್ರಮದಲ್ಲಿಯ ದೋಷ ಎನ್ನದೆ ವಿಧಿಯಿಲ್ಲ.

ಈ ವಿಷಯವನ್ನು ಸ್ವಲ್ಪ ದೀರ್ಘವಾಗಿ ಪ್ರಸ್ತಾಪಿಸಬೇಕಾಯಿತು, ಯಾಕೆಂದರೆ, ಕಾದಂಬರಿಯು ನಾನು ಈ ಮೊದಲೇ ಹೇಳಿದಂತೆ ಕೇವಲ ವಿವರಗಳನ್ನು ನೀಡಿ ವಿರಮಿಸದೆ ತನ್ನ ವಿಷಯವಸ್ತುವಿಗೆ ರೂಪಕಗಳನ್ನು ಸೆರೆಹಿಡಿಯಲು ಸಬಲವಾಗಿ ಪರಿತಪಿಸುತ್ತಿರುವುದರಿಂದ ಇಲ್ಲಿಯ ವಿವರಗಳನ್ನು ಮತ್ತು ಘಟನೆಗಳನ್ನು ಅದೇ ದೃಷ್ಟಿಯಿಂದ ಓದುಗ ನೋಡಲಿ.

ಬಸಪ್ಪ ಮಾಸ್ತರರು ಮತ್ತು ಸೋಮಲ್ಯಾ ನಾಯಕ ಇವರಿಬ್ಬರ 'ಸುಧಾರಣಾವಾದಿ' ಕ್ರಮಗಳಿಂದಾಗಿ ತಾಂಡಾದಲ್ಲಿಯ ಶಾಲೆ ಚೆನ್ನಾಗಿ ನಡೆಯತೊಡಗಿ ಜನ ಅಕ್ಷರಸ್ಥರಾಗುವ ಕ್ರಮ ಪ್ರಾರಂಭವಾಗುತ್ತದೆ. ಹಾಗೆಯೇ ತಾಂಡಾಕ್ಕೆ ಸಮೀಪವಾಗಿರುವ ಗೋಮಾಳವೊಂದನ್ನು ಶೇತಕಿಗೆ ಉಪಯೋಗಿಸಬೇಕೆಂಬ ವಿಚಾರವು ಮೊಳಕೆಯೊಡೆಯುತ್ತದೆ. ಇದು ಕಾರ್ಯರೂಪಕ್ಕೆ

ಬರಬೇಕಾದರೆ ಹಲವಾರು ವಿಘ್ನಗಳು ಒದಗಿಬರುತ್ತವೆ. ಅದೇ ಜನಾಂಗದ ಧುರೀಣನ ಹುಸಿ ಆಶ್ವಾಸನೆಗಳು, ರಾಜಕೀಯದವರು ಇದನ್ನು 'ಮತತಂತ್ರ'ವಾಗಿ ಬಳಸಲು ಇಚ್ಛಿಸುವುದು ಮತ್ತು ಇದು ಕೊನೆಗೆ 'ನಾಗರಿಕ' ಊರಿನವರು ಲಂಬಾಣಿಗಳ ಮೇಲೆ ನಡೆಸುವ ಬರ್ಬರ ದೌರ್ಜನ್ಯದಲ್ಲಿ ಪರ್ಯವಸಾನಗೊಳ್ಳುವುದು – ಹೀಗೆ ಘಟನೆಯೊಂದು ಮನಸ್ಸಿನಲ್ಲಿ ಹುಟ್ಟಿ ಅದು 'ಸಾಂಸ್ಥಿಕ' ರೂಪವನ್ನು ಪಡೆದುಕೊಂಡೊಡನೆ ಈಗಾಗಲೇ ಇರುವ ವ್ಯವಸ್ಥೆಯು ಅದನ್ನು ವಿಧ್ವಂಸಗೊಳಿಸತೊಡಗುತ್ತದೆ. ಆದರೆ ಈ ಪ್ರಕ್ರಿಯೆ ನಡೆದಾಗ ತಾಂಡಾದ ಜನರೆಲ್ಲ ಒಟ್ಟಾಗಿ ಒಂದು ಸುಂದರವಾದ 'ಕಮ್ಯೂನ್' ಆಗಿ ಆ ಗೋಮಾಳದಲ್ಲಿ ಶೇತಕಿ ಕಾರ್ಯವನ್ನು ಆರಂಭಿಸಿ ಅದನ್ನು 'ಹಚ್ಚಿ' ಕೊಂಡು ತಮ್ಮ ಕೋಮುಭಾವನೆಗಳಿಗೆ ಇಂಬುಕೊಡುತ್ತ ಬದುಕುವ ರೀತಿಯೊಂದು ಕಾದಂಬರಿಯಲ್ಲಿ ಅದ್ಭುತವಾಗಿ ಮೂಡಿ ಬಂದಿದೆ. ಗೋಮಾಳದ ಯೋಜನೆಯು ಹೊರಜಗತ್ತಿನ ಕ್ರೌರ್ಯದೆದುರು ತಲೆಬಾಗಿ ಸೋಲುತ್ತದೆ. ಮತ್ತು ಇದರ ಪರಿಣಾಮವಾಗಿ ಬಸಪ್ಪ ಮಾಸ್ತರರಿಗೆ ತಾಂಡಾದಿಂದ ವರ್ಗವಾಗಿ ಅವರು ಬೇರೆ ಊರಿಗೆ ಹೋಗುತ್ತಾರೆ.

ಕಾದಂಬರಿಯ ಎರಡನೆಯ ಭಾಗದಲ್ಲಿ ಸೋಮಲ್ಯಾ ನಾಯಕನ ಮಗ ಲೋಕು ಕತೆ ಹೇಳುತ್ತಾನೆ. ಸೋಮಲ್ಯಾ ನಾಯಕನು ಈ ವೇಳೆಗೆ ತನ್ನ ಇನ್ನೊಬ್ಬ ಮಗ ಹರಿಯ ಮನೆ ಸೇರಿದ್ದಾನೆ. ಗೋಮಾಳಕ್ಕಾಗಿ ನಡೆದ ಹೋರಾಟದಲ್ಲಿ ಸೋಮಲ್ಯಾನ ತಲೆಗೆ ಪೆಟ್ಟು ಬಿದ್ದು ಅವನಿಗೆ ಅಬ್ರಂ ಸುಬ್ರಂ ಆಗಿದೆ. ಎರಡನೆಯ ಭಾಗದಲ್ಲಿ ಬರುವ ವಿವರಗಳು ಮುಖ್ಯವಾಗಿ ತಾಂಡಾದ ಬದಲಾವಣೆ ಮತ್ತು ಭೌತಿಕ ಲಾಭಕ್ಕಾಗಿ ಲೋಕುನ ಮೂಲಕ ತಾಂಡಾದ ಮಂದಿ ಮಾಡಿಕೊಳ್ಳುವ ಒಪ್ಪಂದಗಳಿಗೇ ಮೀಸಲಾಗಿದೆ. ಇಲ್ಲಿ ಕಾಣುವ ಬದಲಾವಣೆಯು ಒಂದು ರೀತಿಯಲ್ಲಿ ನಮ್ಮ ದೇಶದ ಸದ್ಯದ ಚರಿತ್ರೆಯೇ ಆಗಿದೆ. ಗೋಮಾಳದಲ್ಲಿ ಗ್ರೆನೈಟ್ ಕಲ್ಲುಗಳಿರುವುದು ಅದರ ಮೂಲ ಮಾಲೀಕರಾದ ದೇಸಾಯರಿಗೆ ತಿಳಿದು ಅವರು ಮುಂಬಯಿಯಿಂದ ಮರಳಿ ಹುಟ್ಟಿದೂರಿಗೆ ಮರಳುತ್ತಾರೆ. ಕೋರ್ಟಿನಲ್ಲಿ ಗೋಮಾಳದ ಹಕ್ಕನ್ನು ಹೋರಾಟದ ಮೂಲಕ ಪಡೆದ ತಾಂಡಾದ ಮಂದಿ ಲೋಕುನ ನೇತೃತ್ವದಲ್ಲಿ ಗೋಮಾಳವನ್ನು ಪುನಃ ದೇಸಾಯರಿಗೆ ಒಪ್ಪಿಸುತ್ತಾರೆ. ದುಡಿಯದೆ ಬಂದ ದುಡ್ಡು ತಾಂಡಾದ ಹಲವಾರು ಜನರನ್ನು ದುಶ್ಚಟಗಳಿಗೆ ಪ್ರೇರೇಪಿಸುತ್ತದೆ. ಸಂಯುಕ್ತವಾಗಿ ತಾಂಡಾದ ಅಭಿವೃದ್ಧಿಗೆ ದುಡಿದ ಮಂದಿಯೇ ಈಗ ಹಣ ಸಿಕ್ಕೊಡನೆ ವೈಯಕ್ತಿಕವಾಗಿ ಹಾಳಾಗುತ್ತಾರೆ. ಅವರ ವೈಯಕ್ತಿಕ ಅವನತಿಯು ಒಂದು ಪಸ್ತೋರಲ್ ಸನ್ನಿವೇಶದ ಅವನತಿಗೆ ಕಾರಣವಾಗುತ್ತದೆ. ಭೌತಿಕವಾದ ವಿಕಾಸವು ತನ್ನ ಒಡಲಲ್ಲಿಯೇ ವಿನಾಶದ ಬೀಜವನ್ನು ಇಟ್ಟುಕೊಂಡು ಬರುತ್ತದೆ. ಇದು ಕಾದಂಬರಿಯ ಈ ಭಾಗದಲ್ಲಿ ಬಹಳ ಶಕ್ತಿಯುತವಾಗಿ ಮೂಡಿ ಬಂದಿದೆ. ಹಾಗೆ ನೋಡಿದರೆ ಇದೇ ಕಾದಂಬರಿಯ ಕೇಂದ್ರ ವಸ್ತು ಕೂಡ ಆಗಿದೆ. ಲೋಕು ಗ್ರೆನೈಟ್ ಉದ್ಯೋಗದ ಸ್ಥಳೀಯ ಅಧಿಕಾರಿಯಾಗಿ ನಿಂತರೂ ಕೂಡ ಕುಡುಕ ಮತ್ತು ವ್ಯಭಿಚಾರಿಯಾಗುತ್ತಾನೆ. ಉಳಿದವರ ಪಾಡು ಕೂಡ ಇವನಿಗಿಂತ ಹೆಚ್ಚು ಭಿನ್ನವಿಲ್ಲ. ತಾಂಡಾಕ್ಕೆ ನಾಗರಿಕ ಜಗತ್ತಿನ ರೂಪ ಬರುತ್ತದೆ. ಸೇವಾಲಾಲ ಮತ್ತು ದೇವಿಯ ಗುಡಿಗಳು ಆಧುನೀಕರಣಗೊಂಡು ಅಲ್ಲಿ ಪರಸ್ಥಳದಿಂದ ಬಂದ ಪುರೋಹಿತರು ಪೂಜೆ ಸಲ್ಲಿಸತೊಡಗುವುದು ಸಾಂಕೇತಿಕವಾಗಿದೆ. ಯಾವ ಬೇವಿನ ಮರವನ್ನು ಮುಟ್ಟಿ ಪಂಚಾಯತಿಯ ನ್ಯಾಯವ್ಯವಸ್ಥೆಯಲ್ಲಿ ನಿಜ ನುಡಿಯುವ ವ್ಯವಸ್ಥೆ ಇತ್ತೋ ಆ ಬೇವಿನಮರವೇ ಕಡಿಯಲ್ಪಡುತ್ತದೆ. ಹೀಗೆ ತಾಂಡಾ ಸೂಕ್ಷ್ಮವಾದ ಇಬ್ಬಂದಿತನವನ್ನು ಕಟ್ಟಿಕೊಂಡು ಬದಲಾಗುತ್ತದೆ. ತಾಂಡಾ ವಿಕಾಸಗೊಳ್ಳಲಿಲ್ಲವೆ ಎಂಬ ಪ್ರಶ್ನೆಗೆ ಉತ್ತರ 'ಹೌದು' 'ಇಲ್ಲ' ಎಂದು ಎರಡು ಬಗೆಯಲ್ಲೂ ಹೇಳಬಹುದು. ವೈಚಾರಿಕವಾಗಬಹುದಾಗಿದ್ದ ಈ ಭಾಗವನ್ನು ಹಿರೇಮಠರು

ಮಹಳ ಕಲಾವಂತಿಕೆಯಿಂದ ನಿಭಾಯಿಸಿದ್ದಾರೆ. ಆಧುನಿಕ ವಿಕಾಸವು ಸಮಾಜದಲ್ಲಿ ತೋರಿಕೆಗೆ ಭವ್ಯವಾಗಿ ಕಂಡರೂ ನಾವು ಕಳೆದುಕೊಂಡದ್ದೇನು ಮತ್ತು ಕಳೆದುಕೊಳ್ಳುತ್ತಿರುವುದೇನು ಎಂಬುದನ್ನು ಸೂಕ್ಷ್ಮವಾಗಿ ಈ ಭಾಗ ತೋರಿಸಿಕೊಡುತ್ತದೆ.

ಹೆಗ್ಗಳಿಕೆಯ ಮಾತೆಂದರೆ ಎರಡನೆಯ ಭಾಗದಲ್ಲಿ ಉಂಟಾಗುವ ಬದಲಾವಣೆಯು ಮೊದಲ ಭಾಗದ ಸಶಕ್ತ ವಿವರಗಳಿಗೆ ಮತ್ತು ಹೊಸ ಜೀವವನ್ನು ಮತ್ತು ಅರ್ಥಗಳನ್ನು ತುಂಬುತ್ತದೆ. ಇದು ಸೃಜನಾತ್ಮಕ ಬರವಣಿಗೆಯ ಒಂದು ದೊಡ್ಡ ಶಕ್ತಿ ಎಂದು ನಾನು ನಂಬಿದ್ದೇನೆ. ಲೋಕುನಲ್ಲಿ ಉಂಟಾದ ಬದಲಾವಣೆಗಳು ಕೆಲವೊಮ್ಮೆ ಆಕಸ್ಮಿಕ ಎಂದೆನಿಸುವಂತೆ ತೋರಿದರೂ ಕೂಡ ತನ್ನ ಅಣ್ಣ ಹರಿಯು ನೌಕರಿ ಹಿಡಿದು, ಒಳ್ಳೆಯ ನಾಗರಿಕ ಪ್ರಪಂಚಕ್ಕೆ ಸೇರಿದ ಹುಡುಗಿಯನ್ನು ಮದುವೆಯಾಗಿರುವುದು ಲೋಕುನಲ್ಲಿ ಒಂದು ಬಗೆಯ ಭೌತಿಕ ದಾಹವನ್ನು ಸೃಷ್ಟಿಸಿದೆ ಎಂಬುದನ್ನು ಕಾದಂಬರಿಯು ಮೊದಲಿನಿಂದಲೂ ಬಿಂಬಿಸುತ್ತಲೇ ಬರುತ್ತದೆ. ಲೋಕುನ ವಿಕಾಸದ ಪರಿಕಲ್ಪನೆಯು ಯಾವುದೋ ಒಂದು ಭಿನ್ನಸ್ವರೂಪದ ವಿಕಾಸಕ್ಕೆ ಪ್ರತಿಕ್ರಿಯೆಯಾಗಿ ಬಂದ ಕ್ರಿಯೆ ಎಂಬುದನ್ನು ಕಾದಂಬರಿಯು ಸಬಲವಾಗಿ ಸೆರೆಹಿಡಿಯುವುದರಿಂದ, ಮತ್ತು ಲೋಕುನ ವಿಕಾಸದ ಪರಿಕಲ್ಪನೆಯಲ್ಲಿ ಆಧುನಿಕ ವಿಕಾಸದ ಬೀಜವೂ ಇರುವುದರಿಂದ ಕಾದಂಬರಿಕಾರರು ಪ್ರಾಯಶಃ ನೈಜ ವಿಕಾಸಕ್ಕೆ ಆತ್ಮಗತವಾದ ಮತ್ತು ಆಪ್ಯಾಯಮಾನವಾದ ಆಲೋಚನೆಗಳು ಕಾರಣವಾಗಬಲ್ಲುವೆ ಹೊರತು ಪ್ರತಿಕ್ರಿಯಾತ್ಮಕವಾದ ಅಸಹಜ ಭಾವನೆಗಳು ಇಂಬುಕೊಡಲಾರವು ಎಂಬ ತತ್ವವನ್ನು ಓದುಗರ ಮುಂದಿಡುತ್ತಿದ್ದಾರೆನ್ನಿಸುತ್ತದೆ. ಈ ಮೊದಲೇ ಹೇಳಿದಂತೆ ಪಾತ್ರಗಳು ಮತ್ತು ಸನ್ನಿವೇಶಗಳು ರೂಪಕದ ಹಂದರವನ್ನು ಕಟ್ಟಿಕೊಳ್ಳುವುದರಿಂದ ಅವುಗಳು ಅರ್ಥದ ವಿವಿಧ ಛಾಯೆಗಳನ್ನು ಹೊರಹೊಮ್ಮಿಸುತ್ತವೆ.

ಮುಂದಿನ ಅಧ್ಯಾಯದಲ್ಲಿ ಸೋಮಲ್ಯಾನಾಯಕನ ಇನ್ನೊಬ್ಬ ಮಗ ಹರಿ ಕತೆ ಹೇಳುತ್ತಾನೆ. ಗೋಮಾಳದ ಹೋರಾಟದಲ್ಲಿ ಸೋಮಲ್ಯಾ ತನ್ನ ಮಾನಸಿಕ ಸ್ಥಿತಿಯನ್ನು ಕಳೆದುಕೊಂಡಿದ್ದಾನೆ. ಅವನನ್ನು ಬ್ಯಾಂಕಿನ ನೌಕರಿಯಲ್ಲಿರುವ ಹರಿ ತನ್ನೊಡನಿರಲು ವಿಜಯಪುರಕ್ಕೆ ಕರೆದುಕೊಂಡು ಬರುತ್ತಾನೆ. ಗೋಮಾಳ ಪ್ರಸಂಗದಲ್ಲಿ ಇಡೀ ತಾಂಡಾ ನಾಗರಿಕ ಪ್ರಪಂಚಕ್ಕೆ ತೆರೆದುಕೊಂಡು ಕ್ರೌರ್ಯವನ್ನು ಎದುರಿಸಿದರೆ, ಸೋಮಲ್ಯಾ ನಾಯಕನು ತನ್ನ ಮಗನ ಮನೆಯಲ್ಲಿ ವೈಯಕ್ತಿಕವಾಗಿ ಅಂಥ ಕ್ರೌರ್ಯವನ್ನು ಎದುರಿಸುತ್ತಾನೆ. ನಗರದ ಅನಿವಾರ್ಯತೆಗಳು ಅಸ್ಥಿರ ಮನಸ್ಸಿನ ಸೋಮಲ್ಯಾನನ್ನು ಅರ್ಥಮಾಡಿಕೊಳ್ಳಲಾರವು. ಅವನ ದುಃಖ-ದುಮ್ಮಾನಗಳಿಗೆ ಪ್ರತಿಸ್ಪಂದಿಸಬಲ್ಲ ಶಕ್ತಿಯೇ ಆ ನಾಗರಿಕ ವ್ಯವಸ್ಥೆಯಲ್ಲಿ ಇಲ್ಲ. ಹರಿಯ ಮಡದಿ ಲಂಬಾಣಿ ಜನಾಂಗಕ್ಕೆ ಸೇರಿದವಳಾಗಿದ್ದರೂ ಕೂಡ ಅವಳು ತಾಂಡಾದ ಜೀವನಕ್ಕೆ ಹೊರತಾದವಳು. ಮಡದಿ ಕಮಲಾ ಶ್ರೀಮಂತ ಮನೆಯಿಂದ ಬಂದವಳು. ಅವಳ ತಂದೆ ಹರಿಗೆ ನೌಕರಿ ಬೇರೆ ಕೊಡಿಸಿದ್ದಾನೆ. ಹರಿಯ ಅನಿವಾರ್ಯವಾದ ದ್ವಿಧಾ ಭಾವವು ಅವನ ಹಿಂದಿನ ಪೀಳಿಗೆಯ ಸೋಮಲ್ಯಾನಲ್ಲಿ ದ್ವಿಧಾಕ್ಕಿಂತ ಭಿನ್ನವಾದುದು. ಸೋಮಲ್ಯಾನಲ್ಲಿ ಎರಡು ಲೋಕಗಳಲ್ಲಿ ಕಳೆದು ಹೋದುದರ ಬಗೆಗೆ ಹಳಹಳಿ ಮತ್ತು ಹೊಸ ಜೀವನಕ್ಕೆ ಹೊಂದಿಕೊಳ್ಳುವಲ್ಲಿ ಇರುವ ಮುಜುಗರಗಳು ತುಂಬಿಕೊಂಡಿವೆ. ಹರಿಯ ಪ್ರಪಂಚದಲ್ಲಿ ಕಷ್ಟಪಟ್ಟು ತನ್ನನ್ನು ಸಲುಹಿದ ತಂದೆತಾಯಿಗಳ ಮಮತೆಭರಿತ ತ್ಯಾಗ ಮತ್ತು ಇನ್ನೊಂದೆಡೆ ನಾಗರಿಕ ಪ್ರಪಂಚದಲ್ಲಿ ತಾನು ಲಂಬಾಣಿ ಜನಾಂಗದಿಂದ ಬಂದಿದ್ದರೂ ಕೂಡ ಸೈ ಎನ್ನಿಸಿಕೊಳ್ಳಬೇಕೆಂಬ ತವಕಗಳು ತುಂಬಿಕೊಂಡಿವೆ. ಸಹಜವಾಗಿಯೇ ಲೋಕು, ಹರಿ ಮತ್ತು ಸೋಮಲ್ಯಾನ ಇಂಥ ಪ್ರಪಂಚಗಳನ್ನು ಕಾದಂಬರಿಯು ತನ್ನ ಒಡಲಲ್ಲಿ ಶೋಧಿಸುತ್ತದೆ, ಹೋಲಿಸುತ್ತದೆ ಮತ್ತು

ನಿರ್ಣಯಗಳನ್ನು ಓದುಗನಿಗೇ ಬಿಡುತ್ತವೆ. ಲೋಕು ಮತ್ತು ಹರಿ ಒಂದೇ ತಲೆಮಾರಿಗೆ ಸೇರಿದವರಾಗಿದ್ದರೂ ಕೂಡ ಅವರು ಬದುಕುತ್ತಿರುವ ಪ್ರಪಂಚಗಳು, ಅವರವರ ವಿಕಾಸದ ವ್ಯಾಖ್ಯೆಯ ಪರಿಧಿಯಲ್ಲಿ ಹುಟ್ಟಿದಂಥವುಗಳು. ನಾಗರಿಕತೆಯಿಂದ ಭೌತಿಕತೆ ಎಂಬುದು ಲೋಕುನ ವಾದವಾದರೆ, ನಾಗರಿಕತೆಯೆಂದರೆ ಸರೀಕದವರಲ್ಲಿ ತಲೆ ಎತ್ತಿ ನಿಲ್ಲುವುದೇ ವಿಕಾಸವೆಂಬಂತಾಗಿದೆ. ಇದು ಹರಿಯ ಸ್ಥಿತಿ. ಈ ಎರಡೂ ಧೋರಣೆಗಳ ಮಧ್ಯದಲ್ಲಿ ಅವುಗಳ ಸಂಕೀರ್ಣತೆಯನ್ನು ಅರ್ಥೈಸಲಾಗದೆ ಬಳಲುತ್ತಿದ್ದಾನೆ, ಸೋಮಲ್ಯಾ ನಾಯಕ.

ಸೋಮಲ್ಯಾ ಮತ್ತು ಅವನ ಮಡದಿಯು ಹಿರಿಯ ಮಗ ಹರಿಯೊಡನೆ ಬದುಕಲು ಹೋದಾಗ ಪಟ್ಟ ಬವಣೆಯ ವ್ಯಥೆ ಇಲ್ಲಿದೆ. ಹಾಗೆಯೇ ಸೋಮಲ್ಯಾನಿಂದ ತಾಂಡಾದ ಕತೆಯನ್ನು ಬಚ್ಚಿಟ್ಟುದರಿಂದ ಮುಂದೆ ಸೋಮಲ್ಯಾ ತನ್ನ ಕನಸಿನ ತಾಂಡಾಕ್ಕೆ ಮರಳಿದಾಗ ಅವನಿಗುಂಟಾಗಬಹುದಾದ ಶಾಕ್‌ನ ಸಿದ್ಧತೆಯೂ ಇಲ್ಲಿಯೇ ಪ್ರಾರಂಭವಾಗುತ್ತದೆ. ಹರಿ ಮತ್ತು ಅವನ ಮಡದಿ ಕಮಲಾಳ ಆಧುನಿಕ ಜೀವನದಲ್ಲಿ ಸೋಮಲ್ಯಾ ಮತ್ತು ಅವನ ಮಡದಿ ಫಿಟ್ ಇನ್ ಆಗುವುದಿಲ್ಲ. ಸೋಮಲ್ಯಾನ ಮಡದಿ ರೂಪ್ಲಿಯು ತನ್ನ ಲಂಬಾಣಿ ಉಡುಪನ್ನು ಬಿಟ್ಟು ಸೀರೆ ತೊಟ್ಟುಕೊಳ್ಳುವುದರಲ್ಲಿ ಪಡುವ ಮುಜುಗರ, ಬಯಲಕಡೆಗೆ ಹೋಗದೆ ಮನೆಯಲ್ಲಿಯ ಟಾಯ್‌ಲೆಟ್ ಉಪಯೋಗಿಸಬೇಕಾಗಿ ಬಂದಾಗ ಸೋಮಲ್ಯಾ ಪಡುವ ಬವಣೆ ಮತ್ತು ಬ್ಯಾಂಕ್ ಮ್ಯಾನೇಜರ್ ಬಂದಾಗ ಸೋಮಲ್ಯಾ ನಡೆದುಕೊಳ್ಳುವ ರೀತಿಯಿಂದ ಹರಿಗೆ ಉಂಟಾಗುವ ಇರುಸು-ಮುರುಸು –ಇವೆಲ್ಲಾ ಈ ಭಾಗದಲ್ಲಿ ತೂಕ ತಪ್ಪದಂತೆ ಚಿತ್ರಿತವಾಗಿವೆ. ಪಲ್ಲಟದ ವಿವಿಧ ಅವಸ್ಥೆಗಳನ್ನು ತೋರಿಸುವುದು ಕೂಡ ಕಾದಂಬರಿಯ ಉದ್ದೇಶಗಳಲ್ಲಿ ಒಂದಾಗಿರುವುದರಿಂದ ಕಾದಂಬರಿಯ ಈ ಭಾಗವು ಅದಕ್ಕೆ ಪೂರಕವಾಗಿ ನಿಲ್ಲುತ್ತದೆ. ಹರಿ ಮತ್ತು ಲೋಕು ಒಂದೇ ನಾಣ್ಯದ ಎರಡು ಮುಖಗಳಿದ್ದಂತೆ. ಒಬ್ಬ ತಾಂಡಾದಲ್ಲಿದ್ದುಕೊಂಡೇ ಹೊರಜಗತ್ತಿನ ಆಮಿಷಗಳಿಗೆ ಬಲಿಯಾಗಿದ್ದಾನೆ ಮತ್ತು ವಿಕಾಸದ ಅರ್ಥವನ್ನು ತನ್ನದೇ ಆದ ರೀತಿಯಲ್ಲಿ ಮಾಡಿಕೊಂಡಿದ್ದಾನೆ. ಇನ್ನೊಬ್ಬ ತನ್ನ ವಿದ್ಯಾಭ್ಯಾಸದ ವಿಕಾಸವನ್ನೇ ನಿಜವಾದ ವಿಕಾಸವೆಂದು ಬಗೆದು ತನ್ನ ಸುತ್ತಲಿನ ಹೃದಯವಂತಿಕೆಗೆ ಕುರುಡಾಗಿ ಕುಳಿತಿದ್ದಾನೆ. ಸೋಮಲ್ಯಾ ಈ ಉಸಿರು ಕಟ್ಟಿಸುವ ವಾತಾವರಣದಲ್ಲಿ ಬದುಕಲಾಗದೆ ಮಡದಿಯೊಡನೆ ಅರೆಹುಚ್ಚಿನ ಅವಸ್ಥೆಯಲ್ಲಿ ಮರಳಿ ತಾಂಡಾಕ್ಕೆ ಬರುತ್ತಾನೆ.

ಕಾದಂಬರಿಯ ಕೊನೆಯ ಭಾಗದಲ್ಲಿ ಕತೆಯನ್ನು ಕಸನು ಮುಂದುವರಿಸುತ್ತಾನೆ. ಇದು ಬಹಳ ಅರ್ಥಪೂರ್ಣವಾಗಿದೆ. ಕಸನು ಸೋಮಲ್ಯಾನ ಭಾವನೆಗಳಿಗೆ ಸ್ಪಂದಿಸುವಂಥ ಸ್ನೇಹಿತ ಮಾತ್ರವಲ್ಲ, ಅವನು ತಾಂಡಾ ಬದಲಾದರೂ ತಾನು ಬದಲಾಗಲಾರೆ ಎಂದು ಹಟ ಹಿಡಿದು ಅಲ್ಲಿಯೇ ಉಳಿದಿದ್ದಾನೆ. ಶೇತಕಿ ಮಾಡುತ್ತ ಮಗನೊಡನೆ ನೆಲಕ್ಕಂಟಿದ ಜೀವವಾಗಿ ಬದುಕಿದ್ದಾನೆ. ತಾಂಡಾದ ಸಕಲ ಬದಲಾವಣೆಗಳಿಗೆ ಮೂಕಸಾಕ್ಷಿಯಾಗಿದ್ದಾನೆ. ಅವನು ಕಾದಂಬರಿಯ ಕೊನೆಯ ಭಾಗದಲ್ಲಿ ಕತೆಯನ್ನು ಮುಂದುವರಿಸುವುದು ಕಾದಂಬರಿಗೆ ಪರಿಪೂರ್ಣತೆಯನ್ನು ತಂದುಕೊಟ್ಟಿದೆ. ಕಸನುನ ಮೂಲಕ ಬಿಚ್ಚಿಕೊಳ್ಳುವ ಕಾದಂಬರಿಯ ಈ ಭಾಗದಲ್ಲಿ ತಾಂಡಾದಲ್ಲಿ ಉಂಟಾದ ವಾಮಮಾರ್ಗದ ಬದಲಾವಣೆಯ ಚಿತ್ರಣವಿರುವ ಜೊತೆಗೇ ಸೋಮಲ್ಯಾನ ಕಲ್ಪನೆಯಲ್ಲಿ ಮಾತ್ರ ಬದುಕಿರುವ ತಾಂಡಾದ ಸುಂದರ ಚಿತ್ರಣವಿದೆ. ಇವೆರಡು ಲೋಕಗಳ ಮಧ್ಯೆ ತುಯ್ಯುತ್ತ ಅರೆ ಹುಚ್ಚಾವಸ್ಥೆಯಲ್ಲಿರುವ ಸೋಮಲ್ಯಾನು ಬದಲಾವಣೆಗೆ ಸಿಲುಕಿರುವ ಹೃದಯವಂತನೊಬ್ಬನ ಇಂದಿನ ಸ್ಥಿತಿಗೆ ಪರಿಪೂರ್ಣವಾದ ರೂಪಕವಾಗಿ ಅರ್ಥಗಳನ್ನು ಕಟ್ಟಿಕೊಳ್ಳತೊಡಗುತ್ತಾನೆ. ಕೊನೆಗೆ ಸೋಮಲ್ಯಾನು ಗ್ರನೈಟ್‌ಗಾಗಿ ಇಟ್ಟ ಮದ್ದಿನ ಸಿಡಿತದಿಂದಾಗಿ ಮರಣವನ್ನಪ್ಪುತ್ತಾನೆ. ಹೀಗೆ ಹೆಸರಿನಿಂದ ನಾಯಕನಾದ ಸೋಮಲ್ಯಾನು ನಿಜವಾಗಿಯೂ ದುರಂತ ನಾಯಕನಾಗಿ ಕೊನೆ ಕಾಣುತ್ತಾನೆ.

ಬಸಪ್ಪ ಮಾಸ್ತರರು, ಲೋಕು, ಹರಿಯ ಮತ್ತು ಕಸನೂಸ ಮೂಲಕ ಕತೆ ಹೇಳಿಸುವ ತಂತ್ರದಿಂದಾಗಿ ಕಾದಂಬರಿಗೆ ಲಭಿಸಿರುವ ದೊಡ್ಡ ಶಕ್ತಿಯೆಂದರೆ ಕಾದಂಬರಿಕಾರರು ಆದರ ವಸ್ತುವಿನಿಂದ ಪಡೆದ ಸೃಜನಾತ್ಮಕ ' ದೂರ '. ನಿರೂಪಣಾ ಮಾರ್ಗದಲ್ಲಿ ಕಾದಂಬರಿಯು ಓಡಿದರೂ ಕೂಡ ಈ ತಂತ್ರದಿಂದಾಗಿ ನಿರೂಪಣಾ ಮಾರ್ಗದ ಸರ್ವತ್ರ ಉಪಸ್ಥಿತಿಗೆ ಬರುವ ಲೋಪವನ್ನು ಸುಲಭವಾಗಿ ಗದ್ದುಂತಾಗಿದೆ. ಇದು ಕಾದಂಬರಿಗೆ ಹೆಚ್ಚಿನ ಪಾರದರ್ಶಕತೆಯನ್ನು ಮತ್ತು ಅರ್ಥವಿನ್ಯಾಸವನ್ನು ಒದಗಿಸಿದೆ.

ಕಾದಂಬರಿಯಲ್ಲಿ ಬರುವ ಚಿಕ್ಕಪುಟ್ಟ ಪಾತ್ರಗಳಲ್ಲಿ ಸೆರೆ ಸಿಂದಿ ಮಾರುತ್ತ ಹೆಂಗಸಾಗಿಯೂ ಗಂಡೆದೆಯನ್ನು ಪಡೆದ ಹೆಂಗಸು, ಕಳ್ಳನಾಗಿ ಬಾಳಿ ಬದಲಾಗುವ ವ್ಯಕ್ತಿ, ಊರು ಬಿಟ್ಟು ಹೋಗಿ ಬವಣೆ ಪಡುವ ಮಂದಿ ಮತ್ತು ಮುಖ್ಯವಾಗಿ ಈ ಬವಣೆಯ ಹಿಂದಿರುವ ಲೋಕಜ್ಞಾನದ ಅಭಾವ ಇವೆಲ್ಲ ಮನಸ್ಸಿನಲ್ಲಿ ಬಹುದಿನಗಳ ವರೆಗೆ ನಿಲ್ಲುವಂತೆ ಮೂಡಿಬಂದಿವೆ. ಮನೆಯಲ್ಲಿ ನಡೆಯಬಹುದಾದ ಮದುವೆ ತಪ್ಪಿ ಹೋಗುವುದು, ಇದ್ದ ಅನುಕೂಲತೆಗಳನ್ನೇ ದೊಡ್ಡ ಅನುಕೂಲತೆಗಳೆಂದು ಪರಿಭಾವಿಸುವ ರೀತಿ ಮತ್ತು ಇದರಿಂದ ಉಂಟಾಗುವ ಸಮಾಧಾನ – ಇವೆಲ್ಲವೂ ಕಾದಂಬರಿಯ ಶಕ್ತಿಗೆ ಕಾರಣವಾಗುತ್ತವೆ. ಹೀಗೆ ವಿಕಾಸವೆಂದರೆ ಕೇವಲ ಭೌತಿಕ ವಿಕಾಸವೆಂದು ತಿಳಿದಾಗ ಉಂಟಾಗುವ ಹೃದಯದ ಅವನತಿಯನ್ನು ಕಾದಂಬರಿಯು ಸಬಲವಾಗಿ ಸೆರೆಹಿಡಿಯುತ್ತದೆ.

● ▼

ಮಾಧವ ಕುಲಕರ್ಣಿ, ಇಡಬ್ಲ್ಯುಎಸ್ ೧೫೫, ೯ ನೇ ಮುಖ್ಯ ರಸ್ತೆ, ಪ್ರಥಮ ಹಂತ, ಹೆಬ್ಬಾಳ್, ಮೇಟಗಳ್ಳಿ ಅಂಚೆ, ಮೈಸೂರು - ೫೭೦ ೦೧೭ ✆ : ೦೮೨೧ - ೩೦ ೨೭೦೩

ಎಲ್ಲಿ ಹೋದವು ಸಖ

ಕವಿತೆ - ೧೦

ಶಾರದಾ ಮುಳ್ಳೂರ

ಕಾಳ ಕತ್ತಲೆಯ ಬಂಧವಳಿದು ಹೊರಬರುವ ಭಾವ
ಹಕ್ಕಿಗುಂಟು ಹಾರಿಬಿಡಲು ರೆಕ್ಕೆ ಕಟ್ಟಿದ ಕಾಲು
ಎಲ್ಲಿವೆ ಕೊಟ್ಟ ಮಾತು ಮುತ್ತುಗಳು ?
ತೆಕ್ಕೆ ಹಾಯ್ದಿವೆ ಇಂದು ರಣಗುಡುವ ದಿನಗಳು

ನೋವ ನುಂಗಿ ನಿತ್ಯ ನಲಿವ ನೀಡಿದ ಹಂಸ ನೀ
ನೀನಿರದ ಬಹುದಿನಗಳಿಗೆ ಎದೆ ನೋವಿನ ಹೊಂಡ
ದೂರದೂರದಿ ನಿನ್ನ ಕಾಡಬಹುದು ನನ್ನ ನೆನಪು
ಸುಮ್ಮನಾದರೂ ಹಾಗೆ ಬರೆ ನನ್ನ ಮನ ತಂಪಾಗಬಹುದು

ಹಿಂದೊಮ್ಮೆ ನೀ ನಗಿಸಿ ನಾ ನಕ್ಕು ಆ ಬಾಳೆ ಬಯಸಿದ್ದು
ನಗುವಿನ ಸಿರಿ ಆಳದಲಿ ಬದುಕು ಕಟ್ಟಿ ಹಾಡಿದ್ದು
ಆ ಹಾಡು ಆ ನಗೆ ಎಡೆಬಿಡದ ರಸಮಾತು
ಎಲ್ಲಿ ಹೋದವು ಸಖ ಬಿಸಿಲ ತೆಕ್ಕೆಗೆ ಸಿಕ್ಕ ರಸಹನಿ....

● ▼

ಶಾರದಾ ಮುಳ್ಳೂರ, ಅಧ್ಯಾಪಕಿ, ಬಾಲಕಿಯರ ಪ.ಪೂ. ಕಾಲೇಜ್, ಜಮಖಂಡಿ, ಜಿ. ಬಾಗಲಕೋಟ

ಹೇಮಾ ಪಟ್ಟಣಶೆಟ್ಟಿ

ಪಾತ್ರಗಳು : ಹೆಣ್ಣು: ನಿರೂಪಕಿ: ನಿರೂಪಕ: ನಟಿ - ೧ / ತಾಯಿ
ನಟಿ - ೨ / ಅತ್ತೆ: ನಟ - ೧ / ಮಗ / ಗಂಡ / ಪುಂಡ
ನಟ - ೨ / ಪೋಲೀಸ್ / ವರನ ತಂದೆ / ಪುಂಡ
ನಟ - ೩ / ನ್ಯಾಯಾಧೀಶ / ಪುಂಡ: ಮೇಳ

ನಟ-ನಟಿಯರು ಮುಖವಾಡ ಹಾಕಿಕೊಂಡು ಹೆಜ್ಜೆ ಹಾಕುತ್ತ ಸಾಲಾಗಿ ರಂಗ ಪ್ರವೇಶಿಸಿ ಪ್ರೇಕ್ಷಕರಿಗೆ ಅಭಿಮುಖವಾಗಿ ವೃತ್ತಾಕಾರದಲ್ಲಿ ನಿಲ್ಲುತ್ತಾರೆ. ಮೇಳದ ಹಾಡಿಗೆ ತಕ್ಕಂತೆ ಅಭಿನಯಿಸುತ್ತ ಕುಣಿಯತೊಡಗುತ್ತಾರೆ.

ಮೇಳ : *ಕುಂತ ನಿಂತ ಮಂದಿಯೆಲ್ಲಾ*
ಚಿತ್ತಗೊಟ್ಟು ಕೇಳ್ರಿ ನೀವು
ಚಿತ್ತಗೊಟ್ಟು ಕೇಳ್ರಿ ನೀವು ಮಹಿಳೆಯರಾ
ಚಿತ್ತಗೊಟ್ಟು ಕೇಳ್ರಿ ನೀವು ಮಹನಿಯರಾ
ಹುಲಿ ಕರಡಿ ಬ್ಯಾಟೆಲ್ಲಾ
ತೊಗಲಗೊಂಬಿ ಆಟಲ್ಲಾ
ಅದಕಿಂತ ಹೆಚ್ಚಿನ ಮಜಕೂರಾ ನಾವ ಹೇಳ್ತೀವಿ
ಅದಕಿಂತ ಹೆಚ್ಚಿನ ಮಜಕೂರಾ
ಬೇವಂಥ ಬೇವಿಗೂ ಸಿಹಿ ಮಾವ ಕಸಿ ಮಾಡಿ
ಪ್ರೀತಿಯನ್ನೇ ಹೆತ್ತವಳು ಹೆಣ್ಣು
ಪ್ರೀತಿಯನ್ನೇ ಹೆತ್ತವಳು ಹೆಣ್ಣು

ಹಾಡು ಮುಗಿದಾಗ ನಟ-ನಟಿಯರು ಮುಖವಾಡ ತೆಗೆದು ವೃತ್ತಕ್ಕೆ ಒಳಮುಖವಾಗಿ ನಿಂತಿದ್ದಾರೆ.

ಹೆಣ್ಣು : ನಾನೊಬ್ಬ ಹೆಣ್ಣು.
ನಟಿಯರು : ತಾಯಿ.
: ಸೋದರಿ.
: ಪತ್ನಿ.
: ಮಗಳು.
ಹೆಣ್ಣು : ನಾನೊಬ್ಬ ಹೆಣ್ಣು.

ಮೇಳದ ಹಾಡಿನ ಹಿನ್ನೆಲೆಯಲ್ಲಿ ಎಲ್ಲ ನಟನಟಿಯರು ಒಬ್ಬೊಬ್ಬರಾಗಿ ರಂಗದ ಮಧ್ಯೆ ಬಂದು ವಿವಿಧ ಆಕೃತಿಯನ್ನು ತಾಳಿ, ಒಂದು ಶೋಕದ ಬೆಟ್ಟವನ್ನು ನಿರ್ಮಿಸಿ ಫ್ರೀಜ್ ಆಗುತ್ತಾರೆ. ನಂತರ ಕ್ರಿಯಾಶೀಲರಾಗಿ ಮಹಿಳೆಯರಿಗೆ ಸಂಬಂಧಿಸಿದ ಕಾರ್ಯಚಟುವಟಿಕೆಗಳಲ್ಲಿ ತೊಡಗುತ್ತಾರೆ.

ಮೇಳ : *ನಾನೊಬ್ಬ ಹೆಣ್ಣು ನಾನೊಬ್ಬ ಹೆಣ್ಣು*
ಬದುಕಿನ ಮರುಭೂಮಿಯಲ್ಲಿ
ಶೋಷಣೆಯ ಉರಿಉರಿವ ಉಸುಕಿನಲಿ

ಎಂದಿನಿಂದಲೂ ಬರಿಗಾಲಿನಲ್ಲಿ
ಓಡುತ್ತ ಓಡುತ್ತ ಓಡುತ್ತಲಿರುವೆ
    ನಾನೊಬ್ಬ ಹೆಣ್ಣು ಹಳ್ಳಿಗಾಡಿನ ಹೆಣ್ಣು
    ಶತಮಾನದಿಂದ ಹೊಲಗದ್ದೆಯಲ್ಲಿ
    ತೆಂಗು ಕಂಗು ಚಹ ತೋಟಗಳಲಿ
    ಶಕ್ತಿ ಮೀರಿ ದುಡಿಯುತ್ತ ದುಡಿಯುತ್ತ
    ಬಡತನದ ಬೇಗೆಯನೆ ಉಂಡವಳು
    ನಿಟ್ಟುಸಿರನೇ ಹೊದ್ದವಳು
ನಾನೊಬ್ಬ ಹೆಣ್ಣು ಅಲೆಮಾರಿ ಹೆಣ್ಣು
ಊರೂರು ಸುತ್ತುತ್ತ ವಾನರುಗಳೊಡನೆ
ಕಾಳುಕಡಿ ಕಟ್ಟಿಗೇ ಮಾರುತ್ತ
ಬೆಟ್ಟಗಳ ತಪ್ಪಲಲಿ ಮಕ್ಕಳನು ಹೆರುವೆ
ಬಟ್ಟ ಬಯಲಿನಲಿ ಆಡು ಕುರಿ ಸಾವು
ಶೋಕಾಕುಲ ಮೌನದಲಿ ಹೆಣ್ಣು
ಶೋಕಾಕುಲ ಮೌನದಲಿ ನೆಲೆಯಿರದ ಹೆಣ್ಣು

ಹಾಡು ಮುಗಿಯುತ್ತಿದ್ದಂತೆ ವೃತ್ತಾಕಾರದ ತಮ್ಮ ಸ್ವಸ್ಥಾನಕ್ಕೆ ತೆರಳುತ್ತಾರೆ.

ನಿರೂಪಕಿ : ಏಯ್ ಸಾಕಮಾಡ್ರೆಪ್ಪೊ, ಸಾಕು, ಕೇಸರಿಟ್ಟೇತಿದು. ದಿನಾ ಟಿ. ವಿ., ಸಿನೆಮಾ, ನಾಟಕದಾಗ ಇಂಥಾವ್ರುನ್ನ ನೋಡಿ ನೋಡಿ ಸಾಕಾಗಿ ಹೋಗೇತಿ. ಇವತ್ತ ಹೊಸಾ ಆಟಾ ನೋಡೂಣು. ಏ ಅಕ್ಕಾ, ಅಲ್ಲ್ಯಾಕ ನಿಂತೀಯವಾ. ಮುಂದ ಬಾ. ತಾಯಂದಿರ, ನೀವೂ ಮುಂದ ಬಂದು ಕುಂದರ್ರಿ. ಅಣ್ಣಗೋಳ, ಗದ್ಲಾ ಹಾಕಬ್ಯಾಡ್ರಿ. ಮೊದಲs ನಮ್ಮ ಮಾತು ನಿಮ್ಮ ಮಾತಿನ್ಯಾಗ ಫರಕ ಐತಿ. ಅದರಾಗ ಇದು 'ಹೆಣ್ಣು ಪಾ': ಪಟಕ್ಕನ ಎಲ್ಲಾರಿಗೂ ತಿಳಿಯಾಣಿಲ್ಲ. ಅದಕ್ಕ ಸುಮ್ಮನ ಕುಂತು ನಿಂತು ನಾಟಕಾ ನೋಡರಿ. ಧಾನ್ಲೆ ಮಾಡಬ್ಯಾಡರಿ. ನಾವs ಒಂದು ಆಟಾ ಕಟ್ಟೇವರಿ.

ನಿರೂಪಕ : ಏನಾಟವಾ ಅದು ?

ನಿರೂಪಕಿ : ಆದಿಶಕ್ತೀ ಅಂದರ ಸ್ತ್ರೀ ಶಕ್ತೀ ಕತಿಯಪ್ಪಾ ಅದು.

ನಿರೂಪಕ : ಓ ಗೊತ್ತಾತು ಬಿಡು. ಸೀತೆ ಸಾವಿತ್ರಿಯಂಥಾ ಪತಿವ್ರತೆಯ ಕತಿ ಹೌದಲ್ಲೊ ?

ನಿರೂಪಕಿ : ಊಹ್ಞೂ ಅಲ್ಲ.

ನಿರೂಪಕ : ಮತ್ತ ?

ನಿರೂಪಕಿ : ಇದು ನಿಜ-ಜೀವನದ ಕಥೀ.

ನಿರೂಪಕ : ಮತ್ಯಾಕ ತಡ. ಸುರೂ ಮಾಡಲ್ಲಾ.

ನಿರೂಪಕಿ : ಈಗ ಸುರೂನ. ಒಂದು ಸಣ್ಣ ಹುಡುಗಿಯ ಸಣ್ಣ ಕಥಿಯಿಂದ ಸುರು ಮಾಡ್ತೇನಿ ನೋಡ್ರಿ.

ಇಬ್ಬರು ನಟಿಯರು ಮತ್ತು ಒಬ್ಬ ನಟ ವರ್ತುಲದಿಂದ ಎದ್ದು ಬಂದು ತಾಯಿ, ಮಗಳು ಮತ್ತು ಮಗನ ಪಾತ್ರವನ್ನು ಅಭಿನಯಿಸುತ್ತಾರೆ. ಮಗ ಕಬಡ್ಡಿ ಆಡತೊಡಗುತ್ತಾನೆ. ಮಗಳು ಮಗ್ಗಿ ಬಾಯಿಪಾಠದಲ್ಲಿ ತೊಡಗುತ್ತಾಳೆ.

ಮಗ : ಹೂ ತು ತು ತು ತು...

ಮಗಳು : ನಾಕೊಂದಲೆ ನಾಕು, ನಾಕೆರಡ್ಲೆ ಎಂಟು.

ಮಗ : ಹೂ ತು ತು ತು ತು...

ಕೂಸು ಅಳುವ ದನಿ.

ಮಗಳು : ನಾಕಮೂರ್ಲ ಹನ್ನೆರಡು, ನಾಕನಾಕಲೆ...

ತಾಯಿ : **(ಒಳಗಿನಿಂದ)** ಏ ಕೂಸು ಅಳಾಕತ್ತೇತಿ ನೋಡು. **(ಹೊರಬಂದು)** ಐಯ್ಯ ಇನ್ನೂ ಹೊತ್ತು ಹುಟ್ಟಿಲ್ಲ. ನೀ ಪುಸ್ತಕ ಹಿಡಕೊಂಡ ಕುಂತೀ ? ನಿನಗ ಹೇಳವ್ರು ಕೇಳವ್ರು ಇಲ್ಲೇನು ?

ಮಗಳು : ಅವ್ವಾ, ನಾ ಮಗ್ಗೀ ಬಾಯಿಪಾಠ ಮಾಡಾಕತ್ತೇನಿ.

ತಾಯಿ : ನಿನ್ನ ಮಗ್ಗಿ ಸುಟ್ಟುಬರ್ಲಿ. ನೀ ಓದಿ ಏನ ಮಾಂಬಲೆದಾರಕೀ ಮಾಡೂದೈತಿ ? ಹೆಣ್ಣ ಹೆಂಗಸು ನೀ. ಕೂಸಿನ್ನ ಸಂಬಾಳಸೂದು ಕಲಿ ಮೊದಲ.

ಮಗಳು : ನೀ ಅಣ್ಣಗ ಯಾಕ ಹೇಳೂದಿಲ್ಲ. ಅವ್ನಾ ಖಾಲಿಪಿಲಿ ಆಟ ಆಡಾಕತ್ತಾನ.

ತಾಯಿ : ಏನೂ ? ಅಂವನ್ನ ಸರಿಗಟ್ಟಿಗೋತೀ ನೀ ? ಅವ್ನಾ ಗಂಡು ಹುಡುಗ. ಸಾಲೀ ಕಲತು, ನೌಕರೀ ಹಿಡದು ನಾಳೆ ನಮ್ಮನ್ನ ಸಾಕಾವ್ನ ಅವ್ನನು. ಅವ್ನಾ ನಮ್ಮ ಮನೀ ದೀಪ.

ಹುಡುಗ ಬುಗರಿ ಆಡಿಸುತ್ತಿದ್ದಾನೆ.

ಮಗಳು : ನಾನೂ ಕಲೀತೇನಿ, ನೌಕರಿ ಮಾಡತೇನಿ. ಅಪ್ಪನ್ನ ನಿನ್ನ ನೋಡಕೋತೇನಿ.

ತಾಯಿ : ಹ್ಞಾ. ನೀಯೇನು ನೋಡಿಕೋತಿ ತಲಿ ? ನೀನು ಗಂಡನ ಮನೀಗೆ ಹೋಗೂವಾಕಿ.

ಮಗಳು : **(ಅಳುತ್ತ)** ಅವ್ವ, ನಾನೂ ಸಾಲಿಗೆ ಹೋಗೂವಕಿ.

ತಾಯಿ ಮಗಳು ಮಗ ಫ್ರೀಜ್ ಆಗುತ್ತಾರೆ.

ನಿರೂಪಕಿ ಪ್ರೇಕ್ಷಕರನ್ನುದ್ದೇಶಿ ಮಾತಿಗೆ ತೊಡಗುತ್ತಾಳೆ.

ನಿರೂಪಕಿ : ಹಿಂಗ ಗಂಡು ಮಗುವಿಗೇ ಒಂದು ನೀತಿ, ಹೆಣ್ಣು ಮಗುವಿಗೇ ಒಂದು ನೀತಿ. ಒಂದು ಶ್ರೇಷ್ಠ ಇನ್ನೊಂದು ಕನಿಷ್ಠ – ಈ ತಾರತಮ್ಯ ಹೆಣ್ಣು ಹುಟ್ಟಿದಾಗಿಂದs ಸುರು ಆಕ್ಕೇತಿ.

ನಿರೂಪಕ : ಆಕಿ ತನ್ನ ಬಾಲ್ಯದ ಹುಡುಗಾಟ, ಖುಶಿ, ಮುಗ್ಧತೆ, ಕನಸು ಎಲ್ಲಾನೂ ಕಳಕೊಂಡು ಬಿಡ್ತಾಳ.

ನಿರೂಪಕ ರಂಗದ ಮಧ್ಯೆ ಬಂದು ಶಿಕ್ಷಕನಂತೆ ರಾಗವಾಗಿ " ಅ ಆ ಇ ಈ ಉ ಇವನು ಬಸವ; ಅ ಆ ಇ ಈ ಉ ಇವಳು ಕಮಲ; ಬಸವನ ತಂಗಿ ಕಮಲ. ಬಸವ ಶಾಲೆಗೆ ಹೋಗುತ್ತಾನೆ. ಕಮಲೆ ನೀರು ತರುತ್ತಾಳೆ. " ಎಂದು ಎಲ್ಲರಿಗೂ ಬಾಯಿಪಾಠ ಮಾಡಿಸುತ್ತಾನೆ.

ನಿರೂಪಕಿ : ಏ ಸಾಕ್ಮಾಡೋ ಇದನ್ನ. ಹುಡುಗಾ ಸಾಲಿ ಕಲೀಬೇಕು. ಹುಡುಗಿ ಮನಿ ಕೆಲಸಾ ಮಾಡಬೇಕು. ಇಂಥಾ ಲಿಂಗಭೇದವನ್ನು ನಾವು ಶಿಕ್ಷಣದ ಮೂಲಕನೂ ಮಕ್ಕಳ ತಲ್ಯಾಗ ತುಂಬತೇವಿ.

ನಿರೂಪಕ : ವಿಧಿ ನಿಷೇಧ ಹೇರ್ತೇವಿ....

ನಟ/ನಟಿಯರು : ಹೆಣ್ಣು ಪರರ ಮನಿ ಸೊತ್ತು.

: ಎಷ್ಟು ಕಲಿಸಿದರೂ ಅಷ್ಟರಾಗ ಐತಿ.

: ಹೆಚ್ಚು ಕಲ್ಸಿದ್ರ ಇನ್ನೂ ಹೆಚ್ಚಿನ ತ್ರಾಸು. ಆಕೀಕಿಂತಾ ಹೆಚ್ಚು ಕಲತ ಹುಡುಗನ್ನ ಹುಡುಕಬೇಕು.

: ಅವ್ನಾ ಇನ್ನೂ ಹೆಚ್ಚಿನ ವರದಕ್ಷಿಣೆ ಬೇಡಾವ್ನಾ.

: ಅದಕ್ಕ ಹೆಣ್ಣಗ ಕಲಸಬೇಕಾದದ್ದು, ಮನೆವಾಳ್ತನ. ಅಂದ್ರ ಮನೀ ಕೆಲ್ಸ.

: ಕಸಾ ಹುಡ್ಗೂದು, ಭಾಂಡೆ ತಿಕ್ಕೂದು, ಅರಿವಿ ಒಗ್ಯೂದು, ಊಟಾ ಬಡ್ಸೂದು, ಎಂಜಲಾ ಮುಸರಿ ಎತ್ತೂದು.

: ಹೊಲಿಯೂದು ಹೆಣೆಯೂದು ಕಸೂತಿ.

: ಅಡಿಗ್ಯಂತೂ ಸೈಯ್ಸೈ. ಹಣ್ಣಂದ್ರ ಅಡಿಗಿ, ಅಡಿಗೆಂದ್ರ ಹೆಣ್ಣು.

ಹೆಣ್ಣು : ನಾನೊಬ್ಬ ಹೆಣ್ಣು.

ನಟ/ನಟಿಯರು : ದೇವ್ರ ದಿಂಡ್ರ ಉಪವಾಸ ವ್ರತಾ ಎಲ್ಲಾ ಬೇಕು.

: ಹೌದು ಗಂಡನಮನಿ ಶ್ರೇಯಸ್ಸಿಗೆ ಬೇಕಲ್ಲ.

: ಗಂಡನ ಮಾನಾ ಮರ್ಯಾದಿ ಕಾಯ್ಬೇಕಲ್ಲ ಮತ್ತ.

: ಗಂಡುಮಗನ್ನ ಹಡೆದು ಅವನ ಮನೀ ಹೆಸರ ಉಳಸಬೇಕು.

: ಮತ್ತ ಆಕೀಗೆ ಬ್ಯಾರೆ ಹೆಸರೂ, ದೆಸೀ ಎಲ್ಲೆದ ?

ಹೆಣ್ಣು : ಇಂಥವನ ಮಗಳೂ– ಇಂಥವನ ಹೆಂಡತೀ– ಇಂಥವನ ತಾಯೀ– ಅನ್ನೋದs ನನ್ನ ಗುರ್ತು.

ನಿರೂಪಕಿ : ಇಂಥಾ ನಿರ್ಬಂಧಗಳು ಹೆಣ್ಣನ್ನ ದುರ್ಬಲ ಮಾಡ್ತಾವ. ಹುಟ್ಟಿನಿಂದ ಹೆಣ್ಣುಕೂಸು ಗಂಡಕೂಸಿಗಿಂತ ಸಶಕ್ತ ಅಂತ ವಿಜ್ಞಾನ ಹೇಳ್ತದ.

ನಿರೂಪಕ : ಆದ್ರ ಮಕ್ಕಳನ್ನ ಬೆಳ್ಸೂವಾಗ ನಾವು ಮಾಡುವ ಸಂಸ್ಕೃತೀಕರಣ ಸಮಾಜೀಕರಣದೊಳಗ ದೋಷ ಅದ. ಅದು ಲಿಂಗತಾರತಮ್ಯ ಸೃಷ್ಟಿ ಮಾಡ್ತದ.

ನಿರೂಪಕಿ : ಅಪ್ಪಾ, ಈಗ ಪರಿಸ್ಥಿತಿ ಸ್ವಲ್ಪ ಬದಲಾಗೇದ. ಹೆಣ್ಣುಹುಡಿಗ್ಯಾರೂ ಓದಲಿಕ್ಕೆ ಹತ್ಯಾರ.

ನಿರೂಪಕ : ಹೌದವ್ವಾ. ನೌಕರೀನೂ ಮಾಡ್ತಾರ.

ನಿರೂಪಕಿ : ಆದ್ರೂ ಮದುವೀ ಮಾರ್ಕೆಟ್ಟಿನೊಳಗ ಈ ಹೆಣ್ಣು, ಅಂದ್ರ 'ಕನ್ಯಾ'– ಒಂದು ತೋರಿಸುವ ವಸ್ತು.

ನಿರೂಪಕ : ನೋಡ್ರೀ, ಈ ಹುಡುಗಿ ಬಿ.ಎ., ಬಿ.ಎಡ್. ಕಲತಾಳ. ಟೀಚರ್ ನೌಕರಿ ಮಾಡತಾಳ. ಇವತ್ತ ಆಕಿನ್ನ ನೋಡಲಿಕ್ಕೆ ಒಬ್ಬ ವರಮಹಾಶಯ ಬರಾವ್ನ ಇದ್ದಾನ.

ನಿರೂಪಕಿ : ಹ್ಞಾ. ಬರಾಂವ ಇದ್ದಾನೇನು, ಬಂದs ಬಿಟ್ರು ನೋಡು...

ವರ ಮತ್ತು ಅವನ ತಂದೆ ತಾಯಿ ಬರುತ್ತಾರೆ. ಕನ್ಯಾ ತಾಯಿ ಮುಂದೆ ಬಂದು ಸ್ವಾಗತಿಸುತ್ತಾಳೆ.

ಕನ್ಯಾ ತಾಯಿ : ಬರ್ರಿ ಬರ್ರಿ... ಬಡವರ ಮನಿಗೆ ಭಾಗ್ಯ ಬಂದ್ಹಾಂಗಾತು.

ವರನ ತಾಯಿ : (ಗರ್ವದಿಂದ) ಹ್ಞೂ ಇರ್ಲಿ. ಹುಡುಗಿನ್ನ ತೋರಸ್ರಿ. ಮೊದಲ ಬಂದ ಕೆಲಸ ಆಗಲಿ.

ಕ. ತಾಯಿ : ಮಗಳs... ಅಕ್ಕಾ...

ಕನ್ಯಾ ಹೊರಬರುತ್ತಾಳೆ.

ವ. ತಾಯಿ : ನಿನ್ನ ಹೆಸರೇನು ?

ಕನ್ಯಾ : ಕನ್ಯಾ.

ವ. ತಾಯಿ : ಎಷ್ಟು ಕಲತೀ ?

ಕನ್ಯಾ : ಬಿ.ಎ., ಬಿ.ಎಡ್.

ವ. ತಂದೆ : ಎಲ್ಲೆ ಈ ಪೇಪರ್ ತೊಗೋ. ಸ್ವಲ್ಪ ಓದು ನೋಡೂಣು.

ಹುಡುಗಿ ಪೇಪರ್ ತೆಗೆದುಕೊಂಡು ಓದತೊಡಗುತ್ತಾಳೆ.

ಕನ್ಯಾ : ಪಣೇನೂರಿನಲ್ಲಿ ದಲಿತ ಮಹಿಳೆಯ ಬೆತ್ತಲ ಮೆರವಣಿಗೆ... ಆರು ವರ್ಷದ ಬಾಲಕಿಯ ಮೇಲೆ ಸಾಮೂಹಿಕ ಅತ್ಯಾಚಾರ.... ಹನ್ನೆರಡು ಹುಡುಗಿಯರಿಗೆ ದೇವದಾಸಿ ಹೆಸರಿನಲ್ಲಿ ಮುತ್ತುಕಟ್ಟಿ ನೇರ ಮುಂಬಯಿಯ ಕಾಮಾಟಿಪುರಕ್ಕೆ ಸಾಗಿಸಿದ ಪ್ರಕರಣ ಬೆಳಕಿಗೆ ಬಂದಿದೆ.

ವ. ತಾಯಿ : ಸಾಕು ಬಿಡು. ಓದಲಿಕ್ಕೆ ಬರ್ತದೋ ಇಲ್ಲೋ ನೋಡಲಿಕ್ಕೆ ಓದಿಸಿದಿವಿ. ನೌಕರಿ ಎಲ್ಲಿ ಮಾಡತಿ ?

ಕನ್ಯಾ : ಹೈಸ್ಕೂಲಿನೊಳಗ.

ವ. ತಾಯಿ : ಪರಮನಂಟ ಹೌದಲ್ಲೊ ?

ಕನ್ಯಾ : ಹ್ಞೂನ್ರಿ.

ವ. ತಾಯಿ : ಮದುವಿ ಆದಮ್ಯಾಲೆ ಐಶಾರಾಮಿಗೆ ಬಿದ್ದು ನೌಕರಿ ಬಿಡ್ತೇನಿ ಅನ್ನೂದಿಲ್ಲ ಹೌದಲ್ಲೊ ?

ಕನ್ಯಾ : ಇಲ್ರಿ.

ವ. ತಾಯಿ : ಮತ್ತ ಗಂಡನ್ನ ನಿನ್ನ ಕಯ್ಯಾಗ ತಗೊಂಡು 'ಬ್ಯಾರೆ ಮನಿ' ಮಾಡೂ ಯೇತು ಮಾಡೂದಿಲ್ಲಲ್ಲಾ ?

ಕನ್ಯಾ : ಇಲ್ರಿ.

ವರನ ತಂದೆ : ಆತು. ಹಂಗಿದ್ರ ನಮಗ ಒಪ್ಪಿಗೆ ಅದ.

ವರ : ಹ್ಞೂನ್ರಿ... ನನಗೂ ಒಪ್ಪಿಗಿ ಐತಿ.

ಹುಡುಗಿಯನ್ನು ನೋಡುತ್ತ ಖುಶಿಯಲ್ಲಿ ಹೇಪ್ಯಾನಂತೆ ಕೈ ಹೊಸಕಿಕೊಳ್ಳುತ್ತಾನೆ.

ವ. ತಾಯಿ : ಯಾಕ ಗಡಿಬಿಡಿ ಮಾಡ್ತೀರಿ.... ಕೊಡುತುಗೊಳ್ಳೂ ವ್ಯವಹಾರದ ಮಾತಾಗಲಿ ಮೊದಲ. **(ಪ್ರೇಕ್ಷಕರಿಗೆ)** ನನ್ನ ಮಗಾ ಐದಂಕಿ ಪಗಾರ ತರ್ತಾನ.

ಕ. ತಾಯಿ : ಎಲ್ಲಾ ಪದ್ಧತಿಶೀರ ಮಾಡೂ ಪ್ರಯತ್ನಾ ಮಾಡತೇವಿ.

ವ. ತಂದೆ : ಏನ ಹಂಗಂದ್ರ ? ನೀರಾಗ ಎಮ್ಮಿ ಮುಳಗಿಸಿ ವ್ಯಾಪಾರ ಮಾಡಿದಂಗಾತಿದು.

ವ. ತಾಯಿ : ಮೋಘ್ತಂ ಮಾತಾಡಬ್ಯಾಡರಿ. ನನ್ನ ಮಗಗ 'ಸಾಲಂಕೃತ ಕನ್ಯಾದಾನ' ಮಾಡಲಿಕ್ಕ ಕ್ಯೂ ಕ್ಯೂ.. ಹಚ್ಯಾರ.

ವ. ತಂದೆ : ನಮಗೇನ ವರದಕ್ಷಿಣಿ ಬ್ಯಾಡ.

ವ. ತಾಯಿ : ಏನಂದ್ರೀ.... !

ನಟ/ನಟಿಯರು : **(ವ್ಯಂಗ್ಯವಾಗಿ)** ಕನ್ಯಾದ ಮೈಮ್ಯಾಲೆ ಒಂದು ಬಂಗಾರದ ಸೆಟ್ಟು, ಒಂದು ಮುತ್ತಿಂದು, ಒಂದು ಹವಳದ ಸೆಟ್ ಹಾಕ್ರಿ ಸಾಕು.

: ನಮಗೇನೂ ಬ್ಯಾಡ. ಎಷ್ಟ ಅಂದ್ರೂ ಅದು ಸ್ತ್ರೀ-ಧನ ಆಗ್ತದ ನೋಡರಿ.

: ಕಾಯ್ದೆ ಪ್ರಕಾರ ತೊಂಬತ್ತೆರಡನೆ ಇಸ್ವಿ ನಂತರ ಮದುವಿ ಆದ ಹೆಣ್ಣುಮಕ್ಕಳಿಗೆ ಅಪ್ಪನ ಆಸ್ತಿಯೊಳಗ ಗಂಡಮಕ್ಕಳ ಸಮಾ ಸಮಾ ಪಾಲ ಕೊಡಬೇಕು.

ವ. ತಾಯಿ : ಭಾಂಡೆ ಸಾಮಾನ ಎಲ್ಲಾ ಅವ. ನೀವೇನೂ ಕೊಡಬೇಕಾಗಿಲ್ಲ.

ನಟ/ನಟಿಯರು : ಫ್ರಿಜ್ಜು ಹಳೇದಾಗೇದ.

: ಅದು ಬದಲಿ ಆಗಬೇಕು.

: ಬ್ಲ್ಯಾಕ್ ಆ್ಯಂಡ್ ವೈಟ್ ಟಿ. ವಿ...

: ಬದಲಿ ಆಗಬೇಕು.

: ಹುಡುಗ ಸ್ಕೂಟರ್ ಮ್ಯಾಲೆ ಆಫೀಸಿಗೆ ಹೋಗತಾನ.

: ಅದೂ ಬದಲಿ ಆಗಬೇಕು.

: ಹೊಂಡಾ ಮೋಟರ್ ಸೈಕಲ್ ಬರಬೇಕು.

ವರ : ಹ್ಞೂನ್ರಿ ಅದು ಮ್ಯಾನ್ಲಿ ಅನಸತದ.

ವ. ತಾಯಿ : ನಮ್ಮ ಹುಡುಗ ನೌಕರಿ ಸಲುವಾಗಿ ಪಟ್ಟಣದಾಗ ಭಾಡಿಗಿ ಮನ್ಯಾಗ ಅದಾನ.

ನಿರೂಪಕಿ : ಅಂದ್ರ ಒಂದು ಸ್ವಂತ ಮನಿ ಬೇಕು.

ವ. ತಾಯಿ : ಏ... ಒಂದ ಸೈಟ್ ಸಾಕು.

ನಿರೂಪಕಿ : ಹ್ಞೂ ಆತು, ಮಾತುಕತಿ ಮುಗೀತಲ್ಲ. ಇನ್ನ ಊಟಕ್ಕ ಏಳರಿ.

ಎಲ್ಲರೂ ವೃತ್ತಕ್ಕೆ ಮರಳುತ್ತಾರೆ.

ನಿರೂಪಕಿ : (ಪ್ರೇಕ್ಷಕರತ್ತ ತಿರುಗಿ) ನೋಡಿದಿರಿಲ್ರೋ ವ್ಯಾಪಾರ. ಹಿಂಗ ವರನ ಮನಿಯವರ ಬೇಡಿಕೆ ಪಟ್ಟಿ ವರದಕ್ಷಿಣಿ ಹಣ ಪಟ್ಟಿ ಇಲ್ಲದ ಬೆಳಕೋತ ಹೋಗತದ.

ನಿರೂಪಕ : ಮೊನ್ನೆ ಬಂದದಲ್ಲ ಸುಪ್ರೀಂ ಕೋರ್ಟಿನ ಹೊಸ ತೀರ್ಪು, ಕೇಳೀರಿಲ್ರೋ ? ಗಂಡನ ಮನಿಯವರಿಗೆ ಕೊಡುವ ಆಯೇರಾ, ರೊಕ್ಕಾ ಏನಿದ್ರೂ ಅದು ವರದಕ್ಷಿಣಿ ಅಂತ ಆಗೂದುಲ್ಲಂತ.

ನಿರೂಪಕಿ : ಹಂಗಾದರ ಇನ್ನ ಮ್ಯಾಲ ವರಗಳ ರೇಟು ಇನ್ನೂ....

ನಿರೂಪಕ : ಹ್ಞೂ, ಇನ್ನೂ ಹೆಚ್ಚಾಗ್ತಾವ.

ನಿರೂಪಕಿ : ಅಂತೂ ಇಂತೂ ಹುಡುಗೀ ಮದುವಿ ಠರಾವಾತು. ಇವತ್ತs ಅಕ್ಕೀಕಾಳು. ನೀವೂ ಬರ್ರಿ.

ನಿರೂಪಕ : ಹೌದು, ಎಲ್ಲಾರೂ ಬರ್ರಿ. ಕರೀಲಿಲ್ಲಾ ಅಂದೀರಿ ಮತ್ತ.

ಮದುವೆಯ ಸಂದರ್ಭ, ಗಡಿಬಿಡಿ.

ನಿರೂಪಕ ಭಟ್ಟನಂತೆ ಪಂಚೆ ಸುತ್ತಿ ಶಲ್ಯ ಹೊದ್ದುಕೊಳ್ಳುತ್ತಾನೆ.

ಭಟ್ಟ : ಎಲ್ಲಾ ತಯಾರಾಗೇದ ಅಲ್ಲಾ ?

ನಟ/ನಟಿಯರು : **(ಅವಸರದ ಧಾಟಿ)** ಅರೆ, ದಿಬ್ಬಣಾ ಬಂದ ಬಿಡ್ತು.

: ಎದುರುಗೊಳ್ಳಲಿಕ್ಕೆ ಹೋಗ್ರಿ.

: ವರಪೂಜಾ ಸಾಮಾನಾ, ವರದಕ್ಷಿಣಾ ಎಲ್ಲಾ ರೆಡಿ ಇಟ್ಟೀರಿಲ್ರೋ...

: ಕನ್ಯಾ ತಯಾರಾಗ್ಯಾಳೋ ಇಲ್ಲೋ ನೋಡರಿ.

: ಮುತ್ತೈದೆಯರು ಮುಂದ ಬರ್ರಿ.

: ಅಕ್ಕೀಕಾಳು ಎಲ್ಲಾರಿಗೂ ಕೊಡರಿ.

ಮದುಮಗನ ತಲೆಯ ಮೇಲೆ ಕೊಡೆ ಹಿಡಿದು ದಿಬ್ಬಣ ವೃತ್ತಾಕಾರದಲ್ಲಿ ನಡೆದು ಬಂದು ಮದುಮಗನನ್ನು ರಂಗದ ಮಧ್ಯೆ ನಿಲ್ಲಿಸಲಾಗುತ್ತದೆ. ಮತ್ತೊಂದು ಕಡೆಯಿಂದ ಮದುಮಗಳನ್ನು ಕರೆತರುತ್ತಾರೆ.

ಭಟ್ಟ : **(ಮದುಮಗಳಿಗೆ)** ಬಾರವಾ ಈ ಕಡೆ ಬಾ. ವಧು - ವರ ಎದರಾಬದರಾ ನಿಲ್ಲರಿ. ಹ್ಞೂ... ಅಂತರಪಟಾ...

ಅಂತರಪಟ ಹಿಡಿಯುತ್ತಾರೆ. ಮುಂದಿನ ಸಂಭಾಷಣೆ ಮಂತ್ರೋಚ್ಚಾರಣೆಯ ಧಾಟಿಯಲ್ಲಿ ನಡೆಯುತ್ತದೆ.

ಭಟ್ಟ : ಗಂಡ ಅಂದ್ರ ಸಾಕ್ಷಾತ್ ದೇವ್ರು ಅಂತ ತಿಳೀಬೇಕು.

ಎಲ್ಲರೂ : ತಿಳಿಬೇಕು.

ಭಟ್ಟ : ಅತ್ತೆ ಮಾವಂದಿರ ಆಜ್ಞಾ ಪಾಲಸಬೇಕು.

ಎಲ್ಲರೂ : ಪಾಲಸಬೇಕು.

ನಿರೂಪಕಿ : ಬೇಕು ಬೇಕು ಬೇಕು.

ನಿರೂಪಕ : ಎಲ್ಲರೂ ಶಾಂತರಾಗರಿ ಇನ್ನ. ಈಗ ವಧುವಿಗೆ ಸದ್ಗೃಹಿಣೀತ್ವದ ಮಂತ್ರೋಪದೇಶ.

ವ. ತಾಯಿ : ಹೆಣ್ಣು ವಿನಯವಂತಳಾಗಿರಬೇಕು. ಅಂದ್ರ ಕಡಿಮಿ ಮಾತಾಡಬೇಕು. ಶಕ್ತಿಗಿಂತ ಹೆಚ್ಚು ಕೆಲಸಾ ಮಾಡಬೇಕು.

ನಟ/ನಟಿಯರು : ಹೊಡದ್ರೂ ಬಡದ್ರೂ ಬೈದ್ರೂ ಒದ್ರೂ ಸುಮ್ಮನಿರಬೇಕು.

: ಚಿಮಣಿ ಎಣ್ಣೀ ಉಗ್ಗಿ, ಕಡ್ಡೀ ಕೊರದು ಬೆಂಕಿ ಹಚ್ಚಿದರೂ ಸುಮ್ಮನಿರಬೇಕು.

ಭಟ್ಟ : ಏ ಉಪದ್ಯಾಪಿ, ನೀ ಸುಮ್ಮನಿರು ಈಗ. ಹ್ಞಾ ಎಲ್ಲಿ ಬಿಟ್ಟಿದ್ವಿ...

ವ. ತಾಯಿ : ಮನಿಯೊಳಗ ಎಲ್ಲಾರೂ ಉಂಡ ಮ್ಯಾಲೆ ನೀ ತಿನ್ನಬೇಕು.

ಭಟ್ಟ : ಪ್ರಶ್ನೆ ಕೇಳಬಾರದು.

ಎಲ್ಲರೂ : ಕೇಳಬಾರದು.

ಭಟ್ಟ : ತಿರಗಿ ಮಾತಾಡಬಾರದು.

ಎಲ್ಲರೂ : ಮಾತಾಡಬಾರದು.

ಭಟ್ಟ : ಬಾರದು ಬಾರದು.

ಎಲ್ಲರೂ : ಬಾರದೂ ಬಾರದೂ ಬಾರದೂ.....

ನಾಟಕೀಯವಾಗಿ ಎಲ್ಲರೂ ವೃತ್ತಾಕಾರದಲ್ಲಿ ಹಿಂದೆ ಸರಿಯುತ್ತಾರೆ.

ನಿರೂಪಕಿ ಮುಂದೆ ಬಂದು ಪ್ರೇಕ್ಷಕರೊಂದಿಗೆ ಮಾತಿಗೆ ತೊಡಗುತ್ತಾಳೆ.

ನಿರೂಪಕಿ : ಮದುವೇನೊ ಸುರಳೀತ ಆತ್ರಿ. ಆದರ ಅದರ ನಂತರದ ಕಥೀ ಕೇಳರಿ. ಯಾಕಂದ್ರ ಹೆಣ್ಣಿನ ಖರೇ ಜೀವನ ಸುರುವಾಗೂದು ಮದುವಿ ಆದ ಮ್ಯಾಲೆ.

ನಿರೂಪಕ : ಆಕಿ ಜೀವನ ಸಮಾಪ್ತ ಆಗೂದೂ ಮದುವಿಯಿಂದನು.

ನಿರೂಪಕಿ : ಇಲ್ಲಿ ಏನಾತೂ ಅಂದ್ರ..... ವರ್ಷ ತುಂಬೂದರಾಗ ನಮ್ಮ ಕನ್ಯಾ- ಅಂದ್ರ ಈಗ 'ಹೆಂಡತಿ', ಗರ್ಭಿಣಿ ಆಗ್ತ್ಯಾಳ.

ನಿರೂಪಕ : ಆಹಾ ಎಂಥಾ ಚೊಲೊ ಸುದ್ದಿ ಹೇಳಿದೆವಾ. ಗರ್ಭಿಣಿ ಅಂದಮ್ಯಾಲೆ ಮತ್ತ ಬಯಕಿ, ಮಳಮಳಸೂದು ಎಲ್ಲಾ ಸುರೂ ಆಗಿರಬೇಕು.

ನಿರೂಪಕಿ : ಹ್ಞೂ ನೋಡಲ್ಲೆ.

ಇಬ್ಬರೂ ಫ್ರೀಜ್ ಆಗುತ್ತಾರೆ.

ಹೆಣ್ಣು ಗಂಟಲುರಿ ಬಳಲಿಕೆ ಸಂತೋಷ ಒಟ್ಟಿಗೆ ಅಭಿನಯಿಸುತ್ತಿದ್ದಾಳೆ.

ನಟಿ - ೨ ಅತ್ತೆ ಪಾತ್ರದಲ್ಲಿ ಎದ್ದು ಬರುತ್ತಾಳೆ.

ಅತ್ತೆ : **(ಹುಡುಕುತ್ತ ಬಂದು)** ಏ ಮೂದೇವಿ. ಇನ್ನೂ ನೀ ಡಾಕ್ಟರ ಕಡೆ ಹೋಗಲಿಲ್ಲs.....? ಹೊಟ್ಯಾನ ಕೂಸು ಹೆಣ್ಣು ಅಂತ ಗೊತ್ತಾದ ಮ್ಯಾಲೆ ಇಟಗೊಂಡು ಏನ್ ಮಾಡೂದು. ಲಗೂ ತೆಗಿಸಿಬಿಡು ಅದನ್ನ.

ಹೆಣ್ಣು : ಇರಲಿ ಅತ್ತೆವ್ವಾ. ಎಷ್ಟ ಆದರೂ ಅದು ನನ್ನ ಕರುಳಿನ ಕುಡಿ.

ಅತ್ತೆ : ಏನೂ..... ತಿರುಗಿ ಮಾತಾಡತಿ..... ಮನೆಹಾಳೀ..... ಮುಂಡೇ.....

ಹೊಡೆಯತೊಡಗುತ್ತಾಳೆ. ಹೆಣ್ಣು ಅಸಹಾಯಕಳಾಗಿ ಕುಸಿಯತೊಡಗುತ್ತಾಳೆ.

ನೋವಿನ ಆಲಾಪ.

ಹೆಣ್ಣು ಕುಳಿತಲ್ಲೆ ಎರಡೂ ಕೈಗಳಿಂದ ಮಂಡಿ ಹಿಡಿದುಕೊಂಡು ಮುಖ ಕೆಳಗೆ ಹಾಕಿಕೊಂಡೇ ಮಾತನಾಡುತ್ತಾಳೆ. ಆಗ ಅವಳು ಭ್ರೂಣದ ಪಾತ್ರವಾಗುತ್ತಾಳೆ.

ಭ್ರೂಣ : ಅವ್ವಾ..... ಅವ್ವಾ..... ಅಳಬ್ಯಾಡವ್ವಾ.

ಹೆಣ್ಣು ಆಶ್ಚರಿಯಿಂದ ದನಿ ಯಾರದೆಂದು ತಿಳಿಯಲು ಅತ್ತಿತ್ತ ಹುಡುಕುತ್ತಾಳೆ.

ಭ್ರೂಣ : ಅವ್ವಾ..... ನಾನವ್ವಾ ನಿನ್ನ ಮಗಳು.

ಹೆಣ್ಣು : **(ಹೊಟ್ಟೆಯ ಮೇಲೆ ಕೈಯಿಟ್ಟುಕೊಂಡು)** ಕೂಸ..... ನನ್ನ ಕಂದಾ.... **(ಬಿಕ್ಕಳಿಸಿ ಅಳುತ್ತಾಳೆ.)**

ಭ್ರೂಣ : ಅಳಬ್ಯಾಡ..... ಅವ್ವ, ಅಳಬ್ಯಾಡಾ. ನನಗೂ ಅಳು ಬರ್ತದ. ಸುಮ್ಮನಾಗು.

ಹೆಣ್ಣು : ಏನ್ ಮಾಡಲ್ಯ ಕೂಸಣ್ಣೀ. ಮುದ್ದ, ನಿನ್ನ ಹ್ಯಾಂಗ ಕಳಕೊಳ್ಳಲಿ..... ನನ್ನ ಪ್ರೀತಿ ಕುಡಿ ನೀನು. ನನ್ನ ರಕ್ತ ಮಾಂಸದಿಂದ ಚಿಗುರಿದ ಎಳೀ ಸಸಿ ನೀನು.

ಭ್ರೂಣ : ಅವ್ವಾ, ನಾ ಭೂಮಿಗೆ ಬರುವುದಕಿಂತ ಮೊದಲ ಯಾಕ ನನ್ನ ಕೊಲ್ಲಬೇಕು ಅಂತಾರವಾ ಇವರು ? ನನ್ನ ವಿಷಯದಾಗ ಯಾಕ ಇಷ್ಟು ಕ್ರೂರ ಆಗ್ತಾರ..... ನನ್ನ ಬದಕಸ ಅವ್ವಾ..... ನಾ ಹುಟ್ಟತೇನಿ.... ಬೆಳೀತೇನಿ.... ನಾನೂ ಬದುಕತೇನಿ.

ಹೆಣ್ಣು : **(ಅಸಹಾಯಕ ನೋವಿನಲ್ಲಿ)** ಅಯ್ಯೋ..... ನನ್ನ ಕಟ್ಟಾಣಿ. ಏನು ಮಾಡಲಿ ನಾನು. ನಿನ್ನ ಮಾತು ಕೇಳಿದರ ಎಂಥಾ ಕಟಿಕನದೂ ಕರಳು ಕಿತ್ತು ಬರತಾವ.

ನೋವಿನ ಆಲಾಪ

ನಿರೂಪಕ : ಇಂಥಾ ಅತ್ತೆ ಇರುವುದರಿಂದ 'ಹೆಣ್ಣಿಗೆ ಹೆಣ್ಣೇ ವೈರಿ' ಅಂತಾರ.

ನಿರೂಪಕಿ : ಆದ್ರ ಅದು ತಪ್ಪು. ಯಾಕಂದ್ರ ಆ್ಯಮ್ನಿಯೋಸಿಂಟೆಸಿಸ್ ಟೆಸ್ಟ್ ಮಾಡಸಿದ ದಿವಸನ.....

ನಿರೂಪಕ : ಅಂದ್ರ ಸ್ಕ್ಯಾನಿಂಗ್ ಏನೂ ?

ನಿರೂಪಕಿ : ಹ್ಞಾ ಅಂಥಾದ್ದ ಒಂದು ಟೆಸ್ಟು. ಅವತ್ತ ಆಕಿ ಗಂಡನೇ ಕೂಸಿನ್ನ ತೆಗಿಸಿ ಬಿಡೂ ಅಂತ ಹೇಳಿದ್ದ.

ನಿರೂಪಕ : ಅಂದ ಮೇಲೆ ಬರೆ ಅತ್ತೀನ ಆಕಿ ವೈರಿ ಅಂತ ಹ್ಯಾಂಗ ಅಂತೀರಿ. ಖರೆ ಅಂದರ ಹೆಣ್ಣಿನ ವೈರಿ ಹೆಣ್ಣೂ ಅಲ್ಲ, ಗಂಡೂ ಅಲ್ಲ.

ನಿರೂಪಕಿ : 'ಗಂಡು ಮೇಲು, ಹೆಣ್ಣು ಕೀಳು' ಅನ್ನೂ ಮನೋಭಾವನೇ ಆಕಿಗೆ ವೈರಿ.

ನಿರೂಪಕ : ಮದುವಿಕಿಂತ ಮೊದಲು ಈ ಹುಡುಗಿ ಮೈತುಂಬ ಮನಸಿನ ತುಂಬ ಸಂತೋಷ, ಕನಸುಗಳನ್ನ ತುಂಬಿಕೊಂಡಿದ್ದಳು.

ನಿರೂಪಕಿ : ಕುಲುಕುಲು ನಗತಿದ್ದಳು, ಪಾದರಸದ್ಹಂಗ ಚುರುಕಾಗಿದ್ದಳು. ಈಗ ನೋಡಿದರ ರೆಕ್ಕಿ ಕತ್ತರಿಸಿದ ಹಕ್ಕಿ. ಆಕಿಗೆ ಉಳದಿರೂದು ಬರೇ ಮೌನ.... ನಿಟ್ಟುಸಿರು....

ನಿರೂಪಕ : ಆದರೂ ಇಂಥಾದರೊಳಗೂ ಆಕಿ ಒಮ್ಮೊಮ್ಮೆ ಕನಸು ಕಾಣತಾಳ.....

ರಂಗದ ಮಧ್ಯೆ ಕೆಳಮುಖ ಮಾಡಿ ಕುಳಿತ ಹೆಣ್ಣು ನಿಧಾನವಾಗಿ ಮೈದುಂಬಿ ಏಳುತ್ತ ಕನಸಿನ ದೃಶ್ಯ ನಿರ್ಮಿಸುತ್ತಾಳೆ. ಹಾಡಿನೊಂದಿಗೆ ಹೆಜ್ಜೆ ಹಾಕುತ್ತ ನರ್ತಿಸುತ್ತಾಳೆ.

ಮೇಳ : *ದಿನಕೊಂದು ಬಣ್ಣದ ಕನಸು*
ನೂರೆಂಟು ಚಿತ್ತಾರ ಮನಸು
ಮೋಡದಲಿ ತೇಲುತ್ತ ಮುಗಿಲಲ್ಲಿ ಓಲುತ್ತ
ಸ್ವರ್ಗದಲಿ ವಿಹರಿಸುವ ಚಿತ್ತ
ಬೆಳ್ಳಿ ಬೆಟ್ಟದ ಮೇಲೆ ಮನಸು
ಸ್ವರ್ಗದಲಿ ಇರುವಂಥ ಫಲಗಳನೆ ಭುಂಜಿಸುತ
ಊರ್ವಶಿಯ ಚಿತ್ರವಲಿ ಮನಸು

ಗಂಡ : **(ಹಿಂದಿನಿಂದ ಬಂದು)** ಏನ್ ಮಾಡ್ಲಿಕ್ಹತ್ತೀ ?..... ಯಾಕೊ ಭಾಳ ದಣದ್ಹಂಗ ಕಾಣತಿಯಲ್ಲ. ನಿನಗ ಚಾ ಮಾಡಿ ತರಲಿ.....? **(ಪಾಜ್)** ಇವತ್ತ ನಾನೇ ಅಡಗಿ ಮಾಡತೇನಿ. **(ಪಾಜ್)** ಏನಂತಾಳ ಮಗಳು.... **(ಪಾಜ್)** ನನಗೂ ಮಗಳ ಬೇಕು. ಅವ್ವಗ ನಾ ತಿಳಿಸಿ ಹೇಳತೇನಿ. ನೀ ಬ್ಯಾಸರಾ ಮಾಡಕೋಬ್ಯಾಡ. **(ಪಾಜ್)** ಯಾವಾಗಲೂ ನಕ್ಕೋತ ಇರು. ನಿನಗ ಏದರೊಳಗ ಆಸಕ್ತಿ ಅದನೋ ಅದನ್ನೇ ಮಾಡು. **(ಪಾಜ್)** ನಿನಗ ಯಾವ ನಿರ್ಬಂಧನೂ ಇಲ್ಲ ಇಲ್ಲೆ. ಇದು ನಿನ್ನದೇ ಮನಿ. **(ಪಾಜ್)** ನೋಡು, ನನಗ ಇಪ್ಪತ್ನಾಲ್ಕು ತಾಸೂ ಗಂಡನ್ನ ಸೇವಾ ಮಾಡೂ ದಾಸಿ ಬೇಕಾಗಿಲ್ಲ. ನಾ ಏನ್ ನಿನ್ನ ಯಜಮಾನ ಅಲ್ಲ. **(ಪಾಜ್)** ನಾವಿಬ್ಬರೂ ಹಿಂಗೇ ಕೈ ಕೈ ಹಿಡಕೊಂಡು ನಕ್ಕೋತ ನಲಕೋತ ಸ್ನೇಹಿತರ್ಹಂಗ ಬದುಕಿನುದ್ದ ನಡಿಯೋಣ.....

ಇಬ್ಬರೂ ವೃತ್ತಕ್ಕೆ ಮರಳುತ್ತಾರೆ.

ಕನಸಿನ ಆಲಾಪ ಮುಕ್ತಾಯ.

ನಿರೂಪಕಿ : ಗಂಡನ ಒಂದು ಪ್ರೀತಿಯ ಮಾತಿಗೆ, ಸ್ವರ್ಗಕ್ಕ ಹೆಣ್ಣು ಏನೆಲ್ಲಾ ತ್ಯಾಗ ಮಾಡಲಿಕ್ಕ ಸಿದ್ಧ ಆಗ್ತಾಳ.

ನಿರೂಪಕ : 'ಗಂಡನ ಮನಿ' ಸಲುವಾಗಿ ಗಾಣದೆತ್ತಿನ್ಹಂಗ ದುಡೀತಾಳ.

ನಿರೂಪಕಿ : 'ಗಂಡನ ಮನಿ'! ಹೌದು.

ನಿರೂಪಕ : ಮತ್ತ ಅಕೀ ಮನಿ?

ನಿರೂಪಕಿ : ಅದು ತಂದೀ ಮನಿ.

ನಿರೂಪಕ : ಇದು ಗಂಡನ ಮನಿ.

ನಿರೂಪಕಿ : ಅದು ಅಣ್ಣನ ಮನಿ.

ಹೆಣ್ಣು : ಎಲ್ಲಿದ ನನ್ನ ಮನೀ .....?

ವಿಷಾದದ ಆಲಾಪ. ನಟ ನಟಿಯರು ಒಬ್ಬರ ನಂತರ ಒಬ್ಬರು ತುಂಬ ನಾಟಕೀಯವಾಗಿ ಪ್ರೇಕ್ಷಕರೊಂದಿಗೆ ಮಾತನಾಡುತ್ತಾರೆ.

ನಟ/ನಟಿಯರು : ನೋಡ್ರಿ, ಮನಿಗೆಲಸದಕಿ ಮಾಡೂ ಕೆಲಸಕ್ಕ ಪಗಾರ ಕೊಡಬೇಕಾಗತದ. ಅದು ನ್ಯಾಶನಲ್ ಇನ್‌ಕಮ್‌ದೊಳಗ ಬರ್ತದ.

: ಆದರ ಮನಿಯೊಳಗಿನ ಹೆಣಮಗಳು ಮಾಡೂ ಕೆಲಸಕ್ಕ ಪಗಾರ ಕೊಡಬೇಕಾಗಿಲ್ಲ.

: ಆ ಕೆಲಸಾ ಅನುತ್ಪಾದಕ ಶ್ರೇಣಿಯೊಳಗ ಬರ್ತದ.

: ಅಂದ್ರ ಭಿಕ್ಷೆ ಅಥವಾ ಕಳ್ಳತನದಂಥಾ ಅನುತ್ಪಾದಕ ಕೆಲಸದ ಲೆಖ್ಖದೊಳಗ.....

: ಗಂಡು ಮಾಡೂ ಕೆಲಸಕ್ಕ ನಿವೃತ್ತಿ ಅದ. ಆದ್ರ ಹೆಣ್ಣಿಗೆ ನಿವೃತ್ತಿ ಅನ್ನೂದು ಇಲ್ಲ.

ನಿರೂಪಕ : ಗೃಹಕೃತ್ಯದ ಸಲುವಾಗಿ ಸಿಮನ್ ದಿ ಬುವಾ ಏನ್ ಹೇಳ್ತಾಳ ಅಂದ್ರ....

ನಿರೂಪಕಿ : ಮನೀ ಸುಧಾರಸೂದರೊಳಗ, ಅಲಂಕಾರ ಮಾಡೂದರೊಳಗ ಕಂಠಪೂರ್ತಿ ಮುಳುಗಿ ಬಿಡಬ್ಯಾಡ್ರಿ. ಹಂಗ ಮಾಡಿದರ ನಾವು ನಮ್ಮ ಅಸ್ತಿತ್ವಾನs ಕಳಕೋತೇವಿ.

ನಿರೂಪಕ : ಖರೇ ನೋಡು ಅಕ್ಕವ್ವ ಈ ಮಾತು.

ಹೆಣ್ಣು ವ್ಯಾನಿಟಿ ಬ್ಯಾಗ್ ಹಿಡಿದುಕೊಂಡು ರಸ್ತೆಯಲ್ಲಿ ನಡೆಯುತ್ತ ಹೊರಟಿದ್ದಾಳೆ.

ಹೆಣ್ಣು : **(ವಾಚ್ ನೋಡಿಕೊಂಡು)** ಓ ಲೇಟಾತು. ಹುಡುಗುರ ಟೆಸ್ಟಿನ ಪೇಪರ್ ತಿದ್ದಿಕೋತ ಕೂತಿದ್ದೆ. ಟೈಂ ಹೋಗಿದ್ದs ಗೊತ್ತಾಗಲಿಲ್ಲ. ಇನ್ನ ನನಗ ಬಸ್ ಸಿಕ್ಕು ಮನಿ ಮುಟ್ಟಿದಾಗ ಏನು ರಾದ್ಧಾಂತ ಅದನೋ.... **(ಬಸ್‌ಸ್ಟಾಪಿಗೆ ಬಂದು ನಿಲ್ಲುತ್ತಾಳೆ.)**

ಮೂವರು ನಟರು ಎದ್ದು ಪುಂಡ ಪೋಕರಿಗಳಂತೆ ಅವಳನ್ನು ಹಿಂಬಾಲಿಸುತ್ತ ಚುಡಾಯಿಸತೊಡಗುತ್ತಾರೆ. ಒಬ್ಬ ನಟ ಪೊಲೀಸನ ಹ್ಯಾಟ್ ಹಾಕಿಕೊಂಡು ಬಡಿಗೆ ಹಿಡಿದು ದೂರದಲ್ಲಿ ಒಬ್ಬನೆ ನಿಲ್ಲುತ್ತಾನೆ. ಈ ಪುಂಡಾಟಿಕೆ ನೋಡುತ್ತ ಒಳಗೊಳಗೆ ನಗುತ್ತ ಭುಜ ಕುಣಿಸುತ್ತಿದ್ದಾನೆ. ಹಿನ್ನೆಲೆಯಲ್ಲಿ ಪೋಲಿ ಹಾಡು.

ಮೇಳ : *ಹದಿನೆಂಟು ಕಳೆದಾ ಹೆಣ್ಣ ಕಳೆದಾ ಹೆಣ್ಣ ಕಳೆದಾ ಹೆಣ್ಣ*
ನಿನ್ನ ನೋಡಿ ನಿನ್ನ ನೋಡಿ ಮುಚ್ಚ್ಯಾವ ನನ್ನ ಕಣ್ಣ

ಹೆಣ್ಣು : ಎಂಥಾ ಪುಂಡ ಪೋಕರಿಗಳು ನೋಡರಿ.

ಮೇಳ : *ನಿನ್ನ ಬಣ್ಣ ಬಂಗಾರದ ವರ್ಣ*
ಬಂಗಾರದ ವರ್ಣ ಬಂಗಾರದ ವರ್ಣ
ಬೆಳಕ ಬಿದ್ಹಾಂಗ ಬೆಳಕ ಬಿದ್ಹಾಂಗ ಸೂರ್ಯನ ಕಿರಣ

ಹೆಣ್ಣು : ಒಂದು ಕತ್ತೆಗೆ ಸೀರಿ ಉಡಿಸಿದರೂ ಅದರ ಸೆರಗಿನ ಗುಂಟ ಹೊರಟ ಬಿಡತಾವ ಇವು.

ಮೇಳ : *ಎದಿಮ್ಯಾಲ ಕುಚಾ ಭವ ಸಣ್ಣ*
ಕುಚಾ ಭವ ಸಣ್ಣ ಕುಚಾ ಭವ ಸಣ್ಣ
ಏತ್ತಿ ಬಂದಾವ ಏತ್ತಿ ಬಂದಾವ ಗಜನಿಂಬೆ ಹಣ್ಣ

ಹೆಣ್ಣು : ಪೊಲೀಸ್ ಹೆಂಗ ಸುಮ್ಮನ ನಿಂತಾನ ನೋಡ್ರಿ. ಬೆಲ್ಲ ಬಡದ ಕಲ್ಲಿನಂಗ. ಮಜಾ ನೋಡತಾನ ಅವನೂ. **(ಪೊಲೀಸನ ಹತ್ತಿರ ಹೋಗಿ ದೂರುವ ಧ್ವನಿಯಲ್ಲಿ)** ನೋಡ್ರಿ ಆ ಹುಡುಗೂರು....

ಪೊಲೀಸ್ : ನಾ ನೋಡಕೊಂತೇನೇಳ.
ಏ ಯಾವ್ನಲೆ ಅವ್ನಾ, ಮುಂದ ಬರ್ರಿ ನೋಡೂಣು. ಸೂಳೀಮಕ್ಕಳು....
(ಹೆಣ್ಣಿನ ಹತ್ತಿರ ಬಂದು) ನೋಡು ಹೆಂಗ ಓಡಿಸಿದೆ ಅವರನ್ನ..... ಏನ್ ನಿನ್ನ ಹೆಸರು ?

ಹೆಣ್ಣು : ಶ್ರೀಮತಿ ಮಹಿಳಾ.

ಪೊಲೀಸ್ : ಚೆಂದ ಅದೀಯಲ್ಲಾ..... **(ಹೆಣ್ಣು ಹಿಂಜರಿಯುತ್ತಾಳೆ.)** ನಿಲ್ಲು ಅಂಜಬ್ಯಾಡ..... ಬರ್ತೀಯೇನು ರಾತ್ರೀ ಶೋಕ್ಕ ?..... **(ಹೆಣ್ಣಿನ ಭುಜದ ಮೇಲೆ ಕೈ ಹಾಕುತ್ತಾನೆ.)**

ಹೆಣ್ಣು : ಥೀ ನಾಯೀ.

ಹೆಣ್ಣು ಕೊಸರಿಕೊಳ್ಳುತ್ತಾಳೆ.

ಪೊಲೀಸ್ : ಹಾರೆ ವ್ವಾ..... ನೀ ಪತಿವ್ರತಾಶಿರೋಮಣಿ ಆಗಿದ್ರ ಮನಿ ಹಿಡದ ಕುಂಡರಬೇಕು. ಹಿಂಗ ಕಂಡಕಂಡಲ್ಲೆ ಬೇಕಾಬಿಟ್ಟಿ ತಿರಗಬಾರದು.

ಹೆಣ್ಣು ಹೊರಟು ಹೋಗುತ್ತಾಳೆ.

ಏನಂತ ತಿಳದಾಳೋ ನನ್ನ. **(ಧಿಮಾಕಿನಿಂದ)** ನಾ ಯೂನಿಫಾರಂ ಮ್ಯಾಲೆ ಅದೇನಿ.

ಹಿನ್ನಲೆಯಲ್ಲಿ “ ರಕ್ಷಕರೇ ಆಗ್ಯಾರವ್ವಾ ಭಕ್ಷಕರು ” ಎಂಬುದು ರಾಗಬದ್ಧವಾಗಿ ಮೂರು ಸಲ ಕೇಳಿಬರುತ್ತದೆ.

ನಿರೂಪಕಿ : ನೋಡಿದಿರಾ, ಬೇಲಿನಽ ಎದ್ದು ಹೊಲಾ ಮೇಯೂದು.....

ನಿರೂಪಕ : ಮನಿ ಹೊರಗ ಇಂಥಾ ಬೀದೀ ಕಾಮಣ್ಣಗಳ ಹಾವಳಿ. ಇನ್ನ ಮನೀ ಒಳಗ.....

ಇಬ್ಬರೂ ಫ್ರೀಜ್ ಆಗಿ ಹಿಂದೆ ಸರಿಯುತ್ತಾರೆ.

ಹೆಣ್ಣು ಹೊರಗಿನಿಂದ ಮನೆ ಪ್ರವೇಶಿಸುತ್ತಾಳೆ. ಅತ್ತೆ ಒಳಗಿನಿಂದ ಬರುತ್ತಾಳೆ.

ಅತ್ತೆ : ಏನು ಈಗ ಬಂದೀ ? ಎಲ್ಲಿ ಹೋಗಿತ್ತು ಸವಾರಿ ಇಷ್ಟೊತ್ತಿನ ತನಕ ? ಇವತ್ತ ಆಗೇ ಹೋಗಲಿ. ಬರ್ಲಿ ನನ್ನ ಮಗಾ, ನಿನ್ನ ಒದ್ದು ಹೊರಗ ಹಾಕಸ್ತೀನಿ. ಮಾನಗೇಡಿ...

ಹೆಣ್ಣು ಸುಮ್ಮನೆ ನಿಂತಿದ್ದಾಳೆ. ಹೊರಗಿನಿಂದ ಗಂಡ ಬರುತ್ತಾನೆ.

ಗಂಡ : ಮತ್ತ ಇವತ್ತೇನ ನಡಿಸೀ ಹೊಸಾ ನಾಟಕಾ. ಎಲ್ಲೆ ಐತಿ ನಿನ್ನ ಪಗಾರಾ, ಹ್ಞಾ ಕೊಡು. **(ಹಣ ಎಣಿಸಿ ಸಿಟ್ಟಾಗುತ್ತಾನೆ.)** ಕಡಿಮೀ ಅದಾವಲ್ಲಾ, ಏನ್ ಮಾಡೀ ?

ಅತ್ತೆ : ಕೊಟ್ಟು ಬಂದಿದ್ದಾಳು ತನ್ನ ಮಿಂಡಗ. ಶೀಲಗೆಟ್ಟಾಕಿ.

ಹೆಣ್ಣು ಅತ್ತೆಯತ್ತ ತೀಕ್ಷ್ಣವಾಗಿ ನೋಡುತ್ತಾಳೆ.

ಗಂಡ : ನಮ್ಮ ಅವ್ವನ್ನ ಏನ ಕೆಕ್ಕರಿಸಿ ನೋಡತಿ. ಮಾತಾಡು ಬಾಯಿ ಹೊಲಕೊಂಡೀ ?

ಹೆಣ್ಣು : **(ಸಾವರಿಸಿಕೊಂಡು)** ನಮ್ಮಪ್ಪ ಜಡ್ಡಾಗಿ ಹಾಸಿಗಿ ಹಿಡದಾನು. ಅವ್ವ ಭಾಳ ತ್ರಾಸಿನ್ಯಾಗ ಅದಾಳಂತ ಸ್ವಲ್ಪ ರೊಕ್ಕಾ ಕಳಿಸೇನಿ.

ಗಂಡ : **(ಹೊಡೆಯುತ್ತ)** ಯಾರನ್ನ ಕೇಳಿ ಕಳಿಸಿದ್ಯ ಘೋಸಡೀ. ನನ್ನ ರೊಕ್ಕ ಅವು.

ಅತ್ತೆ : ಹ್ಞಾ ಮತ್ತ. ನಾವು ಹೊರಗ ಕಳಿಸ್ತೇವಂತ ನೀ ನೌಕರಿ ಮಾಡತಿ. ನಮ್ಮ ರೊಕ್ಕ ಅವು.

ಗಂಡ : ಹೇಳು. ಯಾವ್ನಗ ಕೊಟ್ಟು ಬಂದೀ ? ಯಾವ್ನವ್ನ ನಿನ್ನ ಗಣ್ಯಾ.....

ಹೆಣ್ಣು : **(ಬಿಡಿಸಿಕೊಂಡು ಸೆಟೆದು ನಿಂತು)** ನಾನು ದುಡದು ತರೂ ಪಗಾರದ ಲೆಕ್ಕಾ ಕೇಳತೀರಿ ನೀವು. ನಿಮ್ಮ ಸಿಗರೇಟು, ಕುಡಿತ, ಚೈನೀಗೆ ಎಷ್ಟು ಖರ್ಚು ಮಾಡತೀರಿ –ಲೆಖ್ಖಾ ಇಟ್ಟೀರೇನು ?

ಗಂಡ : **(ಹೊಡೆಯುತ್ತ)** ನನ್ನೇನು ಕೇಳ್ತೀಯ ನೀನು. ಅದನ್ನ ಕೇಳಾಕ ನೀ ಯಾರು ?

ಹೆಣ್ಣು : **(ರೋಷದಿಂದ)** 'ನಾ ಯಾರು ?' ನಾಯಿತಿರೂ ನಮ್ಮಪ್ಪಗ ರೊಕ್ಕಾ ಕಳಿಸುವ ಸ್ವಾತಂತ್ರ್ಯಾನೂ ನನಗಿಲ್ಲ ? ಎಂಥಾ ಮನಷಾರು ನೀವು.... ಮತ್ತ ಶೀಲಗೆಟ್ಟಾಕಿ ಅಂತ ನನ್ನ ಮ್ಯಾಲಽ ತಪ್ಪ ಹೊರಸತೀರಿ. ಮನುಷ್ಯತ್ವನಽ ಇಲ್ಲ ನಿಮಗ.

ನೇರವಾಗಿ, ದೃಢವಾಗಿ ನಿಲ್ಲುತ್ತಾಳೆ.

'ನಾ ಯಾರು' ಅಂತ ಕೇಳತೀರಿ ? ಅದನ್ನ ಹೇಳೂ ಕಾಲ ಬಂದದೀಗ. ಹೇಳ್ತೇನಿ.

ಫ್ರೀಜ್ ಆಗುತ್ತಾಳೆ.

ನಿರೂಪಕಿ : ಎಷ್ಟು ಅಂತ ತಡೀತಾಳ ಆಕೀನೂ. ಹೊಟ್ಯಾನ ಸಂಕಟಾ, ಸಿಟ್ಟು ಒಮ್ಮ ಸ್ಫೋಟ ಆಗೂದಽ ಅಲ್ಲ.

ನಿರೂಪಕ : ಮೊದಲಿನಕಿಂತ ಈಗ ಆಕಿ ಗಟ್ಟಿ ಆಗ್ಯಾಳ.

ನಿರೂಪಕಿ : ಆದರೂ ಹೆಣ್ಣು ಈಗ ಹೊಸ ಹೊಸ ಸವಾಲು ಎದುರಿಸಬೇಕಾಗೇದ.

ನಟಿ - ೧ : ಏನವ್ವಾ ಅಂಥ ಸವಾಲು ?

ನಿರೂಪಕಿ : ಜಾಗತೀಕರಣ ! ಖಾಸಗೀಕರಣ !! ಉದಾರೀಕರಣ !!!

ನಟ/ನಟಿಯರು : ಹೌದು ಅದರಿಂದ ಉದ್ಯೋಗದ ಅವಕಾಶ ಕಡಿಮಿ ಆಗಿ ಬಡತನ ಹೆಚ್ಚಾಗೇದ.

: ಬೆಲೆ ಏರಿಕೆ ತಾಪದಿಂದ ಜನಸಾಮಾನ್ಯ ಬಸವಳಿದು ಹೋಗ್ಯಾನ.

: ದಿನದಿಂದ ದಿನಕ್ಕ ಮನಷ್ಯಾ ತನ್ನ ಸಂವೇದನಶೀಲತೆಯನ್ನ ಕಳಕೊಳ್ಳಾಕ ಹತ್ಯಾನ.

: ಹೌದು.. ಹೌದು... ಅದರಿಂದಾಗೇ ಗಂಡು-ಹೆಣ್ಣುಗಳ ನಡುವೆ ಸಹಜ ಕಳಕಳಿ ಕಡಿಮೆ ಆಗಿ ಹೆಣ್ಣು ಬರೇ 'ಭೋಗದ ವಸ್ತು' ಆಗಿ ಬಿಟ್ಟಾಳ.

: ಹೆಣ್ಣಿನ ದೇಹದ ವ್ಯಾಪಾರ ಹೆಚ್ಚಾಗೇದ.

: ಮಹಿಳೆಯರು ಮತ್ತ ಬಾಲಕಿಯರ ಸಾಗಾಣಿಕೆ ಭರದಿಂದ ಸಾಗೇದ.

: ಎಲ್ಲಿ ನೋಡಿದರೂ ಹಿಂಸಾಚಾರ, ಕೋಮು ಗಲಭೆ....

: ಎಲ್ಲಾದಕ್ಕೂ ಮಹಿಳೆನಽ ಬಲಿಪಶು.

ನಿರೂಪಕ : ಇಂಥಾವಷ್ಟೇ ಅಲ್ಲ, ಹಳೆ ಸಮಸ್ಯೆ ಸಹಿತ ಹೊಸಾ ರೂಪದಾಗ ಈಗ ಕುಣಿಯೊಳಗಿನ ಹೆಣಾ ಎದ್ದ ಕೂತಂಗ ಎದ್ದು ಬಂದಾವ.

ನಿರೂಪಕಿ : ಹೌದು, ನೀ ಹೇಳೂದು ಖರೆ ಐತಿ. ಬಾಲ್ಯ ವಿವಾಹ, ಸತೀ ಪದ್ಧತಿ ನಿರ್ಮೂಲ ಆಗ್ಯಾವ ಅಂತಾರ. ಆದ್ರ ಇವತ್ತಿಗೂ ಜೀವಂತ ಅದಾವು ನೋಡು.

ನಿರೂಪಕ : ಹೌದವಾ. ನಮ್ಮ ಅಕ್ಕಮಹಾದೇವಿ ಹುಟ್ಟಿದ ದಿನ.

ನಿರೂಪಕಿ : ಹ್ಞೂ. ಅದಽ ದವನದ ಹುಣ್ಣಿವಿ ಹೌದಲ್ಲೊ ?

ನಿರೂಪಕ : ಹ್ಞಾ. ಅದಕ್ಕ ರಾಜಸ್ಥಾನದೊಳಗ ಅಖ್ಖಾತೀಜಾ ಅಂತಾರ. ಅವತ್ತಿನ ದಿನಾ ಭಾಳ ಶ್ರೇಷ್ಠ ಅಂತ ಸಾವಿರಗಟ್ಲೆ ಬಾಲ್ಯ ವಿವಾಹ ಮಾಡತಾರ ಅಲ್ಲೆ.

ನಟ/ನಟಿಯರು : ಅಂಥಾ ಒಂದು ಮದುವಿಯನ್ನ ನಿಲ್ಲಿಸಲಿಕ್ಕೆ ಹೋಗೀನ ಭಾವ್ವರೀಬಾಯಿ ಅನ್ನೂ ದಲಿತ ಮಹಿಳೆ ಮ್ಯಾಲೆ ಅತ್ಯಾಚಾರ ನಡೀತಲ್ಲ.

: ಮತ್ತ ರೂಪ್ ಕನ್ವರ್ ಸತಿ ಹೋಗಿದ್ದು.

: ಅಂಥಾ ಎಷ್ಟು ರೂಪ್ ಕನ್ವರ್‌ಗೋಳು ವರದಕ್ಷಿಣೆ ಕಿರುಕಳಾ ಮತ್ತ ಕುಟುಂಬದ ಹಿಂಸೆಗೆ ಬಲಿಯಾಗ್ಯಾರೋ ಏನೋ.

: ಅವರೆಲ್ಲಾ 'ಆತ್ಮಹತ್ಯೆ' ಹೆಸರಿನೊಳಗಽ ಸತೀ ಹೋಗ್ಯಾರ.

: ಜೀವಂತ ಇರೂ ಒಬ್ಬ ಹೆಣಮಗಳಿಗೆ ಬೆಂಕಿ ಹಚ್ಚೋದಂದ್ರ.....

ನಿರೂಪಕಿ : ಹೌದವಾ, ಇಂಥಾವುಕ್ಕ ಕಾನೂನು ಏನೂ ಮಾಡುದುಲ್ಲೇನು ?

ನಿರೂಪಕ : ಕಾನೂನೇನು, ಅದು ಜಾರೀ ಮಾಡಾವ್ನ ಕೈಯಾಗಿನ ಅಸ್ತ್ರ.

ನಿರೂಪಕಿ : ಅಂದ್ರ ?

ನಿರೂಪಕ : ಹೆಣ್ಣುಮಕ್ಕಳು ನ್ಯಾಯಾ ಕೇಳಿ ಕೋರ್ಟಿನ ಮೆಟ್ಟಿಲು ಹತ್ತಿದಾಗ ಏನೇನ ಆಗೇದ ಗೊತ್ತಿಲ್ಲೇನ ನಿನಗ.

ನಿರೂಪಕಿ : ಏನಂತ ಬಿಡಿಸಿ ಹೇಳಲ್ಲ.....

ಒಬ್ಬ ನಟಿ ಎದ್ದುಬಂದು ಪ್ರೇಕ್ಷಕರೊಂದಿಗೆ ಮಾತನಾಡುತ್ತಿದ್ದಂತೆ ಕೋರ್ಟ್ ದೃಶ್ಯ ನಿರ್ಮಾಣವಾಗಬೇಕು. ಒಬ್ಬ ನಟ ನ್ಯಾಯಾಧೀಶನ ವೇಷ ಧರಿಸಿ ಮತ್ತೊಬ್ಬ ನಟನನ್ನು ಬಗ್ಗಿಸಿ ನ್ಯಾಯಪೀಠ ಮಾಡಿಕೊಂಡು ಅವನ ಮೇಲೆ ಕುಳಿತುಕೊಳ್ಳುತ್ತಾನೆ.

ನಟಿ - ೧ : ಸಾಮಾಜಿಕ ಕಾರ್ಯಕರ್ತೆ ಭಾವ್ನರೀಬಾಯಿ ಮ್ಯಾಲೆ ಆಕೀ ಗಂಡನ ಎದುರs ಐದು ಜನ ಸಾಮೂಹಿಕ ಅತ್ಯಾಚಾರ ಮಾಡಿದರು. ಅವರ ವಿರುದ್ಧ ಆಕಿ ಮೂರು ವರ್ಷ ಕೋರ್ಟಿಗೆ ಎಡತಾಕಿದಳು. ಆದರೂ ಆಕಿಗೆ ನ್ಯಾಯ ಸಿಗಲಿಲ್ಲ.

ನಟಿ - ೨ : ಕೋರ್ಟು ಹೇಳ್ತು.....

ನ್ಯಾಯಾಧೀಶ : *"ಈ ಐವರೂ ಆರೋಪಿಗಳು ೫೦ ರಿಂದ ೬೦ ವರ್ಷದವರು. ಗೌರವಾನ್ವಿತ ಕುಟುಂಬದವರು. ಆದ್ದರಿಂದ ದಲಿತ ಮಹಿಳೆಯೊಬ್ಬಳ ಮೇಲೆ ಇವರು ಅತ್ಯಾಚಾರ ಮಾಡಲು ಸಾಧ್ಯವೇ ಇಲ್ಲ. ತಮ್ಮ ವಯಸ್ಸು, ಘನತೆ ಮರೆತು ಇಂಥ ಕೆಲಸ ಮಾಡುವಷ್ಟು ನಮ್ಮ ಭಾರತೀಯ ಸಂಸ್ಕೃತಿ ಅಧೋಗತಿಗಿಳಿದಿಲ್ಲ."*

ನಟಿ : ಏನಂತೀರಿ ಇದಕ್ಕ ? ೫೦ ವರ್ಷದವರು ರೇಪ್ ಮಾಡೂದುಲ್ಲಂತ !

ನಿರೂಪಕಿ : ತೀರ್ಪಿನೊಳಗ ನಡುವ ಎಂಥಾ ಅವಾಸ್ತವ ಟಿಪ್ಪಣಿ ಬರೀತಾರ ನೋಡಿರಿ.

ನಟಿ - ೨ : ದಿಲ್ಲಿಯೊಳಗ ಮಧುಬಾಲಾ ಮಿತ್ತಲ್ ಅನ್ನುವ ಮೆಡಿಕಲ್ ಕಲಿಯುವ ಹುಡುಗಿ ರಸ್ತೆ ಅಪಘಾತದೊಳಗ ಸತ್ತಳು. ಆಕಿ ತಂದಿ ತಾಯಿಗೆ ಪರಿಹಾರ ಕೊಡಬೇಕಾದ ಕೇಸಿನೊಳಗ ಕೋರ್ಟು ಏನು ಅಂತಂದರ.....

ನ್ಯಾಯಾಧೀಶ : *"ಹೆಣ್ಣುಮಕ್ಕಳು ತಂದೆ-ತಾಯಿಯರಿಗೆ ಹೊರೆಯಾಗಿರುತ್ತಾರೆ. ಆದ್ದರಿಂದ ಅವಳ ಸಾವು ಒಂದು ರೀತಿಯಲ್ಲಿ ಅವರನ್ನು ಕಷ್ಟದಿಂದ ಮುಕ್ತಗೊಳಿಸಿದೆ. ಅವರಿಗೆ ಬೇರೆ ಪರಿಹಾರದ ಅಗತ್ಯವಿಲ್ಲ. ಗಂಡುಮಗನಾಗಿದ್ದರೆ ಅವನು ಮುಂದೆ ತನ್ನ ತಂದೆ-ತಾಯಿಯರನ್ನು ನೋಡಿಕೊಳ್ಳುವ ಜವಾಬ್ದಾರಿ ಹೊರುತ್ತಿದ್ದ."*

ನಿರೂಪಕಿ :. ಅಯ್ಯ ಜಜ್ ಆದವ್ನೂ ಮಕ್ಕಳನ್ನ ಹಿಂಗ 'ಗಂಡು', 'ಹೆಣ್ಣು' ಅಂತ ಭೇದಾ ಮಾಡಿದರ ಹೆಂಗರೆವಾ.....

ನಿರೂಪಕ : ಇನ್ನೂ ಕೇಳು– ಮಹಾರಾಷ್ಟ್ರದೊಳಗಿನ ಒಂದು ವರದಕ್ಷಿಣೆ ಸಾವಿನ ಪ್ರಕರಣ.

ನಟ/ನಟಿಯರು : ರವೀಂದ್ರ ಚೌತ್ಮಾಲ್‌ನ ಹೆಂಡತಿ ವಿಜಯಾ ೨೫ ಸಾವಿರ ರೂಪಾಯಿ ವರದಕ್ಷಿಣೆ ತರಲಿಲ್ಲ ಅನ್ನೂ ಕಾರಣಕ್ಕ ಆಕಿ ಎಂಟು ತಿಂಗಳ ಬಸರಿದ್ದಾಗ, ಗಂಡಾ ಮತ್ತ ಅವನ ಮನೀಯವರು ಕೂಡಿ ಆಕೆನ್ನ ಕಚಾ ಕಚಾ ಕೊಚ್ಚಿ, ಗೋಣೀ ಚೀಲದಾಗ ಹಾಕಿ, ದೊಡ್ಡ ಗಟಾರದ ಮೋರಿಯೊಳಗ ಚೆಲ್ಲಿದ್ದರು.

ಎಲ್ಲರೂ ಲೊಚಗುಟ್ಟುತ್ತಾರೆ.

: ಅದು ಭೀಕರ ಅಪರಾಧ ಅಂತ ಮಹಾರಾಷ್ಟ್ರ ಹೈಕೋರ್ಟು ಆ ಗಂಡಗ ಮರಣದಂಡನೆ ವಿಧಿಸಿತು.

: ಬರೊಬ್ಬರ ಮಾಡೇದ. ಹಂಗs ಆಗಬೇಕು.

: ಆದರ ಮುಂದ ಸುಪ್ರೀಂ ಕೋರ್ಟು ಹೇಳಿದ್ದs ಬ್ಯಾರೆ.

: ಏನಂತದು ?

ನ್ಯಾಯಾಧೀಶ : *"ಈ ಕೊಲೆಯ ಹಿಂದಿನ ಉದ್ದೇಶ ವರದಕ್ಷಿಣೆ ತರಬಲ್ಲ ಮತ್ತೊಬ್ಬ ಹೆಣ್ಣನ್ನು ಮದುವೆಯಾಗುವುದೇ ಆಗಿದೆ. ಈ ಪ್ರಕರಣವನ್ನು 'ಅತ್ಯಂತ ಅಪರೂಪದ ಅಪರಾಧ' ಎಂದು ಪರಿಗಣಿಸಲು ಸಾಧ್ಯವಿಲ್ಲ. ಹೆಚ್ಚುತ್ತಿರುವ ವರದಕ್ಷಿಣೆ ಸಾವುಗಳು ಇದಕ್ಕೆ ಸಾಕ್ಷಿಯಾಗಿವೆ. ಆದ್ದರಿಂದ ರವೀಂದ್ರ ಚೌತ್ಮಾಲ್‌ಗೆ ಜೀವಾವಧಿ ಶಿಕ್ಷೆ ವಿಧಿಸಲಾಗಿದೆ."*

ನಟ - ೧ : *ಅಂದರ ಅವನ ಶಿಕ್ಷಾ ಕಡಿಮಿ ಮಾಡಿದಂಗಾತು.*

ನಟ - ೨ : ಅಮಾಯಕ ಬಸುರಿ ಹೆಣ್ಣನ್ನ ತುಂಡು ತುಂಡಾಗಿ ಕತ್ತರಿಸಿದ್ದು, ಭ್ರೂಣ ಹತ್ಯಾ ಮಾಡಿದ್ದು ' ಅತ್ಯಂತ ಅಪರೂಪದ ಅಪರಾಧ ಅಲ್ಲ ' ವಾಹ್ವಾ..... ಕೋರ್ಟs ?

ನಟಿ - ೧ : ಇದನ್ನ ಕೇಳಿದ್ರ ಮೈಮ್ಯಾಲ ಮುಳ್ಳು ಬರ್ತಾವ.

ನಿರೂಪಕಿ : ಎದ್ಯಾನ ಕಿಚ್ಚು ಭುಗಿಲ್ ಅಂತದ.

ನಿರೂಪಕ : ನ್ಯಾಯ ಸ್ತ್ರೀ ಸಂವೇದಿ ಆಗದಿದ್ದರ, ಗಂಡು ಎಂಥಾ 'ಹೇಯ ಅಪರಾಧ' ಮಾಡಿದರೂ ಅವು 'ಸಾಮಾನ್ಯ' ಆಗಿಬಿಡ್ತಾವ.

ನಟಿ - ೨ : ಅದಕ್ಕ ನಮ್ಮ ನ್ಯಾಯಾಂಗವನ್ನ ಮೊದಲು ಮಹಿಳಾ ವಿಷಯದೊಳಗ 'ಸಂವೇದನಶೀಲ ಮಾಡಬೇಕು.

ನಿರೂಪಕ : ಅಷ್ಟs ಅಲ್ಲ. ಕಾರ್ಯಾಂಗ, ಶಾಸಕಾಂಗ ಒಟ್ಟು ಇಡೀ ಸಮಾಜದ ಎಲ್ಲಾ ಸ್ತ್ರೀ - ಪುರುಷರಿಗೆ ಈ ಬಗ್ಗೆ ತಿಳಿವಳಿಕೆ ನೀಡಬೇಕು.

ಹೆಣ್ಣು : ಎಲ್ಲದಕಿಂತ ಮೊದಲು ನಾವು ಸಂಘಟಿತರಾಗೋಣ. ಬರ್ರಿ. ಅನ್ಯಾಯದ ವಿರುದ್ಧ ಸಿಡಿದೇಳೋಣ.

ನಟ/ನಟಿಯರು : ರೂಪೇನ್ ಬಜಾಜ್ ಗೊತ್ತಿಲ್ಲ..... ಆಕಿ ತನ್ನ ಸ್ತ್ರೀ ಗೌರವಕ್ಕ ಧಕ್ಕೆ ಮಾಡಿದ ತನ್ನ ಮೇಲಿನ ಅಧಿಕಾರಿ ವಿರುದ್ಧನs ದಾವಾ ಹೂಡಿ ಗೆದ್ದಂಥಾ ಉದಾಹರಣೆ ನಮ್ಮೆದುರಿಗೇ ಅದ.

: ಎಲ್ಲ ಮಹಿಳೆಯರು ಒಟ್ಟಿಗೆ ಸೇರಿದರ ಏನಾದರೂ ಮಾಡಲಿಕ್ಕೆ ಸಾಧ್ಯ ಅದ.

: ಅದಕ್ಕಿಂತ ಮೊದಲು ನಾವು ನಮ್ಮ ಸ್ವಂತ ಬಂಧನಗಳಿಂದ ಮುಕ್ತರಾಗಬೇಕು. ಆಮೇಲೆ ಜೊತೆ ಇರುವವರಿಗೂ ಮುಕ್ತಿ ಕೊಡಸಲಿಕ್ಕೆ ಸಾಧ್ಯ ಆಗ್ತದ.

: ನಮ್ಮ ಮೇಲೆ ಹೇರಿದಂಥ ಕರ್ತವ್ಯದ ಭಾರದೊಳಗ ಪುರುಷರೂ ಸಹಭಾಗಿ ಆಗಬೇಕು.

: ನಮಗ ಸ್ವಾತಂತ್ರ್ಯದ ಜೊತೆಗಿನ ಜವಾಬ್ದಾರಿ ಬೇಕು.

: ಅದು ಮನುಷ್ಯನ ಮೂಲಭೂತ ಹಕ್ಕು.

ಹೆಣ್ಣು : ಹೌದು, ನಾವೆಲ್ಲಾ ದೃಢ ನಿರ್ಧಾರ ಮಾಡಿದರ ಆ ನಿರ್ಧಾರದಿಂದನs ನಮಗ ಇನ್ನೂ ಹೆಚ್ಚಿನ ಬಲ ಬರತದ.

ನಿರೂಪಕಿ : ಹೌದಕ್ಕಾ. ಪ್ರತಿಯೊಬ್ಬ ಶೋಷಿತ, ಪೀಡಿತ ಹೆಣ್ಣು ನಮ್ಮ ಸೋದರಿ, ಅಕ್ಕಾ ತಂಗಿ ಅಂತ ತಿಳಕೋಬೇಕು.

ಹೆಣ್ಣು : ಅಂಥಕಿಯ ಹೆಗಲಿಗೆ ಹೆಗಲು ಕೊಟ್ಟು ನಿಲ್ಲೂದು ನಿಜವಾದ 'ಸ್ತ್ರೀ ಧರ್ಮ'.

ನಿರೂಪಕಿ : ಖರೆ ಐತಿ ಅಕ್ಕವ್ವಾ. ಸ್ತ್ರೀ ಧರ್ಮಕ್ಕ ಹೊಸ ಅರ್ಥ ಇದು, ಹೊಸ ವ್ಯಾಖ್ಯಾನ.

ನಟನಟಿಯರು ಪ್ಲಕಾರ್ಡ್ ಹಿಡಿದು ಒಬ್ಬೊಬ್ಬರೇ ಮೆರವಣಿಗೆಯಲ್ಲಿ ಮುಂದೆ ಬರುತ್ತಾರೆ. ರಂಗದ ಮೇಲೆ ಒಂದು ಸುತ್ತು ಹಾಕುತ್ತಾರೆ. ನಂತರ ವೃತ್ತಕ್ಕೆ ವಾಪಸಾಗುತ್ತಾರೆ.

'ಗೃಹಕೃತ್ಯಕ್ಕೆ ಮಾನ್ಯತೆ ಬೇಕು'

'ನೌಕರಿ ಸ್ಥಳದಲ್ಲಿ ಗೌರವ ಬೇಕು'

'ಪ್ರತಿಯೊಬ್ಬ ಮಹಿಳೆಗೂ ಉದ್ಯೋಗ ಬೇಕು'

'ಸಮಾನ ಕೆಲಸಕ್ಕೆ ಬೇಕು ಸಮಾನ ವೇತನ'

'ಮನುಕುಲದ ತಾಯಿ ಹೆಣ್ಣು'

'ಹೆಣ್ಣು ಅರ್ಧ ಬೀಜವೂ ಹೌದು ಸಂವರ್ಧಕಳೂ ಹೌದು'

'ವರದಕ್ಷಿಣೆ ಕೊಟ್ಟು ಮದುವೆ ಆಗುವುದು ಮಹಾ ಪಾಪ. ಸ್ವಂತಕ್ಕೇ ಅಪಮಾನ'

'ಸ್ತ್ರೀ ಕೇವಲ ಶರೀರವಲ್ಲ'

'ಸಮಾನತೆ-ಸ್ವಾತಂತ್ರ್ಯ-ಸೋದರಿತ್ವ ನಮ್ಮ ಗುರಿ'

'ಶಿಕ್ಷಣವೇ ಶಕ್ತಿ'

ನಟನಟಿಯರು ತಮ್ಮ ಮಾತಿನೊಂದಿಗೆ ಒಬ್ಬೊಬ್ಬರೆ ರಂಗದ ಮಧ್ಯ ಬಂದು ಪ್ರೇಕ್ಷಕರಿಗೆ ಅಭಿಮುಖವಾಗಿ ಒಬ್ಬರ ಬೆನ್ನಿಗೊಬ್ಬರು ವೃತ್ತಾಕಾರದಲ್ಲಿ ನಿಂತು ಒಗ್ಗಟ್ಟು ತೋರುತ್ತಾರೆ.

ಹೆಣ್ಣು : ಹೆಣ್ಣು 'ದೇವಿ'ಯೂ ಅಲ್ಲ. 'ದಾಸಿ'ಯೂ ಅಲ್ಲ.

ನಟಿ - ೧ : 'ಉಪಭೋಗದ ವಸ್ತು' ಅಲ್ಲವೇ ಅಲ್ಲ.

ಎಲ್ಲರೂ : ಅಲ್ಲವೇ ಅಲ್ಲ.

ಹೆಣ್ಣು : ಹೆಣ್ಣು ಮನುಷ್ಯಳು.

ನಟಿ - ೨ : ಮನುಷ್ಯಳು.

ಎಲ್ಲರೂ : ಮನುಷ್ಯಳು.

ಹೆಣ್ಣು : ನಮಗೆ ಬೇಕು :

ನಟ - ೧ : ನ್ಯಾಯ.

ಎಲ್ಲರೂ : ನ್ಯಾಯ.

ಹೆಣ್ಣು : ನಮ್ಮ ಹಕ್ಕು :

ನಟ - ೨ : ಸಮಾನತೆ, ಸಮಾನ ಗೌರವ.

ಎಲ್ಲರೂ : ಸಮಾನತೆ, ಸಮಾನ ಗೌರವ.

ಹೆಣ್ಣು : ನಮ್ಮ ಹೋರಾಟ :

ನಟಿ - ೧ : ಪುರುಷರ ವಿರುದ್ಧವಲ್ಲ, ಅನ್ಯಾಯದ ವಿರುದ್ಧ.

ಎಲ್ಲರೂ : ಅನ್ಯಾಯದ ವಿರುದ್ಧ.

ಹೆಣ್ಣು : ಎಲ್ಲ ಅನ್ಯಾಯ, ಅಸಮತೆಗಳ ವಿರುದ್ಧ.

ನಟಿ - ೨ : ಸಂಘರ್ಷ ನಮ್ಮ ಗುರಿಯಾಗಿದೆ.

ಹೆಣ್ಣು : ಹೋರಾಟ ನಮ್ಮ ಬಲವಾಗಿದೆ.

ಎಲ್ಲರೂ : ಸಂಘರ್ಷ ನಮ್ಮ ಗುರಿಯಾಗಿದೆ. ಹೋರಾಟ ನಮ್ಮ ಬಲವಾಗಿದೆ.
ನಿರೂಪಕಿ : ಇದು ಇಂದಿನ ಕಾಲದ ಕರೆಯಾಗಿದೆ.
ನಿರೂಪಕ : ಎಲ್ಲರೂ ಸೇರಿ ಕೂಗಬೇಕಾಗಿರುವ ದನಿಯಾಗಿದೆ.
ಎಲ್ಲರೂ : ಕೂಗಬೇಕಿರುವ ದನಿಯಾಗಿದೆ.
ಹೆಣ್ಣು : ಹೆಣ್ಣು ದನಿಯಾಗಿದೆ.
ಎಲ್ಲರೂ : ಹೆಣ್ಣು ದನಿಯಾಗಿದೆ, ಹೆಣ್ಣು ದನಿಯಾಗಿದೆ.

ಡಾ. ಹೇಮಾ ಪಟ್ಟಣಶೆಟ್ಟಿ
ಹೂಮನೆ, ಶ್ರೀದೇವಿನಗರ, ವಿದ್ಯಾಗಿರಿ, ಧಾರವಾಡ - ೫೮೦ ೦೦೪ ✆ : ೦೮೩೬ - ೪೬ ೨೮೧೮

ಒಂದಿಷ್ಟು ಹೈಕುಗಳು

ಕವಿತೆ - ೧೧

ಸರಜೂ ಕಾಟ್ಕರ್

೧. ಮಾತಿಗೆ
ಮೌನದ ಲೇಪನ :
ಹೈಕು ಹುಟ್ಟುವ ಸಮಯ

೨. ನೀನು ಕಾಡಿಗೆ
ಹಚ್ಚಿದೆ
ಹಗಲು ರಾತ್ರಿಯಾಯಿತು

೩. ನಿನ್ನ ಕಾಲ್ಗೆಜ್ಜೆಯ
ಮಣಿಗಳೆಲ್ಲ ಆಗಸದಿ
ನಕ್ಷತ್ರಗಳಾಗಿ ಹರಡಿವೆ

೪. ನೀನು ನೀನೆಯೋ
ಅಥವಾ ಯೌವನದಲ್ಲಿದ್ದ
ನಿನ್ನ ತಾಯಿಯೋ ?

೫. ತಾಯಿಯಂತೆ
ಮಗಳು : ಗಾದೆ
ಅಪ್ಪನಂತೆ ಮಗ : ತಗಾದೆ

೬. ಸಾಲಿನಲಿ
ಹೊರಟ ಇರುವೆಗಳು
ಪರಸ್ಪರ ವಿದಾಯ ಹೇಳಿದವು

೭. ಅರ್ಧ ಚಂದ್ರ ಒಂದಿಷ್ಟು ನಕ್ಷತ್ರ
ನನ್ನ ಹೃದಯದಲಿ ಉಳಿದಿವೆ
ಉಳಿದವು ನಿನ್ನ ಆಗಸದಲಿ ಇನ್ನೂ ಬಾಕಿ ಇವೆ

೮. ಅವ್ವ ಹೊಲಿದ ಕೌದಿ
ಬರಿಯ ಕಾವನ್ನು ಮಾತ್ರ ಕೊಡಲಿಲ್ಲ
ಅವ್ವಳ ಪ್ರೀತಿಯನ್ನೇ ಅದು ಹೊದಿಸಿತು

೯. ಕೌದಿಯೆಂದರೆ ಕೇವಲ
ಚಿಂದಿಗಳ ಜೋಡಣೆಯಲ್ಲ
ಅದೊಂದು ಅದ್ಭುತ ಜೀವ ಜಗತ್ತು

ಡಾ. ಸರಜೂ ಕಾಟ್ಕರ್, ಕಾವ್ಯ, ಬೆಳಗಾವಿ - ೫೯೦ ೦೧೬ ✆ : ೦೮೩೧ - ೪೫ ೪೫೦೦

ಅವನನ್ನು ಕರೆದು ತಾ...

ಲಲಿತಾ ಸಿದ್ದಬಸವಯ್ಯ

ಇರುಳು ಹನ್ನೆರಡರ ತೋಳು ಇಳಿಬಿದ್ದ ಹೊತ್ತು
ಹಗಲು ಬಿತ್ತಿದ ಮಾತು ಬೆಳೆದು ಕುಯ್ಲಾಗುವ ಹೊತ್ತು
ನಿದ್ದೆ ಕೌದಿಯ ಹೊದ್ದು ನಿರುಮ್ಮಳದ ಸುಖದಲ್ಲಿ
ಹಂಬಲದ ತಂಬುಲವ ಮೆದ್ದು ಮಲಗುವ ಹೊತ್ತು
ನಿನ್ನನೇಳಿಸಲು ಈ ಜೀವ ಒಪ್ಪದಿದ್ದರೂ ಕೂಡಾ
ವಿಧಿಯಿರದೆ ಮೈದಡವಿ ಕೂಗಿ ಕರೆದಿದ್ದೇನೆ
ಅವನಿಗಿಂತಲೂ ಮೊದಲು ಹುಟ್ಟಿದವ ನೀನೆಂಬ
ನನ್ನವಸರದ ವರಸೆಗಳ ವಂಶಾವಳಿ ತಿದ್ದಿ:
        ಭರ್ತಿ ಹತ್ತು ತಿಂಗಳು: ಲೆಕ್ಕ ಹಿಡಿದಳೆದರೆ
        ಮುನ್ನೂರು ದಿನವಾಯ್ತು ಅವನ ಮೊಗ ನೋಡಿ:
        ಎರಡು ಸಾಲಿಲ್ಲ, ಮಾತೆರಡು ಇಲ್ಲ, ತೆರೆಯೋ
        ಅಲೆಯೋ ಯಾವುದರ ಮೇಲೂ ಇಲ್ಲ ಅವನ ವಾರ್ತೆ:
        ಅವನ ಆ ಕುರುಮೊಳೆ ಗಲ್ಲವಿಡಿದೆತ್ತಿದಡವಿ
        ದಣಿದ ಬಾಯಿಗೆರಡು ಗುಕ್ಕಿಡುವ ತನಕ
        ಉಣ್ಣುವುದೆಂಬುದೆನಗೆ ತುಟಿಮೇಲ ಮಾತುಕತೆ:
ನಿಜ, ನಾನು ದುಡುಕೆರಡು ಹೆಚ್ಚು ಮಾತಾಡಿಬಿಟ್ಟೆ:
ನನ್ನ ಕಣ್ಣಮುಂದಿನ ಹುಡುಗ, ಆಡಿ ಬಂದವನ
ಅಂಗಾಲ ತೊಳೆದು, ಮಂಡಿ ಮೇಗಳ ಧೂಳ ಉಟ್ಟ
ಸೆರಗಲೆ ಒರೆಸಿದ್ದ ಮಿದುಗೆನ್ನೆಯ ನಿನ್ನೆ ಮೊನ್ನೆ
ಗಳಲ್ಲೆ ಮೈಮರೆತು, ಮರೆತುಬಿಟ್ಟಿದ್ದೆ ಅವನೀಗ
ಬೆಳೆದ ಮಗನೆಂಬ ಇಂದಿನೀ ದಿನದ ವರ್ತಮಾನ:
ಬರೆಯಹೊರಟಿದ್ದೆ ನನ್ನ ಕಣ್ಣಿಂದಲೇ ಅವನೂ
ನೋಡಬೇಕೆಂಬ ಹುಂಬತನ ನೆತ್ತಿಗೇರಿಸಿದ
ಹಗಲುಗುರುಡಿನಧಿಕಾರದ ಪುಡಿಬರಹವನ್ನ,
ತಿದ್ದಿಕೊಂಡಿದ್ದೇನೆ, ಹೇಳಿಬಿಡು ಇದಕ್ಕೆರಡನೆ
ನುಡಿಯಿಲ್ಲ: ಮುರುಡು ಬಸವನಗುಡಿಯ
ಪಂಚಕಲಶಗಳ ಮೇಲಾಣೆ: ಅವನೊಪ್ಪಿ ಒಲಿದ
ಆ ಹುಡುಗಿಯೇ ಸರಿ: ಅವನಾಸೆಗಿಲ್ಲಿ ಹುಲ್ಲು
ಕಡ್ಡಿಯೂ ಅಡ್ಡವಿಲ್ಲ, ಪಡಿ ಒದೆದು ಅವಳು
ಅಡಿಯಿಟ್ಟ ಚಣದಿಂದಲೆ ಮನೆಯ ಮಗಳು
ಬರಿ ಸೊಸೆಯಲ್ಲ: ಅವರ ಸುಖವೇ ನಮ್ಮ ಸುಖ
ಅವರೊಪ್ಪಿದಂತಿರಲಿ: ಅಟ್ಟವೇನಿದ್ದರೂ ಅವರ
ತಾಳತಟ್ಟಿಗೆ ಬಿಟ್ಟು ಸರಿಯುವವು ನಾವು ಮರೆಗೆ

ಇನ್ನೂ ನಂಬದಿದ್ದರೆ ಅವನು, ಇಗೋ ಹಿಡಿ, ಈ
ಇಷ್ಟಲಿಂಗವ ಕೊಡು, ಇದರ ಕುರುಹು ಹೇಳು
ಬಿಟ್ಟಿರದ ಒಡವೆಯಿದು ನನ್ನೊಡಲಿಗೆ: ಎದೆ
ಯ ಮೇಲಿರದ ದಿನ ಹನಿ ನೀರೂ ಕುಡಿದಿಲ್ಲ
ಅನ್ನದಗುಳಿನ ಹೆಸರೂ ಗಂಟಲೊಳಗಿಳಿದಿಲ್ಲ
ಈ ಮನೆಯ ನೇಮವಿದು: ತಲೆಮಗನವನು
ತಿಳಿಯದ್ದು ಯಾವುದೂ ಇಲ್ಲ: ಇದಕಿಂತಲೂ
ಬೇರೆ ನಂಬಿಕೆಯ ಗುರುತು ನನ್ನ ಜೀವದ
ಹೊರತು ಇನ್ನೊಂದು ಈ ಭೂಮಿ ಮೇಲಿಲ್ಲ
ನೆಂಟರಿಷ್ಟರ ಮನೆ, ಇಷ್ಟಮಿತ್ರರ ಮನೆ ಬರಿದೆ
ಅಲೆಯಬೇಡ: ನನ್ನ ಒಡಲಿನ ತುಣುಕು,
ಅದರ ನಾಡಿಮಿಡಿತ ನನಗೆ ಗೊತ್ತು: ಅಲ್ಲೆಲ್ಲೂ
ಅವನಿರುವುದಿಲ್ಲ: ಇದ್ದಾರೆ ಇದ್ದಾನು ಆ ಮನೆಯಲ್ಲಿ
ಅವನೊಲಿದು ನಲಿವು ಕಂಡುಕೊಂಡಿಹ ಚೆಲುವೆ
ಚೆನ್ನಿಗಳ ಗೂಡಿನಲ್ಲೇ: ನೆಟ್ಟಗಲ್ಲಿಗೇ ಹೋಗು,
ಈ ತಾಯ ಹೊಟ್ಟೆಯ ಬಿನ್ನಹವನ್ನಿಟ್ಟು ಬಿಡು:
ಸಾಧ್ಯವಾದರೆ ಕೈ ಹಿಡಿದು ಒಡಗೂಡಿ ಮರಳು.
ಹೇಳು, ಹೇಳವನಿಗೆ, ಅವನಮ್ಮ ಹೆಂಗಸು
ಹೇಗೋ ಮರೆತಂತೆ ಮರೆತು ಸುತ್ತುಗೆಲಸ
ದಲ್ಲೆರಡು ಗಳಿಗೆ, ಅತ್ತು ಮತ್ತೆರಡು ಗಳಿಗೆ
ಹಗುರವಾಗುತ್ತೇನೆ: ಆದರವರ ಪಾಡೇನು, ಬಾಯ್
ದೆರೆದು ಹೇಳಲಾರರು, ಅತ್ತು ಇಳಿಸಲಾರರು ದುಗುಡ
ಗೂಡುಕಟ್ಟಿದ ನೋವು ಕೀವಾಗಿ ಸುರಿಯುವುದು
ಇರುಳು ಅವರೊರಗಿದ ತಲೆದಿಂಬ ಅಡಿಗೆ
ಭುಜಕಟ್ಟು ಕುಸಿದು, ಕುತ್ತಿಗೆ ಮೊಳ ಸರಿದು
ತೊಟ್ಟ ಕಸೆ ಅಂಗಿ ಸಡಿಲ: ನಡಿಗೆ ತೋರಿಕೆಯ ಜಂಭ:
ಇನ್ನೊಂದು ಮಾತು, ಇರಲಿ, ಇದನೂ ಹೇಳಿಬಿಡು
ಮನದ ಕೋನದಲ್ಲಿದ್ದರೆ ಆ ಅನುಮಾನವೂ
ನಶಿಸಿಬಿಡಲಿ: ಗಂಡ ಹೆಂಡಿರೇ ಆಗಿದ್ದಿರಬಹುದು
ಅವರೀಗಾಗಲೇ: ಆದರೂ ಸರಿ, ಬೇಸರ
ವಿಲ್ಲ, ಬಂದುಬಿಡಲಿ: ಲಗ್ನ ನೆರವೇರಿಸುವೆವು
ನಾವು ನಾಲ್ಕು ಮಂದಿಯ ಮುಂದೆ ನಮ್ಮ ಕಣ್ಣಿನ
ಆಸೆ ಹಿಂಗುವಂತೆ: ತಲೆತಲೆಗಳಿಂದ ಮನೆತನ
ನಡೆಸಿಕೊಂಡಿಹ ನಡೆನುಡಿಗೊಪ್ಪುವಂತೆ
ತಾಯ ಕೋಪದ ಉದ್ದ ಹೆಚ್ಚೆಂದರೆರಡು ಹಗಲು
ಕಡಿಮೆಯಾದಾಗ ನಾಲ್ಕು ಬೈಗುಳು: ಈ ಗರ್ಭ ಜೀಲಕ್ಕೆ ಹತ್ತಿ
ಬಂದಿಲ್ಲವಯ್ಯ ಹಠ ಪರತ್ತು: ಅವನಾಡಿದುದೆಲ್ಲ ಎಂದೋ

ಮರೆತು ವಕಾಲತ್ತಿಗೆ ತೊಡಗಿದ್ದೇನೆ ಅವನಿಗಿಂತುತ್ತಮ
ನಾದ ಮಗ ಈ ಲೋಕದ ಮೇಲೆ ಇಲ್ಲೀವರೆಗೆ ಹುಟ್ಟಿಲ್ಲ
ವೆಂದು: ಹೆತ್ತ ಕಿಚ್ಚಿಗೆ ನಾಯಿ ಬತ್ತಲೆಯ ಮರೆತು
ಮೊಲೆ ಕೊಡಲೆಂದೇ ತುತ್ತು ತುತ್ತಿಗೆ ಓಣೆಗಳ ತಿರಿವ
ತೆರ ಹೆತ್ತವರ ಪಾಡು: ಮಾನಾಭಿಮಾನ ಮುರಿವ ಕೋಡು.
ಹಿಡಿ ಇದನು: ಈ ಭರಣಿಯಲ್ಲಿದೆ, ಅವನು
ಬಯಸಿ ತಿನ್ನುವ ಶಿವರಾತ್ರಿ ತಂಬಿಟ್ಟು, ಮೇಲೆ
ಮನೆ ಬೆಣ್ಣೆ ಕಾಸಿ ಸೋಸಿಟ್ಟ ತುಪ್ಪ: ಸೊಗಡ
ವರೆ ಹೂವೊಡೆಯುವ ಕಾಲ: ಮೂರೆಕರೆ ದಿಣ್ಣೆಹೊಲ
ಅಷ್ಟೂ ತೊಡರುಗಾಲಾಗಿದೆ ಗಿಡ ಗುಚ್ಛಗುಚ್ಛವಾಗಿ,
ಹಿದುಕವರೆ ಅರೆದ ರೊಟ್ಟಿಯೆಂದರೆ ಅವನಿಗೋ
ಮೈಯೆಲ್ಲ ಬಾಯಿ: ಅದನೆ ನೆನೆನೆನೆದು ಕಾಲೊಂದೂ
ಸುಲಿದಿಲ್ಲ ಕಳೆದ ವರ್ಷ ಪೂರ್ತಿ: ಈ ಸುಗ್ಗಿ
ಗಾದರೂ ಅವನಿದ್ದರೆ ಅವರಪ್ಪ ಉಂಡಾರು
ನಾಲ್ಕು ತುತ್ತು, ರಕ್ತಗತವಾಗುವಂತೆ ಅರಗಿ:
ಹೆಂಗಸಲ್ಲವೆ ನಾನು, ಮೇಲಾಗಿ ಹೆತ್ತ ತಾಯಿ
ಮನಸೇನೋ ನೆನಸುತಿದೆ ಸೊಗದೊಂದು ಊಹೆ,
ಇದ್ದರೂ ಇರಬಹುದು: ಹತ್ತು ತಿಂಗಳೆಂದರೆ
ಅದು ಕಡಿಮೆ ಮಾತೇ: ಪಿಳಿಪಿಳಿಯ ಕಣ್ಣೇಕೆ,
ಹೊಳೆಯಲಿಲ್ಲವೆ ನಿನಗೆ ನನ್ನ ಮಾತಿನ ಆಶೆ,
ಬಾ, ಹತ್ತಿರಕೆ ಹೇಳುವೆನು ಕಿವಿಗಳೊಳಗೆ:
ಹುಡುಗಿ ಕವಲೊಡೆದಿರಬಹುದು: ಇದ್ದರೂ ಇರಲಿ
ಮುಂದಿನದು ನನ್ನ ಹೊಣೆ: ಬೇಗ ಈ ಮನೆ
ಯೊಳಗೆ ಅವನದೇ ಪ್ರತಿರೂಪ ಓಡಾಡಲಿ, ಹೇಳಿಬಿಡು
ನೆಟ್ಟಗೊಳಮನೆಗೇ ನಡೆದು, ಹುಡುಗಿ ಕಿವಿಯೊಳಗೆ.
ಮಾತು ಮಾತಿನ ನಡುವೆ ಅವರಪ್ಪ ಒತ್ತೊತ್ತಿ
ಹೇಳಿದ್ದುಂಟು: ಹತ್ತು ಮಂದಿಯೇನೆಂದಾರು
ನೆನಪಿರಲಿ ಎಂದು; ಅದನೂ, ಆ ಹಟವನ್ನು
ಅವರು ಬಿಟ್ಟಾಯಿತು: ಅವನಿಗಿಂತಲೂ ಈ
ಮಂದಿ ಹೆಚ್ಚಲ್ಲವೆಂದು; ಅವನಿರುವ ಊರೇ
ಕೈಲಾಸ ನಮಗೆ: ಹೊಲಮನೆಗಳೇನು ಕೊರಳಿ
ಗಿಳಿಬಿದ್ದು ಬಂದಾವೆ ಗುಣಿಯ ಒಳಗೆ: ಇನ್ನೆ
ಷ್ಟು ದಿನ, ಕರೆ ಬಂದ ಕೂಡಲೇ ಇರುವುದೆಲ್ಲವ
ಕೊಡವಿ ಹಿಂದುಮುಂದನ್ನುತ್ತ ಹೊರಡಬೇಕಲ್ಲವ
ಷ್ಟು, ಹೊರಡಿನ್ನು ಹಂಬಲದ ಮರುಳು ನಾನು,
ಹೇಳುತಲೆ ಇದ್ದರೆ ಬೆಳಕು ಹರಿದರೂ ಕೂಡ
ಉಳಿಯುವುದು ಕೊಸರು: ತಂಪು ಹೊತ್ತಿನಲಿ

ಹೊರಟರೆ ಬಿಸಿಲೇರುವುದರೊಳಗೆ ಅವನಿರುವ
ಊರು ತಲುಪಿ ಮನೆ ಹುಡುಕಬಹುದು ನೀನು.

ಇದು ಕೊಟ್ಟಕೊನೆ ಮಾತು ಕಣೋ, ಮಗು ಕವನ,
ನೀನೆನ್ನ ಹಿರಿಯ ಮಗ; ಅವನಿಗಿಂತಲೂ ಮುಂಚೆ
ಭಾವಗರ್ಭದ ಒಳಗೆ ಹುಟ್ಟಿ ಬಂದಂಥವನು:

ಚಿತ್ತ ಭಿತ್ತಿಯ ನಡುವೆ ಮೆತ್ತನೆಯ ಮಾಸೊಳಗ
ನೆತ್ತಿ ನೀರಲುಗದಂತೆ ಹೊತ್ತಿದ್ದೇನೆ ನಿನ್ನ: ನನ್ನ
ಅರಿವಿನ ಒಂದೊಂದು ಗುಟುಕನ್ನು ನಲುನಲುಮಿ
ಮೆದುಗೊಳಿಸಿ ಹನಿಹನಿಯ ಸೋಸಿ ಬಸಿದಿದ್ದೇನೆ
ನಿನ್ನಸ್ಥಿಗಳ ಪುಷ್ಟಿಗೆ; ನಿನ್ನೆದೆಗೂಡ ಪುಪ್ಪುಸಗಳ
ಅರಳುವಿಕೆಗೆ; ಇಲ್ಲೀ ವರೆಗೆ ಯಾವ ತಾಯಿ
ಯೂ ಕೇಳಿರದಂಥ ಹೆತ್ತ ಕೂಲಿಯನಿಂದು
ನಾಚಿಕೆಯ ಸಲೆ ತೊರೆದು ಕೇಳುತ್ತಿರುವ:
ಹೋಗು, ನಿನ್ನ ಬೆನ್ನಿಗೆ ಬಿದ್ದ ಅವನನ್ನು
ಕರೆದು ತಾ: ತಂದೊಪ್ಪಿಸಿ ತೀರಿಸು
ಈ ಹೆತ್ತವಳ ಹೆತ್ತ ಸಾಲ.

ಲಲಿತಾ ಸಿದ್ದಬಸವಯ್ಯ, ಗುರುಸನ್ನಿಧಿ, ೫೨೧೭, ೨ ನೆಯ ತಿರುವು, ಅಶೋಕನಗರ,
ತುಮಕೂರು - ೫೭೨ ೧೦೧ ✆ : ೦೮೧೬ - ೨೭೯೫೨೫

ಒಮ್ಮೆ ಏನಾಯಿತೆಂದರೆ.....

ಕಥೆ

ಅನು : ಚಂದ್ರಕಾಂತ ಪೋಕಳೆ

ಮರಾಠೀ : ಗೌರೀ ದೇಶಪಾಂಡೆ

ಇಲ್ಲಿ ಬಂದಾಗಿನಿಂದ ನನಗೆ ಎಲ್ಲಕ್ಕಿಂತಲೂ ಹೆಚ್ಚು ಭೀತಿ ಮೂಡಿದ್ದೆಂದರೆ ರಸ್ತೆ ದಾಟುವದು. ಜನ್ಮವಿಡೀ ಮೊದಲು ಬಲಗಡೆ, ಅನಂತರ ಎಡಗಡೆ ನೋಡಿ ರಸ್ತೆ ದಾಟುವ ಅಭ್ಯಾಸ. ಅದ್ಹೇಗೆ ಮುರಿಯುವದು ಸಾಧ್ಯ ? ಆದರೂ ದೊಡ್ಡ ರಸ್ತೆಗಳಿದ್ದಲ್ಲಿ ದಾಟಲು ದೀಪಗಳಿರುತ್ತವೆ, ಅದು ಒಳ್ಳೆಯದೇ. ವಾಹನಗಳು ಬರದಿದ್ದಾಗಲೂ, ಉಳಿದ ಜನ ಸರಸರ ರಸ್ತೆ ದಾಟುತ್ತಿರುವಾಗಲೂ ನಾನು ಮಾತ್ರ ಭೋಳೆ ವ್ಯಕ್ತಿಯಂತೆ ಕೆಂಪು ಮನುಷ್ಯ ಹಸಿರು ಮನುಷ್ಯ ಯಾವಾಗಾಗುತ್ತಾನೆ ಎಂದು ಬಾಯ್ತೆರೆದು ನಿಂತಿರುತ್ತೇನೆ.

ಒಮ್ಮೆ ಹೀಗೆಯೇ ನಾನು ಒಂಟಿಗಾಲ ಮೇಲೆ ನಿಂತು ಹಾದಿ ಕಾಯುತ್ತಿದ್ದೆ. ತಟ್ಟನೆ ಒಬ್ಬ ಮನುಷ್ಯ ರಸ್ತೆ ದಾಟಿ ಬಂದು ಹಾಯ್ದು ಬಿಟ್ಟ. ತಲೆಯೆತ್ತಿ ನೋಡಿದೆ, ಅವನು ನನ್ನ ಗಂಡನೇ. ಇದೊಂದು ವಿಚಿತ್ರ, ಯಾಕೆಂದರೆ ನಾವೆಂದೂ ಆಕಸ್ಮಿಕ ಭೆಟ್ಟಿಯಾಗಿದ್ದೇ ಇಲ್ಲ. ಕೆಲ ವರ್ಷಗಳ ಹಿಂದೆ ಪರಸ್ಪರರ ಆರಾಧನೆ ಮಾಡಿದಾಗಲಾಗಲಿ, ಈಗ ಮದುವೆ ಮಾಡಿಕೊಂಡ ಬಳಿಕವಾಗಲಿ, ನಾವು ಸದಾಕಾಲ ನಿರ್ಧರಿಸಿಯೇ, ಮಾತಾಡಿಕೊಂಡೇ ಭೆಟ್ಟಿಯಾಗುತ್ತೇವೆ.

ನಾವು ಸಾಕಷ್ಟು ಬೆಳೆದು ದೊಡ್ಡವರಾದಾಗಲೇ ನಮ್ಮ ಮದುವೆಯಾಯಿತು. ಇಬ್ಬರಿಗೂ ನೌಕರಿ, ಗೆಳೆಯರ - ಗೆಳತಿಯರ ಹಿಂಡು ಇದ್ದಾಗ ನಮ್ಮ ಪರಸ್ಪರರ ಪರಿಚಯವಿರುವದನ್ನು ಕಂಡು ಎಲ್ಲ ಗೃಹಸ್ಥ ಗೆಳೆಯರು, ವಿಶೇಷವಾಗಿ ಗೆಳತಿಯರು ಟೊಂಕ ಕಟ್ಟಿದರು, ನಮ್ಮ

ಕೋರ್ಟ್‌ಶಿಪ್‌ಗೆ ಬೆಂಬಲ ಸೂಚಿಸಿದರು. ಪ್ರತಿಯೊಬ್ಬರೂ ಊಟಕ್ಕೆ, ಸಿನೆಮಾಕ್ಕೆ, ಪಾರ್ಟಿಗೆ, ಪಿಕ್‌ನಿಕ್‌ಗೆ ಕರೆಯೊಯ್ಯಲಾರಂಭಿಸಿದರು. ಬಳಿಕ ಹಿಂದೀ ಸಿನೆಮಾದಂತೆ ನಮ್ಮಿಬ್ಬರನ್ನು ಒಂಟಿಯಾಗಿರಲು ಬಿಡೋದು ಇತ್ಯಾದಿ ಪ್ರಕಾರಗಳನ್ನು ಉಳಿದವರು ಆರಂಭಿಸಿದರು. ನೋಡ-ನೋಡುತ್ತ ನಾವಿಬ್ಬರೂ ಪ್ರೇಮದಲ್ಲಿ ಸಿಲುಕಿ ಬಿದ್ದೆವು!

ಹಾಗೆ ಈ ಗಂಡ ಯಾರಿಗೂ ಇಷ್ಟವಾಗಬಹುದು, ಅಷ್ಟು ಸರಳ ವ್ಯಕ್ತಿ ಅವನು. ಹಾಗಿದ್ದೂ ಅವನ ಮದುವೆ ಏಕೆ ಬೇಗ ಆಗಲಿಲ್ಲ ಎಂದು ನನಗೆ ಆಶ್ಚರ್ಯವಾಗಿತ್ತು. ಆಮೇಲೆ ಕೆಲ ದಿನಗಳ ನಂತರ ಅವನು ನನಗೆ ಹೇಳಿದ್ದೇನೆಂದರೆ, ಹಾಗವನು ನಾಲ್ಕು ಜನರ ಎದುರು ದಿಟ್ಟ ವ್ಯಕ್ತಿಯಂತೆ ಕಂಡರೂ, ಸಮಯ ಬಂದಾಗ ಮಾತ್ರ ದುರ್ಬಲಗೊಂಡಿರುತ್ತಾನೆ. ಅವನು ಇದನ್ನು ನನಗೆ ಹೇಳುವಷ್ಟರಲ್ಲಿ ನಾವು ಸೀಮೆಯನ್ನು ದಾಟಿ ಬಿಟ್ಟಿದ್ದೆವು: ಅವನು ಹಾಗೆ ದುರ್ಬಲನಾಗಿರುವ ಯಾವ ಸಂದರ್ಭವೂ ಬರದೇ ಇರುವದರಿಂದ ಹೇಳಿದೆ, 'ಹುಂ!'. ಆಗವನು ಎಂದಿನಂತೆ ಮೀಸೆಯೊಳಗೇ ನಕ್ಕ. ನಾನೊಂದು ವೇಳೆ 'ಛೀ!' ಎಂದರೂ ಅವನು, ಆ ಬಾಬತ್ತಿನಲ್ಲಿ, ತೀರಾ ದುರ್ಬಲ ಎನ್ನುವದು ಸತ್ಯ. ನಾಲ್ಕು ಜನರೆದುರು ತಟ್ಟನೆ ಆಫ್ ಕಲರ್ ವಿನೋದ ಮಾಡಲು ನನಗೇನೂ ಅನಿಸುವದಿಲ್ಲ, ಆದರವನು ಇವತ್ತಿಗೂ ಹೆಂಗಸರೆದುರು ಕ್ಷಮೆ ಬೇಡಿಯೇ ಅಶ್ಲೀಲ ಹಾಸ್ಯ ಮಾಡುತ್ತಾನೆ!

ಮದುವೆಯಾದ ಕೆಲವೇ ದಿನಗಳಲ್ಲಿ ಅವನಿಗಿಲ್ಲಿ ಟ್ರಾನ್ಸ್‌ಫರ್ ಆಯಿತು. ನಾನು ಮಾತ್ರ ಪತಿವ್ರತಾ ಹೆಂಗಸಿನಂತೆ ನನ್ನ ನೌಕರಿ ತೊರೆದು ಅವನ 'ಸೇವೆ ಮಾಡಲು' ಅವನ ಬೆನ್ನು ಹತ್ತಿ ಇಲ್ಲಿಗೆ ಬಂದೆ. ಅವನಿಲ್ಲಿ ಕಡಿಮೆ ನಾಚಿಕೆಯಿಂದ ವ್ಯವಹರಿಸಲಾರಂಭಿಸಿದ. ಯಾಕೆಂದರೆ ಮೊದಲನೆಯದು ಇಲ್ಲಿಯ ಭಾಷೆ ಅವನಿಗೆ ಚೆನ್ನಾಗಿ ಬರುತ್ತದೆ, ಆದರೆ ನನಗೆ ಬರುವದಿಲ್ಲ. ಹೀಗಾಗಿ ಮನೆಯಲ್ಲಿ ಅಧಿಕಾರ ಚಲಾಯಿಸುವ ನಾನು ಹೊರಗೆ ಮೂಕಳಂತೆ ಬೆನ್ನು ಹತ್ತುತ್ತಿದ್ದೆ: ಎರಡನೆಯದಾಗಿ ಇಲ್ಲಿಯ ಕಾಯ್ದೆ ಕಾನೂನುಗಳೇ ಬೇರೆ.

ಬೆಳಿಗ್ಗೆ ಎದ್ದು ಅವನು ಕೆಲಸಕ್ಕೆ ಹೋದ ನಂತರ ಮನೆಗೆಲಸ ಮುಗಿಸಿ, ಸ್ವಲ್ಪ ಓದು-ಬರಹ ಮುಗಿಸಿ ನಾನು ಊರು ತುಂಬಾ ಅಲೆದಾಡಲು ಹೋಗುತ್ತಿದ್ದೆ. ಊರು ಚಿಕ್ಕದಾಗಿದ್ದರೂ, ಸುಂದರವಾಗಿತ್ತು. ನನಗೆ ಅಲ್ಲಿ ಇಲ್ಲಿ ತಿರುಗಾಡಲು ಮೋಜೆನಿಸುತ್ತಿತ್ತು.

ಆ ದಿನ ಸಹ ನಾನು ಹೀಗೆಯೇ ತಿರುಗಾಡಲು ಹೊರಬಿದ್ದಾಗ, ಅವನು ಮೂರು ಗಂಟೆಯ ವರೆಗೆ ಕಾರಖಾನೆಯಲ್ಲಿರುತ್ತಾನೆಂಬುದು ಖಾತ್ರಿಯಿತ್ತು. ಈಗವನು ಹೀಗೆ ಅಚಾನಕ್ ಭೆಟ್ಟಿಯಾಗಿದ್ದರಿಂದ ತುಂಬಾ ಆನಂದವಾಯಿತು. ಯಾಕೆಂದರೆ ನಾನವನನ್ನು ತುಂಬಾ ಪ್ರೀತಿಸುತ್ತೇನೆ. 'ತುಂಬಾ' ಎನ್ನಲು ಕಾರಣವೇನೆಂದರೆ ಗಂಡ - ಹೆಂಡತಿ ಪರಸ್ಪರರನ್ನು, ಮದುವೆ ನಂತರ ಸಹ ಹಾಗೆ ಪ್ರೀತಿಸುತ್ತಲೇ ಇರೋದು ಇತ್ತೀಚಿಗೆ ಅಂಥ ಫ್ಯಾಶನೇಬಲ್ ವಿಷಯವೇನಲ್ಲ, ಆದರೆ ನನಗೆ ಮಾತ್ರ ಅವನು ತುಂಬಾ - ತುಂಬಾ ಇಷ್ಟವಾಗುತ್ತಿದ್ದ.

ಈಗ ಇನ್ನು ಮುಂದಿನ ವಿಷಯವನ್ನು ನಾನು ತೃತೀಯ ಪುರುಷದಲ್ಲಿ (ಅಥವಾ ತೃತೀಯ ಸ್ತ್ರೀದಲ್ಲಿ ಎಂದರೆ ಹೆಚ್ಚು ಯೋಗ್ಯ) ಹೇಳುವದು ಸರಿಯೆನಿಸುತ್ತದೆ. ಕಾರಣವೇನೆಂದರೆ, ಈ 'ನನ್ನ' ಕಥೆಯು ನನ್ನದೇ ನಿಜವಾದ ಕಥೆಯೆಂಬ ತಪ್ಪು ಕಲ್ಪನೆಯಾಗುವ ಸಾಧ್ಯತೆಯಿದೆ. ಈ ಘಟನೆ ಘಟಿಸಿದ್ದು ಮಾತ್ರ ಹೀಗೆ:

ಒಮ್ಮೆ ಏನಾಯಿತೆಂದರೆ, ಅವಳು ರಸ್ತೆ ದಾಟಬೇಕೆಂದು ನಿಂತಾಗ ಆ ಕಡೆಯಿಂದ ಒಬ್ಬ ಮನುಷ್ಯ ಬಂದು ಅವಳಿಗೆ ಡಿಕ್ಕಿ ಹೊಡೆದ. ಯಾರೆಂದು ತಲೆಯೆತ್ತಿ ನೋಡಿದರೆ ಅವಳ ಗಂಡನಾಗಿದ್ದ. ಇದು ವಿಚಿತ್ರವೇ. ಯಾಕೆಂದರೆ ಅವನು ಮೂರು ಗಂಟೆಯ ವರೆಗೆ ಕಾರಖಾನೆಯಲ್ಲಿರುತ್ತಿದ್ದ. ಇವತ್ತು ಕೆಲಸ ಬೇಗ ಮುಗಿಯಿತೇ ಎಂದವಳು ಕೇಳಬೇಕೆಂದು

ಬಾಯ್ತೆರೆಯುವಷ್ಟರಲ್ಲಿ, ಅವನು ಗಂಭೀರವಾಗಿ ಹೇಳಿದ `ಬೋನ ಜೋರ್ನೊ ಸಿನ್ಯೋರಾ ! ರಸ್ತೆ ದಾಟಲು ನಾನು ನಿಮಗ ಸಹಕರಿಸಲೇ ?' ಇವನು ಮೋಜಿನ ಮೂಡಿನಲ್ಲಿರಬೇಕೆಂದುಕೊಂಡು ಸ್ವತಃ ತನ್ನೊಳಗೇ ನಗುತ್ತ ಅವಳು ಅಲ್ಲಿಯ ಎಂದಿನ ಪದ್ಧತಿಯಂತೆ ತನ್ನ ಕೈಯನ್ನು ಅವನ ಬಾಹುವಿನೊಳಗೆ ತೂರಿ ಹಿಡಿದು, ಇಬ್ಬರೂ ರಸ್ತೆ ದಾಟಿ ಆಚೆ ಹೋದರು. ಅವನ ಗಂಭೀರ ದನಿಯನ್ನು ತಾನು ಅನುಕರಿಸಿ ಹೇಳಿದಳು, `ಗ್ರಾಝಿ !' ಈಗ ಇಬ್ಬರೂ ನಕ್ಕು ಇನ್ನೇನು ಮನೆಗೆ ಹೋದರಾಯಿತು ಎನ್ನುವಷ್ಟರಲ್ಲಿ ತನ್ನ ಕೈಗಡಿಯಾರ ನೋಡಿ ಕೇಳಿದ, 'ನಿಮಗೆ ಎಲ್ಲಾದರೂ ಅಪಾಯಿಂಟ್‌ಮೆಂಟ್ ಇದೆಯೇ ?'

ಅರೆ ! ಇದೇನಿದು ? 'ಇಲ್ಲ.'

'ಹಾಗಾದರೆ ಈ ನೆರೆಯ ಕೆಫೆಗೆ ಬಂದು ನನ್ನೊಂದಿಗೆ ಒಂದು ಕಪ್ಪು ಕಾಫಿ ಕುಡಿಯುವ ಕೃಪೆ ಮಾಡುತ್ತೀರಾ ?'

ವ್ಹಾ, ಇದೇನು ಮತ್ತೆ ? 'ಅವಶ್ಯ !'

ಬಳಿಕ ಇಬ್ಬರೂ ಒಳಗೆ ಹೋಗಿ ಕಾಫಿ ಕುಡಿಯಲು ಕೂತರು. ಈಗ ಮುಂದೇನು ಎನ್ನುವಂತೆ ಆಕೆ ಹುಬ್ಬೇರಿಸಿದಳು. ಅವನು ಅದೇ ದನಿಯಲ್ಲಿ ಹೇಳಿದ,

'ನೀವು ಇಲ್ಲಿಯವರ ಹಾಗೆ ಕಾಣುತ್ತಿಲ್ಲ ?'

'ಅಲ್ಲ, ನಾನಿಲ್ಲಿ ಈಗ ತಾನೇ ಬಂದಿದ್ದೇನೆ.'

'ಮತ್ತೆ ನಿಮ್ಮ ಯಜಮಾನರು ?' ಅವಳ ಬೆರಳಿನ ಉಂಗುರ ನಿರ್ದೇಶಿಸಿ ಕೇಳಿದ.

'ಇಲ್ಲಿ ಕೆಲಸವಲ್ಲಿದ್ದಾರೆ ಇಂತಿಂಥ ಕಾರಖಾನೆಯಲ್ಲಿ.' ಬಳಿಕ ನಕ್ಕು ಹೊಸ ಐಡಿಯಾ : 'ಎರಡು ದಿನದ ಮಟ್ಟಿಗೆ ರೋಮ್‌ಗೆ ಹೋಗಿದ್ದಾರೆ !

'ವ್ಹಾ ! ಹಾಗಾದರೆ ನನ್ನೊಂದಿಗೆ ಲಂಚ್ ತೆಗೆದುಕೊಳ್ಳಲು ಯಾವ ತೊಂದರೆಯೂ ಇರಲಿಕ್ಕಿಲ್ಲ ! ನನಗೆ ಇಲ್ಲೊಂದು ಉತ್ತಮ ಕಬಾಬ್ ತಯಾರಿಸುವ ರೆಸ್ಟಾರೆಂಟ್ ಗೊತ್ತಿದೆ. ಈ ಪ್ರಾಂತದ ಕಬಾಬ್ ತುಂಬಾ ಪ್ರಸಿದ್ಧ. ಎಂದಾದರೂ ತಿಂದಿದ್ದೀರಾ ?'

'ಇಲ್ಲ.'

'ಹಾಗಂದರೆ ನಡೆಯಿರಿ ಹೋಗೋಣ. ಎಷ್ಟು ಸುಂದರವೆಂದರೆ, ಬಾಯೊಳಗೆ ಹಾಕಿಕೊಂಡ ತಕ್ಷಣ ಕರಗಿಯೇ ಬಿಡುತ್ತದೆ.' ಸ್ವಲ್ಪ ಚಿಂತೆಯಿಂದ 'ಮನೆಯಲ್ಲಿ ಮಕ್ಕಳು ಬಿಕ್ಕಳು ಹಾದಿ ಕಾಯ್ತಾರೇನು ?'

'ಇಲ್ಲ, ಯಾರಿಲ್ಲ.'

'ನನಗ, ಗೊತ್ತೇಯಿತ್ತು ! ಮಕ್ಕಳ ಜಂಜಾಟ ಹೊರಲು ನೀವಿನ್ನೂ ಚಿಕ್ಕವರಲ್ಲ !'

ಅಯ್ಯೋ ! ಅವಳಿಗೀಗ ಮೂವತ್ತೈದು ! ತಾಯ್ನಾಡಲ್ಲಿ ಶಾಲೆಗೆ ಹೋಗುವ ಒಬ್ಬ ಮಗಳಿದ್ದಾಳೆ. ಆದರೆ 'ನೀವಿನ್ನೂ ಚಿಕ್ಕವರು' ಎಂದದ್ದು ಯಾರಿಗೆ ಸೇರಲಿಕ್ಕಿಲ್ಲ ?

ಅವಳು ನಸುನಕ್ಕು ಎಚ್ಚರಿಕೆಯ ದನಿಯಲ್ಲಿ ಹೇಳಿದಳು, 'ರೀ, ನೀವು ಭಾವಿಸಿದಷ್ಟು ಚಿಕ್ಕವಳಲ್ಲ ನಾನು ! ಹತ್ತು ಊರಿನ ನೀರು ಕುಡಿದಿದ್ದೇನೆ !'

'ಹೌದೌದು ! ನಿನ್ನೊಳಗೆ ಆ ಕಾಸ್ಮೊಪಾಲಿಟನ್ ಏರ್ ಕಾಣಿಸುತ್ತಲೇ ಇದೆ ! ಬೈ ದಿ ವೇ ! ನಾನು "ನೀನು" ಎಂದು ಕರೆದರೆ ತಪ್ಪಿಲ್ಲ ಅಲ್ಲವೇ ? ವಯಸ್ಸಿನಿಂದ ನನಗಿಂತ ಚಿಕ್ಕವಳು, ಅದಕ್ಕೆ !'

ಹೌದೇ ? ಅವಳೆಷ್ಟು ಚಿಕ್ಕವಳು ಅನ್ನೋದನ್ನು ನಾನು ಹೇಳುತ್ತೇನೆ ! ಒಂದು ವರ್ಷ, ಆರು ತಿಂಗಳು ಮತ್ತು ಹನ್ನೆರಡು ದಿನ, ಅವಳು ಮನದೊಳಗೆ ಹೇಳಿದಳು. ಆದರೆ ಹುಡುಗಾಟದಲ್ಲಿ ಶಾಮೀಲಾಗುತ್ತ ಹೇಳಿದಳು, 'ನನದೇನೂ ಅಭ್ಯಂತರವಿಲ್ಲ.'

'ಹಾಗಾದರೆ ಹೋಗೋಣ ನಡೆ. ರೆಸ್ಟಾರೆಂಟ್ ಸ್ವಲ್ಪ ದೂರವಿದೆ, ಊರ ಹೊರಗೆ, ನನ್ನ ಕಾರು ಅಲ್ಲಿ ಮೂಲೆಯಲ್ಲಿ ನಿಲ್ಲಿಸಿದ್ದೇನೆ.'

ಅವನು ಮುಂದಾಗಿ ಬಾಗಿಲು ತೆರೆದಾಗ ಒಳಗೆ ಏರುವಾಗ ಜೆಸ್ಸಿ ಹೇಳಿದಳು, 'ನನ್ನ ಅಮ್ಮ ಎಚ್ಚರಿಕೆ ನೀಡಿದ್ದೇನೆಂದರೆ: ಪರಕೀಯ ಜನರೊಂದಿಗೆ ಮಾತಾಡಬೇಡ, ಅವರೊಂದಿಗೆ ಎಲ್ಲಿಯೂ ಹೋಗಬೇಡ, ಕಾರಿನಲ್ಲಿ ಕೂತು ಹೋಗಲೇಬೇಡ ಅಂತ!'

ಆಗ ಕಾಮಿಕ್ ಮುಖ ಮಾಡಿ ಅವನು ಹೇಳಿದ, 'ಅಯ್ಯೋ, ಎಂಥ ಯೋಗಾಯೋಗ ನೋಡಿ! ನನ್ನ ಅಮ್ಮ ಸಹ ಪರ ಹೆಂಗಸಿನ ಬಗಗೆ ಹೀಗೇ ಹೇಳಬೇಕೆ! ಅದರಲ್ಲೂ ನಿನ್ನಂತಹ ಹತ್ತೂರಿನ ನೀರು ಕುಡಿದವರಂತೂ ತುಂಬಾ ಡೇಂಜರಸ್.'

ಅವಳು ನಗುತ್ತಲೇ ಕಾರೊಳಗೆ ಕೂತಳು.

ಆ ರೆಸ್ಟಾರೆಂಟ್ ಎಷ್ಟು ದೂರವಿದೆ, ಅನ್ನೋದು ಅವಳಿಗೆ ಚೆನ್ನಾಗಿ ನೆನಪಿತ್ತು. ಯಾಕೆಂದರೆ ಅವರು ಮೇಲಿಂದ ಮೇಲೆ ಅಲ್ಲಿಗೆ ಹೋಗುತ್ತಿದ್ದರು. ಹಾದಿಯಲ್ಲಿ, ಈಗಷ್ಟೇ ಹೊಸ ಪರಿಚಯವಾದವರಂತೆ, ಅವನು ಹಾಗೇ ಮಾತು ಮುಂದುವರಿಸಿದ. ರೆಸ್ಟಾರೆಂಟ್ ತಲುಪಿದ ಕೂಡಲೇ ಅವರಿಬ್ಬರೂ ಒಳಗೆ ಹೋದರು. ಪರಿಚಯದ ಮಾಲಿಕ ಅವರನ್ನು ಕಂಡು ನಕ್ಕು ಹೇಳಿದ, 'ಬೋನ ಜೋರ್ನೊ, ಸಿನ್ಯೋರಾ, ಸಿನ್ಯೋರಾ!' ಈಗಾದರೂ ಈ ಪ್ರಾಣಿ ಹಾದಿಗೆ ಬಂದಾನು ಎಂದುಕೊಂಡು ಅವಳು ನಕ್ಕು ಅವನತ್ತ ನೋಡಿದಳು. ಆದರವನು ಅವಳನ್ನು ಟೇಬಲ್ ಬಳಿಗೊಯ್ದು ಕಿವಿಯಲ್ಲಿ ಹೇಳಿದನು, 'ಏನಪ್ಪ! ನೀನು ನನ್ನ ಹೆಂಡತಿಯೆಂದು ಅವನು ಭಾವಿಸಿದಂತಿದೆ!' ಊಟ ಮಾಡುತ್ತಿರುವಾಗಲೂ ಅವನು ಹಾಗೇ ಮುಂದುವರಿಸಿದ್ದ. ಎಲ್ಲ ಇಷ್ಟ ಅನಿಷ್ಟ ಗೊತ್ತಿದ್ದೂ, ಅದು ಬೇಕೆ ಇದು ಬೇಕೆ ಎಂದು ಕೇಳುತ್ತಿದ್ದ, ಅವಳು ತನ್ನ ಇಷ್ಟದ ಪದಾರ್ಥ ಹೇಳಿದಾಗ ತನಗೂ ಅದೇ ಇಷ್ಟವೆಂದು ಹೇಳಿ, ಬಳಿಕ ಎಂಥ ಯೋಗಾಯೋಗ ಎಂದು ಚಕಿತನಾಗಿ ಗೋಣು ಅಲುಗಿಸುತ್ತಿದ್ದ. ಟೇಬಲ್ ಕೆಳಗೆ ತಪ್ಪಿಯೊ ಮೊಣಕಾಲು ಹತ್ತಿತು ಎಂದೆಲ್ಲ ಭ್ರಮಿಸುವದು, ಅವಳ ಸಿಗರೇಟು ಹೊತ್ತಿಸುವಾಗ ಅವಳ ಕೈಯನ್ನು ಹಿಡಿದೇ ಸಿಗರೇಟು ಕಡ್ಡಿಯ ಹತ್ತಿರ ತರುವದು– ಹೀಗೆ ನೂರಾರು ಸಂಗತಿ. ಎಷ್ಟೆಂದರೆ, ಕೆಲ ಕ್ಷಣ ಅವಳೂ ಮರೆತೇ ಬಿಟ್ಟಳು, ಇವನೇ ತನ್ನ ಗಂಡನೆಂದು. ಒಳ-ಹೊರಗೆ ಚೆನ್ನಾಗಿ ಗೊತ್ತಿರುವವನು! ಊಟ ಮುಗಿದ ಬಳಿಕ ಕಾಫಿ, ಬ್ರ್ಯಾಂಡಿ, ಹರಟೆ.

ನೋಡ-ನೋಡುವಷ್ಟರಲ್ಲಿ ನಾಲ್ಕು - ನಾಲ್ಕೂವರೆ ಹೊಡೆದು ಸೂರ್ಯ ಮುಳುಗುವ ಸನ್ನಾಹದಲ್ಲಿದ್ದ. ತಟ್ಟನೆ ಎದ್ದು ಅವನು ಹೇಳಿದ, 'ಇಲ್ಲಿಂದ ಸ್ವಲ್ಪ ಮುಂದಿರುವ ಗುಡ್ಡದ ಹೊರಳು ದಾರಿಯಲ್ಲಿ ಸೂರ್ಯಾಸ್ತ ಸುಂದರವಾಗಿ ಕಾಣುತ್ತದೆ. ನಡೆ, ಹೋಗೋಣಂತೆ.'

ಸೂರ್ಯಾಸ್ತ ನೋಡುವ, ಬಣ್ಣ ಬದಲಾಗುವ ಮೋಹಕ ಜಾದೂವಿನ ಗುಂಗಿನಲ್ಲಿ ಅವಳು ನಾಟಕ ಮರೆತು ಬಿಟ್ಟಳು. ಅವನು ಅವಳ ಕೈಯನ್ನು ಹಿಡಿದಾಗ ಅವಳು ನಿರಾಕರಿಸದೆ ಸುಮ್ಮನಿದ್ದಳು. ನಕ್ಷತ್ರಗಳು ಒಂದೊಂದಾಗಿ ಹೊರಬಂದವು. ಸಮುದ್ರದ ನೀರಿನಲ್ಲಿ ದೀಪಗಳ ಪ್ರತಿಬಿಂಬ ಲಕಲಕ ಹೊಳೆಯಲಾರಂಭಿಸಿದಾಗ ತನ್ನ ಕೈ ಬಿಡಿಸಿಕೊಂಡು ನಿಟ್ಟುಸಿರು ಬಿಡುತ್ತ ಆಕೆ ಹೇಳಿದಳು, 'ನಡೆಯಿರಿ ಈಗ ಮನೆಗೆ!'

ಅವನು ತಟ್ಟನೆ ಕೇಳಿದ, 'ನನ್ನ ಮನೆಗೇ ಅಲ್ಲವೇ?' ಬಳಿಕ ಗೊಂದಲಗೊಂಡವನಂತಾಗಿ 'ನಾನು ಇಷ್ಟೆಲ್ಲ ಫಾರ್‌ವರ್ಡ್ ಎಂದು ಭಾವಿಸಬೇಡ ಹ್ಞಾ! ಆದರೆ ಇಬ್ಬರೂ ಸೇರಿ ಇಷ್ಟೆಲ್ಲ ಸುಂದರವಾಗಿ ಕಳೆದ ಇಡೀ ದಿನವನ್ನು ಎರಡು ದಿಕ್ಕಿಗೆ ಹೋಗಿ ಹೇಗ ಮುಗಿಸುವದು, ನನಗೇಕೋ ಸರಿಯೆನಿಸುವದಿಲ್ಲ!'

ಅವನ ಸ್ಪಷ್ಟೀಕರಣ ಕೇಳಿ ಆ ಕತ್ತಲೆಯಲ್ಲೂ ಅವಳಿಗೆ ನಗು ಬಂತು. ಅವಳು ಹೇಳಿದಳು, 'ಸರಿ, ನಿಮ್ಮ ಮನೆಗೇ. ಆದರೆ ಸ್ವಲ್ಪ ಹೊತ್ತು ಮಾತ್ರ ಹ್ಞಾ.'

ಕಾರಿನಲ್ಲಿ ಕೂತು ಅವರು ಮನೆಗೆ ಬಂದರು. ಬೆಳಿಗ್ಗೆ ಹೊರಬೀಳುವಾಗ ಅವಳು ಹೀಟರ್ ಹಚ್ಚಿರಲಿಲ್ಲವಾಗಿತ್ತು. ಹೀಗಾಗಿ ಮನೆ ತಂಪಾಗಿತ್ತು. ಡ್ರಾಯಿಂಗ್ ರೂಮಿನಲ್ಲಿ ಮಲಗಿದ್ದ ಬೆಕ್ಕು ಅವರ ಸದ್ದಿನಿಂದ ಎದ್ದು ಮಿಯಾಂವ್ ಮಿಯಾಂವ್ ಎಂದು ಕೂಗುತ್ತ ಅವಳ ಕಾಲು ತಿಕ್ಕಲಾರಂಭಿಸಿತು. ಅವನು ಅವಳ ಕೋಟು ಎತ್ತಿಕೊಳ್ಳುವಾಗ ಹೇಳಿದ, 'ಅರೆ! ಇದೆಷ್ಟು ಬೇಗ ನಿನ್ನ ಗೆಳೆತನ ಮಾಡಿಬಿಟ್ಟಿತಲ್ಲ!'

ಅವಳು ಬಗ್ಗಿ ಅದರ ಮೈಮೇಲೆ ಕೈಯಾಡಿಸಿ ಕೇಳಿದಳು, 'ಇದರ ಹೆಸರೇನು?'

'ಹ್ಯಾ! ನನ್ನ ಎಲ್ಲ ಬೆಕ್ಕಿನ ಹೆಸರು ಹ್ಯಾರಿಯಂದೇ ಇರುತ್ತದೆ. ಇದು ಎಂಟನೆಯದು. ಆದರೆ ಪಾಪ ಅದಕ್ಕೊಂದೂ ಹೆಣ್ಣು ಸಿಗಲಿಲ್ಲ – ಉಳಿದ ಮಾತು ಬಿಟ್ಟು ಬಿಡು!' ಅವನು ಅವಸರದಲ್ಲಿ ಎಲ್ಲ ಕೋಣೆಗೂ ಹೋಗಿ ಹೀಟರ್ ಹಚ್ಚಿದ. ಅಷ್ಟರಲ್ಲಿ ಅವಳು ಹ್ಯಾರಿಯನ್ನು ಎತ್ತಿಕೊಂಡು ಕೋಚ್ ಮೇಲೆ ಕೂತಿದ್ದಳು. ಅವನು ಮರಳಿ ಬಂದು ಬಾಟಲಿ ಹೊರತೆಗೆದ. ಅವಳಿಗೆ ವ್ಹಿಸ್ಕಿ ನೀಡಿ ಹೇಳಿದ, 'ಇದು ನೋಡು ಟೇಪ್ಸ್, ನಿನಗಿಷ್ಟವಾದುದನ್ನು ಹಚ್ಚು.' ಅವಳು ಆಯ್ಕೆ ಮಾಡಿದ ಟೇಪು ಅವನಿಗೂ ಇಷ್ಟವಾದದ್ದೇ ಆಗಿತ್ತು! ಕೆಲ ಕ್ಷಣ ಬಿಟ್ಟು ಅವನು ಹೇಳಿದ, 'ನಾನು ರುಚಿಕರವಾದ ಸೂಪು ತಯಾರಿಸಬಲ್ಲೆ, ತಯಾರಿಸಲೇ?'

'ಬೇಡ. ತಿಂದಿದ್ದೇ ಅರಗಲಿಲ್ಲ ಇನ್ನೂ,' ಸ್ವಲ್ಪ ಚೇಷ್ಟೆಯಿಂದ, 'ನಾನೀಗ ಮನೆಗೆ ಬೇರೆ ಹೋಗಬೇಕು!' –ಈಗ ಏನಂತಾನೋ?

'ಇಫ್ ಯೂ ಇನ್‌ಸಿಸ್ಟ್! ಆದರೆ ಹೋಗುವ ಮೊದಲು ನನ್ನ ವಾಟರ್ ಕಲರಿನ ಕಲೆಕ್ಶನ್ ನೋಡಲೇಬೇಕು.'

'ಹೌದೇ? ಹಾಗಾದರೆ ತೋರಿಸಿ!'

'ಹೀಗೆ ಬಾ. ಬೆಡ್‌ರೂಮಿನಲ್ಲಿ ತೂಗುಹಾಕಿದ್ದೇನೆ.'

ವ್ಹಾ! ಸಾಕಷ್ಟು ಮುಂದುವರಿದ ಹಾಗೆ ಕಾಣ್ತಾನೆ, ಹ್ಹಾ!

'ಈ ಮಾತು ಈ ಹಿಂದೆ ನಾನೆಷ್ಟೋ ಕೇಳಿದ್ದೇನೆ!' ಅವಳು ನಕ್ಕು ಹೇಳಿದಳು.

'ಸುಳ್ಳಲ್ಲ! ನೀನೆ ಒಳಗೆ ಬಂದು ನೋಡು ಬೇಕಾದರೆ.'.

ಕೋಚಿನ ಮೇಲೆ ಎಂದಿನ ರೂಢಿಯಂತೆ ಕಾಲು ಮಡಚಿ ಕುಳಿತುಕೊಳ್ಳುವಾಗ ಅವಳು ಬೂಟು ಕಳಚಿಟ್ಟಿದ್ದಳು. ಈಗ ಅದನ್ನು ಧರಿಸದೆ ಬರೇ ಸ್ಟಾಕಿಂಗ್ ಮೇಲೆಯೇ ನಡೆಯುತ್ತ ಅವನನ್ನು ಹಿಂಬಾಲಿಸಿದಳು. ಒಳಗೆ ಹೋಗಿ ನೋಡಿದರೆ ಸತ್ಯವೇ ಆಗಿತ್ತು! ಮಂಚದ ತಲೆದಿಂಬಿನ ಬದಿಯ ಗೋಡೆಯ ಮೇಲೆ ಮೂರು ಸುಂದರವಾದ ವಾಟರ್ ಕಲರಿನ ಸೆಟ್. ಅವಳ ಮನೆ ಹತ್ತಿರದ ಸಮುದ್ರ ಕಿನಾರೆಯ ಮೂರು ದೃಶ್ಯಗಳು. ಯಾವಾಗ ತಂದರೋ? ಗೋಡೆಗೆ ತೂಗು ಹಾಕಿದ್ದು ಸಹ ಯಾವಾಗೋ? ಸನಿಹದಿಂದ ನೋಡಬೇಕೆಂದು ಅವಳು ಮುಂದೆ ಬಾಗಿ ದಿಟ್ಟಿಸಲಾರಂಭಿಸಿದಾಗ, ಅವನು ತಟ್ಟನೆ ಹಿಂದಿನಿಂದ ಬಂದು, ಅವಳ ಕೊರಳ ಸುತ್ತಲೂ ತನ್ನ ಹಿಡಿತವನ್ನು ಬಿಗಿಗೊಳಿಸಿ ಕ್ರೂರವಾಗಿ ನಗುತ್ತ ಕೇಳಿದ, 'ಪರ ಗಂಡಸರ ಬೆಡ್‌ರೂಮಿನಲ್ಲಿ ಹೋಗಬಾರದೆಂದು ಅಮ್ಮ ಹೇಳಲಿಲ್ಲವೇ? ನಾನೊಂದು ವೇಳೆ ಹೊಮಿಸೈಡಲ್ ಮೆನಿಯಕ್‌ನಾಗಿದ್ದು, ನಿನ್ನ ಕೊಲೆ ಮಾಡಿಬಿಟ್ಟರೆ?'

ನಿಜವಾಗಿ ಅವನು ಅವಳ ಕೊರಳ ಹಿಡಿತವನ್ನು ಅದೆಷ್ಟು ಬಿಗಿಗೊಳಿಸಿದನೆಂದರೆ ಅವಳಿಗೆ ಉಸಿರುಗಟ್ಟಿದಂತಾಗಿ ಕೆಮ್ಮು ಬಂತು. ಈಗ ಮಾತ್ರ ನಾಟಕವಲ್ಲ ಮರೆತು ಅವಳಿಗೆ ಭಯವಾಗಲಾರಂಭಿಸಿತು. ಅವಳು ಹಾಗೂ ಹೀಗೂ ಕಿರುಚುವ ಪ್ರಯತ್ನ ಮಾಡಿದಾಗ ಅವನು ಅವಳ ಕೊರಳ ಹಿಡಿತ ಸಡಿಲಗೊಳಿಸಿ ಮತ್ತಷ್ಟು ಕ್ರೂರ ದನಿಯಲ್ಲಿ ಹೇಳಿದ, 'ಆದರೆ ಈ ಬೆಟ್ಟೆಯನ್ನು ಬೆಕ್ಕದ ವಿನಾ ಯಾರು ಕೊಲ್ಲುತ್ತಾರೆ?' ಅನಂತರ ಅವನು ಅವಳ ಕೊರಳು

ಬಿಟ್ಟು ಅವಳ ಬ್ಲೌಜಿನ ಕಾಲರ್ ಹಿಡಿದು ಜೋರಾಗಿ ಜಗ್ಗಿದನು. ಆಗ ಅದರ ಬಟನ್ ಪಟಪಟನೆ ಹರಿದು ಅದು ಅವನ ಕೈಗೆ ಬಂತು. ಅವಳು ಸರ್ರನೆ ಹೊರಳಬೇಕೆನ್ನುವಷ್ಟರಲ್ಲಿ ತನ್ನ ಕಾಲಿಂದ ತುಂಬಾ ಚಪಲತೆಯಿಂದ ಅವನು ಅವಳು ಮುಗ್ಗರಿಸುವಂತೆ ಮಾಡಿ ದಪ್ಪನೆ ಹಾಸಿಗೆಯ ಮೇಲೆ ಕೆಡವಿದನು. ಅಯ್ಯೋ ದುರ್ದೈವವೇ! ಸ್ಕರ್ಟಿನ ಜಿಪ್ಪಂತೂ ಹಿಂದೆಯೇ ಇದೆ, ಅದು ಕಳಚಿ, ಕಳಚಿ ಅಲ್ಲ, ಕಿತ್ತು ಬರಲು ಹೊತ್ತು ಬೇಕೆ? ಈಗ ಅವಳ ಎದೆ ಢಬ್ ಢಬ್ ಎನ್ನುತ್ತಿತ್ತು. ಆದರೆ ಕೂಗುವದು ಹೇಗೆ? ಅವನು ಅವಳ ಮುಖವನ್ನು ತಲೆದಿಂಬಿಗೆ ಒತ್ತಿ ಹಿಡಿದಿದ್ದ. ಒಂದು ಕೈಯಿಂದ ಅವನು ತನ್ನ ಪ್ಯಾಂಟಿನ ಜಿಪ್‌ನ್ನು ಸರಕ್ಕನೆ ಕೆಳಗೆ ಎಳೆದ. ಈಗ ಅವನೇನು ಮಾಡಬಹುದು ಎಂಬುದರ ಅಸ್ಪಷ್ಟ ಕಲ್ಪನೆ ಬಂದು ಅವಳು ಜೀವ ಹೋದವರಂತೆ ಒದ್ದಾಡಲಾರಂಭಿಸಿದಳು. ಆದರೆ ಅವನು ಅವಳ ಮುಖವನ್ನು ಮತ್ತಷ್ಟು ಗಟ್ಟಿಯಾಗಿ ಗಾದಿಯೊಳಗೆ ಅಮುಕಿದ. ಈಗ ಉಸಿರುಗಟ್ಟಿ ಪ್ರಾಣವೇ ಹೋದಂತಾಯಿತು ಅವಳಿಗೆ. ಆ ಒಂದು ಕ್ಷಣದೊಳಗೆ ಅವಳ ಸ್ಟಾಕಿಂಗ್‌ನ್ನು ಕಿತ್ತೊಗೆದು ಅವನು ಅವಳ ಮೇಲೆ ಹಲ್ಲೆ ನಡೆಸಿದ. ಇಡೀ ದೇಹದಿಂದ ಅಸಹಾಯವಾದ ವೇದನೆಯ ಜ್ವಾಲೆ ಹೊತ್ತಿ ಉರಿದಾಗ ಅವಳು ಕ್ಷಣಾರ್ಧದಲ್ಲಿ ತಲೆಯನ್ನು ಒತ್ತಿಹಿಡಿದ ಅವನ ಕೈಯನ್ನು ಧಿಕ್ಕರಿಸಿ ಜೋರಾಗಿ ಕಿರುಚಿದಳು. ಅವನು ಮತ್ತೆ ತನ್ನ ಹಿಡಿತವನ್ನು ಬಿಗಿಗೊಳಿಸುವ ಮೊದಲೇ ಜೋರಾಗಿ ಉಸಿರೆಳೆದುಕೊಂಡು ಮತ್ತಷ್ಟು ಜೋರಾಗಿ ಕಿರುಚಬೇಕೆಂದು ಪ್ರಯತ್ನಿಸಿದಾಗ ಅಚ್ಚರಿಯ ಆಘಾತದಿಂದ ಕೂಗು ಗಂಟಲಲ್ಲೇ ಕರಗಿಹೋಯಿತು. ವೇದನೆಯ ದಟ್ಟ ಮುಸುಕಿನಲ್ಲಿ ಅವನು ನಡೆಸಿದ ಆಕ್ರೋಶದ ಸುಖದಿಂದ ಅರಳುವ ರೋಮಾಂಚನದ ಹೊಸ ಅರಿವು ಅವಳಿಗಾಯಿತು! ಕೊನೆಗವಳು ಸುಖದ ಅಲೆಯಲೆ ಸಹಿಸುವದಾಗದೆ ಬಿಕ್ಕಳಿಸುತ್ತಲೇ ಕಿರುಚಿದಳು. ಕ್ಷಣಾರ್ಧದಲ್ಲಿ ಹಿಂದೆ ಹೊರಳಿ ನೋಡಿದಾಗ ಅವನಿಗೂ ಉಸಿರುಗಟ್ಟಿದಂತಾಗಿತ್ತು. ಇಬ್ಬರ ಕಂಗಳು ಧಾರಾಕಾರವಾಗಿ ಹರಿಯುತ್ತಿದ್ದವು.

ನಡುವೆ ಯಾವಾಗಲೋ ಸ್ವಲ್ಪ ಎಚ್ಚರಗೊಂಡಂತಾದಾಗ ತೂಕಡಿಸುವ ಪುಟ್ಟ ಮಗುವಿನ ಕಿರಿಕಿರಿ ದನಿಯಲ್ಲಿ ಆಕೆ ಕೇಳಿದಳು: 'ಅಲಾರಂ ಹಚ್ಚಿದ್ದಿರಲ್ಲ? ನಾಳೆ ರವಿವಾರ ಅಲ್ಲ!' ಅವನು ನಿಜವಾಗಿಯೂ ಜೋರಾಗಿ ನಕ್ಕನೆ ಅಥವಾ ಅವಳಿಗೆ ಕನಸೇನಾದರೂ ಬಿತ್ತೆ, ಯಾರಿಗ್ಗೊತ್ತು!

● ▼

ಚಂದ್ರಕಾಂತ ಪೋಕಳೆ, ಪ್ರಾಧ್ಯಾಪಕರು, ಪ.ಪೂ. ಕಾಲೇಜು, ಬೇಡಕಿಹಾಳ - ೫೯೧ ೨೧೪, ಜಿ. ಬೆಳಗಾವಿ ✆ : ೦೮೩೧ - ೬೬ ೫೯೨೩

ಗೌರೀ ದೇಶಪಾಂಡೆ. ೩೦೩. ಕಾರ್ಲಾಯ್ಸ್‌ಲ್ ಕೋರ್ಟ್. ಕ್ಲೋವರ್ ವ್ಹಿಲೇಜ್. ವನವಾಡಿ. ಪುಣೆ - ೪೧೧ ೦೪೦

ಸೆಗಣಿ ಸಂಸಾರ

ಹಾಸ್ಯ ಪ್ರಬಂಧ

ಶೈಲಾ ಛಬ್ಬಿ

ಪ್ರತಿ ಬೇಸಿಗೆ ಬಂದಾಗ ನೀರು ಸಾಲದೆ ಒದ್ದಾಡಿ, ಯಾಕಾದರೂ ಇಷ್ಟೊಂದು ಹೂಕುಂಡಗಳನ್ನು, ಗಿಡಮರಗಳನ್ನು ನೆಟ್ಟೆನೋ, ಮುಂದಿನ ವರ್ಷದಿಂದ ಏನೂ ನೆಡುವದೇ ಬೇಡವೆಂದು ನಾನು ಗೊಣಗಿಕೊಂಡರೂ ಮಳೆಗಾಲ ಆರಂಭವಾದ ತಕ್ಷಣ ನನಗರಿವಿಲ್ಲದೆ ಮತ್ತೆ ಹೂಕುಂಡಗಳನ್ನು ಖರೀದಿಸುವದು, ಅವರಿವರ ಮನೆ, ನರ್ಸರಿ ಅಲೆದಾಟ ಸಸಿಗಳ ಸಂಗ್ರಹ ಮಾಡಿ ನೆಡುವದು ಶುರುವಾಗೇ ಬಿಡುತ್ತದೆ.

ಈ ಬೇಸಿಗೆಯಲ್ಲಿ ಎಂಟೋ - ಹತ್ತೋ ದಿನಗಳಿಗೊಮ್ಮೆ ನೀರು ಪೂರೈಕೆಯಾಗುತ್ತಿದ್ದರೂ ಮತ್ತೆ ಮಳೆಗಾಲ ಪ್ರಾರಂಭವಾಗುತ್ತಲೂ ಹಳೆಯದಲ್ಲದ ಮರತು ಮತ್ತೆ ಹೂಗಿಡಗಳ

ಪೇಟೆಗಾಗಿ ಅಲೆಯತೊಡಗಿದೆ. ಎರೆಹುಳ ಗೊಬ್ಬರ ಬಹಳ ಪೌಷ್ಟಿಕವಾದದ್ದೆಂದು ಗೊತ್ತಾಗಿ ಅದು ಎಲ್ಲಿ ಸಿಗುತ್ತದೆ ಎಂದು ವಿಚಾರಿಸಲು ಪರಿಚಿತರೊಬ್ಬರ ಮನೆಗೆ ಹೋದೆ. ಅವರು ಮನೆಯ ಅಂಗಳದ ಕಸವನ್ನೆಲ್ಲ ಎರೆಹುಳದ ಗೊಬ್ಬರಕ್ಕಾಗಿ ಬಳಸುತ್ತಿದ್ದರು. ಅವರ ತೋಟ ಹಚ್ಚಹಸುರಾಗಿ, ರಂಗಬಿರಂಗಿ ಹೂಗಳಿಂದ ಸಶಕ್ತವಾಗಿ ಬೆಳೆದು ನಳನಳಿಸುತ್ತಿತ್ತು. ಎರೆಹುಳದ ಗೊಬ್ಬರ ಸಿಗುವ ಸ್ಥಳದ ಬಗ್ಗೆ ವಿಚಾರಿಸಿದಾಗ ಅವರು, "ನೀವೇ ಏಕೆ ಗೊಬ್ಬರ ತಯಾರಿಸಬಾರದು? ತಯಾರಿಸುವುದು ಬಹಳ ಸರಳ. ನಿಮ್ಮ ತೋಟದ ಹಾಗೂ ಅಡಿಗೆಮನೆ ಕಸ, ತೆಂಗಿನ ಸಿಪ್ಪೆ, ಒಂದಿಷ್ಟು ಸೆಗಣಿ ಸೇರಿಸಿ ಅತ್ಯುತ್ತಮ ಗೊಬ್ಬರ ತಯಾರಿಸಬಹುದು" ಎಂದು ಸಲಹೆಯಿತ್ತರು. ಅವರು ಈ ಹಿಂದೆ ಕೂಡ ಕೆಲವು ಬಾರಿ ಈ ಸಲಹೆಯನ್ನಿತ್ತಿದ್ದರೂ ನಾನು ಅದನ್ನು ಅಷ್ಟು ಗಂಭೀರವಾಗಿ ತೆಗೆದುಕೊಂಡಿರಲಿಲ್ಲ. ಈ ಸಾರಿ ಮಾತ್ರ ಅದು ನನ್ನ ತಲೆಯಲ್ಲಿ ಒಂದು ಕೀಟದಂತೆ ಹೊಕ್ಕಿತು. ಶ್ರೀಯುತ ಹೆಗಡೆಯವರು ತಿಳಿಸಿದಂತೆ ಗೊಬ್ಬರ ತಯಾರಿಕೆಗಾಗಿ ಒಂದು ಇಟ್ಟಿಗೆಯ ಗುಂಡಿ ಕಟ್ಟಿಸಿದೆನು. ಅದರಲ್ಲಿ ಹಿತ್ತಲದ ಕಸ, ಕೊಳೆತ ಎಲೆ, ತರಕಾರಿ ಸಿಪ್ಪೆ, ಹುಲ್ಲು, ಸೆಗಣಿ, ನೀರು ತುಂಬಿ ಅವರೇ ಕೊಟ್ಟ ಎರೆಹುಳವನ್ನು ಬಿಟ್ಟೆ. ಅಂತೂ ಗೊಬ್ಬರ ತಯಾರಿಕೆಯ ಶುಭಾರಂಭ ಆಯಿತು.

ಆದರೆ ಆ ಗುಂಡಿಗೆ ಆಗಾಗ್ಗೆ ಸೆಗಣಿ ಪೂರೈಸುವುದೇ ತೊಂದರೆ ಎನಿಸಹತ್ತಿತು. ಸೆಗಣಿಗಾಗಿ ಓಣಿ ತುಂಬ ಹುಡುಕಾಟ ಮಾಡಬೇಕಾಗುತ್ತಿತ್ತು. ಈ ಹಿಂದೆ ದಿನವೂ ನಾನು ಓಡಿಸಿದರೂ ರಾತ್ರಿಯೆಲ್ಲ ನಮ್ಮ ಗೇಟಿನ ಮುಂದೇ ಹಿಂಡುಹಿಂಡಾಗಿ ಮಲಗಿ ರಂಗೋಲಿ ಹಾಕುವಲ್ಲೇ ಮುದ್ದೆ ಮುದ್ದೆ ಸೆಗಣಿ ಒಗೆದು ಹೋಗುತ್ತಿದ್ದ ಬೀಡಾಡಿ ದನಗಳು ಮಳೆಗಾಲ ಬಂದಂದಿನಿಂದ ಯಾಕೋ ನಾಪತ್ತೆಯಾಗಿಬಿಟ್ಟಿವೆ. ಆಗ ಬೈದು ಓಡಿಸುತ್ತಿದ್ದೆ. ಈಗ ಅವಕ್ಕೂ ತಿಳಿದಿರಬೇಕು– ಈಕೆಗೆ ಸೆಗಣಿಯ ಸಖತ್ ಜರೂರತ್ ಇದೆ, ಇವಳ ಫಜೀತಿ ಮಾಡುವಾ ಎಂದುಕೊಂಡು ಇತ್ತ ಸುಳಿಯುತ್ತಲೇ ಇಲ್ಲ ಖೋಡಿಗಳು. ಹೀಗಾಗಿ ಸೆಗಣಿಗಾಗಿ ವಠಾರವೆಲ್ಲ ಪ್ಲಾಸ್ಟಿಕ್ ಚೀಲ ಹಿಡಿದೋ, ಬುಟ್ಟಿ ಹಿಡಿದೋ ಓಡಾಡಬೇಕಾಗುತ್ತದೆ. ಗೊಬ್ಬರ ತಯಾರಿಕೆಗೆ ಸೆಗಣಿಯದೇ ತಾಪತ್ರಯ ಎಂದಾಗ ನನ್ನ ಗೆಳತಿಯರು, "ಅರೆ, ಅದಕ್ಯಾಕ ಅಷ್ಟು ಚಿಂತಿ ಮಾಡ್ತಿ? ನಮ್ಮ ಮನಿ ಗೌಳಿ ಗಲ್ಲ್ಯಾಗs ಅದ. ಪುಷ್ಕಳ ಶೆಗಣಿ. ಎಲ್ಲಿ ನೋಡಿದಲ್ಲೆ ಮುದ್ದಿ ಮುದ್ದಿ ಶೆಗಣಿ ಬಿದ್ದಿರತದ. ನಮಗಂತೂ ನೋಡಿ ತಲಿನೋವು ಏಳ್ತದ. ನೀ ಬಂದು ಒಯ್ಯಿ. ನಿನಗೂ ಉಪಯೋಗ ಆತು. ನಮ್ಮ ರಸ್ತೆನೂ ಸ್ವಚ್ಛ ಆತು" ಎಂದು ಆಹ್ವಾನ ಕೊಟ್ಟರೆ ನನ್ನ ಬಂಧುವೊಬ್ಬರು "ಅಲ್ಲs, ನೀ ಯಾಕ ಕಷ್ಟ ಪಡ್ತಿ? ನಮ್ಮನಿಯಂತೂ ಗುಡ್ಡದ ಮ್ಯಾಲ ಅದ. ಈ ಎಮ್ಮಿಗೋಳು ಸಂಜೀನ್ಯಾಗ ಗುಡ್ಡಾ ಹತ್ತಿ ಮನಿಗ ಹೋಗಬೇಕಾರ ಪ್ರೆಶರ್ ತಡಿಲಾರದ ನಮ್ಮ ಮನಿ ಮುಂದs ಶೆಗಣಿ ಒಗಿತಾವ. ನೀ ಬಂದು ಅದನ್ನ ಬಳಕೊಂಡ್ರ ನಮ್ಮಿಬ್ರಿಗೂ ಅನುಕೂಲ" ಎಂದು ಸೂಚಿಸಿದರು.

ಕಿಲೋಮೀಟರ್ ದೂರವಿರುವ ಈ ಜನರ ಮನೆಗೆ ನಾನು ಸೆಗಣಿ ಹೆಕ್ಕಲು ಹೋಗಬೇಕೆ? ಬೇರೆ ಉದ್ಯೋಗವಿಲ್ಲವೇ ನನಗೆ? ನಮ್ಮ ಗಲಿಯಲ್ಲೇ ಹುಡುಕಾಟ ಸೆಗಣಿ ಸಂಗ್ರಹಿಸಹತ್ತಿದೆ. ನನ್ನಂತೆ ಇನ್ನೂ ಕೆಲವರು ಎರೆಹುಳ ಗೊಬ್ಬರ ತಯಾರಿಕೆಗಾಗಿ ಇಂಥ ಅವಕಾಶ ಕಾಯುತ್ತಿದ್ದರು. ಸೆಗಣಿ ಬೀಳುತ್ತಲೇ ಅತ್ತ ಧಾವಿಸಿ ಬರುತ್ತಿದ್ದರು. ಕೆಲವು ಬಡವರು ಬೆರಣಿಗಾಗಿ ಸೆಗಣಿ ಬಾಚುತ್ತಿದ್ದರು. ಕುಂಭಕರ್ಣನ ಕುಲದವಳಾದ ನಾನು ಮುಂಜಾನೆ ಏಳುವಷ್ಟರಲ್ಲಿ ಎಲ್ಲ ಸೆಗಣಿಯೂ ಮಾಯವಾಗಿಬಿಟ್ಟಿರುತ್ತಿತ್ತು. ಹೀಗಾಗಿ ಬೇಗನೆ ಏಳಲು ಆರಂಭಿಸಿದೆ. ೬ ಬಿಟ್ಟು ೫ಕ್ಕೆ ಎದ್ದರೂ ಜನ ಅಷ್ಟರಲ್ಲಿ ಸೆಗಣಿ ಲಪಟಾಯಿಸಿಬಿಟ್ಟಿರುತ್ತಿದ್ದರು. ಹೀಗಾಗಿ ಓಣಿಯಲ್ಲಿ ಸೆಗಣಿಗಾಗಿ ಒಂದು ಪೈಪೋಟಿಯೇ ಏರ್ಪಟ್ಟಿತ್ತು. ಎಷ್ಟೋ ಸಲ ಎಮ್ಮೆ ಕಂಡಾಕ್ಷಣ

ಅವರ ಹಿಂದೆಹಿಂದೆ ಓಡುತ್ತಿದ್ದೆ. ಅದು ಸಗಣಿ ಹಾಕುವ ಬದಲು ಬರೀ ಮೂತ್ರ ವಿಸರ್ಜಿಸಿಬಿಡುತ್ತಿತ್ತು. ಒಟ್ಟಿನಲ್ಲಿ 'ಸದಾಶಿವನಿಗೆ ಅದೇ ಧ್ಯಾನ' ಎನ್ನುವಂತೆ ನನ್ನ ಗಮನವೆಲ್ಲ ಸಗಣಿಯ ಮೇಲೇ ಕೇಂದ್ರೀಕೃತವಾಗಿರುತ್ತಿತ್ತು. ಪೇಟೆ, ರಸ್ತೆ, ಬಡಾವಣೆ, ಮೈದಾನ ಎಲ್ಲಿ ಹೋದರೂ ಸಗಣಿ ಕಂಡಾಕ್ಷಣ ನನಗ ಟೆಮ್ಟ್ ಆಗುತ್ತಿತ್ತು. ಆದರೆ ಅಲ್ಲಲ್ಲಿ ಹೇಗ ಹೆಕ್ಕಲಿ? ಅಯ್ಯೋ, ಸಗಣಿ ವ್ಯರ್ಥ ಹಾಳಾಗುತ್ತಿದೆಯಲ್ಲ ಎಂದು ಮರುಗುತ್ತಿದ್ದೆ. ಜನರಾದರೂ ಮೂಗು ಮುಚ್ಚಿಕೊಳ್ಳುತ್ತಲೋ, ಮುಖ ಸಿಂಡರಿಸಿಕೊಳ್ಳುತ್ತಲೋ ಅಥವಾ ಉದಾಸೀನ ಮಾಡುತ್ತಲೋ ದೂರ ಸರಿದಾಗ ನಾನು 'ಮಂಗನಿಗೇನು ಗೊತ್ತು ಮಾಣಿಕ್ಯದ ಕಿಮ್ಮತ್ತು', 'ಕತ್ತೆ ಬಲ್ಲುದೆ ಕಸ್ತೂರಿಯ ಪರಿಮಳ' ಮುಂತಾದ ಗಾದೆಗಳನ್ನು ಸ್ಮರಿಸಿಕೊಳ್ಳುತ್ತ, "ಥೂ ಈ ಎಮ್ಮಿಗೋಳಿಗ ಏನೂ ಬುದ್ಧಿ ಇಲ್ಲಾ. ಎಲ್ಲೆಲ್ಲೋ ಶೆಗಣೆ ಹಾಕೋ ಬದಲು ನಮ್ಮ ಮನಿ ಮುಂದ ಹಾಕಲಿಕ್ಕ ಇವಕ್ಕೇನು ಧಾಡಿ" ಎಂದು ಬೈದುಕೊಳ್ಳುತ್ತಿದ್ದೆ. ಎಷ್ಟೋ ಸಲ ನನ್ನ ಕನಸಿನಲ್ಲಿ ಸಮೃದ್ಧವಾಗಿ ಸಗಣಿ ಸಿಕ್ಕಂತೆ, ನಾನದನ್ನೆತ್ತಿ ಗೊಬ್ಬರ ಗುಂಡಿಗೆ ಹಾಕಿದಂಥ ದೃಶ್ಯ ಕಾಣುತ್ತಿದ್ದೆ. ಅಂತೂ ಕನಸಲೂ ನೀನೇ, ಮನಸಲೂ ನೀನೇ ಎಂಬಂತೆ ನನಗೆ ಎಲ್ಲೆಲ್ಲೂ ಸಗಣಿಯೇ ಸಗಣಿ ಕಾಣುತ್ತಿತ್ತು.

ಮೊದಮೊದಲು ಸಗಣಿ ಬಾಚಲು ಹೇಸಿ, ನನ್ನ ಮುಸುರೆ ತಿಕ್ಕುವವಳಿಗೆ, "ಏ ಮಲ್ಲಿ, ಹಾದ್ಯಾಗ ಸಗಣಿ ಬಿದ್ದಿರತದ. ಬರಬೇಕಾರ ತಗೊಂಡು ಬಾರ" ಎಂದಾಗ ಆಕೆ ಒಪ್ಪಲಿಲ್ಲ. "ಅಲ್ಲs, ನಿಮ್ಮನ್ಯಾಗ ಸಗಣಿ ನೆಲ ಅದ ಅಲಾ, ಅದನ್ನ ಸಾರಸಲಿಕ್ಕ ಸಗಣಿ ಹಿಡತಿ ಇಲ್ಲೋ?" ಎಂದು ಪ್ರಶ್ನಿಸಿದ್ದಕ್ಕೆ "ಇಶ್ಶ್, ಎಲ್ಲಿದ್ದೀರಿ ಬಾಯರ? ಯಾವ ಜಮಾನಾದಾಗ ಇದ್ದೀರಿ? ಈಗ ನಮ್ಮನ್ಯಾಗೆಲ್ಲಾ ಮಜಾಕ ಟೇಲ್ಸ (ಮೊಜಾಯಿಕ್ ಟೈಲ್ಸ್), ಸೀರಾಮ ಟೇಲ್ಸ (ಸಿರಾಮಿಕ್ ಟೈಲ್ಸ್) ಐತಿ. ಸುಡುಗಾಡು ಶೆಗಣೆ ನೆಲಾ ಯಾರಿಗ ಬೇಕಾಗೇತ್ರಿ?" ಎಂದು ನನ್ನನ್ನೇ ಅವಮಾನಿಸಿಬಿಡುವುದೆ? ಹೀಗಾಗಿ ಸಗಣಿ ಆಯುವ ಕೆಲಸ ನನ್ನ ಪಾಲಿಗೇ ಬಿತ್ತು.

ನಾನು ಸಗಣಿ ಆಯುವದನ್ನು ಕಂಡ ಬಡಾವಣೆಯ ಹುಡುಗರು ನನ್ನ ಬಗ್ಗೆ ಆಡಿಕೊಳ್ಳುವದು ನನ್ನ ಮಕ್ಕಳ ಕಿವಿಯ ವರೆಗೆ ತಲುಪಿತು. "ಅಮ್ಮಾ, ನೀ ಶೆಗಣೆ ಬಳಿಯೋದು ನೋಡಿ ಮಂದಿಯೆಲ್ಲಾ ನಿನ್ನ ಬಗ್ಗೆ, ನಮ್ಮ ಬಗ್ಗೆ ಏನೇನೋ ಆಡಕೋತಾರ. ನಿನ್ನ 'ಶೆಗಣಿ ಆಂಟಿ' ಅಂತಾರ. ನಮಗ ನಾಚಿಗಿ ಸಾವು ಬರ್ತದ" ಎಂದು ಮಕ್ಕಳು ರಗಳೆ ಮಾಡಿದರೆ, "ಹೌದು ಮ್ಯಾರಾಯ್ತಿ. ನೀ ಮುಂಜಾನೆದ್ದು ಮುಸರಿ ಮಾರಿಲೆ ಶೆಗಣಿ ಬ್ಯಾಟಿಗ ಹೋಗೋದು ನಾ ನೋಡಲಾರೆ. ನಾಲ್ಕು ಮಂದ್ಯಾಗ ನನ್ನ ಅಬ್ರು ಹೋಗ್ತದ. ಸಾಕು ನಿನ್ನ ಶೆಗಣಿ ಬೆನ್ನಹತ್ತೋಣಕಿ. ಅಷ್ಟು ಹೌಸs ಇತ್ತು ಅಂದ್ರ ಥಣ್ಣಗ ಒಂದು ಆಕಳೋ ಎಮ್ಮೋ ಸಾಕೋದು ಲೇಸು" ಎಂದು ತಕರಾರು ಮಾಡಿದರು ಯಜಮಾನರು.

ನನ್ನ ಹುಟ್ಟುಹಬ್ಬ ಸಮೀಪಿಸಿದಾಗ, ಇವರು ಸೀರೆ ಖರೀದಿಗೆ ನನ್ನನ್ನು ಕರೆದರು. ನಾನು ಬೇಡ ಎಂದುಬಿಟ್ಟೆ. 'ಯಾಕ?' ಎಂದು ಇವರು ಹುಬ್ಬೇರಿಸಿದಾಗ ನಾನು ಮೆಲ್ಲನೆ ಸೀರೆ ಬದಲು ಒಂದು ಆಕಳು ಕೊಡಿಸಿಬಿಡಿ ಎಂಬ ಬೇಡಿಕೆಯನ್ನು ಮುಂದಿಟ್ಟೆ. ಇವರು ಹಣೆಹಣೆ ಬಡಿದುಕೊಂಡು "ಅಲ್ಲಾ, ಮಂದಿ ಹಾಲಿಗಾಗಿ, ಹೈನಿಗಾಗಿ ದನಕರು ಸಾಕ್ತಾರ. ನೀನಾದ್ರ ಶೆಗಣಿ ಸಲುವಾಗಿ ಸಾಕಲಿಕ್ಕ ಹತ್ತಿ. ಎಂಥಾ ವಿಪರ್ಯಾಸ! ಎಂಥಾ ಮೂರ್ಖತನ!" ಎಂದು ಮೂದಲಿಸಿದರು.

"ನಾನು ಶೆಗಣಿ ಸಲುವಾಗಿ ಆಕಳಾ ಖರೀದಿ ಮಾಡಲಿಕ್ಕ ಹತ್ತೀನಿ ಅಂತ ಯಾರು ಹೇಳಿದ್ರು ನಿಮಗ? ಹೋದ ವಾರ ಆಕಳ ಹಾಲು ಶ್ರೇಷ್ಠ, ತುಪ್ಪ ಶ್ರೇಷ್ಠ, ಅದಕ್ಕ ಔಷಧೀಯ ಗುಣಾ ಅದ. ಹಂಗs ಗೋಮೂತ್ರ ಸರ್ವರೋಗಹಾರಕ ಅದ. ಅದಕ್ಕs ಭಾರತದವರು ಗೋಮೂತ್ರದ ಪೇಟೆಂಟ್ ಪಡಕೊಂಡಾರ ಅಂತೆಲ್ಲಾ ಪೇಪರನ್ಯಾಗ ಕೊಟ್ಟಿದ್ರು" ಎಂದು ಹೇಳಿ ನನ್ನನ್ನು ಸಮರ್ಥಿಸಿಕೊಂಡೆ.

“ಖರೆ ಪ್ಯಾರಾಳ, ಅದ್ರ ಒಂದು ಆಕಳ ಕಿಮ್ಮತ್ತು ನಿನಗ ಗೊತ್ತದೇನು ? ಹತ್ತರಿಂದ ಇಪ್ಪತ್ತು ಸಾವಿರ ತನಕ ಅದ. ನಿನ್ನ ಶೀರಿ ಕಿಮ್ಮತ್ತಿಗೂ, ಆಕಳ ಕಿಮ್ಮತ್ತಿಗೂ ಅಜಗಜಾಂತರ ಅದ. ಹತ್ತು ಸಾವಿರಗಟ್ಟಲೆ ಒಡದು ಆಕಳ ಕಟ್ಕೊಂಡ್ರಾಗ ಏನು ಸೌಭಾಗ್ಯ ಅದ ? ನಿನ್ನ ಮಕ್ಕಳು ಹಾಲು ಅಂದ್ರ ಮುಖಾ ಕಿವಚಗೋತಾರ” ಎಂದು ಇವರು ವಿವರಿಸಿದರೂ ನಾನು, “ಹುಡುಗ್ರಿಗ ತಿಳಿಸಿಹೇಳೋದು ನನಗ ಬಿಡ್ರಿ. ಈಗ ರೊಕ್ಕ ಇಲ್ಲಂದ್ರ ಬ್ಯಾಂಕ್ ಸಾಲಾ ತಗದು ಆಕಳಾ ಕೊಳ್ಳರಿ. ಸಾಲ ವಸೂಲಿ ಮೆಲ್ಲದಾಗ ತೀರಿಸಿದ್ರಾತು” ಎಂದು ಖಂಡತುಂಡವಾಗಿ ಹೇಳಿಬಿಟ್ಟೆ. ಆಗಿನಿಂದ ದಿನವೂ ಆಕಳ ಹಾಲಿನ, ಕ್ಷೀರೋತ್ಪನ್ನದ ಮಹಿಮೆಯ ಕುರಿತೇ ನನ್ನ ಮಾತು ಸಾಗಿರುತ್ತಿತ್ತು.

ಕೊನೆಗೂ ಕರುಸಮೇತ ಒಂದು ಹಸುವಿನ ಖರೀದಿ ಆಗೇ ಬಿಟ್ಟಿತು. ಆಕಳಿಗಾಗಿ ಕೊಟ್ಟಿಗೆಯ ನಿರ್ಮಾಣವೂ ಆಗಬೇಕಾಯಿತು. ಹಾಲು ಕರೆಯಲು ನಮಗಾರಿಗೂ ಬರದ ಕಾರಣ ಹಾಲು ಕರೆಯುವವನನ್ನು ನಿಯಮಿಸಿಕೊಳ್ಳಬೇಕಾಯಿತು. ಒಮ್ಮೆ ಹಾಲುಕರೆಯಲು ಹೋಗಿ ಒದೆಸಿಕೊಂಡು ಬಿದ್ದೂಬಿಟ್ಟೆ.

ಆದರೆ ಈಗ ನಾನು ಮುಂಚಿನಂತೆ ಸೆಗಣಿಗಾಗಿ ಓಣಿಓಣಿ ಅಲೆಯಬೇಕಿರಲಿಲ್ಲ. ಮನೆಯಲ್ಲೇ ಭರಪೂರ ಸೆಗಣಿ ಜಮಾವಣೆ ಆಗುತ್ತಿತ್ತು. ಆದರೆ ಅದನ್ನು ತೆಗದು ಕೊಟ್ಟಿಗೆಯನ್ನು ಕ್ಲೀನ್ ಮಾಡುವ ಕೆಲಸ ನನ್ನ ಕೊರಳಿಗೇ ಬಿದ್ದಿತು. ದನ ಕಾಯುವ ಕೆಲಸವೂ ನನಗೇ ಬಿತ್ತು. ಹೀಗಾಗಿ ನನ್ನ ಕೈಗಳು, ಬಟ್ಟೆಗಳು ಗೋಮಯವಾಗಿಬಿಟ್ಟಿರುತ್ತಿತ್ತು.

“ಆ ಶೆಗಣಿ ಕೈಯಿಂದ ನೀನು ನಮ್ಮ ಸನೆ ಬರಬ್ಯಾಡಾ. ಅಡಗಿ ಮಾಡಬ್ಯಾಡಾ” ಎಂದು ಮನೆ ಜನ ದೂರ ಸರಿಯುತ್ತಿದ್ದರು. ನಾನು ಕೈಯಿಂದ ಏನಾದರೂ ತಿನಿಸು ಕೊಟ್ಟರೆ, “ವ್ಯಾಕ್, ಶೆಗಣಿ ವಾಸನಿ” ಎಂದು ಪುತ್ರ-ಪುತ್ರಿಯರು ಹೇಸಿಕೊಳ್ಳುತ್ತಿದ್ದರು. ‘ಗಂಧದವನ ಜೊತೆ ಗುದ್ದಾಡಿದರೂ ಸರಿ ಸೆಗಣಿಯವನ ಜೊತೆ ಸರಸನೂ ಆಡಬಾರದು’ ಎಂಬ ಗಾದೆ ಮಾತು ಹೇಳುತ್ತ ಇವರು ನನ್ನ ಹತ್ತಿರ ಸುಳಿಯಲು ಅಸಹ್ಯಪಟ್ಟುಕೊಳ್ಳುತ್ತಿದ್ದರು.

ಒಮ್ಮೆ ನನ್ನ ಸೋದರತ್ತೆ ತಮ್ಮ ಮನೆಗೆ ಔತಣ ಹೇಳಲು ಬಂದವಳು ನನ್ನ ಸೆಗಣಿ ಮೈ-ಕೈ ಬಟ್ಟೆ-ಬರೆ ನೋಡಿ,

“ಇದೇನs ಬೇಬಿ ಅಸಹ್ಯ ? ಶೆಗಣಿ ವಾಸನಿ ಕಂಡ್ರ ಮೈಲು ದೂರ ಓಡಾಕಿ, ಈಗ ಶೆಗಣಿಮಯ ಆಗಿ ಅಲಾ!” ಎಂದು ಉದ್ಗರಿಸಿದಳು. ಹೌದು, ಮದುವೆಗೆ ಮುನ್ನ ಸೆಗಣಿ ಕಂಡರೆ ತೀರ ಹೇಸಿಕೊಳ್ಳುತ್ತಿದ್ದೆ. ಊಟದ ನಂತರ ಗೋಮಯ ಮಾಡಲು ಅಜ್ಜಿ ಹೇಳಿದಾಗ ಅಸಹ್ಯ ಪಟ್ಟುಕೊಂಡು ಓಡುತ್ತಿದ್ದೆ. ಆದರೆ ಈಗ ಅದನ್ನು ಕಂಡರೆ ಎಂತಹ ವ್ಯಾಮೋಹ! ಇಂದು ಅಜ್ಜಿ ಇದ್ದಿದ್ದರೆ ಎಷ್ಟು ಖುಶಿ ಪಡುತ್ತಿದ್ದಳೋ!

ಸೋದರತ್ತೆಯ ಮಾತಿಗೆ, ನಮ್ಮವರು, “ಇದೆಲ್ಲಾ ಗೊಬ್ಬರದ ಮಹಿಮಾರಿ. ಈಗ ಇಕಿ ತಲಿತುಂಬ ಗೊಬ್ಬರನs ತುಂಬೇದ. ಒಂದು ಓದಿಲ್ಲಾ, ಬರಿಯಿಲ್ಲಾ. ಏನೋ ಕಲಿತಕಿ, ಕಥಿ-ಕವನ ಬರಿತಾಳ, ಬುದ್ಧಿಜೀವಿ ಅಂತ ಇಕಿನ್ನ ಮಾಡಕೊಂಡೆ. ಆದ್ರ ಇಕಿ ನೋಡಿದ್ರ ಹಿಂಗಾಗ್ಯಾಳ. ಅಲ್ರೀ ಅತ್ಯಾ, ಈ ಕೆಲಸನs ಮಾಡೋದಿದ್ರ ಸುಮ್ಮನ ಕಾಲೇಜಿಗೆ ಯಾಕ ಪುಸ್ತಕ ಹೊರಬೇಕಾಗಿತ್ತು ? ನನ್ನಂಥ ಲೆಕ್ಚರರ್‌ನ ಬದಲಿ ಯಾವುದಾದ್ರೂ ಗೌಳಿನ್ನ ಮಾಡಿಕೊಂಡಿದ್ರ ಗುಣಾ ಇತ್ತು. ಬಿಟ್ಟಿ ಈಗ ಇಕಿದು ಶೆಗಣಿ ಸಂಸಾರ ನೋಡ್ರಿ” ಎಂದು ಟೀಕಿಸಿದರು. ಮುಂದುವರಿಸುತ್ತ, “ಇಕಿ ಮೈ-ಕೈಗಷ್ಟೇ ಅಲ್ಲಾ, ಒಮ್ಮೊಮ್ಮೆ ತಲಿಗೂ ರಾತ್ರಿಡೀ ಶೆಗಣಿ ಬಡಕೊಂಡಿರತಾಳ” ಎನ್ನುವದೆ ?

“ಹೌದೇನs ಬೇಬಿ ?” ಅತ್ತೆ ಗಾಬರಿಗೊಂಡು ಕೇಳಿದಳು.

“ಇಲ್ರೀ ಅತ್ಯಾ, ತಲಿಗೆ ಮದರಂಗಿ ಹಚಗೊಂಡಿರತೇನಿ, ಅದಕ್ಕ ಹಂಗಂತಾರ” ಎಂದು ಸ್ಪಷ್ಟಪಡಿಸಿದೆ.

“ಒಲ್ಲೆವ್ವಾ ನಿನ್ನ ಅವತಾರ” ಅತ್ತೆ ಉದ್ಗರಿಸಿದಳು.

ಹಾಲಿನ ಉತ್ಪಾದನೆ ನಮ್ಮ ಅವಶ್ಯಕತೆಗಿಂತ ಹೆಚ್ಚಾಗಿ ಆಗುತ್ತಿದ್ದುದರಿಂದ ಅದನ್ನು ಮಾರುವ ಬಗ್ಗೆ ಯೋಚಿಸಬೇಕಾಗಿತ್ತು. ಹೀಗಾಗಿ ಹಾಲು ಮಾರುವ ಕಾರ್ಯಕ್ಕೂ ಇಳಿದೆ. ದನಕರು, ಹಾಲು-ಹೈನು ಎನ್ನುತ್ತ ನನ್ನ ಗಮನವೆಲ್ಲ ಅತ್ತಲೇ ಕೇಂದ್ರೀಕೃತವಾದಾಗ ಎರೆಹುಳದ ಗೊಬ್ಬರ ತಯಾರಿಕೆಯತ್ತ ನನಗೆ ಲಕ್ಷ್ಯ ಕೊಡಲು ಪುರಸೊತ್ತಿರುತ್ತಿರಲಿಲ್ಲ. ಅಂತೂ ಆರೆಂಟು ತಿಂಗಳು ಕಳೆಯುವವರಲ್ಲಿ ನನಗೆ ಸಾಕುಸಾಕಾಗುತ್ತಿತ್ತು. 'ದನ ಸಾಕಿದರೆ ದನದಂತೆ ದುಡಿಯಬೇಕು' ಎಂಬ ಮಾತಿದೆ. ನಾನಾದರೋ ಕತ್ತೆಯಂತೆ ದುಡಿಯುತ್ತಿದ್ದೆ. ನನ್ನ ದೇಹ ಸೆಗಣಿ - ಸೆಗಣಿ ನಾರುತ್ತಿದ್ದೆ. ಪುಕ್ಕಟೆ ಎರೆಹುಳ ಗೊಬ್ಬರ ತಯಾರಿಕೆಗೆ ಹೋಗಿ ಇಷ್ಟೆಲ್ಲ ಸಂಸಾರ ಬೆಳೆದಿತ್ತು. ಇವರು ನನ್ನನ್ನು ಹತ್ತಿರ ಕೂಡಿಸಿಕೊಂಡು ಒಂದು ಕಥೆ ಹೇಳಲಾರಂಭಿಸಿದರು.

ಒಂದು ಊರಲ್ಲಿ ಒಬ್ಬ ಸಂನ್ಯಾಸಿ ಇದ್ದನಂತೆ. ಮನೆಯಲ್ಲಿ ಇಲಿಗಳ ಉಪಟಳ ಬಹಳವಾದ್ದರಿಂದ ಒಂದು ಬೆಕ್ಕನ್ನು ಸಾಕಿದನಂತೆ. ಬೆಕ್ಕಿನ ಪೋಷಣೆಗಾಗಿ ಹಾಲು ಬೇಕಾಯಿತು. ಹಾಲಿಗಾಗಿ ಒಂದು ಆಕಳು ಸಾಕಿದನು. ಆಕಳ ಸೇವೆ ಮಾಡಲು ಆಳು ಬೇಕಾಯಿತು. ಆಗ ಮದುವೆಯಾಗಿ, ಗೋಮಾತೆಯ ಸೇವೆಗೆ ಹೆಂಡತಿಯನ್ನು ನಿಯಮಿಸಿದನು. ಮದುವೆಯಾದ ತಪ್ಪಿಗೆ ಮಕ್ಕಳಾದವು. ಹೀಗೆ ಸಂನ್ಯಾಸಿ ಸಂಸಾರಿಯಾದ.

ಹೌದು ನನ್ನದೂ ಹಾಗೇ ಆಯಿತು. ಅದು ಸಂನ್ಯಾಸಿಯ ಸಂಸಾರದ ಕಥೆ. ನನ್ನದು ಸೆಗಣಿ ಸಂಸಾರದ ಕತೆ.

"ಅಂದ್ರ ನನಗ ಈ ಕೆಲಸಾ ಬಿಡು ಅಂತೀರೇನು ?" ನಯವಾಗಿ ಕೇಳಿದೆ ನಾನು. "ಛೇ ಛೇ, ನಾ ಯಾಕ ಬಿಡು ಅನ್ಲಿ ? ಕ್ಯಾರಿ ಆನ್, ಕ್ಯಾರಿ ಆನ್..." ಎಂದೂ ವ್ಯಂಗ್ಯ ನಗೆಯೊಂದಿಗೆ ಹೇಳಿದರು. ನನಗಾದರೋ ಅವರು ಒಂದು ಸಲ ಇದನ್ನು ಬಿಡಹೇಳಿದರೆ ಸಾಕು ಎಂಬಂತಾಗಿತ್ತು.

"ಅಲ್ಲಾ, ನಿಮಗ ಮನಸಿಲ್ಲಾ ಅಂದ್ರ ನಾ ಮಾಡೋದಿಲ್ಲಾ" ವಿಧೇಯಳಾಗಿ ನುಡಿದೆ.

"ಅಲಾಲಾಲಾ ಪತಿವ್ರತಾ ಶಿರೋಮಣಿ. ನಾ ಅಂದ ಬ್ಯಾಡಂದ್ರೂ ಹಟಾ ಮಾಡಿ ಸುರುಮಾಡಿದಾಕಿ, ಈಗ ಒಳ್ಳೆ ಸತಿ ಸಾವಿತ್ರಿ ಹಂಗ ಮಾತಾಡತಿಯಲಾ" ಹಂಗಿಸಿದರು ಇವರು.

"ಅಮ್ಮಾ, ಆಕಳ ಹಾಲಿನ ಗುಣಗಾನ ಮಾಡಿ ಈಗ ಅದನ್ಯಾಕ ಮಾರಲಿಕ್ಕ ಹತ್ತಿ ?" "ಇನ್ನ ನಾವು ಡಿಸ್ಟಿಂಕ್ಷನ್ ತಗೊಂಡ್ಹಂಗs ಸೈ" ಕೆಣಕಿದವು ಮಕ್ಕಳು.

"ಸಾಕು ಬಿಡ್ರಿ. ನೀವು ಇಷ್ಟು ದಿನಾ ಆಕಳ ಹಾಲು ಕುಡದು ಶಾಣ್ಯಾ ಆದದ್ದು ಅಷ್ಟರಾಗs ಐದ. ಸುಮ್ನ ಮದಲಿನ್ಹಂಗ ಡೇರಿ ಹಾಲು ಕುಡಿರಿ" ಎಂದು ಆದೇಶಿಸಿದೆ.

ಹಿಪ್ ಹಿಪ್ ಹುರ್ರೇ ಎಂದು ಉತ್ಸಾಹದಿಂದ ಕುಣಿದರು. ಯಜಮಾನರ ಮೊಗದಲ್ಲಿ ಮಂದಹಾಸ ಚಿಮ್ಮಿತು. ನನಗೂ ಖುಶಿಯಾಗಿದ್ದರೂ ಸ್ಥಿತಪ್ರಜ್ಞಳಂತೆ ನಟಿಸಿದೆ.

ಅಂತೂ ಗೊಬ್ಬರ ತಯಾರಿಕೆಗೆ ವಿದಾಯ ಹೇಳಿದೆ. ಅದರ ಪರಿಣಾಮವಾಗಿ ಆಕಳು, ಕೊಟ್ಟಿಗೆ, ಆಳು ಎಲ್ಲ ತಮ್ಮ ಮನೆ ದಾರಿ ಹಿಡಿದರು. ಈ ಪ್ರಕರಣದಲ್ಲಿ ನಾನು ಕಳೆದುಕೊಂಡದ್ದೇ ಹೆಚ್ಚು. 'ಆಮದನಿ ಅಠನ್ನಿ ಖರ್ಚಾ ರೂಪಯ್ಯಾ ಹಯ್ಯಾ / ನತೀಜಾ ಠಣ್ ಠಣ್ ಗೋಪಾಲ್' ಎಂಬ 'ತೀನ್ ಬಹೂರಾನಿಯ್ಯಾ' ಚಿತ್ರದ ಹಳೆ ಹಾಡನ್ನು ಹಾಡಿ ಕುಣಿದರು ಹುಡುಗರು. ನನ್ನ ಸಾಹಸಗಳೆಲ್ಲ ಹೀಗೇಕೆ ಹೊಳೆಯಲ್ಲಿ ತೊಳೆದ ಹುಣಸೆ ಹಣ್ಣಿನಂತಾಗುತ್ತದೋ ದೇವರೇ ಬಲ್ಲ...

●

▼

ಶೈಲಾ ಛಬ್ಬಿ
೧೨, ಮೇಘಸಂದೇಶ, ತೇಜಸ್ವಿನಗರ, ಧಾರವಾಡ - ೫೮೦ ೦೦೨ ☎ : ೦೮೩೬ - ೪೪ ೭೦೪೦

ಪುಸ್ತಕ ಪರಿಶೀಲನೆ

೧. ಸ್ತ್ರೀವಾದದ ಪ್ರಸ್ತುತತೆ : ಡಾ. ಎಸ್. ವಿ. ಪ್ರಭಾವತಿ. ಭಾರತೀಯ ಸಂಸ್ಕೃತಿ ವಿದ್ಯಾಪೀಠ ವಿಜಯನಗರ, ಬೆಂಗಳೂರು-೪೦. ಪ್ರ.ಮು. ೨೦೦೦. ಪು. ೯೮. ರೂ. ೬೦/-

ಡಾ. ಎಸ್. ವಿ. ಪ್ರಭಾವತಿಯವರ 'ಸ್ತ್ರೀವಾದದ ಪ್ರಸ್ತುತತೆ' ೧೦ ಲೇಖನಗಳನ್ನೊಳಗೊಂಡಿದೆ. ಮೊದಲ ೫ ಲೇಖನಗಳಿಗೆ 'ಸಂಚಲನ' ಎಂಬ ಶೀರ್ಷಿಕೆ ನೀಡಿ, ನಂತರದ ೫ ಲೇಖನಗಳನ್ನು 'ಸಂಕಲನ'ವನ್ನಾಗಿಸಿದ್ದಾರೆ. ಅದಕ್ಕೆ ಸೂಕ್ತ ಕಾರಣ ಓದುಗರು ಕಂಡುಕೊಳ್ಳಬೇಕು. ೧೦ ಲೇಖನಗಳ ಈ ಪುಸ್ತಕ ಬರೆಯಲು ಲೇಖಕಿ ತನ್ನ ವ್ಯಾಪಕವಾದ ಅಧ್ಯಯನದ ವಿವರಗಳನ್ನು ಕೆಲವು ಲೇಖನಗಳ ಕೊನೆಯಲ್ಲಿ ಕೊಟ್ಟಿದ್ದಾರೆ. ಈ ಲೇಖನಗಳಲ್ಲಿ ಬಂಡಾಯವಿದೆ, ಆಕ್ರೋಶವಿದೆ, ಆವೇಶವಿದೆ, ಪ್ರೀತಿ ಇದೆ, ಸಹೃದಯತೆ ಇದೆ. ಪೀಡಿತ ಮನೋಭಾವವನ್ನು ಬಿಟ್ಟುಕೊಟ್ಟು ಚಿಂತನೆ ನಡೆಸಿದರೆ ಲೇಖಕಿಯಿಂದ ಮತ್ತಷ್ಟು ಉತ್ತಮ ಕೃತಿಗಳನ್ನು ನಿರೀಕ್ಷಿಸಬಹುದು.

'ಸ್ತ್ರೀವಾದದ ಪ್ರಸ್ತುತತೆ' ಎಂಬ ಲೇಖನದಲ್ಲಿ ಸ್ತ್ರೀ ನಮ್ಮ ದೇಶದಲ್ಲಿ ಇನ್ನೂ ಎರಡನೆ ದರ್ಜೆಯ ಪ್ರಜೆಯಾಗಿಯೇ ಬಾಳುತ್ತಿರುವುದರ ನೋವು, ಆತಂಕ ಹೊಮ್ಮಿದೆ. ಇದೇ ಲೇಖನದಲ್ಲಿ ವಿಧವೆ ಮತ್ತು ಕಾಮವನ್ನು ಚಿತ್ರೀಕರಿಸುವ ಸಿನಿಮಾರಂಗವನ್ನು ತರಾಟೆಗೆ ತೆಗೆದುಕೊಂಡಿದ್ದಾರೆ. ಹಾಗೆಯೇ 'ಫೈರ್' ಮತ್ತು 'ವಾಟರ್' ಚಿತ್ರಗಳ ವಿವಾದದ ಅಲೆಗಳಿಗೆ 'ಮೂಲಭೂತವಾದಿಗಳ ಸಂಕುಚಿತ ಮನಸ್ಸೇ ಕಾರಣ' ಎಂಬ ದಿಢೀರ್ ತೀರ್ಮಾನಕ್ಕೆ ಅನೇಕರಂತೆ ಲೇಖಕಿಯ ಚಿಂತನಶೀಲ ಮನಸ್ಸೂ ಬಂದುಬಿಟ್ಟಿದೆ ! ಇಲ್ಲಿ ಚಿತ್ರವೊಂದರ ಮೂಲ ಆಶಯ ಚಿತ್ರದ ನಡುವಿನಲ್ಲಿ ಬಿಂಬಿತವಾಗುವ ಅದರ 'ಆನುಷಂಗಿಕ' ಸಂಗತಿಗಳ ವೈಭವೀಕರಣದಲ್ಲಿ ಮಸುಕಾಗುವ, ಮಸುಕಾಗುತ್ತಿರುವ ನೋವು, ತುಡಿತ ಚಿಂತನೆಯ ಮೂಸೆಯಲ್ಲಿ ಬೇಯಲಿಲ್ಲ. ಕೇವಲ ಸಾಮಾಜಿಕ ಘಟನಾವಳಿಗಳು ತೀರ್ಮಾನಗಳಿಗೆ ಆಧಾರವಾಗುವುದು ಸಾಧುವಲ್ಲ. ಇಂತಹ ತೀರ್ಮಾನಗಳು ಸ್ತ್ರೀವಾದದ ನೆರಳಿನಲ್ಲಿ ಬೆಳೆಯುವುದು ಕೇವಲ ಒಂದು ರಕ್ಷಣಾತಂತ್ರವಾಗಿ ಕಾಣುತ್ತದೆ. 'ಮಹಿಳಾಸಾಹಿತ್ಯ ಒಂದು ಶೋಧ' ದಲ್ಲಿ ಜಿ. ಎಸ್. ಆಮೂರರ 'ಇಂದಿನ ಬಹುತೇಕ ಮಹಿಳಾಕಾವ್ಯ ಸ್ವಗತದ ತಯಾರಿ ತಾಲೀಮುಗಳಿಲ್ಲದೇ, ಸೀದಾ ಸಂಭಾಷಣೆಗೆ, ಭಾಷಣಕ್ಕೆ ತೊಡಗಿಬಿಡುತ್ತವೆ' ಎಂಬ ಮಾತನ್ನು ಲೇಖಕಿ ನೆನಪಿಸುತ್ತಾರೆ. 'ಪರ್ವದ ಓದು –ಸ್ತ್ರೀವಾದೀ ಅಧ್ಯಯನದ ಹಿನ್ನೆಲೆಯಲ್ಲಿ', 'ಕನ್ನಡ ರಾಮಾಯಣಗಳು –ಒಂದು ನೋಟ', 'ಮಹಿಳೆ ಮತ್ತು ಮಧ್ಯಕಾಲೀನ ಸಾಹಿತ್ಯ' ಈ ಲೇಖನಗಳು ನಮ್ಮ ಪುರಾಣ ಕಥೆಗಳಾದ ರಾಮಾಯಣ, ಮಹಾಭಾರತಗಳನ್ನಾಧರಿಸಿ ಬರೆದವುಗಳಾದರೂ ನಮಗೆ ಇಲ್ಲಿ ವ್ಯಾಪಕವಾದ ಮಾಹಿತಿ ದೊರಕುತ್ತದೆ. ಈ ಲೇಖನಗಳಲ್ಲಿ ಲೇಖಕಿಯ ನಿಷ್ಪಕ್ಷಪಾತತೆ ಮೆಚ್ಚುವಂತಿದೆ.

'ಭೂಮಿ-ಹೆಣ್ಣು' ಲೇಖನದಲ್ಲಿ 'ಧರಿತ್ರಿ' ಯ ಲಿಂಗ ಕುರಿತ ವಿವರಣೆ ಸೊಗಸಾಗಿ ಸಾಗಿದೆ. ಒಂದೆಡೆ ಆಧಾರಕ್ಕಾಗಿ ಬಳಸುವ 'ನ ಸ್ತ್ರೀ ಸ್ವಾತಂತ್ರ್ಯಂ ಅರ್ಹಸಿ' ಎಂಬಲ್ಲಿ 'ಸ್ತ್ರೀವಾದ' ದ ಅನೇಕ ಲೇಖಕಿಯರಂತೆ ಪ್ರಭಾವತಿಯವರೂ ಎಡವಿದ್ದಾರೆ. ಸಂಸ್ಕೃತದ 'ಅರ್ಹಸಿ' ಮತ್ತು 'ಅರ್ಹತಿ' ಎಂಬ ಎರಡು ಶಬ್ದಗಳು ಹೊರಡಿಸುವ ಬೇರೆ ಬೇರೆ ಧ್ವನಿಗಳು ಪ್ರಭಾವತಿಯವರಿಗೆ ಒಂದೇ ಧ್ವನಿಯಾಗಿ ಕೇಳಿರುವುದೇ ವಿಪರ್ಯಾಸ. ಸಾಹಿತ್ಯದಲ್ಲಿ 'ಶ್ರೇಷ್ಠತೆ ಮತ್ತು ಶುದ್ಧತೆ' ಗಳು ವ್ಯಸನವಾಗುತ್ತಾ ಹೋಗುವುದನ್ನು ಲೇಖಕಿ ನೋವಿನಿಂದಲೇ ಹಂಚಿಕೊಳ್ಳುತ್ತಾರೆ. 'ಸಾವು' ಮತ್ತು 'ಸ್ವಾತಂತ್ರ್ಯೋತ್ತರ ಭಾರತ' ಗಳನ್ನು ಮತ್ತಷ್ಟು ಕಾಲಾವಕಾಶ ಇಟ್ಟುಕೊಂಡು ಬರೆಯಬಹುದಿತ್ತು. ಇಡೀ ಸಂಕಲನ ಒಳ್ಳೆಯ ಭಾಷೆ, ಗಂಭೀರ ಚಿಂತನೆ, ಪ್ರೌಢ ಅಧ್ಯಯನದಿಂದ ಕೂಡಿದೆ. ಅಲ್ಲಲ್ಲಿ ಬರುವ ಪುನರುಕ್ತಿಗಳು, ಸ್ವಕೀರ್ತನಾ ಮನೋಭಾವ ಸ್ವಲ್ಪ ತಗ್ಗಿದರೆ ಮತ್ತಷ್ಟು ಉನ್ನತ ಕಾಣ್ಕೆಗಳನ್ನು ಕಾಣಬಹುದು.

– ಡಾ.ಎಂ.ಆರ್. ಮಂದಾರವಲ್ಲಿ, ಕೇರ್ ಜಿ. ಕೆ. ರವೀಂದ್ರಕುಮಾರ್. ಆಕಾಶವಾಣಿ. ಮೈಸೂರು

೨. ಗಣೆಯ ನಾದ : ಶಂಕರ ಕಟಗಿ

ಆನಂದಕಂದ ಗ್ರಂಥಮಾಲೆ. ಮಲ್ಲಾಡಿಹಳ್ಳಿ. ಪ್ರ.ಮು. ೨೦೦೧. ಪು. ೯೪. ರೂ. ೭೫/-

'ಗಣೆಯ ನಾದ' ಶಂಕರ ಕಟಗಿಯವರ ೩ ನೆಯ ಕವನ ಸಂಕಲನ. ಪ್ರಸ್ತುತ ಸಂಕಲನದಲ್ಲಿ ೩೭ ಕವನಗಳಿವೆ. ಕಟಗಿಯವರ ಕವನಗಳಲ್ಲಿ ಗ್ರಾಮೀಣ ಬದುಕಿನ ಚಿತ್ರಣವಿದೆ. ಐತಿಹಾಸಿಕ ಪ್ರಜ್ಞೆಯಿದೆ. ಬದುಕಿನ ಸಂಕೀರ್ಣತೆಯ ಅರಿವಿದೆ. ಅಭಿವ್ಯಕ್ತಿಗಾಗಿ ಗ್ರಾಮ್ಯಶಬ್ದಕೋಶ, ಹೊಸ ಪದಗಳ ಸೃಷ್ಟಿ ಕಟಗಿಯವರ ಕವನಗಳಲ್ಲಿ ಕಂಡುಬರುತ್ತದೆ. ಹೀಗಾಗಿ 'ಕೇರಿ ಹೆಂಗಸರೆಲ್ಲ ಕೂಸಿನ್ಯೆಸಿರಿ ಕಂಡು/ನಕ್ಕು ನವಿಲಾದರು' ಎಂಬ ನವಿರಾದ ಸಾಲುಗಳು ಸೃಷ್ಟಿಯಾಗಿವೆ. 'ಠಪ್ಪಂತ ಚಿಪ್ಪೊಡೆದು ಇರುಳು ಚೆಲ್ಲಾಪಿಲ್ಲಿ/ಮುಗಿಲ ನೆತ್ತರ ಸೆರಗು' ಶಂಕರ ಕಟಗಿಯವರು ಬೆಳಗನ್ನು ಹಿಡಿದಿರುವ ಕವನದ ಸಾಲುಗಳಲ್ಲಿ ಇದು ಒಂದು. ಇತಿಹಾಸವನ್ನು ಸಹ ಕಟಗಿ ಅಷ್ಟೇ ಪರಿಣಾಮಕಾರಿಯಾಗಿ ಚಿತ್ರಿಸಬಲ್ಲರು. 'ಸೋಮಾಲಿಯಾಕ್ಕೆ ಸದ್ಯ ಕನಸುಗಳೇ ಇಲ್ಲ/ಕೊಳೆತ ಹೆಣಗಳ ವಾಸನೆ ಬೀಸುಗಾಳಿಯಲ್ಲಿ', 'ಅಫಘಾನ್ ಬಂಡೆ ಬೆಟ್ಟದೊಳಗೆ... ನೂರೊಂದು... ಸಹಸ್ರ ಮಸಂತಗಳಿಂದ ಧ್ಯಾನದೊಳಗಿದ್ದ ಮಹಾಮೌನ' ಎಂಬ ಸಾಲುಗಳಲ್ಲಿ ಸೋಮಾಲಿಯಾದ ಅವನತಿಯಂತೆಯೇ ಅಫಘಾನಿಸ್ಥಾನದಲ್ಲಿ ಬುದ್ಧಪ್ರತಿಮೆಗಳ ನಾಶವನ್ನು ಹಿಡಿದಿಟ್ಟದ್ದಾರೆ. ಕಟಗಿಯವರ ಕವನದ ಸಾಲುಗಳು ನೇರ ಅಭಿವ್ಯಕ್ತವಾಗಿದ್ದು ಅರ್ಥವಾಗುತ್ತವೆ. ಸಂಕೇತಭರಿತ ಕವನಗಳು ಒಂದೇ ಓದಿಗೆ ದಕ್ಕದಿದ್ದರೂ ಕವನದ ಸಾಲುಗಳು ಕಿವಿಯಲ್ಲಿ ಗುನುಗುಣಿಸುತ್ತವೆ. ಕಟಗಿಯವರ ಕವನಗಳಲ್ಲಿ ಜೀವನವನ್ನು ದರ್ಶಿಸುವ ಕ್ರಮಬದ್ಧತೆ ಇದೆ. ಸಂವೇದನಾ ತೀವ್ರತೆ, ಕವನ ಕಟ್ಟುವ ಕಲೆಗಾರಿಕೆ, ಅನಾವಶ್ಯಕವೆನಿಸದ ಪದಬಳಕೆ ಕಟಗಿಯವರ ವೈಶಿಷ್ಟ್ಯ.

— ಡಾ. ಎ. ಮುರಿಗೆಪ್ಪ, ಭಾಷಾಶಾಸ್ತ್ರ ಪ್ರಾಧ್ಯಾಪಕರು, ಕ. ಅ. ಪೀಠ, ಕ.ವಿ.ವಿ.. ಧಾರವಾಡ- ೩

೩. ನಿನ್ನ ಮೇಲೆ ಸಿಟ್ಟಿಲ್ಲ ಮಾಯೀ : ಡಿ. ಎಸ್. ಚೌಗಲೆ

ಆನಂದಕಂದ ಗ್ರಂಥಮಾಲೆ. ಮಲ್ಲಾಡಿಹಳ್ಳಿ. ಪ್ರ.ಮು. ೨೦೦೧. ಪು. ೧೨೬. ರೂ. ೬೦/-

ಕನ್ನಡದಲ್ಲಿ ಮತ್ತು ಇತರ ಭಾಷೆಗಳಲ್ಲಿ ಆಧುನಿಕ ನಗರವಾಸಿ ಕಥೆಗಳು ಇಂದು ಹೆಚ್ಚಾಗಿ ಬರುತ್ತಿವೆ. ಭಾರತೀಯ ಕನ್ನಡೇತರ ಭಾಷೆಗಳ ಅನುವಾದ ಕೃತಿಗಳು ನಮಗೆ ಲಭ್ಯವಾಗುತ್ತಿರುವುದು ತೃಪ್ತಿ ಕೊಡುವ ವಿಚಾರ. ಡಿ. ಎಸ್. ಚೌಗಲೆ ಅವರು ಮರಾಠಿಯಿಂದ ಅನುವಾದ ಮಾಡಿರುವ ೧೧ ಕಥೆಗಳ ಸಂಕಲನ 'ನಿನ್ನ ಮೇಲೆ ಸಿಟ್ಟಿಲ್ಲ ಮಾಯೀ' ಒಂದು ಉತ್ತಮ ಸಂಗ್ರಹ. ಇದರಲ್ಲಿ ಮರಾಠಿಯ ಸುಪ್ರಸಿದ್ಧ ಜಯವಂತ ದಳವಿ ಅವರ ೫, ಲಕ್ಷ್ಮಣ ಲೋಢೆ ಅವರ ೪ ಮತ್ತು ದಯಾ ಪವಾರ ಹಾಗೂ ನಾಮದೇವ ಕಾಂಬಳೆ ಅವರ ಒಂದೊಂದು ಕಥೆಗಳಿವೆ. ದಲಿತರ ಹೆಪ್ಪುಗಟ್ಟಿದ ನೋವು, ಸ್ತ್ರೀಯರ ಅಸಹಾಯಕ ಅಳಲು, ಆಧುನಿಕರ ಅನಂತ ಸಮಸ್ಯೆಗಳು, ಮಾನವೀಯತೆಗೆ ಒತ್ತು ನೀಡುವ ಅಂಶಗಳು ಈ ಕಥಾಸಂಗ್ರಹದ ವಿಶೇಷಗಳು. ಅಂತೆಯೇ ವೈಚಾರಿಕ ಮತ್ತು ವೈಜ್ಞಾನಿಕ ಅಂಶಗಳನ್ನೂ ಇಲ್ಲಿ ಗಮನಿಸಬಹುದು. ಇವು ಅನುವಾದಿತ ಕತೆಗಳಾದರೂ ಕನ್ನಡದ್ದೇ ಎನ್ನುವಷ್ಟು ಸಹಜವಾಗಿವೆ. ಉಪಮಾಲಂಕಾರಗಳಿಂದ ಕೂಡಿದ ಕೆಲವು ವಾಕ್ಯಗಳನ್ನಂತೂ ಮತ್ತೆ ಮತ್ತೆ ಓದಬೇಕೆನ್ನಿಸುತ್ತದೆ. "ಆ ಪೆಟ್ಟಿಗೆಯ ಮೇಲೆ ಒತ್ತಟ್ಟಿಗೆ ಕೂತನೆಂದರೆ ಅವನ ಕೈಕಾಲುಗಳು ಒಡೆದ ಕಟ್ಟಿಗೆ ತುಂಡುಗಳನ್ನು ಚೆಲ್ಲಿದಂತೆ ಕಾಣುತ್ತಿದ್ದವು".... "ಕೀವು ತುಂಬಿದ ಹುಣ್ಣಿನಂತೆ ದೇಹ ಒಳಗಿನಿಂದಲೇ ಠಸ ಠಸ ಎನ್ನತೊಡಗಿತು" ಇತ್ಯಾದಿ. ಈ ಸಂಗ್ರಹದ ಅನೇಕ ಕತೆಗಳು ಸಂಭಾಷಣೆಗೆ ಒತ್ತು ನೀಡಿದಂತೆ ಕಂಡರೂ ಅವು ಕತೆಗಳಿಗೆ, ಸನ್ನಿವೇಶಕ್ಕೆ ಪೂರಕವಾಗಿವೆ.

ಆಧುನಿಕ ಆವಿಷ್ಕಾರಗಳಿಂದ ಇಡೀ ಭೂಮಂಡಲವೇ ಒಂದಾಗುತ್ತಿರುವ ಇಂದಿನ ದಿನಗಳಲ್ಲಿ ನಾವು ನಮ್ಮ ಅಕ್ಕಪಕ್ಕದ ಸಾಹಿತ್ಯಕೃತಿಗಳನ್ನಾದರೂ ಓದಬೇಕಾಗುತ್ತದೆ. ಎಲ್ಲರೂ ಎಲ್ಲ ಭಾಷೆಗಳನ್ನೂ ಕಲಿಯಲು, ಅರ್ಥಮಾಡಿಕೊಳ್ಳಲು ಕಷ್ಟಸಾಧ್ಯವಾದ್ದರಿಂದ ಇಂಥ ಅನುವಾದಗಳು ತುಂಬ ಸಹಕಾರಿ. ಈ ದೃಷ್ಟಿಯಿಂದ ಚೌಗಲೆ ಅವರು ಉತ್ತಮ ಕಾರ್ಯ ಮಾಡಿದ್ದಾರೆ. 'ನಿನ್ನ ಮೇಲೆ ಸಿಟ್ಟಿಲ್ಲ ಮಾಯೀ', 'ಅಂಬಿಕಾ', 'ಹಸಿವು', 'ಉನ್ನಯನ' ಮುಂತಾದ ಕತೆಗಳು ಯಾವ ಭಾಷೆಯಲ್ಲಿದ್ದರೂ ಯಾವ ಭಾಷೆಗೆ ಅನುವಾದಗೊಂಡರೂ ಸ್ವೀಕಾರಾರ್ಹ. ಜೀವನಾನುಭವಗಳನ್ನು ವಿಸ್ತಾರಗೊಳಿಸುವ ಇಂಥ ಕತೆಗಳನ್ನು ಓದಿ ಅನುಭವಿಸುವುದೇ

ಒಂದು ವಿಶಿಷ್ಟ ಅನುಭವ. ಓದಿದಷ್ಟೂ ಆಳಕ್ಕೆ ಇಳಿಯುವ ಇಂಥ ಕತೆಗಳು ಮತ್ತೂ ಮತ್ತೂ ಕನ್ನಡಕ್ಕೆ ಬರಲಿ ಅಥವಾ ಕನ್ನಡ ಭಾಷೆಯಲ್ಲಿಯೇ ಬರಲಿ.

— ಜಿ. ಟಿ. ಶ್ರೀಧರ ಶರ್ಮ, ತ್ಯಾಗರಾಜ ವಿಸ್ತರಣೆ, ಅಜ್ಜಂಪುರ - ೫೭೭ ೫೪೭, ತಾ. ತರೀಕೆರೆ

೪. ಪ್ರೀತಿ ಬದುಕಿನ ಹಾಡು : ಅಬ್ಬಾಸ ಮೇಲಿನಮನಿ.

ಆಸ್ಮಾ ಪ್ರಕಾಶನ. ಹುಸೇನಪೇಟ. ಗುಳೇದಗುಡ್ಡ. ಪ್ರ.ಮು. ೨೦೦೨. ಪು. ೭೦. ರೂ. ೩೬/-

ಇದು ಅಬ್ಬಾಸ ಮೇಲಿನಮನಿಯವರ ೩ ನೆಯ ಕವನ ಸಂಕಲನ. ಆಕಸ್ಮಿಕ ಅಪಘಾತದಲ್ಲಿ ಜಡವಾಗಿದ್ದ ಸಮಯದಲ್ಲಿ ಹುಟ್ಟಿಕೊಂಡು, ಸಾವು ಕಾಡಿದ ಕ್ಷಣಗಳಿಗೆ ಜೀವರಸ ಬಸಿದು ತನಗೆ ಹೊಸ ಬದುಕು ನೀಡಿದ ಈ ಕವಿತೆಗಳು ಬದುಕು ಪ್ರೀತಿಸುವ ಸಹೋದರ ಸಹೋದರಿಯರಿಗೆ ಅಮೃತ ಹನಿಸಲಿ ಎಂಬ ಹಾರೈಕೆಯಲ್ಲಿ ಕವಿ ತಮ್ಮ ಕವಿತೆಗಳ ಹುಟ್ಟು ಉದ್ದೇಶಗಳನ್ನು ಸೂಚಿಸುತ್ತಾರೆ. ವಿನಾಶವನ್ನು ಸಾವನ್ನು ಮೆಟ್ಟಿನಿಂತು ಜೀವ-ಜೀವನಪ್ರೇಮವನ್ನು ಮೆರೆಸಬೇಕೆನ್ನುವ ಕವಿಯ ಛಲ ಸಂಕಲನದ ಎಲ್ಲ ಕವಿತೆಗಳ ಮೂಲ ಆಶಯ.

ಕೊನೆಯಲ್ಲಿ 'ಬದುಕ ಕೊಡು ಬೆಂಕಿಯೆ' ಕವನಗಳಲ್ಲಿ ವರ್ತಮಾನದ ಬದುಕಿನ ಧರ್ಮಾಂಧತೆ, ಮೂಲಭೂತವಾದದ ಕ್ರೌರ್ಯ, ಹಿಂಸಾಚಾರ, ಇತಿಹಾಸದ ಪುಟಗಳನ್ನು ಸ್ವಾರ್ಥಕ್ಕೆ, ಹಿಂಸಾಚಾರಕ್ಕೆ, ಪರಸ್ಪರ ಕಲಹಕ್ಕೆ ಪ್ರೇರಕವಾಗುವಂತೆ ತಿರುಚುವ ಮಾನಸಿಕ ವಿಕೃತಿಯ ಕಾರಣ ಸುಂದರವಾದ, ಸುಂದರವಾಗಬೇಕಿದ್ದ ಬದುಕು ನರಕವಾಗುತ್ತಿರುವ ತಳಮಳವನ್ನು ಕವಿ ಪರಿಣಾಮಕಾರಿಯಾಗಿ ಬಿಂಬಿಸುತ್ತಾರೆ. ಸಂಕಲನದ ಸುಮಾರು ಎಲ್ಲ ಕವನಗಳ ಭಾವದ್ರವ್ಯ ಇದೇ ಆಗಿದೆ. ಈ ಮೂಲ ಆಶಯವೇ ವಿವಿಧ ಸಂಕೇತ, ಪ್ರತಿಮೆ, ರೂಪಕಗಳ ಮೂಲಕ ಸಂಕಲನದಲ್ಲಿ ಅಭಿವ್ಯಕ್ತಿ ಪಡೆಯುತ್ತದೆ. ಮುಸ್ಲಿಂ ಸಂವೇದನೆಗಿಂತ ಮಿಗಿಲಾಗಿ ಸೂಕ್ಷ್ಮ ಸಂವೇದನಾಶೀಲ ಮಾನವನ ತೀವ್ರ ತಳಮಳ ಇಲ್ಲಿ ಅಭಿವ್ಯಕ್ತಿ ಪಡೆದಿದೆ. ಈ ಕವಿಗೆ ಒಳ್ಳೆಯ ಬದುಕಿನ ತೀವ್ರ ಬಯಕೆ. ಅದು ಹತ್ತು ಹಲವು ರೀತಿಯಲ್ಲಿ ಪುನರುಕ್ತಗೊಳ್ಳುತ್ತದೆ. ಕವಿಯ ಸಾಮಾಜಿಕ ಕಳಕಳಿ ತೀವ್ರ ತಳಮಳವಾಗದಿದ್ದರೆ ಕಾವ್ಯ ತೆಳುವಾಗಿ ಬಿಡುವ ಅಪಾಯವಿರುತ್ತದೆ. ಬದುಕಿನ ಸಮಸ್ಯೆಗಳ ಸಂಕೀರ್ಣತೆ, ಆಳ, ಅಗಲಗಳ ದಟ್ಟವಾದ ಅನುಭವವಿಲ್ಲದಾಗಿ ಕವಿಯ ಅನಿಸಿಕೆಗಳು ಲೋಕಾಭಿರಾಮದ ಹೇಳಿಕೆಗಳ ಮಟ್ಟಕ್ಕೆ ಉಳಿದು ಕಾವ್ಯಪ್ರಭಾವವನ್ನು ಮಿತಗೊಳಿಸುತ್ತದೆ. ಕವಿಗೆ ಸಾಮಾಜಿಕ ಕಾಳಜಿ ಇದೆ. ಎರಡು ಭಿನ್ನ ಧರ್ಮ-ಪರಂಪರೆಗಳ, ಸಂಸ್ಕೃತಿಗಳ ಅರಿವಿನ ಹಿನ್ನೆಲೆಯಿದೆ. ಸಾಹಿತಿಗೆ ಅನಿವಾರ್ಯವಾದ ಮೂಲಸಾಮಗ್ರಿ ಅವರಲ್ಲಿ ವಿಪುಲವಾಗಿದೆ. ಆಧುನಿಕತೆ, ಪ್ರಗತಿಶೀಲತೆ ವೈಚಾರಿಕತೆಗಳಿಗೆ ಸ್ಪಂದಿಸುವ ಲೇಖಕರು ಪ್ರಕಟಣೆಯ ಅವಸರವನ್ನು ಹತ್ತಿರಕ್ಕೆ ಮೂಲಸಾಮಗ್ರಿಯ ವಿಕಾಸ, ಅಲ್ಲಲ್ಲಿ ಇಣುಕುವ ಭಾಷಾದೋಷ, ಹಳಸಲು ಸಂಕೇತ, ನುಡಿಗಟ್ಟುಗಳಿಂದ ಬಿಡುಗಡೆಯತ್ತ ಗಮನವಿತ್ತರೆ ಅವರಿಂದ ಉತ್ತಮ ಕಾವ್ಯವನ್ನು ನಿರೀಕ್ಷಿಸಬಹುದು.

— ಅಪ್ಪಾಸಾಹೇಬ ಸನದಿ, ೩೪, ಪ್ರಶಾಂತನಗರ, ಸಾಧನಕೇರಿ, ೫ ನೇ ಅಡ್ಡರಸ್ತೆ, ಧಾರವಾಡ-೮

೫. ಶರೀಫ : ಮಂಜುನಾಥ ಬೆಳಕೆರೆ. ನಿರಂತರ ಪ್ರಕಾಶನ, ಕಾಂತರಾಜೇ ಅರಸ್ ರಸ್ತೆ, ಸರಸ್ವತೀಪುರಂ, ಮೈಸೂರು-೯. ಪ್ರ.ಮು. ೨೦೦೨. ಪು. ೧೦೪, ರೂ. ೪೫/-

'ಶರೀಫ' ನಾಟಕ ಎದ್ದುಕೂತು ಓದುವಂತೆ ಮಾಡುವ ಸಾಹಿತ್ಯಕೃತಿ. ರಂಗದ ಮೇಲೆ ಅದು ಮೂಡಿ ಬರುವ ಸಾಧ್ಯತೆಗಳನ್ನು ಕಣ್ಣಮುಂದೆ ತರಿಸಿ ಅಪೇಕ್ಷೆಗಳನ್ನು ಹುಟ್ಟಿಸುವ ನಾಟಕ. ಶರೀಫ ರಂಗಮಂಚದ ಮೇಲೆ ಕಾಣಿಸಿಕೊಳ್ಳುವದಕ್ಕಿಂತ ಮೊದಲೇ ಅವನ ಹಕೀಕತ್ತನ್ನು ತಿಳಿಸುವ ಪರಿ, ತಂತ್ರದ ದೃಷ್ಟಿಯಿಂದ ಕೂಡ ಪರಿಣಾಮಕಾರಿ ನಾಟಕ ಇದಾಗಬಲ್ಲದೆಂಬುದನ್ನು ಸೂಚಿಸುತ್ತದೆ. ನಾನು ಅವನ ತಂದೆ, ಆದರೂ 'ಅವ ಲೋಕದ ಮಗ' ಎಂದು ಹೇಳುವ ಅವನ ತಂದೆ ಇಮಾಮ; ತತ್ವದ ಮಾತು 'ಹರ್‍ಯೊಂಡು ತಿನ್ನೂ ಬಡ ಮಂದಿಗೆ ಅಲ್ಲ' ಎಂದು ತನ್ನ ಮನೆಯವರನ್ನೇ ಪೋಷಿಸಲು ದುಡಿಯದೆ ಗೋವಿಂದಭಟ್ಟರ ಬೆನ್ನುಹತ್ತಿದ ತನ್ನ ಮಗನ ಮಗೆಗೆ ನುಡಿಯುವ ಹಜ್ಜಮಾ ಹಾಗೂ ಅದೇ ಸಂದರ್ಭದಲ್ಲಿ ಗೋವಿಂಧಭಟ್ಟರು 'ಅಡ್ಡಾಡೋ ಹಾದಿ ಯಾವದಂತ ನಮ್ಮ ಶರೀಫಗಟಾ ಗೊತ್ತು' ಅಂತ ಇಮಾಮ ಹೇಳುವುದೂ ನಮ್ಮನ್ನ ಶರೀಫ ಹಾಗೂ ಗೋವಿಂದಭಟ್ಟರ ಭೆಟ್ಟಿಯ ಗಳಿಗೆಗಳಿಗೆ ತಯಾರ ಮಾಡತಾವ. ಅಂಕ ೧ ದೃಶ್ಯ ೪ ರಲ್ಲಿ ಇದು ನಡೆದಾಗ ಹಾಗೂ ಮುಂದ ನಾಟಕದ ಬಹುಭಾಗದಾಗ ಶರೀಫ ಗೋವಿಂದಭಟ್ಟರು ಭೆಟ್ಟಿಯಾಗೂವಾಗೆಲ್ಲ ಪ್ರೇಕ್ಷಕರಿಗೆ ಒಂದು ವಿಶೇಷ ಅನುಭವ. ನಾಟಕದ ಅತಿ

‘ಮಹತ್ವದ ನಡೆಯುವದೂ’ ಇಲ್ಲಿಯೇ. ಅನುಭಾವವನ್ನು ಅನುಭವದ ಭಾಷೆಗೆ ಇಳಿಸುನಾಗ, ತರ್ಕ ಹಾಗೂ ತರ್ಕಬೇಡವಾದ ವಿಷಯಗಳು ಎಲ್ಲಾ ಕಾವ್ಯಮಯ ಆಗ್ತಾವ. ಶರೀಫ ಗೋವಿಂದಭಟ್ಟರ ಶಿಷ್ಯ ಆದರೂ, ಅವರಿಬ್ಬರಲ್ಲಿಯೂ ಪರಸ್ಪರ ಭೆಟ್ಟಿಯಾಗಬೇಕೆಂಬ ಎಳೆತ ಹಾಗೂ ಭೆಟ್ಟಿಯಾದಾಗ ಯಾರು ಯಾರಿಂದ ಏನು ಎಷ್ಟು ಪಡೆದರು ಎಂಬುದು ತಿಳಿಯದಷ್ಟು ಇಬ್ಬರೂ ಬೆಳೆಯುವ ರೀತಿ ಭಾಷೆಯಲ್ಲಿ ನಡೆಯುವುದು ಈ ಕೃತಿಯನ್ನು ಸಾರ್ಥಕ ಸಾಹಿತ್ಯ ಹಾಗೂ ಬಹಳಷ್ಟು ಸಾಧ್ಯತೆಗಳನ್ನೊದಗಿಸಿಕೊಡುವ ರಂಗ-ಕೃತಿಯನ್ನಾಗಿಸಿದೆ. ಮನೆಯಿಂದ, ತನ್ನ ಸಂಬಂಧಿಗಳಿಂದ ಬಿಡಿಸಿಕೊಳ್ಳುವ ಶರೀಫ, ತನ್ನ ಜ್ಞಾನಾನ ‘ಸುಖಾ ಇರಲಿ ದುಕ್ಕ ಇರಲಿ ಪದ ಮಾಡಿ ಹಾಡ್ತಾನ; ಆ ಪದಗಳನ್ನ ಮೊಟ್ಟ ಮೊದಲಿಗೆ ಬಸಮ್ಮನ ಬಾಯಿಂದ ಹಾಡಿಸಿದನಂದರ ಅವು ಆಕಿ ಬಾಯಾಗ ಕೂಡ್ತಾವ. ಈ ಲೋಕದೊಳಗಿನ ನಮ್ಮಂತಹವರಿಗಾಗಿ ಶರೀಫ ತನ್ನ ತಿಳವಳಕೀನ ಹಂಚೂ ಕೆಲಸ ಹೀಗೆ ಪ್ರಾರಂಭವಾಗುತ್ತದೆ. ಇದು ನಾಟಕಕಾರ ಶರೀಫನ ವ್ಯಕ್ತಿತ್ವ ಬೆಳಸೂ ರೀತಿ. ಗೋವಿಂದಭಟ್ಟರು ಸತ್ತ ಮೇಲೆಯೂ ಶರೀಫ ಬೆಳೀತಾನ. ಮುದಕಪ್ಪನಿಂದ ಸಹಿತ ಕಲೀತಾನ. ಮೋಹ ಮತ್ತು ಪ್ರೀತಿಯ ಅಂತರಾ ನಾಟಕದ ಕೊನೆ-ಕೊನೆಯ ದೃಶ್ಯಗಳಲ್ಲಿ ಅವ ತಿಳಕೊಳ್ಳೂದು: ತನ್ನ ತಂದೆ-ತಾಯಿ, ಹೆಂಡತಿ-ಮಗಳ ಪ್ರೀತಿಯನ್ನ ಮೋಹ ಅಂತ ಅದರಿಂದ ಬಿಡಿಸಿಕೊಂಡದ್ದು, ಅವರ ಪ್ರೀತಿಗೆ ಪ್ರತಿಯಾಗಿ ತಾನು ಅವರಿಗೆ ಏನನ್ನೂ ಕೊಡದೇ ಹೋದುದು –ಇವೆಲ್ಲ ಶರೀಫನ್ನ ನಾಟಕ ಮುಗಿಯೂದರೊಳಗ ಒಬ್ಬ ದೊಡ್ಡ ಅನುಭಾವಿ ಅಂತ ಅಷ್ಟ ಅಲ್ಲದೆ ಅವನನ್ನು ಒಬ್ಬ ಸಹಜಧರ್ಮಿ ಮನುಷ್ಯ ಅಂತಲೂ ತೋರಿಸ್ತಾವ. ನಾಟಕದ ಯಶಸ್ಸು ಇರುವದು ಇಲ್ಲಿಯೇ. ಪವಾಡಗಳ ವಿರುದ್ಧ, ಅವುಗಳನ್ನು ಅಪೇಕ್ಷಿಸುವ, ಒಪ್ಪುವ ಮೌಢ್ಯದ ವಿರುದ್ಧ ಅಂತೆಯೇ ಅವುಗಳನ್ನೆಸಗುವವರ ವಿರುದ್ಧ ಸಂಘರ್ಷಿಸುವಾಗ, ಶರೀಫರ ಸಮಕಾಲೀನ ಇನ್ನೂ ಕೆಲವು ಮಹತ್ವದ ವ್ಯಕ್ತಿಗಳು ರಂಗದ ಮ್ಯಾಲೆ ಬರತಾರ. ಗೋವಿಂದಭಟ್ಟರ ವೈಶಿಷ್ಟ್ಯವನ್ನು ಅವರು ಬಳಸುವ ಭಾಷೆಯಿಂದ ಕಟ್ಟಿದಂತೆ, ಈ ವ್ಯಕ್ತಿಗಳನ್ನೂ ಇನ್ನೂ ಭೋಲೊತಿನ್ಹಾಂಗ ಜೀವಂತಗೊಳಿಸಬಹುದಿತ್ತು. ಶರೀಫರ ಪದಗಳ ಆಯ್ಕೆ ಹಾಗೂ ಪರಿಣಾಮಕಾರಿ ಬಳಕೆ ಈ ನಾಟಕದ ಮತ್ತೊಂದು ಸಾಧನೆ. ಈ ಪದಗಳೇ ಈ ನಾಟಕದ ಸಾರ. ‘....not swayed by the enormity and avoiding temptation" ಅನ್ನೂಹಾಂಗ ಈ ಪದಗಳ ಬಳಕೆ ಆಗಿದೆ. ‘ಮನಶ್ಯಾರಿಲ್ಲದೆ ಧರ್ಮ ಇಲ್ಲ’ ಎಂಬರ್ಥದ ಗೋವಿಂದಭಟ್ಟರ ಮಾತು, ಕೃತ್ರಿಮವಲ್ಲದ ರೀತಿಯಲ್ಲಿ, ನಾಟಕೀಯವಾಗಬಹುದಾದ ರಂಗ - ಮೌಲ್ಯ ಹೆಚ್ಚಿಸುವ ಕೆಲವು ದೃಶ್ಯಗಳನ್ನು ಬಳಸಿಕೊಂಡು, ನಾಟಕಾ ನೋಡಿ ಎದ್ದು ಹೋಗುವಾಗ ತಮ್ಮನ್ನು ಯಾರೋ ಭೋಲೊತಿನ್ಹಾಂಗ ತಡವಿದಾಂಗ ಆಗೂ ಅನುಭವ ಕೊಡೊ ಈ ನಾಟಕಾ ಓದಿದ್ದು ಸಾಕಾಗದೆ, ಲಗೂನ ರಂಗಮಂಚದ ಮೇಲೆ ನೋಡಬೇಕು ಅಂತ ಅನಸ್ತದ.

– ದುಷ್ಯಂತ ನಾಡಗೌಡ. ವೆಂಕಟಾದ್ರಿ. ೧೨೪. ೨ ನೇ ಮೇನ್. ಗಾಂಧೀನಗರ. ಧಾರವಾಡ -೪

೬. ನಿಂತು ನೋಡುವೆ ಅವುಗಳತ್ತಲೆ : ಟಿ. ಆರ್. ರಾಧಾಕೃಷ್ಣ. ಕೀರ್ತಿ ಪ್ರಕಾಶನ. ೨೩೦. ಬ್ಲಾಕ್ ೧೬೭. ಕೆಂಗೇರಿ ಉಪನಗರ. ಬೆಂಗಳೂರು-೬೦. ಪ್ರ.ಮು. ೨೦೦೦. ಪು. ೧೧೨. ರೂ. ೪೮/-

ಕನ್ನಡ ಸಾಹಿತ್ಯಲೋಕಕ್ಕೆ ಈಗಾಗಲೇ ೪ ಕಥಾ ಸಂಕಲನಗ, ೧ ಕವನಸಂಕಲನ ನೀಡಿದ ಟಿ. ಆರ್. ರಾಧಾಕೃಷ್ಣರ ಲಲಿತಪ್ರಬಂಧಗಳ ಸಂಕಲನ ‘ನಿಂತು ನೋಡುವೆ....’ ಜೀವನದ ವಿವಿಧ ಮಜಲುಗಳಲ್ಲಿ ಅಲ್ಲಲ್ಲಿ ನಿಂತು ನೋಡಿದ ಹಲವು ಹತ್ತು ವಿಷಯಗಳನ್ನೊಳಗೊಂಡ ಕೃತಿ.

ಕಣ್ಣಿದ್ದೂ ನೋಡದ, ಬಾಯಿದ್ದೂ ಮಾತಾಡದ ಮಾನವಾಕೃತಿಯ ಅರ್ಧಹೆಣಗಳ ನೋಟ; ನೀರಿನಲ್ಲಿದ್ದ ಕಮಲ ದಂಡೆಗೆಸೆದಂತಾದ ಜೀವ ಹೋದ ತಕ್ಷಣದ ನೋಟಗಳಿಂದ ಕೂಡಿದ ಬದುಕಿನ ಮಧ್ಯದಲ್ಲಿಯೇ ಮಣ್ಣಿನ ಕತ್ತಲಲ್ಲಿ ಸೇರಿದ ಬೀಜ ಬೆಳೆದು ಬೋಧಿವೃಕ್ಷವಾಗುವದನ್ನೂ ಅದರ ಕೆಳಗಿನ ಬುದ್ಧನನ್ನೂ ಅಷ್ಟೇ ಅರ್ಥವತ್ತಾಗಿ ಚಿತ್ರಿಸಿದ್ದಾರೆ. ಕೊನೆಯ ಪ್ರಬಂಧ ‘ವೃಕ್ಷದೇವತೆ’ ಆಪ್ಯಾಯಮಾನವಾಗಿದೆ, ಓದುಗರು ತಮಗರಿವಿಲ್ಲದೆಯೆ ಈ ಬರೆಹಗಳ ಆರಾಧಕರಾಗಿಬಿಡುತ್ತಾರೆ.

ಲಲಿತಪ್ರಬಂಧಗಳನ್ನು ಓದುವದೆಂದರೆ ಪುಷ್ಪೋದ್ಯಾನವೊಂದನ್ನು ಹೊಕ್ಕು ಅಲ್ಲಿಯ ಸುಂದರ, ವೈವಿಧ್ಯಮಯ ಪುಷ್ಪಗಳ ವೀಕ್ಷಣೆ ಮಾಡಿದಂತೆ, ಕೆಲ ಹೂಗಳ ಪರಾಗಗಳು ಸೂಸುವ ಸುಗಂಧ ಸೇವನೆಗಳ ಆನಂದಮಯ ಕಾಲ. ಎ. ಎನ್. ಮೂರ್ತಿರಾವ್, ವೀಸಿಯವರ ಇಂಥ ಪ್ರಬಂಧಗಳ ನೆನಪಿನ ಹಿನ್ನೆಲೆಯಲ್ಲಿ

ಟಿ. ಆರ್. ರಾಧಾಕೃಷ್ಣರ ೧೧ ಪ್ರಬಂಧಗಳನ್ನು ಈ ಉದ್ಯಾನದಲ್ಲಿ ಅಲ್ಲೊಂದು ಇಲ್ಲೊಂದು ಕಠಿಣತೆಯ ಕಲ್ಲು, ಬಂಜರು ನೆಲ ಇದ್ದುದು ಕಾಣುತ್ತದೆ. ಅದೂ ಸಹಜತೆಯ ಭಾಗವೇ ಆಗಿದೆ.

– ನರಸಿಂಹ ಪರಾಂಜಪೆ, ಚೈತ್ರ. ಪ್ರಶಾಂತನಗರ. ೨ ನೇ ಕ್ರಾಸ್. ಸಾಧನಕೇರಿ. ಧಾರವಾಡ-೮

೭. ವರ್ಣಸಂಚಯ : ಎಸ್. ಸಿ. ಪಾಟೀಲ. ವಿಜಯ ಚಿತ್ರಕಲಾ ಮಹಾವಿದ್ಯಾಲಯ. ಇಳಕಲ್ಲ. ಜಿ. ಬಾಗಲಕೋಟೆ. ಪ್ರ.ಮು. ೨೦೦೧. ಪು. ೧೪೨. ರೂ. ೭೫/-

ಕನ್ನಡದಲ್ಲಿ ಚಿತ್ರಕಲೆಗೆ ಸಂಬಂಧಿಸಿದಂತೆ ವಿಮರ್ಶಾಕೃತಿಗಳು ತೀರ ಕಡಿಮೆ. ಆಗಾಗ ನಡೆವ ಏಕವ್ಯಕ್ತಿ ಅಥವಾ ಸಮೂಹ ಚಿತ್ರಕಲಾ ಪ್ರದರ್ಶನಗಳಲ್ಲಿ ಪ್ರದರ್ಶಿತವಾದ ಚಿತ್ರಗಳ ಬಗ್ಗೆನೋ, ಸ್ಥಳೀಯ ಉತ್ಸವಗಳು ನಡೆದಾಗ ಸಾಂದರ್ಭಿಕವಾಗಿ ಅಲ್ಲಿಯ ವಾಸ್ತುಶಿಲ್ಪದ ಬಗ್ಗೆಯೋ ಪತ್ರಿಕೆಗಳಲ್ಲಿ ಆಗಾಗ ಬಿಡಿ ಲೇಖನಗಳನ್ನು ಕಾಣಬಹುದು. ಆದರೆ ಚಿತ್ರಕಲೆಯನ್ನು ಒಂದು ಶಿಸ್ತಿಗೊಳಪಡಿಸಿ ಶಾಸ್ತ್ರೀಯವಾಗಿ ಅಧ್ಯಯನ ನಡೆಸಿರುವುದು ಕನ್ನಡದ ಮಟ್ಟಿಗೆ ವಿರಳ. ಈ ನಿಟ್ಟಿನಲ್ಲಿ ಡಾ. ಅ. ಲ. ನರಸಿಂಹನ್ ಗಮನಾರ್ಹ ಕೆಲಸ ಮಾಡಿದ್ದಾರೆ. ಅದೇ ರೀತಿ ಶಂಕರ ಪಾಟೀಲ, ಎಸ್. ಎಂ. ಶಿರಹಟ್ಟಿ ಹಾಗೂ ಬಿ. ಪಿ. ಬಾಯರಿಯವರನ್ನೂ ಹೆಸರಿಸಬೇಕಾಗುತ್ತದೆ. ಇದೀಗ ಡಾ. ಎಸ್. ಸಿ. ಪಾಟೀಲ ಅವರು 'ವರ್ಣಸಂಚಯ' ವಿಮರ್ಶಾಕೃತಿಯ ಮೂಲಕ ಕ್ಷೇತ್ರದಲ್ಲಿದ್ದ ಕೊರತೆಯನ್ನು ಸ್ವಲ್ಪಮಟ್ಟಿಗೆ ನೀಗಿಸಿದ್ದಾರೆ.

ಬಾಗಲಕೋಟೆ ಜಿಲ್ಲೆಯ ಪ್ರಾಗೈತಿಹಾಸಿಕ ಚಿತ್ರಕಲೆ, ಚಿತ್ರಕಲೆಯ ಷಡಂಗಗಳು, ರೇಖಾಚಿತ್ರಕಲೆ, ಶಬ್ದ, ರೇಖೆ, ವರ್ಣ ಅಂತರ್‌ಶಿಸ್ತೀಯ ಅಧ್ಯಯನ ಇತ್ಯಾದಿ ೧೨ ಲೇಖನಗಳನ್ನೊಳಗೊಂಡ 'ವರ್ಣ ಸಂಚಯ' ಪಾಟೀಲರ ವೈವಿಧ್ಯಮಯ ಆಸಕ್ತಿಯನ್ನು ಪ್ರತಿಫಲಿಸುವಂತಿದೆ.

ವಿಪುಲ ಸಾಮಗ್ರಿಯನ್ನೊಳಗೊಂಡ ಪಾಟೀಲರ ಬರೆವಣಿಗೆ ವಿವರಣಾತ್ಮಕ ಹಾಗೂ ವಿಶ್ಲೇಷಣಾತ್ಮಕ ಎಂಬ ಎರಡು ನೆಲೆಯಲ್ಲಿ ನಡೆದಿದೆ. ಕೆಲವು ಲೇಖನಗಳಲ್ಲಿ ಅವರು ಅಲ್ಲಲ್ಲಿ ನೀಡುವ ಸ್ಥಳೀಯ ಐತಿಹ್ಯಗಳು, ಪೂರ್ವೋಕ್ತಿ ಉಲ್ಲೇಖಗಳು ಕೃತಿಯ ಮೌಲ್ಯವನ್ನು ಹೆಚ್ಚಿಸಿವೆ. ಕೆಲವೆಡೆಗೆ ಸಾಹಿತ್ಯಿಕ ಸೌಂದರ್ಯದೊಡನೆ ತೂಗಿ ನೋಡಿದ್ದೂ ಪ್ರಶಂಸನೀಯವಾಗಿದೆ.

ಗದುಗಿನ ತೋಂಟದಾರ್ಯಮಠದ ವೀರಶೈವ ಅಧ್ಯಯನ ಸಂಸ್ಥೆಯಿಂದ ಪ್ರಕಟವಾದ ಡಾ. ಎಸ್. ಸಿ. ಪಾಟೀಲರ ಮಹಾಪ್ರಬಂಧ 'ಜನಪದ ಚಿತ್ರಕಲೆ' ಯನ್ನು ಗಮನಿಸಿದವರಿಗೆ 'ವರ್ಣಸಂಚಯ' ಕೃತಿ ಅಚ್ಚರಿಯನ್ನುಂಟು ಮಾಡುವುದಿಲ್ಲ. ನಿರಾಶೆಯ ಸಂಗತಿಯೆಂದರೆ ಗ್ರಹಿಕೆ ಹಾಗೂ ಅಭಿವ್ಯಕ್ತಿಯಲ್ಲಿ ಪಾಟೀಲರು ಹೆಚ್ಚಿನದನ್ನು, ಹೊಸದನ್ನು ಸಾಧಿಸಿಲ್ಲ ಎಂಬುದು. ಸಾಹಿತ್ಯ ಹಾಗೂ ಕಲೆ ಎರಡರ ಅಧ್ಯಯನದ ಹಿನ್ನೆಲೆಯಿರುವ ಪಾಟೀಲರಿಂದ ಓದುಗರು ಇನ್ನೂ ಹೆಚ್ಚಿನದನ್ನು ನಿರೀಕ್ಷಿಸುತ್ತಾರೆ.

– ಚಂದ್ರಶೇಖರ ವಸ್ತ್ರದ, ಜೇಳಗು, ಆನಂದಾಶ್ರಮ ರಸ್ತೆ, ಗದಗ - ೫೮೨ ೧೦೧

೮. ಕುಕ್ಕರಹಳ್ಳಿ : ಶಿವರಾಮು ಕಾಡನಕುಪ್ಪೆ. ಭಾರತಿ ಪ್ರಕಾಶನ. ಸರಸ್ವತೀಪುರಂ. ಮೈಸೂರು-೯. ಪ್ರ.ಮು. ೨೦೦೦. ಪು. ೧೬೬. ರೂ. ೬೫/-

ಇದೊಂದು ವಿಶಿಷ್ಟ ಬಗೆಯ ಪುಸ್ತಕ. ನಗರ ತನ್ನ ಸುತ್ತಲ ಹಳ್ಳಿಗಳನ್ನು ತನ್ನೊಳಗೆ ಎಳೆದುಕೊಳ್ಳುತ್ತ ಅವುಗಳಿಗೆ ನಗರದೀಕ್ಷೆ ನೀಡಿ ಮತ್ತೂ ಬೆಳೆಯುತ್ತಲೇ ಹೋಗುತ್ತದೆ. ಇಂಥ ನಗರದೀಕ್ಷೆ ಪಡೆದ ಹಳ್ಳಿ ಸಮುದಾಯಗಳು ಇತ್ತ ಹಳ್ಳಿಯೂ ಅಲ್ಲದ ಅತ್ತ ಪಟ್ಟಣವೂ ಆಗದ ವಿಚಿತ್ರ ತಲ್ಲಣದಲ್ಲಿ ಸಿಲುಕಿ ಚಡಪಡಿಸುವ ಮನಃಸ್ಥಿತಿಗೆ ಕಾಡನಕುಪ್ಪೆಯವರು ಬರಹದ ದೀಕ್ಷೆ ತೊಡಿಸಿದ್ದಾರೆ. ಇಂತಹ ದೀಕ್ಷೆಗಳನ್ನು ನೀಡುವಾಗ ನಗರ ನಿರ್ದಯಿಯಾಗಿದೆ, ಆದರೆ ಕಾಡನಕುಪ್ಪೆ ಸಹೃದಯಿಯಾಗಿದ್ದಾರೆ. ಮೈಸೂರು ನಗರದ ಒಡಲಲ್ಲಿ ಬಸಿದುಕೊಂಡ ಕುಕ್ಕರಹಳ್ಳಿಯ ಕೆರೆ ಕುವೆಂಪು ಅವರ ಸಾಹಿತ್ಯದಲ್ಲಿ ಪ್ರವೇಶಿಸಿ ದೇವರ ರುಜುವಾಗುವ ಭಾಗ್ಯ ಪಡೆಯಿತು. ಆದರೆ ಆ ಕೆರೆಯ ಊರಿನ ಹೆಬ್ಬೆಟ್ಟಿನ ಸಹಿ ಈಗ ಇಲ್ಲಿ ಬಿದ್ದಿದೆ.

ಇಂತಹ ಪ್ರಯತ್ನಗಳೇ ನಮ್ಮಲ್ಲಿ ವಿರಳ. ಎಚ್. ವಿ. ನಾಗೇಶರ ಗ್ರಾಮಾಧ್ಯಯನ ಕುರಿತ ಪುಸ್ತಕ ಇಲ್ಲವೇ ಅಕಾಡೆಮಿ ಪ್ರಕಟಿಸಿದ ಹಳ್ಳಿ ಅಧ್ಯಯನ ಕುರಿತ ಪುಸ್ತಕಮಾಲೆ ಇತ್ಯಾದಿ ಬೆರಳೆಣಿಕೆಯಷ್ಟು ಹೊರತುಪಡಿಸಿದರೆ

ಹೇಳಿಕೊಳ್ಳುವಂತಹ ಪ್ರಯತ್ನ ಕಡಿಮೆ. ಬಂದಿರುವುದೆಲ್ಲಾ ಸೃಜನಶೀಲ ಸಾಹಿತ್ಯದ ಒಂದು ಪರೋಕ್ಷ ಭಾಗವಾಗಿ. ಪ್ರಸ್ತುತ ಶಿವರಾಮು ಕಾಡನಕುಪ್ಪೆಯವರು ಕುಕ್ಕರಹಳ್ಳಿಯ ಮನೆಯೊಂದರಲ್ಲಿ ಐದು ವರ್ಷಗಳ ಕಾಲ ವಾಸ್ತವ್ಯವಿದ್ದುದೇ ನೆಪವಾಗಿ ಅಲ್ಲಿಯ ಬದುಕು ಕನಸುಗಳ ಚಿತ್ರವನ್ನು ಕಟ್ಟಿಕೊಟ್ಟಿದ್ದಾರೆ. ತಮ್ಮ ಮೂಲಗಳನ್ನು ಮರೆಯುತ್ತ ಮೂಲದ ಅಣಕುಗಳ ಜೊತೆಗೆ ಮೇಲುಸ್ತರದಲ್ಲಿ ಬದುಕುವ ಅಲ್ಲಿಯ ಜನಜೀವನದ ಕಥೆ ಹೇಳುವ ಮೂಲಕ ಇಂತಹ ಸಾಂಸ್ಕೃತಿಕ ಸ್ಥಿತ್ಯಂತರಗಳ ಕುರಿತು ಆಲೋಚಿಸುವಂತೆ ಮಾಡಿದ್ದಾರೆ. ಹೀಗೆ ಹೇಳುವ ರೀತಿ ನಿಷ್ಪಕ್ಷಪಾತವಾಗಿರುವುದರಿಂದಲೇ ಇದರ ಮಹತ್ವ ಹೆಚ್ಚಿದೆ.

ಇಷ್ಟಾಗಿಯೂ ಇದೊಂದು ವರ್ತಮಾನದ ದಾಖಲೆಯಾಗಿರುವುದರಿಂದ ಇಲ್ಲಿಯ ಎಷ್ಟೋ ಸಂದರ್ಭಗಳು ವಿಶೇಷವಾಗಿ ತೋರುವುದಿಲ್ಲ. ಆದರೆ ಸಾಮಾಜಿಕ ಬದಲಾವಣೆಯ ಹಿನ್ನಲೆಯಲ್ಲಿ ಇವುಗಳಿಗೆ ಚಾರಿತ್ರಿಕ ಮಹತ್ವ ಪ್ರಾಪ್ತವಾಗುತ್ತದೆ. ಹಾಗಾಗಿ ಇದೊಂದು ಭವಿಷ್ಯದ ಕೃತಿ. ಸೃಜನಶೀಲ ಕಥಾನಕಗಳಲ್ಲಿ ಇಲ್ಲಿಯ ಪಾತ್ರ ಸನ್ನಿವೇಶಗಳು ಇನ್ನೂ ಪರಿಣಾಮಕಾರಿಯಾಗುತ್ತವೆ ಎಂಬುದು ನಿಜ. ಆದರ ಮುಂದೆ ಇದನ್ನು ಇಟ್ಟಾಗ ಇದು ವರದಿಯಂತಾಗುತ್ತದೆ. ಆದರೆ ಅಕಾಡೆಮಿಕ್ ವಲಯದ ಸಾಮಾಜಿಕ ಅಧ್ಯಯನದ ಮುಂದೆ ಇದನ್ನಿಟ್ಟಾಗ ಇದು ಒಂದು ಸೃಜನಶೀಲ ಪ್ರಯತ್ನದಂತೆ ಕಾಣುತ್ತದೆ. ಎಲ್ಲಕ್ಕಿಂತ ಮುಖ್ಯವಾಗಿ ನಮ್ಮ ಸನ್ನಿವೇಶದೊಳಗೆ ನಮ್ಮನ್ನೇ ಹುಡುಕಿಕೊಳ್ಳುವಂತೆ ಮಾಡುತ್ತದೆ. ಹಾಗಾಗಿಯೇ ಇದು ವಿಶಿಷ್ಟ ಬಗೆಯ ಪುಸ್ತಕ.

— ಜೆ. ಕೆ. ರವೀಂದ್ರಕುಮಾರ್, ಕಾರ್ಯಕ್ರಮ ನಿರ್ವಾಹಕ, ಆಕಾಶವಾಣಿ, ಯಾದವಗಿರಿ, ಮೈಸೂರು

ಸಂಕಲನ ೧ ರಿಂದ ೬ ರಲ್ಲಿ ಪ್ರಕಟಿತ ಸಮಗ್ರ, ಸಾಮಗ್ರಿ, ದರ್ಶನ

೧. ಕತೆ, ಮಕ್ಕಳ ಕತೆ, ಆತ್ಮಕತೆ, ಕಾದಂಬರಿ ಇತ್ಯಾದಿ :

೧. **ರಾಗಾಂತರ :** *ಟಿ. ಸಿ. ಪೂರ್ಣಿಮಾ.* ಸಂಕಲನ-೧. ಪು. ೭ - ೧೫

೨. **ಕಳೆದು ಹೋದ ಕತೆ :** *ಸಿದ್ಧಲಿಂಗ ಪಟ್ಟಣಶೆಟ್ಟಿ.* ಸಂಕಲನ-೧. ಪು. ೭೧ - ೭೯

೩. **ಒಳಗಿನ ಕಳ್ಳ :** *ವಸುಮತಿ ಉಡುಪ.* ಸಂಕಲನ-೨, ಪು. ೫ - ೯

೪. **ನೆನಪುಗಳೇ ಒಂದು ರೀತಿ :** *ಸಿ. ಜಿ. ಕೃಷ್ಣಸ್ವಾಮಿ.* ಸಂಕಲನ-೩. ಪು. ೧೭ - ೩೩

೫. **ವಸ್ತಿ :** *ಕುಂ. ವೀರಭದ್ರಪ್ಪ.* ಸಂಕಲನ-೪. ಪು. ೫ - ೧೧

೬. **ವಸಂತ :** *ಪಿ. ಜಿ. ಕುಲಕರ್ಣಿ / ಕೃ. ಶಿ. ಹೆಗಡೆ.* ಸಂ.-೪, ೬೮ - ೭೩

೭. **ಹಸಿರೆಲೆ ಗಡಿಯಾರ ಪಾಪಿನ್ಸ್ :** *ಬೇಲೂರು ಸುದರ್ಶನ.* ಸಂಕಲನ-೫. ಪು. ೫ - ೮

೮. **ಶಿರಚ್ಛೇದ :** *ಹಂಝು ಮಲಾರ್.* ಸಂಕಲನ-೬, ಪು. ೫ - ೮

೨. ಲಲಿತ, ಸುಗಂಧ, ಸಂ-ಪ್ರಬಂಧ, ಸತ್ಯ, ನೆನಪು :

೧. **ಮನೆಯು ಆಫೀಸಿನೊಳಗೊ ಆಫೀಸು ಮನೆಯೊಳಗೊ ? :** *ಚಂದ್ರಶೇಖರ ವಸ್ತ್ರದ* ಸಂ.-೧. ಪು. ೧೬ - ೨೦

೨. **ಫಂಡಮೆಂಟಲ್ ಡಿಸೀಸ್ :** *ಮ. ಸು. ಕೃಷ್ಣಮೂರ್ತಿ.* ಸಂಕಲನ-೨, ಪು. ೧೦ - ೧೪

೩. **ದುಂಡು ಮಲ್ಲಿಗೆ ದಂಡೆ :** *ಸುಮಂಗಲಾ ಬಾದರದಿನ್ನಿ.* ಸಂಕಲನ-೩. ಪು. ೫ - ೮

೪. **ಹೀಗೊಂದು ಲಾಟರಿ ಹೊಡೆದದ್ದು :** *ನಿರಂಜನ ವಾನಳ್ಳಿ.* ಸಂಕಲನ-೩. ಪು. ೧೪ - ೧೬

೫. ಶುನಕಗಳ ಹಂದಿ ಶಿಕಾರಿ : ಈರಪ್ಪ ಎಂ. ಕಂಬಳಿ. ಸಂಕಲನ-೪. ಪು. ೧೨ - ೧೪
೬. ಕವಿನಿಂದನೆ ಮತ್ತು ಕವಿಕುಲದೂಷಣೆ : ಶ್ರೀನಿವಾಸ ಹಾವನೂರ. ಸಂಕಲನ-೫. ಪು. ೮ - ೧೭
೭ ಅಳಕೋತ ನಕ್ಕಾರ : ಪರಮೇಶ್ವರ ಪುರಾಣಿಕ. ಸಂಕಲನ-೬. ಪು. ೮ - ೧೧

೩. ಏಕಾಂಕ, ನಾಟಕ :

೧. ಭಾಷ್ಟಿಗೆ : ರಾ. ಕ. ನಾಯಕ. ಸಂಕಲನ-೧. ಪು. ೦೦
೨. ಬೆಳಕು ಹಂಚಿದ ಬಾಲಕ : ಆರ್. ವಿ. ಭಂಡಾರಿ. ಸಂಕಲನ-೨. ಪು. ೨೦ - ೩೫
೩. ನಿರ್ಲಜ್ಜ ಸದಾ ಸುಖಿ : ಎನ್. ರಾಘವನ್. ಸಂಕಲನ-೩. ಪು. ೩೪ - ೪೧
೪. ಬೆಳ್ಳಕ್ಕಿಗಳ ಲೋಕದಲ್ಲಿ : ರಾಘವೇಂದ್ರ ಪಾಟೀಲ/ಶಿರೀಷ ಜೋಶಿ. ಸಂಕಲನ-೪. ಪು. ೧೫ - ೩೬
೫. ಗಾಳಿಯ ಉಡುಗೊರೆ : ಜಿ. ಜೆ. 'ಹರಿಜಿತ್'. ಸಂಕಲನ-೫. ಪು. ೧೮ - ೩೧
೬. ಅಟಿಲಾನ ಅಂತಃಕರಣ : ಶ್ರೀನಿವಾಸ್ ವಿ. ಸುತ್ರಾವೆ. ಸಂಕಲನ-೬. ಪು. ೧೪ - ೨೭

೪. ಲೇಖನಗಳು :

೧. ಸ್ನೇಹಿತ ಲಂಕೇಶ : ಸುಮತೀಂದ್ರ ನಾಡಿಗ. ಸಂಕಲನ-೧. ಪು. ೩೨ - ೪೨
೨. ಶಾಂತಿನಾಥ ದೇಸಾಯಿ ಅವರ ಕತೆ 'ಕ್ಷಿತಿಜ' : ಪ್ರಹ್ಲಾದ ಅಗಸನಕಟ್ಟೆ. ಸಂ.-೧. ಪು. ೪೩ - ೪೭
೩. ಪ್ರಸನ್ನರ ಕಾವ್ಯ : ಕಮಲಾ ಹಮ್ಮಿಗೆ. ಸಂಕಲನ-೧. ಪು. ೪೮ - ೫೪
೪. ನಲವಡಿ ಶ್ರೀಕಂಠಶಾಸ್ತ್ರಿಗಳ 'ಹೇಮರಡ್ಡಿ ಮಲ್ಲಮ್ಮ' : ರಾಮಕೃಷ್ಣ ಮರಾಠೆ. ಸಂ.-೧. ಪು. ೬೧ - ೬೭

•

೧. ಖಾಸಗೀಕರಣ ಮತ್ತು ಅವಕಾಶವಂಚಿತರು : ಮೂಡ್ನಾಕೂಡು ಚಿನ್ನಸ್ವಾಮಿ. ಸಂಕಲನ-೨. ಪು. ೧೫ - ೧೮
೨. ಪರಂಪರೆ, ಸಾತತ್ಯ, ಸಾಹಿತ್ಯ ಚರಿತ್ರೆ ಇತ್ಯಾದಿ : ಸಿ. ಎನ್. ರಾಮಚಂದ್ರನ್. ಸಂ.-೨. ಪು. ೩೭ - ೪೬
೩. ಕುವೆಂಪು ಕಾವ್ಯದಲ್ಲಿ ಸ್ತ್ರೀ : ಪದ್ಮಾ ಶಿವರುದ್ರಪ್ಪ. ಸಂಕಲನ-೨. ಪು. ೪೭ - ೫೨
೪. ಗರುಡಸದಾಶಿವರಾಯರ 'ಶ್ರೀರಾಮಪಾದುಕಾಪಟ್ಟಾಭಿಷೇಕ' : ಬಸವರಾಜ ಜಗಜಂಪಿ.ಸಂ.-೨.ಪು. ೫೩ - ೫೫
೫. ಯು. ಆರ್. ಅನಂತಮೂರ್ತಿಯವರ 'ದಿವ್ಯ' : ಮಾಧವ ಕುಲಕರ್ಣಿ. ಸಂಕಲನ-೨. ಪು. ೬೬ - ೭೪
೬. ಗೊರೂರರ ಸಾಹಿತ್ಯದಲ್ಲಿ ಸಾಮಾಜಿಕ ಸಂಘರ್ಷ : ಜಯದೇವಪ್ಪ ಜೈನಕೇರಿ. ಸಂಕಲನ-೨. ಪು. ೭೫ - ೭೮

•

೭. ಕೇಳಿಕೆ : ಎಸ್. ಎಸ್. ಹಿರೇಮಠ. ಸಂಕಲನ-೩, ಪು. ೪೧ - ೪೭
೮. ಬೇಂದ್ರೆಯವರ 'ಅದಕು ಇದಕು ಎದಕು' : ಬಸವರಾಜ ಸಾದರ. ಸಂ.-೩. ಪು. ೪೭ - ೫೧
೯. ಮೆಟ್ಯಾಫಿಜಿಕಲ್ ಕಾವ್ಯ : ಜಿ. ಬಿ. ಸಜ್ಜನ. ಸಂಕಲನ-೩. ಪು. ೫೨ - ೫೭
೧೦. ಪಿ. ಬಿ. ಧುತ್ತರಗಿಯವರ 'ಮಲಮಗಳು' : ಮಲ್ಲಿಕಾರ್ಜುನ ಕುಂಬಾರ. ಸಂಕಲನ-೩. ಪು. ೫೭ - ೬೩
೧೧. ಕೃತಿ ಮೂಲ ಕಲಿಸುವ ಕ್ರಮ : ಪ್ರಭುಪ್ರಸಾದ. ಸಂಕಲನ-೩. ಪು. ೭೧ - ೭೫

•

೧೨. ಭಾರತೀಯ ಸಂಸ್ಕೃತಿ : ಮನು ಬಳಿಗಾರ್. ಸಂಕಲನ-೪. ಪು. ೪೦ - ೪೭
೧೩. ಸಾಹಿತ್ಯ ಭಾಷೆ : ತಾಳ್ತಜೆ ವಸಂತಕುಮಾರ. ಸಂಕಲನ-೪. ೪೭ - ೫೪
೧೪. ಪರ್ಯಾಯ ಸಮ್ಮೇಳನ : ದಿವಸ್ಪತಿ ಹೆಗಡೆ. ಸಂಕಲನ-೪. ೬೩ - ೬೪

•

೧೫. ಭಾಷಾಂತರ ಪ್ರಕ್ರಿಯೆ ಮತ್ತು ಕುಶಿಯವರ ಅನುವಾದ ಸಾಹಿತ್ಯ :
ಸಿ. ಎನ್. ರಾಮಚಂದ್ರನ್. ಸಂಕಲನ-೫. ಪು. ೩೨ - ೩೯ + ಸಂಕಲನ-೬. ಪು. ೩೩ - ೩೮
೧೬. ಸ್ತ್ರೀವಾದದ ಕಾಲ ಮುಗಿಯಿತೆ ? : ಎಸ್. ವಿ. ಪ್ರಭಾವತಿ. ಸಂಕಲನ-೫. ಪು. ೩೯ - ೪೪
೧೭. ಕಾರಂತರ ಕಾದಂಬರಿಗಳಲ್ಲಿ ಮಹಿಳೆ : ಸ. ಉಷಾ. ಸಂಕಲನ-೫. ಪು. ೪೫ - ೪೯

೧೮. **ಬಾಳಾಸಾಹೇಬ ಲೋಕಾಪುರ ಅವರ ಕಾದಂಬರಿ 'ಹುತ್ತ' :**
ಬಿ. ಎಂ. ಶರಭೇಂದ್ರಯ್ಯ. ಸಂಕಲನ-೫. ಪು. ೪೯ - ೫೩ + ಸಂಕಲನ-೬. ಪು. ೩೯ - ೪೪

೧೯. **ಎನ್ಕೆ ನಾಟಕಗಳು :**
ಮಂದಾಕಿನಿ ಪುರೋಹಿತ. ಸಂಕಲನ-೫. ಪು. ೫೩ - ೫೮ + ಸಂಕಲನ-೬. ಪು. ೪೪ - ೫೭

೨೦. **ಹಿಂದೂ ಮುಸ್ಲಿಂ ಸಂಬಂಧಗಳು, ಧಾರ್ಮಿಕ ಸಹಬಾಳ್ವೆ ಹಾಗೂ ಜಾನಪದ : ಕೆಲವು ವಿಚಾರಗಳು :**
ಟಿ. ಎಸ್. ಸತ್ಯನಾಥ್. ಸಂಕಲನ-೫. ಪು. ೬೪ - ೭೨ + ಸಂಕಲನ-೬. ಪು. ೫೭ - ೬೮

•

೨೧. **ಬೃಹದಾರಣ್ಯಕಕ್ಕೊಂದು ಕಾಲುದಾರಿ :** *ರಾಮಚಂದ್ರ ದೇವ.* ಸಂಕಲನ-೬. ಪು. ೨೯ - ೩೩

೨೨. **ವೇದಪ್ರಣೀತ ಸನ್ನಿವೇಶವೊಂದರ ಸುತ್ತ :** *ಅರವಿಂದ ಚೊಕ್ಕಾಡಿ.* ಸಂಕಲನ-೬. ಪು. ೬೮ - ೭೫

೫. ವಿಹಂಗಮ ದೃಷ್ಟಿ :

೧. **ಸಿದ್ಧಲಿಂಗಯ್ಯನವರ 'ಊರುಕೇರಿ' :**
ಸುಕನ್ಯಾ ಮಾರುತಿ + ಜಿ. ಕೆ. ರವೀಂದ್ರಕುಮಾರ್. ಸಂಕಲನ-೧. ಪು. ೫೫ - ೬೦

೨. **ಎಸ್. ಎಲ್. ಭೈರಪ್ಪನವರ 'ಭಿತ್ತಿ' :**
ಶ್ಯಾಮಸುಂದರ ಬಿದರಕುಂದಿ + ಶಾಂತಾ ಇಮ್ರಾಪುರ. ಸಂಕಲನ-೨. ಪು. ೫೭ - ೬೪

೩. **ಜೋಳದರಾಶಿ ದೊಡ್ಡನಗೌಡರ 'ನಂದೇ ನಾನೋದಿದೆ' :**
ಪ್ರಸನ್ನ + ಸಂಪಿಗೆ ತೋಂಟದಾರ್ಯ. ಸಂಕಲನ-೩, ಪು. ೬೩ - ೭೧

೪. **ಅನುಪಮಾ ನಿರಂಜನ ಅವರ 'ನೆನಪು : ಸಿಹಿ - ಕಹಿ' :**
ಶಿವಶಂಕರ ಹಿರೇಮಠ + ಅಪ್ಪಾಸಾಹೇಬ ಸನದಿ. ಸಂಕಲನ-೪, ಪು. ೫೪ - ೬೨

೫. **ಕೆರೆಮನೆ ಶಿವರಾಮ ಹೆಗಡೆಯವರ 'ನೆನಪಿನ ರಂಗಸ್ಥಳ' :**
ಜಿ. ಟಿ. ಶ್ರೀಧರ ಶರ್ಮ + ಜಿ. ಎಂ. ಹೆಗಡೆ. ಸಂಕಲನ-೫, ಪು. ೫೮ - ೬೩

೬. ಕವಿತೆಗಳು :

೧. **ತ್ರಿಶೂಲ :** *ತೋಂಟದ ಸಿದ್ಧಲಿಂಗ ಸ್ವಾಮಿಗಳು.* ಸಂಕಲನ-೧. ಪು. ೬೮

೨. **ಮಗು ಮಲಗಿದೆ ಎದೆಯ ಮೇಲೆ :** *ಎಂ. ಡಿ. ಒಕ್ಕುಂದ.* ಸಂಕಲನ-೬. ಪು. ೬೯ - ೭೦

•

೩. **ಹರೆಯದಗ್ನಿಧಾಮ :** *ದೊಡ್ಡರಂಗೇಗೌಡ.* ಸಂಕಲನ-೨. ಪು. ೯

೪. **ರತಿಗೀತಗಳು : ೧. ಗುಟ್ಟು, ೨. ಗಜಲ್, ೩. ಬಿಡಿ ದ್ವಿಪದಿಗಳು**
ಭಾರತಿ ಮೋಹನ ಕೋಟಿ. ಸಂಕಲನ-೨. ಪು. ೧೮ - ೧೯

೫. **ಸೇಡು :** *ತುರುವೀಹಾಳ ಚಂದ್ರು.* ಸಂಕಲನ-೨. ಪು. ೩೬

೬. **ಅಗ್ನಿಕಾಂಡ :** *ಜಗದೀಶ ಮಂಗಳೂರಮಠ.* ಸಂಕಲನ-೨. ಪು. ೬೫

•

೭. **ನಾನು - ನೀನು :** *ಎಸ್. ವಿ. ಪ್ರಭಾವತಿ.* ಸಂಕಲನ-೩, ಪು. ೮ - ೧೦

೮. **ಕನಸು ಕಾಣಬೇಡ :** *ದ್ವಾರಕಾನಾಥ್ ಹೆಚ್. ಕಬಾಡಿ.* ಸಂಕಲನ-೩. ಪು. ೧೦ - ೧೧

೯. **ಅಯ್ದು ಕವಿಕಂದ ವಚನಗಳು :** *ಎಂ. ಪಿ. ರಮೇಶ.* ಸಂಕಲನ-೩. ಪು. ೧೨ - ೧೩

೧೦. **ನೊಂದವರ ಹಾಡು :** *ಕಲ್ಲೇಶ್ ಕುಂಬಾರ್.* ಸಂಕಲನ-೩. ಪು. ೧೩

೧೧. **ನನ್ನೂರು :** *ಮಹಾಂತಪ್ಪ ನಂದೂರು.* ಸಂಕಲನ-೩. ಪು. ೭೬

೧೨. **ನೆನಪಿದೆ :** *ಕೆ. ಶರಣಪ್ಪ 'ನಿಡಶೇಸಿ ' ಶನಿ '.* ಸಂಕಲನ-೩. ಪು. ೭೭

೧೩. **ಅವಳು ಕವಿತೆ :** *ವಿಜಯಕಾಂತ ಪಾಟೀಲ.* ಸಂಕಲನ-೩. ಪು. ೭೮

•

೧೪. ನಾನೇನಾ : ಸಿ. ಎಂ. ನರಸಿಂಹಮೂರ್ತಿ. ಸಂಕಲನ-೪. ಪು. ೧೧
೧೫. ಪ್ರೀತಿ ಅಂದ್ರೆ : ಸಂತೇಬೆನ್ನೂರು ಫೈಜ್ನಟ್ರಾಜ್. ಸಂಕಲನ-೪. ಪು. ೩೬
೧೬. ಭರತೋದಯ : ಎಚ್. ಎಂ. ನಾಗರಾಜರಾವ್. ಸಂಕಲನ-೪. ಪು. ೩೭ - ೩೯
೧೭. ಸ್ನಾನ : ಎಫ್. ಅಸದುಲ್ಲಾ ಬೇಗ್, ಸಂಕಲನ-೪. ಪು. ೬೫
೧೮. ನಿರಂತರ : ರಾಜು ಹೆಗಡೆ. ಸಂಕಲನ-೪. ಪು. ೬೫ - ೬೬
೧೯. ಕೊಲ್ಲುವರು ಜೋಕೆ : ಸುಮಿತ್ರಾ ದುಂಡಪ್ಪ ಕುಂಬಾರ. ಸಂಕಲನ-೪. ಪು. ೬೬
೨೦. ನಿಷ್ಠಿಯ ಮೂರು ವಚನಗಳು : ನಿಷ್ಠಿ ರುದ್ರಪ್ಪ. ಸಂಕಲನ-೪. ಪು. ೬೭
೨೧. ಹನಿ ಹನಿ ಹನಿ : ಮ. ಕೃ. ಮೇಗಾಡಿ. ಸಂಕಲನ-೪. ಪು. ೭೩

•

೨೨. ಪಂಚಾರತಿ : ಕೆ. ಪಿ. ಮೃತ್ಯುಂಜಯ. ಸಂಕಲನ-೬. ಪು. ೧೦ - ೧೩

೭. ಪುಸ್ತಕ ಪರಿಶೀಲನೆ :

೧. ಮಾಸ್ಟರ್ ಬಿಲ್ಡರ್ : ಶ್ರೀನಿವಾಸ ಸುತ್ರಾವೆ : ರಾಮಚಂದ್ರ ದೇವ, ಸಂಕಲನ-೪. ಪು. ೭೪ - ೭೫
೨. ನಮ್ಮ ಹೆಮ್ಮೆಯ ಸಾಹಿತಿ ಯು. ಆರ್. ಅನಂತಮೂರ್ತಿ : ಮಾನಸ : ಸಾಬು, ಸಂಕಲನ-೪. ಪು. ೭೫
೩. ನೆನೆದದ್ದು ಹೆಚ್ಚಾಗಿ : ಹರಿಯಪ್ಪ ಪೇಜಾವರ : ಜಿ. ಕೆ. ರವೀಂದ್ರಕುಮಾರ್, ಸಂಕಲನ-೪. ಪು. ೭೬ - ೭೭
೪. ಪ್ರಿನ್ಸಿಪಲ್ ಪರಶುರಾಂ : ಪಾರ್ವತಿ ಜಿ. ಐತಾಳ : ಯತ್ನಳ್ಳಿ ಮಂಜು, ಸಂಕಲನ-೪. ಪು. ೭೭

•

೪. ಮೊದಲ ಸಿರಿ : ಲಲಿತಾ ಸಿದ್ದಬಸವಯ್ಯ : ಚಂದ್ರಶೇಖರ ವಸ್ತ್ರದ, ಸಂಕಲನ-೫. ಪು. ೭೩ - ೭೪
೫. ನಾಯಿದೇವರು : ಶೈಲಾ ಛಬ್ಬಿ : ಯತ್ನಳ್ಳಿ ಮಂಜು. ಸಂಕಲನ-೫. ಪು. ೭೪
೬. ಕಾಡುನೆಲದ ಕಾಲಮಾನ : ಶಿವಾನಂದ ಕಳವೆ : ರಾಮಚಂದ್ರದೇವ, ಸಂಕಲನ-೫. ಪು. ೭೪ - ೭೬
೭ ಸಂಸ್ಕೃತದಲ್ಲಿ ಗಂಗಾಸ್ತೋತ್ರಗಳು : ವೇಣೀಮಾಧವಶಾಸ್ತ್ರೀ ಜೋಶಿ : ಮಧುಸೂದನಶಾಸ್ತ್ರೀ ಹಂಪೀಹೊಳಿ, ಸಂಕಲನ-೫. ಪು. ೭೬ - ೭೭
೮. ಮಹಾರಾಷ್ಟ್ರ-ಕರ್ನಾಟಕ ಸಾಂಸ್ಕೃತಿಕ ಅನುಬಂಧ : ಅ.ರಾ.ತೋರೊ : ಅಮೃತ ಯಾರ್ದಿ.ಸಂ.-೫. ಪು. ೭೭ - ೭೮

•

೯. ಹಕ್ಕಿಗೊಂದಿಷ್ಟು ಜಾಗಬಿಡು : ಮೀನಾ ಸದಾಶಿವ : ಜಿ. ಕೆ. ರವೀಂದ್ರಕುಮಾರ್, ಸಂ.-೬. ಪು. ೭೬
೧೦. ನೂರುಹನಿ ಒಂದುಹೂ : ಮೀನಾ ಸದಾಶಿವ : ಜಿ. ಕೆ. ರವೀಂದ್ರಕುಮಾರ್, ಸಂಕಲನ-೬. ಪು. ೭೭
೧೧. ಮರಗುಮರೆ : ಅನು.ಗುರುಮೂರ್ತಿ ಪೆಂಡಕೂರು : ಜಿ.ಕೆ. ರವೀಂದ್ರಕುಮಾರ್, ಸಂ.-೬. ಪು. ೭೭ - ೭೮
೧೨. ಅರ್ಥಶೋಧ : ಅರವಿಂದ ಚೊಕ್ಕಾಡಿ : ಶಿವಶಂಕರ ಹಿರೇಮಠ. ಸಂಕಲನ-೬. ಪು. ೭೯
೧೩. ಸಂಸ್ಕೃತಿಚಂದನ : ಜಯದೇವಪ್ಪ ಜೈನಕೇರಿ : ವಿಜಯಾದೇವಿ, ಸಂಕಲನ-೬. ಪು. ೭೯

೮. ಕಡೀಪುಟ : ಸಿದ್ಧಲಿಂಗ ಪಟ್ಟಣಶೆಟ್ಟಿ

೧. ನಾನು ಬಿಟ್ಟೇನಂದರೂ.... ಸಂಕಲನ-೪, ಪು. ೮೦
೨. ಒಬ್ಬ ಗೆಳೆಯರು ಫೋನಿಸಿ.... ಸಂಕಲನ-೫, ಪು. ಆವರಣ ೩
೩. ಉಪ್ಪು ಉಂಡಾವ್ನ.... ಸಂಕಲನ-೬. ಪು. ಆವರಣ ೩

• • •

ಕಡೀ ಪುಟ : ಸಿದ್ಧಲಿಂಗ ಪಟ್ಟಣಶೆಟ್ಟಿ

ನಮ್ಮಪ್ಪ ನನ್ನ ನಾಲಿಗೀ ಮ್ಯಾಲ ತೊದಲು ತುಳಕ್ಯಾಡೂ ಹೊತ್ತಿನ ತನಕಾ ಬದುಕಿ ಇದ್ದಿದ್ದನಂದರ ಅವನೂ ನನಗ ನಾಕ ಬುದ್ಧೀ ಮಾತು ಹೇಳತಿದ್ದನೋ ಏನೋ. ನನ್ನ ತೊದಲಿನ ಉಗುಳಿನ ನಂಜಿಗೆ ಹೆದರಿದನೋ. ಏನ್ ತನ್ನ ಉಸಿರಿನ ತ್ರಾಸಿಗೆ ಹೆದರಿ ಸಾವಿನ ಕಳ್ಳ ಹುದಲಾಗ ಸಿಕ್ಕೊಂಡ ಬಿಟ್ಟನೋ. ಅಂತೂ ಏನೋ ಆಗಿ ನಾನು ದೀಡ-ಎರಡ ವರ್ಷದಾವ್ನ ಇದ್ದಾಗನ್‌ಅಿ ಹೋದ. ಕಳಸಾ ಇಟ್ಟು ಸಿಂಗಾರ ಮಾಡಿದ ಸಿದಗೀ ನಡುವ ನಮ್ರವದನನಾಗಿ ತಲೀ ತಗ್ಗಿಸಿ ಶಾಂತ ರೀತೀಲೆ ಕುಂತಗೊಂಡು ನಾಕ ಮಂದೀ ಹೆಗಲ ಮ್ಯಾಲ ಹೋಗಿಬಿಟ್ಟ. ನನ್ನ ನೆನಪಿನ ಇತಿಹಾಸದ ಅಲ್ಬಮ್ಮಿನ ಮೊಟ್ಟಮೊದಲನೇ ಫೋಟೋ ಇದು.

ನಂತರದ ದಿನಗಳಲ್ಲಿ ಪ್ರತಿ ದಿವ್ನಸ ನಸುಕಿನ್ಯಾಗ ಉಸಿರಾಟದ ಒನ್ನೇ ಪುಟಾ ತೆಗೆದ ಕೂಡಲೇ ಕಾಣುವ ಈ ಫೋಟೋ ನೋಡೂದರಾಗ ನಾಕ ಮಾರು ಹೊತ್ತು ಏರಿರತಿತ್ತು. ಹೊಟ್ಟೀ ಹ್ವಾರೇಕ ಹೊರಡತಿದ್ದೆ. ಮತ್ತ ರಾತ್ರೀ ಹೊತ್ತಿಗೆ ದಣದ ಮನಿಗೆ ಬಂದಾಗ. ಮತ್ತ ಒನ್ನೇ ಪುಟಾ ನೋಡಕೊಂತ ದಿನಾ ಹೆಂಗ ಕಳೀತು ಅಂತ ಯೋಚಿಸುವಷ್ಟರಾಗ. ಆ ದಿನಾ ತನ್ನ ನಾಕ ಮೂಲೀ ಮನೀ ಸೇರಿಬಿಡತಿತ್ತು. ನಿದ್ದಿಯ ಸಮಾಧಾನದ ಸಾವು ಸಾವರಿಸಿ ಬಿಡತಿತ್ತು. ಹಿಂಗಾಗಿ ಆ ಅಲ್ಬಮ್ಮಿನ ಉಳಕೀ ಪುಟಗಳನ್ನ ತಗದ ನೋಡಾಕ ವ್ಯಾಳ್ಯೆ ಸಿಗದ್ಹಂಗಾಗೇತಿ. ನಾ ಇನ್ನೂ ತನಕಾ ಒನ್ನೇ ಪುಟದಾಗ್‌ಅಿ ಉಳದೇನಿ. ಒನ್ನೇ ಫೋಟೋದಾಗ್‌ಅಿ ಮುಳಗೇನಿ.

ಅಪ್ಪ ಹ್ವಾದ ಮ್ಯಾಲ ಅವ್ವನ ಜಾಗಾದಾಗ ನಮ್ಮವ್ವನ್‌ಅಿ ನಿಂತ್ಲು. ಅಕಿನ್‌ಅಿ ಇಷ್ಟ ದಿವ್ನಸ ನನಗ ನಾಕ ಬುದ್ಧೀ ಮಾತು ಹೇಳಿಕೊಂತ ಬಂದ್ಲು. ಪಾಪ. ಏನೂ ಕಲೀಲಾರದ ಹಳ್ಳೀ ಮುಕ್ಕ. ನಮ್ಮವ್ವಗ ನಾಕ ಮಾತಷ್ಟ್‌ಅಿ ಗೊತ್ತಿದ್ದುವು. ಅವು ಬುದ್ಧೀ ಮಾತು ಅಂತ ಅಕಿಗೆ ತಿಳದಿರಲಿಲ್ಲ. ನನಗ ಹೊಳದಿರಲಿಲ್ಲ. ಅವ್ವ ಮ್ಯಾಲಿಂದ ಮ್ಯಾಲ ಹೇಳತಿದ್ಲು. 'ಮಗನ್‌ಅಿ. ನಾಕ ಮಂದಿನ್ನ ಹಚಗೊಂಡಿರಬೇಕಪಾ. ಹೊತ್ತು ವ್ಯಾಳ್ಯೆ ಗೊತ್ತು ಗುರಿ ನಮ್ಮ ಕೈಯಾನ ಮಾತಲ್ಲ. ನಾಕ ಮಂದಿ ಇದ್ದರ ನಾಕ ಲೋಕಾ ಗೆದ್ಹಂಗ. ನಾಕ ನಮೂನಿ ನೆಲಿ ಸಿಗತಾವು. ಇಲ್ಲದಿರಕ ನಾಕ ಮೂಲೀ ನೆಲಾ ಹುಡುಕಬೇಕಾಕ್ಕತಿ. ಅದಕ್ಕ ನಾಕ ಮಂದಿ ಬೇಕಾಕ್ಕತೆಪಾ'. ಅಂತಿದ್ಲು. ತಿರತಿರಗೆ ನಾಕ ಮಂದಿ ನಾಕ ಮಂದಿ ಅಂತೀ. ಏನಬೇ ಹಂಗಂದರ ? ಯಾರವರು ?– ಅಂತ ನಾನೂ ಒಂದ ಸರ್ತೆ ಕೇಳಿಬಿಟ್ಟೆ. 'ನನಗರ ಏನ ಗೊತ್ತೋ ಮಗನ ? ನಮ್ಮಪ್ಪ ನಮ್ಮವ್ವನೂ ನನಗ ಹಿಂಗ್‌ಅಿ ಹೇಳತಿದ್ರು. ನಮ್ಮ ಹಿರ್‍ಯಾನೂ ಹಿಂಗ್‌ಅಿ ಹೇಳತಿದ್ದ. ಅದನ್ನ್‌ಅಿ ನಿನಗ ಹೇಳತೇನಿ. ಈಗ ನೋಡು. ಅವರು ನಾಕ ಮಂದಿನ್ನ ಹಚಗೊಂಡಿದ್ದರು. ಅಂತ್ಹೇಳೆ. ನಾಕ ಮಂದಿ ಎಂಥಾ ಸಿಂಗಾರ ಮಾಡಿದರು. ಹಾದಿಗುಂಟ ಹಡದಿ ಹಾಸಿದರು. ನಾಕ ಭಜನೀ ಪದಾ ಹೇಳಿದರು. ಹಾಡಿ ಹರಸಿ ಹೊತಗೊಂಡು ಹ್ವಾದರು....' ಅವ್ವನ ಕಣ್ಣಾಗ ಹನಿ ತುಂಬಿದುವು. ನನಗೂ ಸ್ವಲ್ಪ ತ್ರಾಸ ಆದಂಗಾತು. ಆದರ ಅವ್ವನ ನಾಕ ಮಾತ ಕೇಳಿದ್ದಕ್ಕ ಮನಸಿಗೆ ತಂಪಾತು.

ಖರೆ ಅಯ್ತಿ. ನಾಕ ಮಂದಿನ್ನ ಹಚಗೋಬೇಕಾಕ್ಕತಿ. ನಾಕ್‌ಅಿ ಮಂದಿಗೆ ಒಜ್ಜೆ ಆಗೂದುನ್ನ ಕಡಿಮಿ ಮಾಡಬೇಕಂದರ ನಾಕ್ನಾಕ ನಾಕ್ನಾಕ ಮಂದಿನ್ನ ಹಚಗೋಬೇಕಾಕ್ಕತಿ. ಅವ್ವ ಹೇಳಿದ ಆ ನಾಕ ಮಂದಿನ್ನ ಅವತ್ತಿಂದ ಪ್ರತಿ ದಿವಸ ಕಣ್ಣ ಮುಂದ ಕಾಣುವ ಪ್ರತಿಯೊಬ್ಬನ ಕಣ್ಣಾಗೂ ಹುಡುಕಾಕ್ಹತ್ತಿದೆ. ಈಗಲೂ ಹುಡಕ್ಕೊಂತನ್‌ಅಿ ಅದೇನಿ.

ಒಮ್ಮೆ ಗದುಗಿನ ತೋಂಟದ ಮಠದ ನನ್ನ ಗುರುಗಳ ಮುಂದ. ಎಷ್ಟೋ ದಿನದಿಂದ ಇಟಗೊಂಡಿದ್ದ ನಾಕ ಮಡಕೀ ಚೀಟಿ ಬಿಚ್ಚಿದೆ. ಅವ್ವ ಹಿಂಗಂತಿದ್ಲು ಅಂದೆ. 'ಹೌದು. ಆ ನಾಕನ್ನೂ ನಾವು ಬಿಡೂತನಕಾ. ನಾಕೂ ನಮ್ಮನ್ನ ಬಿಡೂತನಕಾ ನಾಕನ್ನ ಹಚಗೊಳ್ಳೂದು ಅನಿವಾರ್ಯ. ನಮ್ಮ ಜೀವನದ ಪ್ರತಿಯೊಂದು ದಿನಾ ನಾ ಧಿ ನ್ನಾ ನಾ ಧಿ ನ್ನಾ ಅನಕೋಂತ ಹೆಣಾ ಆಕ್ಕತಿ. ಬದುಕು ಬಣಬಣಾ ಒಣಒಣಾ ಅನಸಬಾರದು. ಅದಕ್ಕ ಸರತೀ ಪ್ರಕಾರ ಬಂದು ಮತ್ತ ಪಾಳೇದಾಗ ನಿಂತಂಥ ಮರುದಿನದ ಸಿದಗಿಯೊಳಗ ಆ ದಿನದ ಹೆಣವನ್ನ ನಾಕ ಮಂದಿ ಹೊತ್ತೊಯ್ಯುವ ಕೆಲಸ ದಿನಾ ನಡದಿರತಯ್ತಿ. ದಿನಾ ಖಾಲಿ ಆಗಬೇಕು. ಸ್ವಚ್ಛ ಆಗಬೇಕು. ಮುಗೀಬೇಕು. ಇಂಥಾ ವಿಚಾರ ನಮಗ ಮುಗಿಬೀಳಬೇಕು ಅಂತ ಅವ್ವ ಅಂದಿರಬೇಕು....' ಅಂದರು. ಅವ್ವನೊಳಗ ಈ ಗುರುಗಳಿದ್ದರೋ ಈ ಗುರುಗಳೊಳಗ ಅವ್ವ ಕುಂತಿದ್ದಳೋ ತಿಳೀಲಿಲ್ಲ.

ಅವತ್ತು ಗುರುಗಳು ನಾಕ ದಿಕ್ಕು ತೋರಿಸಿದ್ದರು. ನಾಕ ಕಡೆ ಬೆಳಕ ಹಚ್ಚಿದ್ದರು. ಹಂಗಾರ ನಾಕ ಅನ್ನೂದು ಅಷ್ಟ ಮಹತ್ವದ್ದೇನ್ರಿ ಅಂದೆ. ಹೌದು. ನರಕಕ್ಕಿಂತ ನಾಕ ಪಾಲು ಮ್ಯಾಲಿಂದು ಈ ನಾಕ ಅಂತ ನಕ್ಕರು. ಇನ್ನ ಹೆಚ್ಚಿಗಿ ಮಾತಾಡಿಸಿದರ ಗುರುಗಳು ಹೊಸ ಹೊಸಾ ನಾಕದ್ವಾರಗಳನ್ನ ತೆರೆದು ತೋರಸಾಕ್ಹತ್ತಿಬಿಡಬಹುದು. ಆಗ ಯಾವ ಬಾಗಲದಾಗ ಯಾವ ಗದ್ದಿಗ್ಯಾಗ ಕಾಲು ಮಡಚತಾವ್ರೋ ತಿಳಿಯೂದಿಲ್ಲ ಅಂತ ಸಾವಕಾಶ ಎದ್ದೆ. ಎರಡಲ್ಲ. ನಾಕ ಕೈಯಾಗಿ ನಮಸ್ಕರಿಸಿದೆ. ನಿರುಂಬಳ ಆದೆ. ನಾಕ ಕಾಲಾಗಿ ಹೊರಗ ಬಂದೆ.

ಬದುಕು. ಜೀವನ. ಸಂಸಾರ ಮುಂತಾದುವು ಒಗ್ಗಾಲಿ. ಮುಗ್ಗಾಲಿ. ಮುಂಗಾಲಿ ಆದಾಗ ನಾಕ ಕಾಲುಗಳ ಪ್ರಾಣ - ಜೀವ ಆಗೂದ್‌ಅ ಸೂಕ್ತ ಅನಿಸ್ತು. ಪ್ರಾಣಿಗಳು ಅನಿಸಿಕೊಳ್ಳುವ ಪಶುಗಳಿಗಿರುವ ತಿಳಿವಳಿಕಿ. ಸುಖಾ. ನೆಮ್ಮದಿ. ಸಮಾಧಾನ ಪ್ರಾಣಿ ಆಗಿದ್ದರೂ ಮನಶ್ಯಾ ಅನಕೊಳ್ಳುವ ದೇಹದೊಳಗ ಎಲ್ಲಿರತಯ್ತಿ.... ನಮ್ಮ ಮನ್ಯಾಗ ಕಂಬಳಿ. ಕುತನಿ. ಮರಿ. ಕರಿ ಅಂತ ಹೆಸರಿನ ನಾಕ ಬೆಕ್ಕ ಅದಾವು. ಅದರಾಗ ನನ್ನ ಪ್ರೀತಿಯ ಕಂಬಳೆಂತೂ ದಿನಾ ನನ್ನ ಕೂಡ ನಾಕ ಮಾತರ ಆಡಲೇ ಬೇಕು. ಅದು ತನ್ನ ಸಹಜ ಧರ್ಮ ಮತ್ತು ಅನಾಯಾಸ ಜ್ಞಾನದಿಂದ ನನಗ ನಾಕರ ಮಗ್ಗೀ ಕಲಿಸೇತಿ. ನಾಕರ ಸುಗ್ಗೀ ನೀಡೇತಿ. ಅದು ನಾಕ ಸರ್ತೆ ನನ್ನ ಬಲಗಾಲ ಹೆಬ್ಬಟ್ಟ ಕಡೀತಯ್ತಿ. ನಾಕ ಸರ್ತೆ ಹಾಲ ಕುಡೀತಯ್ತಿ. ನಾಕ ಸ್ಲಾಯಿಸ್ ಬ್ರೆಡ್ ತಿಂತಯ್ತಿ. ನಾಕ ಸರ್ತೆ ಹೊರಕಡೆಗೆ ಹೊಕ್ಕತಿ. ಇದನ್ನ ನೋಡಿದಾಗ ನಮ್ಮಪ್ಪನ್‌ಅ ಈ ಕಂಬಳೀ ಬೆಕ್ಕಾಗಿ ನನಗ ನಾಕರ ಮಹಿಮಾ ಹೇಳಾಕ ಬಂದಿರಬೇಕು ಅಂತನೂ ಒಮ್ಮೊಮ್ಮೆ ಅನಸತಯ್ತಿ. ಹಿಂಗಾಗಿ ಕಂಬಳೀ ಕೃಪಾದಿಂದ ನಾಕಮಹಿಮಾರಹಸ್ಯವಲಯಗಳನ್ನ ಭೇದಿಸುವ ಕಡೆ ಲಕ್ಷ್ಯ ಹಾಕಿದೆ. ನೋಡ ನೋಡತಿದ್ದಂಗನ್‌ಅ ಋಗ್ವೇದ. ಯಜುರ್ವೇದ. ಸಾಮವೇದ. ಅಥರ್ವ ವೇದಗಳು ವಿದ್ವತ್‌ಜ್ಯೋತಿ ಬೀರಿದುವು. ಸತ್ಯ. ತ್ರೇತಾ. ದ್ವಾಪರ. ಕಲಿಯುಗಗಳು ತಮ್ಮೊಡಲ ಕಡಲ ಕಥೆಗಳಾದ ರಾಮಾಯಣ ಮಹಾಭಾರತಗಳನ್ನ ಬಯಲಿಗೆ ತಂದುವು. ಬ್ರಾಹ್ಮಣ. ಕ್ಷತ್ರಿಯ. ವೈಶ್ಯ. ಶೂದ್ರರು ರಂಗಕ್ಕ ಬಂದರು. ಬ್ರಹ್ಮಚರ್ಯ, ಗೃಹಸ್ಥ. ವಾನಪ್ರಸ್ಥ. ಸಂನ್ಯಾಸ ಆಶ್ರಮಗಳು ಶ್ರಮಬೋಧೆ ಕಲಿಸಿದುವು. ಧರ್ಮ. ಅರ್ಥ. ಕಾಮ. ಮೋಕ್ಷಗಳು ಪದಪದಾರ್ಥಗಳ ಹೊಳಹು ಹೇಳಿದುವು. ಹಸ್ತಿ. ಅಶ್ವ. ರಥ. ಪದಾತಿ ದಳಗಳು ಕಾಲ್ಕೆಳಗ ಗುಂಡಿ - ಕಂದಕ ತೋಡಿದುವು. ನಾಲ್ಮೊಗ ಬ್ರಹ್ಮ ನಾಕ ಕಡೆ ಮಾರಿ ತಿರುವಿಕೊಂಡ. ದೃಷ್ಟಿದೂರನಾಗಿ ನಿಂತ. ದಿಕ್ಕು ತೋಚದ್ಹಂಗಾತು.

ಈ ಬ್ರಹ್ಮ ಬಾಯಿ ತಗದರ ನನ್ನ ನಾಕ-ಬ್ರಹ್ಮಾಂಡವನ್ನ್‌ಅ ನಾಕ ಸ್ಲಾಯಿಸ್ ಮಾಡಿ ನುಂಗಿಬಿಡಬಹುದು ಅಂತ ಹೆದರಕಿ ಆತು. ಅಪ್ಪಾ.... ಅಂದೆ. ಅಪ್ಪ ಕಣ್ಣಾಗ ಉಸಿರು ಆದ್ರು. ಉಸಿರಾಗ ಜೀವ್ನ ಆದ್ರು. ಏನ್ ಮಗನ.... ಅಂದ್ರು. ನನಗ ಒಂದೂ ತಿಳೀವಲ್ಲದು. ನಾಕನ್ನ ಹ್ಯಾಂಗ ತಿಳಕೊಳ್ಲಿ ಅಂದೆ. 'ನಾಕನ್ನೂ ಒಮ್ಮಿಗಿಲೆ ಯಾಕ ಕೇಣಕತಿ ? ಒಂದೊಂದ್‌ಅ ಒಂದೊಂದ್‌ಅ ಸಾಧಿಸು. ಒಂದರ ಕೂಡ ಇನ್ನೊಂದು. ಮತ್ತೊಂದು. ಮಗುದೊಂದು ಹಿಂಗ ನಾಕ ಆಗತಾವು. ನೀನು ಇಷ್ಟು ಓದು ಬರೀ ಮಾಡೀದಿ. ನೀ ನಮ್ಮಪ್ಪ. ನಿನಗ ತಿಳಿದಷ್ಟು ನನಗೇನ ತಿಳೀಬೇಕು ? ನಾ ನಾಕ ಮಂದಿ ಹೆಗಲ ಮ್ಯಾಲೆ ಹೋಗೂ ಕಾಲದಾಗ ಅದೇನಿ. ದಿನ ದಿನಾ ನಾಕನಾಕ್‌ಅ ಹೆಜ್ಜೀ ನಾಕ ಮೂಲೀ ಕಡೆ ಹೊಂಟೇನಿ. ನನ್ನ ಮಾತ ತೊಗೊಂಡ ಏನ ಮಾಡ್ತಿ ? ನಾಕ ಕವಿತಾ ಬರಿ. ನಾಕ ಕತಿ ಬರಿ. ನಾಕ ಪುಸ್ತಕಾ ಬರಿ. ನಾಕ ಮಂದಿ ಕುತಗೊಂಡ ಕೇಳೂಹಂಗ ಮಾತಾಡು. ನಾಕ ದಿವ್ಸಸ ಸಮಾಧಾನದ್ಲೆ ನಿದ್ದೀ ಮಾಡು. ಅಂದ್ರ ನಾಕ ಮಂದ್ಯಾಗ ಹೆಸರಾಕ್ಕಿ' ಅಂದ್ರು.

ಅವತ್ತು ನನಗ ನಾಕನಾಕರವು ಹದಿನಾಕ ಸರ್ತೆ ತುಂಬಿದ್ದುವು. ಅಪ್ಪಗ ಇಪ್ಪತ್ತ ಸರ್ತೆ ಮುಗ್ಯಾಕ ಬಂದಿದ್ದುವು. ಮುಂದ ಎರಡ್‌ಅ ವರ್ಸದಾಗ ಅಪ್ಪ ಅಪ್ಪನಕಿಂತ ಹೆಚ್ಚಿಗಿ ನಮ್ರವದನನಾಗಿ ನನ್ನ ನಮ್ರತೆಯೊಳಗ ಎಲ್ಲಾ ರೀತಿಯ ನಾಕಗಳನ್ನೂ ಲೇಪಿಸಿ ಹೋಗಿಬಿಟ್ರು. ತಾ ಹೇಳಿದ ಮೂಲೀ ಮನಿ ಕಡೆ ಸಾಗಿ ಹೋದ್ರು. ತಾ ಗಳಿಸಿಕೊಂಡ ನಾಕನಾಕರ ನಾಕ ಮಂದೀ ಹೆಗಲ ಮ್ಯಾಲ ಅವರು ಮಾಡಿದ ಭಜನೀ ಮೆಲಕ ಹಾಕ್ಕೊಂತ ಹೋದ್ರು.... ಹೌದು. ಅಪ್ಪ ಹೋಗಿ ಮನ್ನೀ ಡಿಸೆಂಬರ್ ಇಪ್ಪತ್ನಾಕಕ್ಕ ನಾಕ ವರ್ಸ ತುಂಬಿದ್ವು. ನಾಕ ಅನ್ನೂದು ಹಣೀ ಮ್ಯಾಲ ಈಬತ್ತಿ. ಎದೀ ಮ್ಯಾಲ ಗುಣಗಡಗಿ. ಬೆನ್ನ ಮ್ಯಾಲ ಕಣ್ಣು. ಸುತ್ತೂ ಕಡೆ ಮಣ್ಣು ಆಕ್ಕತಿ. ಆಗಿ ನಮ್ರವಾಗಿ ನಾಕ ದಿಕ್ಕಿನ್ಯಾಗ ಹೆಸರಾಕ್ಕತಿ. ಹಸರಾಕ್ಕತಿ. ಅಪ್ಪ ಹೇಳಿದ್ಹಂಗ ನಾಕ ಹಚಕೋಬೇಕು. ಗುರುಗಳು ಹೇಳಿದ್ಹಂಗ ನಾಕ ಬಿಡಬೇಕು. ಅಂದಾಗ ಮಾತ್ರ ನಾಕರ ನೆಲಿ ಸಿಗತಯ್ತಿ. ನಾಕ ಸಿಗತಯ್ತಿ. ಇಲ್ಲಂದ್ರ ನಾಕ ತೆಲೀ ತಗೀತ್ಯೆತಿ.

SANKALANA: RNI No. KARKAN 14160/10/1/2002-TC

ಸಂಕಲನ : ಸಂಪುಟ ೨, ಸಂಚಿಕೆ ೧ : ೧೪ ಜನೆವರಿ ೨೦೦೩

ಸಂಪಾದಕರು

ಸಿದ್ಧಲಿಂಗ ಪಟ್ಟಣಶೆಟ್ಟಿ / ಹೇಮಾ ಪಟ್ಟಣಶೆಟ್ಟಿ

●

ಶ್ಯಾಮಲಾ ಮಾಧವ

ಸುಮತೀಂದ್ರ ನಾಡಿಗ

ಮಣಿಮಾಲಿನಿ ಎ. ಕೆ.

ಕೃ. ಅನ್ಬನ್/ಪದ್ಮಾವತಿ ವಿವೇಕಾನಂದನ್

ವಿನಯಾ

ಟಿ. ಸಿ. ಪೂರ್ಣಿಮಾ

ಎಚ್. ಎಸ್. ಮುಕ್ತಾಯಕ್ಕ

ಗುಂಡಣ್ಣ ಕಲಬುರ್ಗಿ

ಮಾಧವ ಕುಲಕರ್ಣಿ

ಶಾರದಾ ಮುಳ್ಳೂರ

ಹೇಮಾ ಪಟ್ಟಣಶೆಟ್ಟಿ

ಸರಜೂ ಕಾಟ್ಕರ್

ಲಲಿತಾ ಸಿದ್ದಬಸವಯ್ಯ

ಚಂದ್ರಕಾಂತ ಪೋಕಳೆ / ಗೌರೀ ದೇಶಪಾಂಡೆ

ಶೈಲಾ ಛಬ್ಬಿ

●

ಎಂ. ಆರ್. ಮಂದಾರವಲ್ಲಿ. ಎ. ಮುರಿಗೆಪ್ಪ

ಜಿ. ಟಿ. ಶ್ರೀಧರ ಶರ್ಮ. ಅಪ್ಪಾಸಾಹೇಬ ಸನದಿ

ದುಷ್ಯಂತ ನಾಡಗೌಡ. ನರಸಿಂಹ ಪರಾಂಜಪೆ

ಚಂದ್ರಶೇಖರ ವಸ್ತ್ರದ. ಜಿ. ಕೆ. ರವೀಂದ್ರಕುಮಾರ್

●

ಜಿ. ಎನ್. ರಂಗನಾಥ ರಾವ್. ಸುನಂದಾ ಕಡಮೆ. ರಾಮಚಂದ್ರ ದೇವ

ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮಿಗಳು.

ಕಂನಾಡಿಗಾ ನಾರಾಯಣ. ಲಲಿತಾ ಸಿದ್ದಬಸವಯ್ಯ

●

ಸಂಕಲನ ಪ್ರಕಾಶನ

ಹೂಮನೆ. ಶ್ರೀದೇವಿನಗರ. ವಿದ್ಯಾಗಿರಿ. ಧಾರವಾಡ-೫೮೦ ೦೦೪